ಕಂನಡದ ಸಮಾಚಾರವು.

೧೮೪೪.

೧ನೆ ಪುಸ್ತಕ. ೧ನೆ ಅಂಕೆ.] ಬಳ್ಳಾರಿ ೧ನೆ ಮಾರ್ಚಿ [ಟಪಾಲದಸ್ತೂರಿಕೂಡಿ. ಕ್ರಯ ೨ ದುಡ್ಡು.

ಪೀಠಿಕೆ.

ಹೋದವರುಷದ ಜೂಲಾಯಿ ೧ನೇ ತಾರೀಕಿನಲ್ಲಿ ಮಂಗಳೂರ ಸಮಾಚಾರವೆಂಬ ವೊಂದು ಸಮಾಚಾರ ಕಾಗದ ಮಂಗಳೂರಿನಲ್ಲಿ ಛಾಪಿಸಲ್ಪಟ್ಟು ಕನಡ ಶೀಮೆಯಲ್ಲಿ ಪ್ರಕಟವಾಗಲಿಕ್ಕೆ ಆರಂಭವಾಯಿತು ಮೈಸೂರು ತುಮುಕೂರು ಬಳ್ಳಾರಿ ಶಿವಮೊಗ್ಗೆ ಹುಬ್ಬಳಿ ಶಿರಸಿ ಹೊಂನಾವರ ಮಂಗಳೂರ ಮೊದಲಾದ ಸ್ಥಳಗಳಲ್ಲಿ ಕೆಲವು ನೂರುಮಂದಿ ಯೀ ಕಾಗದವನ್ನು ತೆಗದುಕೊಳ್ಳುತ್ತಾ ಬಂದರು ೧ನೆ ನಂಬ್ರದ ಕಾಗದಗಳನ್ನು ಛಾಪಿಸಿ ಪ್ರಕಟಮಾಡುವಾಗ್ಯೆ ನಾವು ಮಾಡಿದ ಆಲೋಚನೆ ಯೀ ಕಾಲದಲ್ಲಿ ಯೀ ದೇಶಸ್ಥರೊಳಗೆ ನಡಿಯುವದೋ ಯೇನೋ ಯೆಂದು ಸ್ವಲ್ಪ ಸಂದೇಹಪಡುತ್ತಿದ್ದೆವು ಯೀಗಲು ಯೀ ದೇಶಸ್ಥರಲ್ಲಿ ಅನೇಕರಿಗೆ ಕನಡಭಾಷೆಯಲ್ಲಿ ಬರೆದ ವೊಂದು ಸಮಾಚಾರ ಕಾಗದವನ್ನು ವೋದುವದರಲ್ಲಿ ರುಚಿ ಹುಟ್ಟಿತೆಂದು ನೋಡಿ ಸಂತೋಷದಿಂದ ಯೀ ಸಮಾಚಾರ ಕಾಗದವನ್ನು ವೃದ್ಧಿಮಾಡುವ ಪ್ರಯತ್ನದಲ್ಲಿ ಯಿನ್ನು ಮುಂದೆ ಅದನ್ನು ಕಲ್ಲಿನಲ್ಲಿ ಛಾಪಿಸದೆ ಯೀಗಿನಿಂದ ಬಳ್ಳಾರಿಯಲ್ಲಿ ಯಿರುವ ಅಕ್ಷರ ಛಾಪಖಾನೆಯಲ್ಲಿ ಅಚ್ಚುಪಡಿಮಾಡಲಿಕ್ಕೆ ನಿಶ್ಚೈಸಿದ್ದೇವೆ.

ಹೋದವರುಷದಲ್ಲಿ ಹುಟ್ಟಿದ ಕೂಸಿಗೆ ಕರಣೇಂದ್ರಿಯಗಳು ಚೇತರಿಸಿ ಆಶಾವೃದ್ಧಿಯಾದಕಾರಣ ಅದರ ಅಪೇಕ್ಷೆಯನ್ನು ಪೂರೈಸಬಹುದಾದ ಬೇರೆ ಸ್ಥಳಕ್ಕೆ ಕಳುಹಿಸಿ ದೊಡ್ಡದಾದ ಉತ್ತಮವಸ್ತ್ರವನ್ನು ತೊಡಿಸುವಂಥಾದ್ದು ಅವಶ್ಯವಾಗಿದೆ.

ಆಮೇಲೆ ಕನಡಶೀಮೆಯ ಚತುಃಪಾರ್ಶ್ವದಲ್ಲಿರುವವರು ಶುದ್ಧವಾದ ಮೊಳೆ ಅಚ್ಚುಗಳ ಅಲಂಕಾರವನ್ನು ನೋಡಿಯೂ ಬಾಯಿಯನ್ನು ತೆರೆದು ಹೆಚ್ಚಾಗಿ ಮಾತಾಡುವ ನಮ್ಮ ಕೂಸಿನ ಶಬ್ದವನ್ನು ಕೇಳಿ ಸಂತೋಷಿಸಬಹುದು ಯೇನಂದರೆ ಬಳ್ಳಾರಿಯಲ್ಲಿ ಆಗುವ ವರ್ತಮಾನದ ೧ ಕಾಗದಲ್ಲಿ ಸ್ವಲ್ಪಕಡಿಮೆ ಮೊದಲಿನ ಯೆರಡು ಕಾಗದ್ದಷ್ಟು ಬರಹ ಹಿಡಿಯುವದರಿಂದ ಹೆಚ್ಚುವರ್ತಮಾನವನ್ನು ಚರಿತ್ರೆಗಳನ್ನು ವಿದ್ಯಾಪಾಠಗಳನ್ನು ಬುದ್ಧಿಯಮಾತುಗಳನ್ನು ಬರೆಯುವದಕ್ಕೆ ಸ್ಥಳಸಿಕ್ಕುವದು.

ಮುಂಚಿನ ಕಾಗದದ ಕ್ರಯವು ವೊಂದು ದುಡ್ಡಾಗಿತ್ತು ಯಿನ್ನು ಮುಂದೆ ವೊಂದೊಂದು ಕಾಗದಕ್ಕೆ ಯೆರಡು ದುಡ್ಡು ಕ್ರಯಕೂಡಿ ನಾವೇ ಟಪಾಲ ದಸ್ತುರಿ ಸಲ್ಲಿಸಿ ಕಾಗದಗಳನ್ನು ತೆಗದುಕೊಳ್ಳುವವರಿಗೆ ಅವುಗಳನ್ನು ಟಪಾಲ ದಸ್ತೂರಿ ವಿನಹಾ ಕಳುಹಿಸುವೆವು ಕನಡಾ ಜಿಲ್ಲೆಯಲ್ಲಿ ಯಿರುವವರು ಯೀವರಿಗೆ ಮಾಡಿದ ಪ್ರಕಾರ ವರ್ತಮಾನ ಕಾಗದದ ಕ್ರಯವನ್ನು ಮಂಗಳೂರಿನಲ್ಲಿ ಯೀ ಕಾಗದಗಳನ್ನು ಬರಿಯುವವರಾದ ನಮಗೂ ಮೈಸೂರುರಾಜ್ಯ ಬಳ್ಳಾರಿ ಜಿಲ್ಲೆಮೊದಲಾದ ಸ್ಥಳಗಳಲ್ಲಿರುವವರು ತಾವು ಸಲ್ಲಿಸಬೇಕಾದ ಹಣವನ್ನು ಬಳ್ಳಾರಿಯಲ್ಲಿರುವ ನಂಮ ಸ್ನೇಹಿತರಾದ ವುಲ್ಲಿಯಂ ಥೊಮ್ಸನ್ ದೊರೆಗಳಿಗೂ ತಲಪಿಸಿದರೆ ಆಯಿತು.

ಯೀ ಕನಡ ಸಮಾಚಾರವೆಂಬ ಕಾಗದವನ್ನು ಬರೆಯುವವರಿಗೂ ವೋದುವವರಿಗೂ ಶುಭಮಸ್ತು.

ಭೂಗೋಳದ ಸಾರವು.

ಮೊದಲನೆ ಸಂಧಿ.

ನಾವು ನಿವಾಸವಾಗಿರುವ ಭೂಮಿಯು ಸೂರ್ಯ ಚಂದ್ರ ನಕ್ಷತ್ರಾದಿಗಳ ಪ್ರಕಾರ ವೊಂದು ನಕ್ಷತ್ರವಿರುವದರಿಂದ ಭೂಗೋಳದಲ್ಲಿ ಮೊದಲು ನಕ್ಷತ್ರವಿದ್ಯೆಯನ್ನು ಸಂಕ್ಷೇಪವಾಗಿ ವಿವರಿಸತಕ್ಕದ್ದು ಆಕಾಶವೆಂಬ ಮಿತಿಯಿಲ್ಲದ ಸ್ಥಾನದಲ್ಲಿ ಪ್ರಕಾಶಿಸುವಂಥಾ ತಾರಗಳು ನಾಲ್ಕು ತರವಾಗಿದೆ ಯಿವು ಯಾವ್ಯಾವೆಂದರೆ ಸ್ಥಾವರನಕ್ಷತ್ರಗಳೂ ಗ್ರಹಗಳೂ ಚಂದ್ರರೂ ಧೂಮಕೇತುಗಳೂ.

ಹೆಚ್ಚುಕಡಿಮೆಯಿಲ್ಲದೆ ನಿತ್ಯವಾಗಿ ತಮ್ಮತಮ್ಮ ಸ್ಥಾನಗಳಲ್ಲಿ ಸ್ಥಿರವಾಗಿ ನಿಂತಿರುವ ತಾರಗಳಿಗೆ ಸ್ಥಾವರ ನಕ್ಷತ್ರಗಳೆಂಬ ಹೆಸರು ಯಿವುಗಳ ವೊಂದೊಂದರಲ್ಲಿ ಅದರದರ ಸ್ವಕೀಯವಾದ ಬೆಳಕಿನ ಪ್ರಕಾಶವುಂಟು ಯಿವುಗಳು ಯೆಷ್ಟೋ ಯೀ ಭೂಮಿಗೆ ಯೆಷ್ಟು ದೂರವೋ ಅವುಗಳ ಸ್ವಭಾವವೂ ಕ್ರಮಗಳೂ ಯಾವ್ಯಾವವೋ ಯೆಂದು ಅಲ್ಪಜ್ಞಾನವುಳ್ಳ ಮನುಷ್ಯರಿಗೆ ತಿಳಿಯದು ದೇವರುಮಾತ್ರ ಅವುಗಳನ್ನು ಸೃಷ್ಟಿಸಿ ಹೊರಗೆ ತಂದು ತಾನೆ ಮಹಾ ಪರಾಕ್ರಮದಿಂದ ಅವುಗಳಲ್ಲಿ ವೊಂದೊಂದನ್ನು ಅದರದರ ನಾಮದಿಂದ ಕರಿಯುತ್ತಾನೆ.

ಪೂರ್ವಜೋತಿಷರು ಯೀ ಸ್ಥಿರನಕ್ಷತ್ರಗಳನ್ನು ರಾಶಿಗಳೆಂಬ ಗುಂಪುಗಳಾಗಿ ಪ್ರತ್ಯೇಕಿಸಿ ಬೇರೆಬೇರೆ ವಸ್ತುಗಳ ಉಪಮೆಯಿಂದ ಬೇರೆಬೇರೆ ಹೆಸರುಗಳಂನಿಟ್ಟುಯಿದ್ದಾರೆ ಹೇಗೆಯೇ ಆಕಾಶದ ಉತ್ತರ ಭಾಗದಲ್ಲಿ ೩೮ ಅದರ ದಕ್ಷಿಣ ಭಾಗದಲ್ಲಿ ೪೮ ರಾಶಿಗಳಿರುತ್ತವೆ ಆಕಾಶದ ಮಧ್ಯದಲ್ಲಿ ೧೨ ರಾಶಿಗಳ ಚಕ್ರವದೆ ಯೀ ೧೨ ರಾಶಿಗಳ ಹೆಸರು ಮೇಷ ವೃಷಭ ಮಿಥುನ ಕರ್ಕಾಟಕ ಸಿಂಹ ಕಂನ್ಯಾ ತುಲಾ ವೃಶ್ಚಿಕ ಧನುಸ್ಸು ಮಕರ ಕುಂಭ ಮೀನ ಯೆಂಬವುಗಳವೆ ಯೀ ಭೂಮಿಗೆ ಬೆಳಕನ್ನು ಬಿಸಲನ್ನು ಕೊಡುವ ಸೂರ್ಯನು ಸ್ಥಿರನಕ್ಷತ್ರಗಳಲ್ಲಿ ವೊಂದಾಗಿರುತ್ತಾನೆ ಯೀ ಸೂರ್ಯನು ಗೋಳಾಕಾರವಾಗಿದ್ದಾನೆ ಅವನ ವ್ಯಾಸ ಹೆಚ್ಚುಕಡಿಮೆ ೩೫ ಸಾವಿರಹರದಾರಿ ಆಗಿದೆ ಉಳಿದ ಸ್ಥಾವರನಕ್ಷತ್ರಗಳಲ್ಲಿ ಸೂರ್ಯನ ಪ್ರಕಾರವೆ ಸ್ವಕೀಯಪ್ರಕಾಶವೂ ಚಂಚಲವಿಲ್ಲದ ಸ್ಥಾನವೂ ಯಿರುವದರಿಂದ ಅವುಗಳಿಗು ಸೂರ್ಯಗಳೆಂಬ ಹೆಸರನ್ನಿಡಬಹುದು ಮತ್ತು ಅವುಗಳುಸಹಾ ಬೇರೆಬೇರೆ ಲೆಕ್ಕವಿಲ್ಲದ ಗ್ರಹಗಳಿಗೆ ಪ್ರಕಾಶವನ್ನು ಕೊಟ್ಟಾವುಯೆಂದು ಕೆಲಬರು ನೆನಸುತ್ತಾರೆ.

ಸ್ವಕೀಯ ಪ್ರಕಾಶವಿಲ್ಲದೆ ಸೂರ್ಯನಿಂದಲೆ ಬೆಳಕನ್ನು ಬಿಸಲನ್ನು ಹೊಂದಿ ನಿರ್ಣಯವಾದಮಾರ್ಗಗಳಲ್ಲಿ ಸೂರ್ಯನ ಸುತ್ತಲು ಹೊರಳಾಡುತ್ತಾ ಯಿರುವ ತಾರಗಳಿಗೆ ಗ್ರಹಗಳೆಂಬಹೆಸರು ಯೀ ಪರ್ಯಂತರ ಜ್ಯೋತಿಷರಿಗೆ ತಿಳಿಯ ಬಂದ ಗ್ರಹಗಳು ಹನ್ನೊಂದಾಗಿವೆ ಯಿವುಗಳ ಹೆಸರುಗಳೂ ಅಳತೆಗಳೂ ಸೂರ್ಯನಸುತ್ತಲು ತಿರುಗುವ ಕಾಲಗಳೂ ಅನುಕ್ರಮಣಿಕವಾಗಿ ಯಿಲ್ಲಿ ಬರೆಯಲ್ಪಟ್ಟವೆ.

ಗ್ರಹಗಳ ಹೆಸರುಗಳು.	ಸೂರ್ಯನಿಗೆ ಯಿಷ್ಟುದೂರ.	ಸೂರ್ಯನ ಸುತ್ತಲು ತಿರುಗುವ ಕಾಲವು.			ತಮ್ಮ ಸುತ್ತಲು ಹೊರಳಾಡುವ ಕಾಲವು.	ವ್ಯಾಸವು.
		ವರ್ಷ	ದಿನ.	ತಾಸು.		
ಬುಧನು.	೩೯೦೦೦೦೦	೦	೮೨	೨೩	೨೪	೩೪೮॥
ಶುಕ್ರನು.	೭೩೫೦೦೦೦	೦	೨೨೪	೧೬	೨೩॥	೮೪೪
ಭೂಮಿಯು	೧೦೪೩೧೮೦೦	೦	೩೬೫	೬	೨೪	೮೫೯॥
ಮಂಗಳನು	೧೫೪೦೦೧೦೦	೧	೩೩೧	೧೬।	೨೪॥	೪೬೦
ವೆಸ್ತಾ.	೨೩೯೫೦೦೦೦	೩	೨೨೪	೯।	—	೩೨
ಜೂನೊ.	೨೭೦೦೦೦೦೦	೪	೧೩೧	೧೦॥	—	೧೫೪॥
ಶ್ರೀಃ.	೨೮೦೦೦೦೦೦	೪	೨೨೦	೭	—	೧೭೬
ಪಲ್ಲಸ್.	೨೮೧೫೦೦೦೦	೪	೨೨೧	೧೫॥	—	೨೩೨॥
ಬೃಹಸ್ಪತಿ	೫೨೮೫೦೦೦೦	೧೧	೩೧೨	೨೦॥	೧೦	೯೭೮೩
ಶನಿ.	೯೬೮೫೦೦೦೦	೨೯	೧೫೪	೧೩।	೧೨	೮೬೮೧
ಯೂರನ.	೧೯೩೯೫೦೦೦೦	೮೩	೨೭೪	೮॥	—	೩೭೮೨

ಸ್ವಕೀಯ ಬೆಳಕಿಲ್ಲದೆ ಗ್ರಹಗಳಸುತ್ತಲು ಯೀ ಗ್ರಹಗಳು ಸಹಿತವಾಗಿ ಸೂರ್ಯನ ಸುತ್ತಲು ತಿರುಗುವಂಥಾ ಸಣ್ಣ ತಾರಗಳಿಗೆ ಚಂದ್ರರೆಂಬ ಹೆಸರು ಭೂಮಿಗೆ ಚಂದ್ರವೊಂದು ಬೃಹಸ್ಪತಿಗೆ ನಾಲ್ಕು ಶನಿಗೆ ಯೇಳು ಊರನಕ್ಕೆ ಆರು ಯಿರುತ್ತವೆ ಸ್ವಕೀಯ ಬೆಳಕಿಲ್ಲದ್ದಾಗಿ ಸೂರ್ಯನಿಂದ ಬೆಳಕನ್ನು ಹೊಂದುತ್ತಾ ಕ್ರಮವಿಲ್ಲದ ಮಾರ್ಗದಲ್ಲಿ ಸೂರ್ಯನ ಸುತ್ತಲು ಹೊರಳ್ಯಾಡುವ ಬಾಲದೋಪಾದಿಯಲ್ಲಿ ವುದ್ದವಾದ ಪ್ರಕಾಶವನ್ನು ಸುರಿಸುತ್ತಾ ಯಿರುವ ತಾರಗಳಿಗೆ ಧೂಮಕೇತುಗಳೆಂಬ ಹೆಸರು ಅವುಗಳೆಷ್ಟುಯೆಂದು ನಮಗೆ ತಿಳಿಯದು ಅನೇಕವಿದ್ದಾವೆಂದು ಕಾಣುತ್ತವೆ ಕೆಲವು ಧೂಮಕೇತುಗಳು ನಿತ್ಯವಾದ ಕ್ರಮದಿಂದ ಕೆಲವು ನಾಲ್ಕುನಾಲ್ಕು ವರುಷಗಳಮೇಲೆ ಕೆಲವು ಯೆಂಟುಯೆಂಟು ವರುಷಗಳಮೇಲೆ ಕೆಲವು ಆರವತ್ತರವತ್ತು ವರುಷಗಳಮೇಲೆ ತಿರುಗಿ ಬರುತ್ತವೆ ಕೆಲವು ವೊಂದುಸಾರಿ ಬಂದಮೇಲೆ ಯೆಂದಿಗೂ ಕಾಣದೆ ಹೋಗುತ್ತವೆ ಯೀ ಧೂಮಕೇತುಗಳಿಗೆ ಅಪರೂಪವಾದ ಆಕಾರವೂ ಕ್ರಮವೂ ಯಿರುವದರಿಂದ ಅನೇಕರು ಅವುಗಳು ಕಾಣುವ ಸಮಯದಲ್ಲಿ ಬಹಳ ಭಯಪಟ್ಟು ಯುದ್ಧ ಬರ ವ್ಯಾಧಿ ಮೊದಲಾದವುಗಳು ಬಂದಾವೆಂದು ನೆನಸುತ್ತಾರೆ ಆದರೆ ಯೀ ನಕ್ಷತ್ರಗಳು ಸಹಾ ಸರ್ವತ್ರಾಣವೂ ಸರ್ವಕರುಣವೂ ವುಳ್ಳ ದೇವರ ಅಪ್ಪಣೆ ಯಿಂದಲೇ ಬರುವದರಿಂದ ಅಂಥಾ ಭಯಕ್ಕೆ ಕಾರಣವಿಲ್ಲದೆ ನಾನಾವಿಧವಾದ ಪ್ರಕಾಶವುಳ್ಳ ಬೆಳಕುಗಳಿಂದ ತುಂಬಲ್ಪಟ್ಟ ಆಕಾಶವನ್ನು ನೋಡುವದರಲ್ಲಿ ಅವುಗಳನ್ನೆಲ್ಲವನ್ನು ವುಂಟುಮಾಡಿದಾತನ ಮಹಿಮೆಯನ್ನು ಮಾತ್ರ ಸ್ತುತಿಸಿ ಆರಾಧಿಸುವದಕ್ಕೆ ಕಾರಣವುಂಟು.

ಮೊದಲನೆಸಂಧಿ ಸಮಾಪ್ತ.

ಯಿಂಗ್ಲಾಂಡರಾಜ್ಯದ ಪೂರ್ವದ ಚರಿತ್ರೆಯು.

ಪೂರ್ವಕಾಲದಲ್ಲಿ ಯಿಂಗ್ಲಾಂಡದೇಶಕ್ಕೆ ಬಿತನ್ ಯೆಂಬ ಹೆಸರಿತ್ತು ಅದರ ನಿವಾಸಿಗಳು ವಿದ್ಯಬುದ್ಧಿ ತಿಳಿಯದ ಮೂಢಜನರಾಗಿದ್ದರು ಅವರು ವ್ಯಾಪಾರ ಮುಂತಾಗಿ ಮಾಡದೆ ಯಿದ್ದಾಗ್ಯೂ ಗ್ರೀಕ್ ರೋಮಾನ್ ಯಿತ್ಯಾದಿ ವ್ಯಾಪಾರಸ್ತರಾದ ಜನಾಂಗದವರು ಅಲ್ಲಿ ಸಿಕ್ಕುವ ತಗರ ಲೋಹಕ್ಕೋಸ್ಕರವಾಗಿ ಹಡಗಗಳಿಂದ ಅಲ್ಲಿ ಸಂಚರಿಸುತ್ತಿದ್ದರು ಯೇಸುಕ್ರಿಸ್ತನು ಹುಟ್ಟುವ ೫೫ ವರ್ಷಗಳಮುಂಚೆ ರೋಮಾಯರು ಸಮಸ್ತ ಫ್ರಾನ್ಸಿಸ್ ದೇಶವಂನು ವಶಮಾಡಿಕೊಂಡು ಬ್ರಿತನ್ ಯೆಂಬ ಯಿಂಗ್ಲಿಷ್ ದೇಶದಲ್ಲಿಯೂ ತಂಮ ಸೈನ್ಯವಂನು ತಕೊಂಡು ಹೋದರು ಆಗ್ನೆಯ ದಕ್ಷಿಣದಲ್ಲಿ ನಿವಾಸಿಸಿ ಗದ್ದೆಸಾಗುವಳಿ ಯಿತ್ಯಾದಿ ಕೆಲವು ವೆವಹಾರವಂನು ನಡಿಸುವಂಥ ವೊಂದೇಜನಾಂಗ ಹೊರ್ತು ಉಳಿದ ಯಲ್ಲಾ ಗೋತ್ರಗಳವರು ಮಂದೆಗಳಂನು ಮೇಯಿಸುತ್ತಾ ಅವುಗಳ ಹಾಲಿನಿಂದಲೂ ಮಾಂಸದಿಂದಲೂ ಬದುಕುತ್ತಾ ಮೃಗಗಳ ತೊಗಲುಗಳಂನು ಹೊದ್ದುಕೊಳ್ಳುತ್ತಾ ಅಲಂಕಾರಕ್ಕೋಸ್ಕರ ಮೈಗೆ ವರ್ಣ ಹಚ್ಚಿಕೊಳ್ಳುತ್ತಾ ಯಿರುತ್ತಿದ್ದರು ಯೀಜನರು ಯುದ್ಧಕ್ಕೆ ಬಹಳ ಧೈರ್ಯವಂತರಾಗಿ ಬಿಲ್ಲು ಬಾಣ ಭಲ್ಲೆ ಯಿತ್ಯಾದಿಗಳಿಂದ ಯುದ್ಧ ಮಾಡುತ್ತಿದ್ದರು ವೊಂದೊಂದು ಗೋತ್ರಕ್ಕೆ ವೊಬ್ಬೊಬ್ಬ ಮುಖ್ಯಸ್ತನಿದ್ದಾಗ್ಯೂ ಅವನ ಮಾತು ಬಹಳವಾಗಿ ಅಂಗೀಕರಿಸುತ್ತಿದ್ದಿಲ್ಲಾ ಯೀ ಜನಗಳಲ್ಲಿ ದ್ರೂವೀದರೆಂಬ ಪೂಜಾರಿಗಳಿದ್ದರು ಯಿವರು ಪ್ರತ್ಯೇಕ ಪ್ರತ್ಯೇಕ ಆಶ್ರಮಗಳಲ್ಲಿ ನಿವಾಸಿಸಿ ಅಲ್ಲಲ್ಲಿ ದೊಡ್ಡ ಪುಣ್ಯವೃಕ್ಷಗಳ ಬುಡದಲ್ಲಿ ಗೊಂಬೆಗಳ ಆರಾಧನೆಕ್ಕೋಸ್ಕರ ನರಬಲಿ ಯಿತ್ಯಾದಿಗಳಂನು ನಡಿಸುತ್ತಿದ್ದರು ಯೀ ಪ್ರಕಾರ ಯಿರುವ ಜನಾಂಗದಸಂಗಡ ರೋಮಾಯರ ಅಧಿಪತಿಯಾದ ಜೂಲಿಯೂಸ್ ಶೀಸರ್ ಯೆಂಬವನು ಕೆಲವುಸಾರಿ ಭಯಂಕರವಾದ ರಕ್ತಪ್ರವಾಹದ ಯುದ್ಧವಂನುಮಾಡಿ ಯೀ ರಾಜ್ಯವನ್ನು ರೋಮಾಯರ ಅಧಿಕಾರದ ವೊಳಗೆ ಸೇರಿಸಿದನು ಆದರೆ ಆ ಅಧಿಪತಿಯಮೇಲೆ ೧೦೦ ವರ್ಷಪರಿಯಂತರ ರೋಮಾಯರಿಗೂ ಬ್ರಿತನ್ ಯೆಂಬ ಯಿಂಗ್ಲಿಷ ದೇಶಸ್ಥರಿಗೂ ಮಹಾಯುದ್ಧ ಉಂಟಾದವು ಕಡೆಯಲ್ಲಿ ರೋಮಾಯರು ಪರಾಜಯ ಹೊಂದಿದಮೇಲೆ ಯೀ ಬ್ರಿತನ್ ಜನರಿಗೆ ರೋಮಾಯದವರು ತಮಗೆ ತಿಳಿದವಿದ್ಯೆಗಳಂನೂ ವ್ಯಾಪಾರದ ರೀತಿಗಳಂನೂ ತೋರಿಸಿ ಅವರಂನು ಕೆಲವುವರ್ಷ ಸಮಾಧಾನದಿಂದ ಆಳಿ ಲೊಂಡಂನ್ ಮೊದಲಾದ ಕೆಲವು ಪಟ್ಣಗಳಂನು ಕಟ್ಟಿದರು ಆದರೆ ಜರ್ಮನ ಜನರ ಕೈಯಿಂದ ರೋಮಾನ್ ರಾಜ್ಯವು ಹೀನವಾಗುವ ಸಮಯದಲ್ಲಿ ಅವರಿಗೆ ತ್ರಾಣ ಕಡಿಮೆಯಾದದರಿಂದ ದೂರದಲ್ಲಿ ತಂಮ ವಶದಲ್ಲಿರುತ್ತಿದ್ದ ಶೀಮೆಗಳಂನು ಸಂರಕ್ಷಿಸ ಸಾಮರ್ಥ್ಯಸಾಲಲಿಲ್ಲ ಅದುಕಾರಣ ಯಿಂಗ್ಲಾಂಡ ದೇಶದ ಉತ್ತರದಲ್ಲಿ ನಿವಾಸಿಸಿರುವ ಸ್ಕೋತಿ ಮತ್ತು ಪಿಕ್ತಿಜನರಿಗೆ ಅಡ್ಡಮಾಡುವದಕ್ಕೆ ಯೀ ದೇಶದ ವುತ್ತರ ಪ್ರಾಂತ್ಯದಲ್ಲಿ ಕೆಲವು ವುದ್ದವಾದ ಗೋಡೆಗಳಂನು ಕಟ್ಟಿಸಿದಮೇಲೆ ಯಿದರಿಂದಲು ಆಧಾರ ಆಗಲಿಲ್ಲವು.

ಅದುಕಾರಣ ಯಿಂಗ್ಲಿಷ್‌ಜನರು ತಿರುಗಿ ತಿರುಗಿ ಪರಿಪಾಲನೆ ಮಾಡಬೇಕೆಂದು ಬೇಡಿಕೊಳ್ಳುವ ಸಮಯದಲ್ಲಿ ರೋಮಾಯರು ನಮಗೆನಾವೆ ಕಾಪಾಡ ಕೂಡದಾದರಿಂದ ನಿಂಮಂನನೀವೆ ನೋಡಿಕೊಳ್ಳಿರಿ ಯೆಂದು ಜವಾಬು ಕೊಟ್ಟರು ಆ ಸಮಯದಲ್ಲಿ ಕೆಲವರುರೋಮಾಂನ್ ಜನರವುಪದೇಶದಿಂದ ಕ್ರೈಸ್ತಮತವಂನು

ಅಂಗೀಕರಿಸಿಯಿದ್ದರು ಮಿಕ್ಕಾದವರು ಮೇಲೆಹೇಳಿದ ಡ್ರುವೀದರ ಮತವಂನು ಯಿಂದಿನವರೆಗೆ ಅನುಸರಿಸಿ ಯೀ ಮತದವಿಷಯದಲ್ಲಿ ಯಿಂನು ಕೆಲವುಮಾತುಗಳಂನು ಹೇಳತಕ್ಕದ್ದಾಗಿದೆ.

ಡ್ರುವೀದರೆಂಬ ಯಾಜಕರು ದೊಡ್ಡಮನೆತನದವರಾಗಿ ಸರ್ವರಿಂದ ಅತಿಪೂಜಿತರಾಗಿಯೂ ಮಹಾ ಅಧಿಕಾರಉಳ್ಳವರಾಗಿಯೂ ಯಿದ್ದರು ಆ ಯಾಜಕರು ದೇವತಾಪೂಜೆಯನ್ನುಮಾಡುತ್ತಾ ಆ ದೇಶದಅರಸಿಗೂ ಮತ್ತು ವ್ಯವಹಾರಿಗಳಿಗೂ ನ್ಯಾಯವಂನು ಹೇಳುತ್ತ ಯಿದ್ದರು ಆ ದೇಶದ ಸರಕಾರದ ಕೆಲಸವು ಯಿವರಮನೋಗತದಮೇರೆಗೆ ನಡೆಯುತ್ತ ಯಿತ್ತು ಅವರು ಸರಕಾರಕ್ಕೆ ಗೆಣಿ ಮೊದಲಾದ ಗುತ್ತಿಗೆಗಳಂನುಕೊಡದೆ ಯೊಬ್ಬರಿಂದಲು ಶಿಕ್ಷಿತರಾಗದೆ ಯಿದ್ದರು ಯಿಂಗ್ಲಾಂಡದೇಶದಲ್ಲಿ ಜಗಳವಾದರೆ ಯಿವರುಬಂದು ಒಂದು ಮಾತು ಹೇಳಿದರೆ ಆ ಲಡಾಯಿ ನಿಂತು ಸಮಾಧಾನವಾಗಿತ್ತು ಮತ್ತು ಯೀಯಾಜಕರಿಗೆ ಮುಖ್ಯವಾದ ಕೆಲಸಉ ಬಾಲ ಬೋಧೆಯಾಗಿತ್ತು ಯಿವರು ಆ ಹುಡಗರಿಗೆ ಬೋಧಿಸುವಂಥಾದ್ದು ಮೆಲ್ಲ ಪದಗಳಾಗಿತ್ತು ಯಿವರಿಗೆ ಸಕಲವಾದ ಕಾವ್ಯ ಗ್ರಂಥಾದಿಗಳು ಬರುತ್ತಯಿದ್ದಾಗ್ಯೂ ಯಿದು ಬರದರೆ ಅಮೋಗ್ಯರ ಬಾಯಲ್ಲಿಬಿದ್ದು ಗ್ರಂಥವು ಅಪವಿತ್ರವಾಗುವದೆಂದು ನೆನಸಿ ಅದಂನು ಯೆಂದಿಗು ಬರಿಯದೆ ಬಾಲಕರಿಗೆಲ್ಲ ಬಾಯಿಪಾಠವೇ ಮಾಡಿಸಿದರು ಆ ಹುಡುಗರಿಗೆ ಯೀ ಗ್ರಂಥಗಳು ಬಾಯಿಪಾಠವಾಗಿ ಕಲಿಯುವದಕ್ಕೆ ಯಿಪ್ಪತ್ತುವರುಷ ಬೇಕಾಯಿತು ಆ ಗ್ರಂಥಗಳ ಕಲಿತ ಹುಡುಗರು ಬೇರೆ ಕೆಲವು ಜನರಿಗೆ ಬಾಯಿ ಪಾಠವಾಗಿ ಕಲಿಸಿದರು ಯಿವರು ನಾನಾವಿಧವಾದ ದೇವತೆಗಳಂನು ಆರಾಧಿಸುತ್ತ ಅಯಿದುವರುಷಕ್ಕೆ ಒಂದುಸಾರಿ ನರಬಲಿ ಕೊಡುವದಕ್ಕೆ ಕಲ್ಪನಮಾಡಿ ಸರಕಾರದವರ ಅಂಕೇಲಿ ಶಿಕ್ಕಿದವರಂನಾಗಲಿ ಅಥವಾ ಯುದ್ಧದಲ್ಲಿ ಕೈಶೆರೆಯಾಗಿ ಶಿಕ್ಕಿದವರಂನಾಗಲಿ ತೆಗದುಕೊಂಡುಬಂದು ಮನುಷ್ಯಾಕೃತಿಯಾದ ಸ್ತಂಭದಲ್ಲಿ ಯಿವರನ್ನ ಬಿಗಿದು ಬೆಂಕಿ ಹಚ್ಚಿ ಸುಟ್ಟುಬಿಡುತ್ತಾ ಯಿದ್ದರು ಅಪರಾಧಿಗಳಾದವರು ಯಾರು ಶಿಕ್ಕದೆ ಯಿದ್ದರೆ ರಾಜ್ಯದಲಿ ಶಿಕ್ಕಿದ ನಿರಪರಾಧಿಗಳನ್ನ ಹಿಡಿದುಕೊಂಡುಬಂದು ನರಬಲಿಮಾಡುತ್ತ ಯಿದ್ದರು ಯಿದಲ್ಲದೆ ತಿಂಗಳಿಗೆ ಒಂದು ಸಾರಿ ಷಷ್ಠಿ ದಿವಸದಲ್ಲಿ ಸರ್ವವ್ಯಾಪಿಯಾದ ದೇವತೆಗಳು ಮನೆಗಳಲ್ಲಿರದೆ ಯಿರುವದರಿಂದ ಆಕಾಶದಕೆಳಗೆ ಪ್ರಧಾನ ಸ್ಥಳದಲ್ಲಿ ದೇವತೆಗಳಂನು ಆರಾಧಿಸುವರು ಪೂಜಾದಿಗಳ ಲೋಪಕ್ಕೆ ಒಳಗಾದವನಿಗೆ ದೇವತೆಗಳಂನು ಆರಾಧಿಸುವಸ್ಥಳಕ್ಕೆ ಬರಕೂಡದೆಂದು ಆಜ್ಞಾಪಿಸುವದಲ್ಲದೆ ಅವನ ಮನೆಗೂ ಒಬ್ಬರು ಹೋಗದಂತೆ ನಿರೂಪಿಸುತ್ತಿದ್ದರು ಮತ್ತು ಯೀ ಜನರು ಮೂರ್ತಿಸ್ವರೂಪವಾಗಿ ದೇವತಾರಾಧನೆಯಂನುಮಾಡದೆ ನಿರಾಕಾರವಾದ ದೇವತಾರಾಧನೆಯಂನು ಮಾಡುತ್ತಿದ್ದರು.

ಚೀನಾದೇಶದ ವರ್ತಮಾನ.

ಚೀನಾದೇಶಸ್ತರಿಗೂ ಯಿಂಗ್ಲಿಷ್‍ಜನರಿಗೂ ಕೆಲವು ವರ್ಷದಹಿಂದೆ ಯುದ್ಧ ಆದಕಾರಣವೇನಂದರೆ ಯಿಂಗ್ಲಿಷ್ ದೇಶದ ಸಾವಕಾರರು ಬಹಳ ವರ್ಷದಾರಭ್ಯ ಯೀ ದೇಶದಿಂದ ಅಫೀಮು ತೆಗದುಕೊಂಡು ಚೀನಾದೇಶಸ್ಥರಿಗೆ ಮಾರುತಿದ್ದರುಅದಕ್ಕೆ ಬಹಳ ಕ್ರಯವಾದದರಿಂದ ಅಚೀನಾದೇಶದಿಂದಯಿದಕ್ಕೋಸ್ಕರ ಬಹಳ ಹಣ ವ್ರಯವಾಯಿತು ಆದದರಿಂದಲೂ ಮತ್ತು ಆ ದೇಶಸ್ತರು ಅಫೀಮು ತಿಂದು ಬಹಾಳ ಅಮಲಾಗಿ ಜನರು ಕೆಟ್ಟುಹೋಗುವದರಿಂದ ಸಹಾ ಅಂಥಾ ಅಫಿಮಿನವ್ಯಾಪಾರ ತಂನ ದೇಶದಲ್ಲಿ ನಡಿಯಕೂಡದೆಂದೂ ಮತ್ತು ಮೆಲ್ಯಾದರು ಅಫೀಮು ಶಿಕ್ಕಿದರೆ ಅದಂನು ನಾಶನ ಮಾಡಬೇಕೆಂದೂ ಮತ್ತು ತಂನ ದೇಶಸ್ಥರಲ್ಲಿ ಯಾರಾದರು ಅಫೀಮು ತಿಂದದ್ದಾದರೆ ಅವರಂನ ಪ್ರಾಣಹಾನಿ ಮಾಡಲಾಗಿತೆಂದೂ ಚೀನಾದೇಶದ ಮಹಾರಾಜನು ಅಪ್ಪಣೆಕೊಟ್ಟಿದ್ದನು ಆದರೂ ಆ ಜನರು ಅಫೀಮು ತಿಂನುವದಂನು ಬಿಡಲಿಲ್ಲ ಮತ್ತು ಯಿಂಗ್ಲಾಂಡದೇಶದಸಾವಕಾರರು ಅಂತರಂಗದಲ್ಲಿ ಹೆಚ್ಚುಕ್ರಯಕ್ಕೆ ಅಫೀಮು ಅವರಿಗೆ ಮಾರುತಿದ್ದರು ಹೀಗಿರಲಾಗಿ ಯಿಂಗ್ಲಿಷ್ ರಾಣಿಯ ಕಡೆಯಿಂದ ಅಲ್ಲಿ ಕಮಿಶನ್‍ರಾಗಿ ಆ ಮಹಾರಾಜನಿಗ ಒಪ್ಪಿತವಾದ ಕಾರ್ಯ ನಡಿಸುತಾ ಯಿರುತಿದ್ದ ಮೆಲಿಮೊತ್ತ್‍ಯಂಬಧೊರೆಗೂ ಮತ್ತು ಬೇರೆ ಯಿಂಗ್ಲಿಷ್‍ಧೊರೆಗಳಿಗೂ ಆ ಮಹಾರಾಜನ ಪ್ರಧಾನಿಯಾದ ಲೀನ್ ಯಂಬವನು ಹೊರೆಗೆನಿಂತಿರುವ ಯಿಂಗ್ಲಿಷ್ ಹಡಗಗಳ ಸಮಸ್ತ ಅಫೀಮು ತಂಮ ಸರಕಾರಕ್ಕೆ ಒಪ್ಪಿಸಿಕೊಟ್ಟವಿನಹಾ ನಿಂಮಂನು ಬಿಡುವದಿಲ್ಲವೆಂದು ಬಲಾತ್ಕಾರಮಾಡಿ ಊಟವುಕೊಡದೆ ಪಾಹರೆಯಾಗಿ ಕುಂಡ್ರಿಸಿದಕಾರಣ ಅವರ ನಿರ್ಬಂಧವಂನು ಬಿಡುಗಡೆಯಾಗುವಹಾಗೆ ಯಲ್ಲಾ ಹಡಗಗಳ ಸರದಾರಿಗೆ ನಿಂಮ ನಿಂಮ ಹಡಗಗಳಲ್ಲಿರುವ ಅಫೀಮು ತಂಮ ವಶಾಕೊಟ್ಟರೆ ರಾಣಿಗೋಸ್ಕರ ಚೀಟು ಕೊಡುತ್ತೇವೆಂದು ಹೇಳಿ ಚೀಟು ಕೊಟ್ಟು ೨ ಕೋಟಿ ರೂಪಾಯಿ ಕ್ರಯಬಾಳುವ ಅಫೀಮು ಯಲ್ಲ ವಪ್ಪಿಸಿಕೊಂಡರು.

ಅಂಥಾ ಅಫೀಮುಯಲ್ಲಾ ಆ ಪ್ರಧಾನಿಯಾದ ಲಿನ್ ಯಂಬವನು ಒಂದುಕುಣಿಯಲ್ಲಿಹಾಕಿ ನೀರು ಮತ್ತುಸುಂಣ ಕೂಡಿಸಿ ಚಂನಾಗಿಕಲಿಸಿ ಆಮೇಲೆ ನದಿಯಲ್ಲಿ ಚೆಲ್ಲಿಸಿದನು ಯಿಂಗ್ಲಿಷ್ ಸಾವಕಾರರು ಆಕೊಟ್ಟ ಚೀಟು ಯಾನೆಹುಂಡಿಗಳಂನು ಯಿಂಗ್ಲಾಂಡದೇಶಕ್ಕೆ ಕಳುಹಿಸಿದರು ಯೀವರ್ತಮಾನವಂನು ಕೇಳಿದ ಯಿಂಗ್ಲಾಂಡಸರಕಾರದವರು ತಂಮ ಕಮೀಸನ್‍ರಿಗೆ ನಿಷ್ಕಾರಣವಾಗಿ ಬಲಾತ್ಕಾರಮಾಡಿ ಅಫೀಮು ತೆಗದುಕೊಂಡು ನಷ್ಟಪಡಿಸಿದರಿಂದ ಅಲ್ಲಿಹೋಗಿ ಯುದ್ಧಮಾಡಬೇಕೆಂದು ಆಲೋಚನೆಯಿಂದ ಯಿಸ್ತಿಹಾರುಪ್ರಕಟಮಾಡಿದರು ಆ ಪ್ರಕಾರ ಹಡಗಗಳು ಕಳುಹಿಸಿ ಯುದ್ಧಮಾಡಿ ಕಂಟಿಂನಯಂಬ ಬಂದ್ರಪಟ್ಣವಂನು ತಂಮ ವಶಮಾಡಿಕೊಂಡರು ಆಪಟ್ಣವು ಆರಾಜ್ಯದಲ್ಲಿ ಹೊರಗಿನ ವ್ಯಾಪಾರದವ ಒಂದೇಯಾದ ಬಂದ್ರವಾಗಿರುತಿತ್ತು ಪರದೇಶಸ್ಥರ ಹಡಗಗಳು ಅಲ್ಲಿ ಬಂದುಲಾವಣಿಗೆ ಸಾವಕಾರರಸಂಗಡ ವ್ಯಾಪಾರ ನಡಸಬೇಕಾಗಿತ್ತು ಅಲ್ಲಿ ಖಾರಿ ವ್ಯಾಪಾರ ಆಗುವದರಿಂದ ಪಟ್ಣವು ವೃದ್ಧಿಯಾಗಿ ಐಶ್ವರ್ಯದಿಂದ ತುಂಬಿಯಿರುತಿತ್ತು ಯಿಂಗ್ಲಾಂಡ ದೇಶದಿಂದ ಯುದ್ಧದ ಗೋಸ್ಕರ ಬಂದ ಹಡಗಗಳು ನದಿಯಮಾರ್ಗವಾಗಿ ಅಲ್ಲಿಹೋಗಿ ಒಂದು ದಿವಸದ ಒಳಗೆ ಅದಂನು ತಂಮ ವಶಮಾಡಿಕೊಂಡರು ಯಾತರಿಂದಂದರೆ ಆದೇಶಸ್ಥರು ಯುದ್ಧದ ರೂಢಿ ಯಿಲ್ಲದವರಾದದರಿಂದ ಮುಂದೆ ಯೆದುರಾಗಿನಿಂತು ಕ್ಷಣದ ಮೇಲೆ ಓಡಿಹೋಗುತ್ತಿದ್ದರು ತರುವಾಯ ಕಂಟಿಂಣಪಟ್ಣದ ಶ್ರೇಷ್ಠರಲ್ಲಿ ಕೆಲವರೂ ಮಹಾರಾಜನವುದ್ಯೋಗಸ್ಥರಲ್ಲಿ ಕೆಲವರೂಸಹಾ ಕೂಡಿ ಪಟ್ಣವು ಕೊಳ್ಳೆಯಾಗದಹಾಗೆ ಯಿಂಗ್ಲಿಷ್‍ಅಧಿಪತಿಗಳಿಗೆ ಬೇಡಿಕೊಂಡು ಆಗೋಸ್ಕರ ೬ ಕೋಟಿ ರೂಪಾಯಿ ತರನಾಗಿ ಸಲ್ಲಿಸಿದರು ಬಳಿಕಯಿಂಗ್ಲಿಷ್‍ಅಧಿಪತಿಗಳು ಸಮುದ್ರತೀರದಲ್ಲಿರುವ ಬೇರೆ ಪಟ್ಣಗಳಿಗೆ ಹಡಗಗಳು ಕಳುಹಿಸಿ ಅವುಗಳು ತೆಗದು ನಾಶನ ಮಾಡಿದರು ಯೆಲ್ಲೆಲ್ಲಿ ಯಿವರು ಹೋದರೊ ಅಲ್ಲಿಅಲ್ಲಿ ಆಜನರು ಯೆದುರಾಗಿ ನಿಂತು ತರುವಾಯ ಓಡಿ ಹೋಗುತ್ತಿದ್ದರು ಆ ಚೀನಾದೇಶಸ್ಥರು ಅಲ್ಲಿಯ ಮಹಾರಾಜನ ಸರಕಾರದ ಕೆಲಸದಲ್ಲಿ ಅಗದಿಸುಳ್ಳುಗಾರರು ಯೇನಂದರೆ ಒಂದೊಂದುಸಾರಿ ಯುದ್ಧ ಆದಾಗ್ಯೆ ಹೊರಗಿನಪ್ಲಿಂಥರು ಬಹಳ ಪ್ರಯತ್ನಮಾಡಿ ಯುದ್ಧಮಾಡಿದಾಗ್ಯೂ ಯೇನೂಮಾಡಲಿಕ್ಕೆ ಕೂಡದೆ ಅಪಜಯಹೊಂದಿ ಹೋದರೆಂದು ಅರಸನಿಗೆ ಕಾಗದ ಬರೆಯುತ್ತಿದ್ದರು ಯೆಷ್ಟುಸಾರಿ ಯಿಂಗ್ಲಿಷ್‍ಜನರಿಂದ ಹೊಡಿಯಲ್ಪಟ್ಟರೋ ಅಷ್ಟುಸಾರಿಯು ಯಿದೇಪ್ರಕಾರ ಮಹಾರಾಜನಿಗೆ ಬರಿಯುತ್ತಿದ್ದರು ತರುವಾಯ ನದಿಯಮಾರ್ಗವಾಗಿ ಅರಸನ ರಾಜಪಟ್ಣವಾದ ಪಿಕಿನ್ ಯಂಬಲ್ಲಿಗೆ ಹೋಗಬೇಕೆಂತ ಯಿಂಗ್ಲಿಷ್‍ಜನರು ಆಲೋಚನೆ ಮಾಡಿದಮೇಲೆ ಆ ಮಹಾರಾಜನು ನಿಜವಂನು ತಿಳಿದು ಭಯಪಟ್ಟು ಒಡಂಬಡಿಕೆ ಮಾಡುವಗೋಸ್ಕರ ಯಿಂಗ್ಲಿಷ್‍ಜನರ ಅಧಿಪತಿಗಳಸಂಗಡ ತಂನ ಪ್ರಧಾನಿಗಳಂನು ಕಳುಹಿಸಿದನು ಆ ಮೇಲೆ ಯಿಂಗ್ಲಿಷ್‍ಜನರು ಸಂತೋಷದಿಂದ ಯುದ್ಧನಿಲ್ಲಿಸಿದರು ಆಕಂಟಿಂನ್ ಯಂಬ ಪಟ್ಣದ ಸಮೀಪದಲ್ಲಿರುವ ಹೊಂಕೊಂಗ್ ಯಂಬ ದ್ವೀಪವಂನು ಸ್ವಾಸ್ತಿಯಾಗಿ ತಮಗೆಕೊಟ್ಟು ೫ ಬಂದ್ರಗಳಲ್ಲಿ ಲಾವಣಿಗೆ ಸಾವಕಾರರ ವಿನ್ಯಾಸಿ ಯಿಂಗ್ಲಿಷ್‍ಕಮೀಶನ್‍ರಂನ ಯಿಟ್ಟು ಮನಸೊಯಿಚ್ಛೆಯಾಗಿ ತಾವು ಮತ್ತು ಬೇರೆ ವಿಲಾಯತೆಯವರು ವ್ಯಾಪಾರ ನಡಿಸಬಹುದಾಗರೆ ಸ್ಥಿರವಾದ ಸ್ನೇಹದ ಒಡಂಬಡಿಕೆ ಆಗಬಹುದೆಂದು ಒಪ್ಪಿಕೊಂಡರು ಆ ಪ್ರಧಾನಿಗಳು ಅದೇ ಮೇರೆಗೆ ಒಡಂಬಡಿಕೆ ಪತ್ರಿಕೆಯಂನು ಬರದು ಕಳುಹಿಸಿದಕ್ಕೆ ಆ ಮಹಾರಾಜನು ಕೆಂಪು ಶ್ಯಾಯಿಯಿಂದ ಕೈಬರಹಾಮಾಡಿ ತಿರುಗಾ ಕಳುಹಿಸಿದನು ಹೀಗಾಗಿ ಯಿಂಗ್ಲಿಷ್‍ಜನರಿಗೂ ಚೀನಾದೇಶಸ್ಥರಿಗೂ ಸಮಾಧಾನವಾಯಿತು ಚೀನಾಮಹಾರಾಜ್ಯವು ಸಕಲರಾಜ್ಯಗಳಲ್ಲಿ ದೊಡ್ಡದು ಯೇನಂದರೆ ಅಲ್ಲಿ ೨೦ಕೋಟಿಕಿಂತ ಹೆಚ್ಚುಜನರು ವಾಸಿಸುತ್ತಾರೆ ಯಿವರೆಲ್ಲರು ಬೌದ್ಧರಾಗಿ ಸೂರ್ಯನಿಗೂ ಚಂದ್ರನಿಗೂ ಸಹೋದರನೆಂಬ ಹೆಸರುಳ್ಳ ಮಹಾರಾಜನಿಗೆ ವಶವಾಗಿದ್ದಾರೆ ಅವರು ತಂಮ ರಾಜ್ಯಕ್ಕೆ ಪರಲೋಕದ ರಾಜ್ಯವೆಂದೂ ಹಿಂದು ಮುಸಲ್ಮಾನ

ವಿಲಾಯತಿಯವರಂತ ಸಹಾ ಸ್ಲಿಂಥರೆಂದೂ ಹೇಳುತ್ತಾರೆ ತಂಮ ಸೀಮೆಯಲಿ ಪರರು ಸೇರಕೂಡದಹಾಗೆ ವೊಳಪ್ರಾಕಾರದಲ್ಲಿ ೧ ಸಾವಿರ ಮೈಲ ವುದ್ದವಾಗಿಯೂ ೨೦ ಮೊಳ ಯತ್ತರವಾಗಿಯೂ ಕುದುರೆಗಳು ಕಟ್ಟಿದ ರಥ ಮೇಲೆ ನಡಿಯುವಷ್ಟು ಅಗಲವಾಗಿಯೂ ಪರ್ವತಗಳು ನದಿ ಅರಣ್ಯ ಮುಂತಾದ್ದು ಬಿಡದೆ ಆವರಿಸಿಕೊಂಡಿರುವ ಗೋಡೆಯಂನು ಪೂರ್ವದಲ್ಲಿ ೧೫೦೦ ವರ್ಷಗಳ ಹಿಂದೆ ಕಟ್ಟಿದ್ದರು.

ಚೀನಾ ದೇಶದ ಮಹಾರಾಜನು ದೇವರಿಂದ ಸಮಸ್ತ ಲೋಕದ ಅಧಿಕಾರವಂನು ಹೊಂದಿಕೊಂಡವನಂತೆ ತನ ದೇಶವಂನು ಚೆಂನಾಗಿ ಆಳಿಕೊಳ್ಳುತ್ತಾನೆ ಪ್ರಜೆಗಳಲ್ಲಿ ಜಾತಿಭೇದವೇನು ಯಿಲ್ಲ ಮಹಾರಾಜನು ಯಾವವನಿಗಾದರು ಅಧಿಕಾರವಾಗಲಿ ಮಾನವಾಗಲಿ ಕೊಟ್ಟರೆ ಅವನೇ ಶ್ರೇಷ್ಠನು ತಂದೆಯು ವೊಂದು ವುದ್ಯೋಗದಲ್ಲಿ ಸತ್ತರೆ ಮಗನಿಗೆ ಆ ವುದ್ಯೋಗ ಸಿಕ್ಕುವ ಪದ್ಧತಿಯಿಲ್ಲ ಬಡವರಾಗಲಿ ದೊಡ್ಡವರಾಗಲಿ ಮಹಾರಾಜನಿಗೆ ವುತ್ತಮನಾಗಿ ಕಂಡವನಿಗೆ ವೊಳ್ಳೆ ವುದ್ಯೋಗ ಸಿಕ್ಕುವದು ಪರಲೋಕದಲ್ಲಿ ವೊಬ್ಬ ದೇವರೂ ಭೂಲೋಕದಲ್ಲಿ ವೊಬ್ಬ ದೇವರೂ ಯೆಂದು ಅವರಲ್ಲಿ ಗಾದೆ ನಡಿಯುತ್ತದೆ ಮತ್ತು ಆ ಚೀನಾ ದೇಶದ ವಿನಹಾ ಯಿರುವ ಯಿತರ ದೇಶಗಳು ತಂಮ ಅರಸನದಾಗಿಯೂ ಕರ ಕೊಡುವದು ಮಾಡಿ ಬೇರೆ ಜನರು ಆಳುತ್ತಾರೆಂದೂ ಬೇರೆ ದೇಶದಿಂದ ಯಾರಾದರು ರಾಯಭಾರಿಗಳು ಬಂದರೆ ಕಪ್ಪ ತೆಗದುಕೊಂಡು ಬಂದ್ದಿದಾರೆಂದೂ ತಿಳುಕೊಳ್ಳುತ್ತಾರೆ ಅರಸನು ಆಳುವ ಪದ್ಧತಿ ಪ್ರಕಾರವೆ ತಂದೆಗೆ ಮನೆಯಲ್ಲಿ ಮಿತಿಯಿಲ್ಲದ ಅಧಿಕಾರವುಂಟು ವೊಬ್ಬ ತಂದೆಯು ತನ ಮಕ್ಕಳಂನು ಮಾರಿದರೆ ಅಥವಾ ಕೊಂದುಹಾಕಿದರೆ ಸರಕಾರದಿಂದ ಅವನಿಗೆ ಸ್ವಲ್ಪ ಶಿಕ್ಷೆ ಸಿಕ್ಕುವದು ಆದರೆ ವೊಬ್ಬ ಮಗನು ತಂದೆಗಾಗಲಿ ಅಜ್ಜಿಗಾಗಲಿ ಬೈದರೆ ಅವನು ಮರಣಕ್ಕೆ ಪಾತ್ರನು ಆ ಮಹಾರಾಜನು ದೇವರಿಗೂ ಪ್ರಜೆಗೂ ಮಧ್ಯಸ್ತಗಾರನಾಗಿರುವದರಿಂದ ತನ ದೇಶದಲ್ಲಿ ಕ್ಷಾಮವೂ ಭೂಕಂಪವೂ ಯಿತ್ಯಾದಿಗಳು ಬಂದರೆ ಆ ಗೋಸ್ಕರ ತಾನೆ ಪಶ್ಚಾತ್ತಾಪಪಟ್ಟು ವುಪೋಷ್ಯವು ಮಾಡಿ ವೈರಾಗ್ಯಪರನಾಗಿ ತಪಸ್ಸು ಮಾಡಿ ದೇವರಿಗೆ ಬೇಡಿಕೊಳ್ಳುವನು ಹೀಗಿರುವದರಿಂದ ವೊಳ್ಳೆ ಮಹಾರಾಜರು ತಾವು ತಂಮ ಪ್ರಜೆಗಳ ತಂದೆಗಳಾಗಿ ದೇವರಂತೆ ರಾಜ್ಯವಂನಾಳಿಕೊಂಡು ಮನುಷ್ಯರಿಗೆ ಭಯಪಡದೆ ಯಿದ್ದರೂ ರಾಜ್ಯವಂನು ವೊಳ್ಳೆ ಕ್ರಮದಿಂದ ನಡಿಸುತ್ತಾರೆ ಆ ಮಹಾರಾಜನು ಬೇರೆ ಜನರಿಗೆ ತಂಮ ತಂಮ ವಿದ್ಯೆಯ ತಾರತಂಮ್ಯಗಳ ಮೇಲೆ ವುದ್ಯೋಗಗಳು ಕೊಡುವ ಪ್ರಮಾಣವಿರುತ್ತದೆ.

ಆದದರಿಂದ ಘನವಂನು ಸಂಪಾದಿಸಬೇಕೆಂದಿರುವವರು ಬೇರೆಬೇರೆ ವಿದ್ಯೆಗಳಂನು ಸಂಪಾದಿಸಿ ಪರೀಕ್ಷೆ ಕೊಡಬೇಕಾಗಿದೆ ಮೊದಲು ಸರ್ತಿ ಪರೀಕ್ಷೆ ಕೊಟ್ಟು ೨ನೆ ಸಾರಿ ಚೆಂನಾಗಿ ಪರೀಕ್ಷೆ ಕೊಟ್ಟ ಮೇಲೆ ಮಂದರಿನ್ ಯೆಂಬ ಸರಕಾರ ವುದ್ಯೋಗಸ್ತರ ಸಮೂಹದಲ್ಲಿ ಸೇರಿರಬಹುದು ಆ ಮಂದರಿನ್‌ರಲ್ಲಿ ೯ ತರವು ವುತ್ತಮರು ಬೇರೆಬೇರೆ ಸೀಮೆಗಳಂನು ಅರಸರಂತೆ ಆಳುವ ಅಧಿಪತಿಗಳು ಕನಿಷ್ಠರು ಸಂಸ್ಥಾನದ ಹಣವಂನು ವರುಷಂಪ್ರತಿಯಲ್ಲು ಕೂಡಿಸುವ ಕಲೆಕಟರ ಥೊರೆಗಳಾಗಿರುವರು ಆಯಾಯ ಮಂದರಿನರು ತಂನ ತಂನ ಕೆಲಸವಂನು ಸರ್ವಾಧಿಕಾರಿಯಾಗಿ ನಡಿಸುತ್ತಾನೆ ಯಿವರು ಸಂಸ್ಥಾನದ ಅಧಿಕಾರ ಹೊರ್ತು ಜನರಿಗೆ ನಾನಾವಿದ್ಯಗಳಂನೂ ಧರ್ಮಶಾಸ್ತ್ರ ಯಿತ್ಯಾದಿಗಳಂನು ಕಲಿಸುವ ಬೋಧಕರಾಗಿಯೂ ಯಿರುತ್ತಾರೆ ಯೀ ಮಂದರಿನಲ್ಲಿ ವೊಂದು ಭಾಗ ವಿದ್ಯಾಭ್ಯಾಸ ಮಾಡುವವರ ಪರೀಕ್ಷೆಗಳಂನು ಆಗ್ಯಾಗ್ಯೆ ತೆಗದುಕೊಳ್ಳುತ್ತ ಬರುತ್ತಾರೆ ಯೀ ಪರೀಕ್ಷಕರಲ್ಲಿ ವೊಂದು ತರದವರು ಮೊದ್ಲನೆ ಪರೀಕ್ಷೆಯಂನು ತೆಗದುಕೊಳ್ಳುವದಕ್ಕೆ ದೇಶವೆಲ್ಲ ಸಂಚರಿಸುತ್ತಾರೆ ೨ನೆ ಪರೀಕ್ಷೆಯು ಆಯಾಯ ಸೀಮೆಗಳ ಪ್ರಾಮುಖ್ಯ ಪಟ್ಣಗಳಲ್ಲಿ ಗಾವರ್ನ ಥೊರೆಗಳ ಮುಂದೆ ಆಗುವದು ೩ನೆ ಪರೀಕ್ಷೆ ಮೂರು ವರ್ಷಕ್ಕೊಂದುಸಾರಿ ಪೆಕಿನ್ ಯೆಂಬ ರಾಜಪಟ್ಣದಲ್ಲಿ ಮಹಾರಾಜನ ಮುಂದೆ ಕೊಡಬೇಕಾದದ್ದು ಯೀ ಪರೀಕ್ಷೆ ಚೆಂನಾಗಿ ಕೊಟ್ಟವರು ಕೂಡ್ಲೆ ವುಪದೇಶಿಗಳೆಂಬ ಅಥ ಪ್ರಾಯವುಳ್ಳ ಚಿಂಚೆಯಂಬ ಹೆಸರಂನು ಹೊಂದುತ್ತಾರೆ ಮೇಲೆ ಹೇಳಿದ ೩ನೆ ಅಥವಾ ೨ನೆ ಪರೀಕ್ಷೆಗಳಂನು ಚೆಂನಾಗಿ ಕೊಡದೆ ಯಿದ್ದವರು ಬಾಲಾಯಿಹುದ್ದೆಗಳಂನು ಪಡಕೊಳ್ಳಕೂಡದು ಯೀ ಚಿಂಚೆಯಂಬ ವುಪದೇಶಕರಲ್ಲಿ ಶ್ರೇಷ್ಠರಾದ ಕೆಲವರು ಹಂಲ್ಲಿನಯಂದು ಕರೆಯಲ್ಪಟ್ಟು ವಿಶೇಷ ಮಾನವಂನು ಸಂಸ್ಥಾನದಲ್ಲಿ ಹೊಂದುತ್ತಾರೆ ಮಂದರಿನ ಅಧಿಕಾರವಂನು ಹೊಂದುವವರು ದುರ್ನಡತೆಯಲ್ಲಿ ಸೇರದಹಾಗೆ ಜನ್ಮಸೀಮೆಯಲ್ಲ್ಯಾಗಲಿ ಹತ್ತರ ಯಿರುವ ಸೀಮೆಯಲ್ಲ್ಯಾಗಲಿ ವುದ್ಯೋಗವಂನು ಹೊಂದದೆ ದೂರವಾದ ಸ್ಥಳಗಳಲ್ಲಿ ಅಧಿಕಾರವಂನು ಹೊಂದಿ ಮೂರುಮೂರು ವರ್ಷಕ್ಕೆ ವರ್ಗಾವರ್ಗಿಯಾಗಿ ಹೋಗುತ್ತಾ ಆ ಸಮಯದಲ್ಲಿ ಶ್ರೇಷ್ಠ ಮಂದರಿನರು ತಂಮ ಕೆಳಗೆ ಯಿರುವ ಮಂದರಿನರೆಲ್ಲರಂನು ವಿಚಾರಣೆ ಮಾಡಿ ಅವರ ಯೋಗ್ಯತೆಗಳಂನು ಕುರಿತು ಮಹಾರಾಜನಿಗೆ ತಿಳಿಸುತ್ತಾರೆ ಯೀ ಪ್ರಕಾರ ಚೀನಾದೇಶದಲ್ಲಿ ಸಂಸ್ಥಾನದ ಕೆಲಸಗಳು ನಡಿಯುತ್ತಾವೆ.

ಚೀನಾ ದೇಶದ ನ್ಯಾಯಶಾಸ್ತ್ರದಲ್ಲಿ ಆಯಾಯ ತಪ್ಪಿಗೂ ಅಕ್ರಮಕ್ಕೂ ಅಪರಾಧಕ್ಕೂ ಕೊಡಬೇಕಾದ ಶಿಕ್ಷೆಗಳು ಬಹು ಸೂಕ್ಷ್ಮವಾಗಿ ನಿರ್ಣಯಿಸಲ್ಪಟ್ಟಿದ್ದಾವೆ ಚೀನಾ ದೇಶವು ಮೇಲೆ ಹೇಳಿದ ಪ್ರಕಾರ ಮಹಾ ವಿದ್ಯಾಶಾಲೆಯೊಪಾದಿಯಲ್ಲಿರುವ ಕಾರಣ ಬೆತ್ತದ ಶಿಕ್ಷೆಯು ಬಹಳ ನಡವಡಿಕೆಯಾಗಿರುತ್ತದೆ ಯೀ ಶಿಕ್ಷೆಗಳಿಗಾಗಿ ವೊಂದು ದೊಡ್ಡದಾಗಿಯೂ ಮತ್ತೊಂದು ಸಂಣದಾಗಿಯೂ ಯರಡು ಬೆತ್ತಗಳು ಯಿರುತ್ತಾವೆ.

ಮದರಾಸ್ ಗಜೆಟಿನ ವರ್ತಮಾನ.

ಅಡಿಶನಾಲ್ ಸಬಕಲೇಕಟರಾದ ಅಶಿಂಗಟಿಂನ್ ಸಾಹೇಬರು ವಿಲಾಯತಿಗೆ ಹೋಗುವರೆ ಹಡಗು ಹತ್ತುವ ತಾರೀಕಿನಿಂದ ಮಂಗಳೂರ ಜಿಲ್ಲಾ ಆಕಟಿಂಗ ಶಿವಿಲ್ ವ ಶೆಷಂಜಡ್ಜರಾಗಿ ಕೆಲಸ ನೋಡುವ ಪಾರಕರ ಸಾಹೇಬರು ಕನಡಾ ಜಿಲ್ಲಾ ಅಡಿಶನಾಲ್ ಸಬಕಲೇಕಟರ್ ಆಗಿರಬೇಕು ವಲಂಡರ್‌ಸಂನ್ ಸಾಹೇಬರು ಬರುವವರೆಗೆ ಆಕಟಿಂಗ ಶಿವಿಲ್ ವ ಶೆಷಂಜಡ್ಜರಾಗಿ ಕೆಲಸ ನೋಡಬೇಕು.

ಸದರ ಫೌಜದಾರಿ ಅದಾಲತ ಕೋರ್ಟಿನ ೨ನೆ ಜಡ್ಜರಾದ ಮಲಕಂಬಯಿನ್ ಸಾಹೇಬರು ೧ ತಿಂಗಳ ಬಗ್ಗೆ ರಜಾ ಪಡಕೊಂಡಿದ್ದಾರೆ.

ಕನಡಾ ಜಿಲ್ಲಾ ಸಬಕಲೇಕಟರ್ ಆಗಿದ್ದ ಯಡವಾರ್ಡ ಮೊಲ್ಟಬಿ ಸಾಹೇಬರು ಕಳದ ಫೇಪ್ರವರಿ ತಿಂಗಳ ತಾರೀಕು ೧ರಲ್ಲು ಮದರಾಸ ತಲಪಿಯಿರುತ್ತಾರೆ.

ಸಬೋರ್ಡನೈಟ ಕ್ರಿಮಿನಾಲ್ ಕೋರ್ಟ.

ಸನ್ ೧೮೪೪ನೆ ಯಿಸವಿ ಕ್ರಿಮಿನಾಲ್ ನಂಬ್ರ ೧೨ನೆ ಮುದ್ದೆ ಬೇಕಲ ತಾಲೂಕಿನಲ್ಲಿರುವ ಯರವಾಡನಿಂದ ತನ ಮನೆಯ ಗೋಡೆಗೆ ಕಂನಾ ಕೊರದು ರೂಪಾಯಿ ೧೦॥ ರೈಸು ೬೪ ಕ್ರಯದ ಜಿಂದಗಿ ಯಿದೇ ಯಿಸವಿ ಜನವರಿ ತಾರೀಕು ೨೧ನೆ ರಾತ್ರಿ ಹೊತ್ತಿನಲ್ಲಿ ಬಂದಿವಾನರು ಕಲ್ಲಂದಾ ೧ ಕಾದ್ರಿ ೧ ಯೀ ೨ ಜನರು ಚೋರಿ ಮಾಡಿದರು ಯಂತೆ ಪಟ್ಟಂಥಾ ಫಿರ್ಯಾದಿ ದರ್ಯಾಪ್ತಿಯಲ್ಲಿ ತಪ್ಪು ರುಜು ಆದದರಿಂದ ೧ನೆ ಬಂದಿವಾನಗೆ ೬ ತಿಂಗಳು ಬಂಧನ ಕಷ್ಟ ೨ನೆ ಬಂದಿವಾನಗೆ ವೊಳ್ಳೇ ನಡತೆ ವ ಹಾಜರಿ ಬಗ್ಗೆ ಸಹಾ ೬ ತಿಂಗಳವಾಯಿದೆಗೆ ೧೦ ರೂಪಾಯಿಗೆ ೧ ರ ಪ್ರಕಾರ ೨ ಜಾಮೀನುಗಳು ಕೊಟ್ಟರೆ ಬಿಡುವಂತೆ ಸಹಾ ಪಂಡಿತ ಸದರ ಅಮೀನರು ಕೊಟ್ಟ ಫಿತವೆ ಕಾಯಂ ಮಾಡಿ ಯಿರುತ್ತಾರೆ.

ಕ್ರಿಮಿನಾಲ್ ನಂಬ್ರ ೧೩ನೆ ಮುದ್ದೆ ಮಂಗಳೂರ ತಾಲೂಕಿನಲ್ಲಿರುವ ನಾರಾಯಣನು ತಾನು ವಾಸವಾಗಿಯಿರುವ ಅಂಗಡಿಯಿಂದ ಯಿದೇ ಯಿಸವಿ ಜನವರಿ ತಾರೀಕು ೧೯ನೆ ರಾತ್ರಿ ಹೊತ್ತಿನಲ್ಲಿ ಬೀಗ ಮುರದು ರೂಪಾಯಿ ೭೭॥ ಕ್ರಯದ ಜಿಂದಗಿ ಬಂದಿವಾನ ಅಂಣು ಯಂಬುವನು ಚೋರಿ ಮಾಡಿರುತ್ತಾನೆ ಯಂತೆ ಮಾಡಿದ ಫಿರ್ಯಾದಿ ದರ್ಯಾಪ್ತಿಯಲ್ಲಿ ತಪ್ಪು ರುಜು ಆಗದೆಯಿರುವದರಿಂದ ಬಂದಿವಾನಗೆ ಬಿಡುವಂತೆ ಪಂಡಿತ ಸದರ ಅಮೀನರು ಕೊಟ್ಟ ಫಿತವೆ ಕಾಯಂ ಮಾಡಿಯಿರುತ್ತಾರೆ.

ಕ್ರಿಮಿನಾಲ್ ನಂಬ್ರ ೧೬ನೆ ಮುದ್ದೆ ಬಂಟವಾಳ ತಾಲೂಕಿನಲ್ಲಿರುವ ಹೊತೆಯ ಪಿನಾರ್ನು ತನಗೆ ಬಂದಿವಾನಯಿ ಮಾಮಸಾಹೇಬನು ಯಿದೇ ಯಿಸವಿ ಫೇಪ್ರವರಿ ತಾರೀಕು ೩ನೆ ಶನಿವಾರ ದಿವಸ ಹಗಲು ಶುಮಾರು ೪ ಘಂಟೆ ಸಮಯದಲ್ಲಿ ಕೈಯಿಂದ ವ ಕಾಲಿಂದ ಸಹಾ ಬಹಳವಾಗಿ ಹೊಡದು ಭಾರಿ ಜುಲುಂ ನಡಿಸಿದರಿಂದ ಹೊಟ್ಟೆಯಲ್ಲಿ ರಕ್ತ ಘಟ್ಟಿಕಟ್ಟಿ ಗುದದ್ವಾರದಿಂದ ಯಿಳಿದು ಹೋಗುತ್ತಿತ್ತು ಯಂತೆ ಮಾಡಿದ ಫಿರ್ಯಾದಿ ದರ್ಯಾಪ್ತಿಯಲ್ಲಿ ತಪ್ಪು ರುಜು ಆದದರಿಂದ ೪ ತಿಂಗಳು ಬೇಡಿ ಸಹಿತ ಬಂಧನ ಕಷ್ಟ ಮತ್ತು ೨೫ ರೂಪಾಯಿ ಜುರಮಾನೆ ಕೊಡದಿದ್ದರೆ ಪುನಹಾ ೨ ತಿಂಗಳು ಬಂಧನ ಕಷ್ಟ ನೂಡಿಸುವಂತೆ ಪಂಡಿತ ಸದರ ಅಮೀನರು ಕೊಟ್ಟ ಫಿತವೆ ಕಾಯಂಮಾಡಿ ಯಿರುತ್ತಾರೆ.

Printed at the Bellary Mission Press.
R. SAMPSON, PRINTER,—H. MOEGLING, EDITOR.

ಕಂನಡಸಮಾಚಾರವು.

೧೮೪೪.

೧ನೆ ಪುಸ್ತಕ. ೨ನೆ ಅಂಕಿ] ಬಳ್ಳಾರಿ ೧೫ನೆ ಮಾರ್ಚಿ [ಟಪಾಲ ದಸ್ತೂರಿ ಕೂಡಿ. ಕ್ರಯ ೨ ದುಡ್ಡು.

ಮೊಹಮದನ ಚರಿತ್ರೆ.

ಮೊಹಮದನು ಯೀಲೋಕದಲ್ಲಿ ಹುಟ್ಟಿದ ಶ್ರೇಷ್ಠ ಮಹಾಪುರುಷರಲ್ಲಿ ವೊಬ್ಬನಾಗಿದ್ದಾನೆ ಯಿವನು ಬಡವಿಧವೆಯ ಹುಡುಗನಾಗಿ ವಿದ್ಯೆ ಬರಹ ಕಲಿಯದೇ ಬೆಳದು ನಾಲ್ವತ್ತು ವರ್ಷ ಪ್ರಾಯ ಹೊಂದುವ ಪರಿಯಂತ್ರ ಸಾಹುಕಾರಿ ಕೆಲಸ ಮಾಡಿದ ತರುವಾಯ ಕಡಿಗೆ ಮತಸ್ಥಾಪಕನಾಗಿ ಸಮಸ್ತಲೋಕದಲ್ಲಿ ವಿಸ್ತಾರವಾದ ಮುಸಲಮಾನರ ಮತವನ್ನು ವುಂಟುಮಾಡಿ ಲೋಕದಲ್ಲಿ ಯಿದ್ದ ಮಹಾ ಚಕ್ರವರ್ತಿತ್ವಗಳಲ್ಲಿ ವೊಂದನ್ನು ನಿರ್ಮಿಸಿದನು ಅವನ ಭಕ್ತರಾದ ಮುಸಲಮಾನರು ಅವನು ಸತ್ಯದೇವರ ಸತ್ಯ ಪ್ರವಾದಿಯೆಂದು ನಂಬುತ್ತಾರೆ ಕ್ರಿಸ್ತಭಕ್ತರಲ್ಲಿ ಅನೇಕರು ಯೀತನು ಸೈತಾನನ ಪ್ರೇಷಿತನಾದ ಸುಳ್ಳು ಪ್ರವಾದಿಯೆಂದು ಹೇಳುತ್ತಾರೆ ನಾವು ಅವನ ಚರಿತ್ರೆಯನ್ನು ಪಕ್ಷ ಪರಪಕ್ಷವಿಲ್ಲದ ಮನಸಿನಿಂದ ಚನ್ನಾಗಿ ವಿಚಾರಿಸಿ ಬುದ್ಧಿಯುಳ್ಳವರು ಮೊಹಮದನ ಸ್ವಭಾವವನ್ನೂ ಯೀತನ ಮತಸ್ವಭಾವವನ್ನೂ ಚಂನಾಗಿ ತಿಳುಕೊಳ್ಳುವಹಾಗೆ ವಿವರವಾಗಿ ಹೇಳಲಿಕ್ಕೆ ಪ್ರಯತ್ನಮಾಡುತ್ತೇವೆ. ಸಕಲ ಮನುಷ್ಯರ ನ್ಯಾಯವನ್ನು ಸತ್ಯವಾಗಿ ತಿಳಿಸುವವನು ಸರ್ವಜ್ಞನಾದ ದೇವರೊಬ್ಬನೆ.

ಮೊಹಮದನ ತಂದೆಯಾದ ಅಬ್ದುಲ್ಲನು ಅಬ್ದುಲ್ ಮೊತಾಲೆಬ ಯೆಂಬವನ ಮಗನಾಗಿ ಹುಟ್ಟಿ ತನ್ನ ತಂದೆಯ ಮುಂಚೆ ಸಂಣಪ್ರಾಯದಲ್ಲಿಯೇ ಸತ್ತುಹೋಗಿ ಯೆಳೆಚಿಕ್ಕ ಹುಡುಗನಾದ ಮೊಹಮದನಿಗೂ ವಿಧವೆಯಾದ ಯಿವನ ತಾಯಿಗೂ ೫ ವೊಂಟೆ ಮತ್ತು ವೊಂದು ಹಬ್ಬಷಿ ದಾಸಿಮಾತ್ರ ಬಿಟ್ಟುಕೊಟ್ಟಿದ್ದನು ಹೀಗಿರಲಾಗಿ ಅಬ್ದುಲ್ ಮೊತಾಲೆಬನು ತನ್ನ ಮೊಂಮಗನನ್ನು ಸಾಕಿ ಮರಣದ ಸಮಯದಲ್ಲಿ ಅಬ್ದುಲ್ಲನ ಅಂಣನಾದ ತನ್ನ ಚೊಚ್ಚಲಮಗ ಅಬುತಾಲೆಬನನ್ನು ಕರೆದು ಮೊಹಮದನನ್ನು ಸಂರಕ್ಷಿಸಬೇಕೆಂದು ಆಜ್ಞಾಪಿಸಿದನು ಅಬುತಾಲೆಬನು ತಂದೆಯಾಜ್ಞೆಯನ್ನು ಅನುಸರಿಸಿ ಮೊಹಮದನನ್ನು ಬಹಳ ಪ್ರೀತಿಮಾಡಿ ಸಾಹುಕಾರಿಕೆಲಸವನ್ನು ಕಲಿಸಿಕೊಟ್ಟು ವ್ಯಾಪಾರಕ್ಕೋಸ್ಕರ ಸೂರ್ಯಾದೇಶಕ್ಕೆ ಪ್ರಯಾಣವಾಗಿ ಹೊರಡುವಾಗ್ಯೆ ಹದಿಮೂರು ವರ್ಷದವನಾದ ಯಿವನನ್ನು ಕರಕೊಂಡು ಹೋದನು ತರುವಾಯ ಮಾನವೂ ಐಶ್ವರ್ಯವೂ ವುಳ್ಳ ವೊಬ್ಬ ಸಾಹುಕಾರನ ವಿಧವೆಗೆ ಯೀತನ ಸುಗುಣಗಳನ್ನು ತಿಳಿಸಿದದರಿಂದ ಆ ಖಾದಿಜಾಯೆಂಬವಳು ಮೊಹಮದನನ್ನು ತನ್ನ ಚಾಕ್ರಿಯಲ್ಲಿ ಸೇರಿಸಿ ಅವನನ್ನು ಮುತ್ಸದ್ದಿಯಾಗಿಟ್ಟಳು ಅವನು ತನ್ನ ವುದ್ಯೋಗದಲ್ಲಿ ಬಹು ಜಾಗ್ರತೆಯಿಂದಲೂ ಸತ್ಯದಿಂದಲೂ ನಡಿಯುವದನ್ನು ನೋಡಿ ಅವನನ್ನು ಮದಿವೆಮಾಡಿಕೊಂಡಳು.

ಯೀ ಮದಿವೆಯಿಂದ ಮೊಹಮದನು ಮಕ್ಕಾದಲ್ಲಿಯಿರುವ ಭಾರಿ ವರ್ತಕರಲ್ಲಿ ವೊಬ್ಬನಾಗಿ ಅನಾಯಾಸದಿಂದಿದ್ದು ಹೊಸಮತವನ್ನು ಸ್ಥಾಪಿಸುವ ಆಲೋಚನೆಯನ್ನು ಮಾಡಲಾರಂಭಿಸಿದನು ಯಾಕಂದರೆ ತನ್ನ ದೇಶಸ್ಥರು ಅಸಂಖ್ಯವಾದ ವಿಗ್ರಹಾರಾಧನೆಯಲ್ಲಿ ಬಿದ್ದಿರುವದನ್ನೂ ಯೆಹೂದರು ಕ್ರಿಸ್ತರು ತಂಮ ತಮ್ಮ ಸ್ವಧರ್ಮಗಳನ್ನು ಕೆಡಿಸಿರುವದನ್ನೂ ನೋಡಿ ಆದಾಮ ನೋವಾ ಅಬ್ರಹಾಮ ಮೋಶೆ ಯೇಸು ಮೊದಲಾದ ಸಕಲಪ್ರವಾದಿಗಳು ವಿಶ್ವಾಸವಂನಿಟ್ಟ ವೊಂದೇ ನಿಜವಾದ ಆದಿಮತದ ಮೂಲಶುದ್ಧತ್ವವನ್ನು ತೋರಿಸಿ ವೊಬ್ಬನಾಗಿರುವ ದೇವರ ಆರಾಧನೆಯ ಮಾರ್ಗವನ್ನು ಅರ್ಬಸ್ಥಾನದಲ್ಲಿ ಸ್ಥಾಪಿಸಬೇಕೆಂದು ಪ್ರಯತ್ನ ಮಾಡಿದನು ಆದದರಿಂದ ದೇವರೊಬ್ಬನೇಯೆಂದು ತನ್ನ ಆತ್ಮದಲ್ಲಿ ದೃಢವಾಗಿ ತಿಳಿದುಕೊಂಡು ವಿಗ್ರಹಾರಾಧನೆಯಲ್ಲಿ ಬಿದ್ದ ತಂನ ಸ್ವದೇಶಸ್ಥರಾದ ಅರಬ್ಬಿಯರಿಗೂ ಯೇಸುಕ್ರಿಸ್ತನು ದೇವರೆಂದು ಆತನಿಗೆ ದಿವ್ಯಆರಾಧನೆಯನ್ನು ಮಾಡುವ ಕ್ರಿಸ್ತರಿಗೂ ಬೇರೆವಿಧ ಮೋಸಗಳಲ್ಲಿ ಸಿಕ್ಕಿಬಿದ್ದ ಯೆಹೂದರಿಗೂ ಜ್ಞಾನದ ಮಾರ್ಗವನ್ನು ತೋರಿಸ ಹುಂಕೊಂಡನು ಯೀ ಆಲೋಚನೆಯು ವಂದು ಪರಿಯಾಗಿ ವುತ್ತಮವಾಗಿತ್ತು ಯೇನಂದರೆ ಮನುಷ್ಯರನ್ನು ವಿಗ್ರಹಾರಾಧನೆಯೆಂಬ ಮದಗಜದಿಂದ ತಡಿಯೇರಿಸುವದು ವಳ್ಳೆದೇಸರಿ ಆದರೆ ಮೊಹಮದನು ಯೇಸುಕ್ರಿಸ್ತನಿಗೆ ಆರಾಧನೆ ಮಾಡುವದಲ್ಲದೆ ಆತನ ತಾಯಿಯಾದ ಮರಿಯಾಳಿಗೂ ಸತ್ತುಹೋದ ಸಿದ್ಧರಿಗೂ ಅವರ ವಿಗ್ರಹಗಳಿಗೂ ಪೂಜೆಮಾಡುವ ಪಾಪದಲ್ಲಿ ಬಿದ್ದವರಾದ ಕ್ರೈಸ್ತರೂ ತಮ್ಮ ಪಿತೃಗಳನ್ನು ಫಾರ್ಸಿದೇಶದಿಂದ ತಿರುಗಿ ಯೆರೂಸಲೇಮುಕ್ಕೆ ಕರಕೊಂಡುಬಂದ ಯೆಸ್ರಾಯೆಂಬವನನ್ನು ದೇವರಮಗನೆಂದು ಕರೆದು ನಾನಾ ಕೆಟ್ಟನೇಮಗಳನ್ನು ಹಿಡುಕೊಳ್ಳುವವರಾದ ಯೆಹೂದರೂ ಆ ಕಾಲದಲ್ಲಿ ದೇವರ ಸತ್ಯಬರಹವನ್ನು ತಿಳಿಯದೆ ಅಜ್ಞಾನಿಗಳಾಗಿ ನಡಿಕೊಳುವದು ಮಾರ್ಗಗಳನ್ನು ನೋಡಿ ತಾನು ತೌರಾತ್ ಮತ್ತು ಯಿಂಜೀಲ್ ಚನ್ನಾಗಿ ವಿಚಾರಿಸದೆ ಹೊಸಮತವನ್ನು ಸ್ಥಾಪಿಸಬೇಕೆಂದು ಮಾಡಿದ ಪ್ರಯತ್ನವು ಅಯೋಗ್ಯವಾಗಿತ್ತು ಹೀಗಿರಲಾಗಿ ಅವನು ಯಿಂಥಾ ಆಲೋಚನೆಗಳನ್ನು ಮನಸಿನಲ್ಲಿ ಯಿಟ್ಟುಕೊಂಡು ಮಕ್ಕಾಪಟ್ಟಣದ ಹತ್ತ್ರಯಿರುವ ಹಾರಾಯೆಂಬ ಗುಡ್ಡದ ವೊಂದು ಗವಿಯಲ್ಲಿ ವರ್ಷಕ್ಕೆ ವೊಂದುತಿಂಗಳು ವೊಂಟಿಯಾಗಿ ಕೂತುಕೊಳ್ಳುತ್ತಿದ್ದನು.

ಅನೇಕ ಗ್ರಂಥಕಾರರು ಮೊಹಮದನು ಅರ್ಬಸ್ಥಾನದಲ್ಲಿ ವೊಂದು ರಾಜ್ಯವನ್ನು ನಿರ್ಮಿಸುವ ಆಶೆಯಿಂದ ಹೊಸಮತವನ್ನು ಸ್ಥಾಪಿಸ ಹುಂಕೊಂಡನೆಂದು ಹೇಳುತ್ತಾರೆ ಕೆಲವರು ಅವನು ಮತಸ್ಥಾಪಕನಾಗಿ ದೊಡ್ಡ ಕೀರ್ತಿಯನ್ನು ಹೊಂದುವ ಆಶೆಯಿಂದ ಕ್ರಮಗೊಂಡು ತನ್ನ ಕಾರ್ಯವನ್ನು ಆರಂಭಿಸಿದನೆಂದು ನೆನಸುತ್ತಾರೆ ಯೀಯೆರಡು ಆಲೋಚನೆಗಳಿಗೂ ಆಧಾರ ಸಾಲದು ಮೊಹಮದನು

ಒಳ್ಳೇ ಮನಸಿನಿಂದ ಅರಬ್ಬಿಯರೂ ಕ್ರೈಸ್ತರೂ ಯೂದರೂ ಯಿವರೆಲ್ಲರನ್ನು ಅಜ್ಞಾನದಿಂದ ರಕ್ಷಿಸಬೇಕೆಂದು ಆಲೋಚನೆಮಾಡಿ ಹೊಸಮತವನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಸೇರಿದನೆಂದು ನಂಬಲಿಕ್ಕೆ ಕಾರಣವುಂಟು ಆ ಮೇಲೆ ತನ್ನ ಹೃದಯದಲ್ಲಿ ಹುಟ್ಟಿದ ಆಲೋಚನೆಯು ದೇವರಿಂದ ಬಂತೆಂದು ನಂಬಲಾರಂಭಿಸಿ ಮತ್ತೊಬ್ಬರಿಗೆ ಸಹಾ ತಾನು ದೇವರ ಪ್ರವಾದಿಯೆಂದು ತಿಳಿಸುವದಕ್ಕೆ ಧೈರ್ಯವನ್ನು ಹೊಂದಿದನು.

ಮೊದಲನೆ ಪುಸ್ತಕ ಯೆರಡನೆಅಂಕೆಯಲ್ಲಿ ತೀರದೆಯಿದ್ದ

ಭೂಗೋಳದ ಸಾರವು.

ಯೆರಡನೆ ಸಂಧಿ.

ಭೂಮಿಯ ಆಕಾರವೂ ಅಳತೆಯೂ ಚಲನೆಯೂ.

ಭೂಮಿಯು ಗುಂಡಾಕಾರವಾಗಿದೆಂದು ಅನೇಕ ದೃಷ್ಟಾಂತಗಳಿಂದ ತಿಳಿಕೊಳ್ಳಬಹುದು ಅಂಥಾ ದೃಷ್ಟಾಂತಗಳೈದು ಹೇಳುತ್ತವೆ.

೧ ಚಂದ್ರಗ್ರಹಣವಾಗುವಾಗ್ಯೆ ಭೂಮಿಯ ನೆರಳು ಚಂದ್ರನ ಮೇಲೆ ಬೀಳುತ್ತದೆ ಯೀ ನೆರಳು ಯಾವಾಗ್ಯೂ ಚಕ್ರಾಕಾರವಾಗಿ ಕಾಣುತ್ತದೆ ಭೂಮಿಯು ಗೋಳಾಕಾರವಾಗಿಲ್ಲದಿದ್ದರೆ ಅದರ ನೆರಳು ಚಕ್ರದ ಪ್ರಕಾರವಲ್ಲದೆ ಒಂದುವೇಳ್ಯೆ ಚೌಕಾಗಿಯೂ ಒಂದುವೇಳ್ಯೆ ತ್ರಿಕೋಣವಾಗಿಯೂ ಒಂದುವೇಳ್ಯೆ ಬರಿಗೆರೆಯಹಾಗೆಯೂ ಕಾಣುತಿತ್ತು.

೨ ಸಮುದ್ರದಲ್ಲಿ ಒಂದು ಹಡಗವು ದೂರದಿಂದ ಕಾಣುವಾಗ ಮೊದಲು ಅದರ ಕೂವೆಮರದ ತುದಿಯೂ ಅದರ ಮೇಲೆ ಹಾಯಿಗಳೂ ಕಡೇಗೆ ಮಾತ್ರ ಅದರ ಮರ ಹಲಗೆಗಳೂ ಮೊದಲಾದವು ಕಾಣುತ್ತವೆ ಯೀ ಪ್ರಕಾರ ಹಡಗವು ಹತ್ರ ಹತ್ರ ಬರುವ ಸಮಯದಲ್ಲಿ ದೊಡ್ಡ ಗೋಳದ ಆಚೆಯಿಂದ ಮೇಲೆ ಮೇಲೆ ಏರುವ ಪ್ರಕಾರ ಕಾಣುತ್ತದೆ.

೩ ಅನೇಕ ನಾವಿಕರು ತಂಮ ಸ್ವದೇಶದಿಂದ ಹೊರಟು ಹಡಗ ತಿರುಗಿಸದೆ ಒಂದೆ ದಿಕ್ಕು ಹಿಡಿದು ಸುಮಾರು ಒಂದು ಅಥವಾ ಒಂದುವರೆ ವರುಷ ಸಮುದ್ರಪ್ರಯಾಣಮಾಡಿ ಭೂಮಿಯನ್ನು ಸುತ್ತಿಕೊಂಡು ಅದರ ಬೇರೆ ಬೇರೆ ರಾಜ್ಯಗಳನ್ನು ನೋಡಿ ಕಡೆಯಲ್ಲಿ ತಾವು ಹೊರಟಸ್ಥಳಕ್ಕೆ ಬಂದು ಸೇರಿಯಿದ್ದಾರೆ.

೪ ಉತ್ತರದಿಕ್ಕಿಗೆ ಪ್ರಯಾಣವಾಗಿ ಸ್ವಲ್ಪದೂರ ಹೋದರೆ ಯೀ ದೇಶದಲ್ಲಿ ಉತ್ತರದಿಕ್ಕಿಗೆ ತಗ್ಗಾಗಿ ಕಾಣುವ ನಕ್ಷತ್ರಗಳು ಮೇಲೆ ಮೇಲೆ ಏರಿಬರುತ್ತವೆ ಅವುಗಳ ಬದಲಾಗಿ ಯೀ ರಾಜ್ಯದಲ್ಲಿ ಕಾಣದ ನಕ್ಷತ್ರಗಳು ಕ್ರಮವಾಗಿ ಕಾಣಬರುತ್ತವೆ ಮತ್ತು ಯೀ ದೇಶದಲ್ಲಿ ದಕ್ಷಿಣದಿಕ್ಕಿಗೆ ಕಾಣುವ ನಕ್ಷತ್ರಗಳು ಕ್ರಮವಾಗಿಳಿದು ಕಡೆಯಲ್ಲಿ ಕಾಣದೆ ಹೋಗುತ್ತವೆ ದಕ್ಷಿಣ ದಿಕ್ಕಿಗೆ ಹೋದರೆ ಅದೇ ಪ್ರಕಾರ ಉತ್ತರ ನಕ್ಷತ್ರಗಳು ಕಾಣದೆ ಹೋಗಿ ದಕ್ಷಿಣದಲ್ಲಿ ಹೊಸ ಹೊಸ ನಕ್ಷತ್ರಗಳು ಏರಿಬರುವವು ಹೀಗೆಯಿರುವದರಿಂದ ನಕ್ಷತ್ರಗಳಲ್ಲಿ ಯೇನೂ ಹೆಚ್ಚುಕಡಿಮೆಯಿಲ್ಲದೆ ಭೂಮಿಯು ಗುಂಡಾಕಾರವಾಗಿರುವದರಿಂದ ಮಾತ್ರ ಬೇರೆ ಬೇರೆದಿಕ್ಕುಗಳಿಗೆ ಪ್ರಯಾಣವಾಗಿ ಹೋಗುವ ಜನರಿಗೆ ಕೆಲವು ನಕ್ಷತ್ರಗಳು ಕಾಣಬರುತ್ತವೆ ಕೆಲವು ಕಾಣದೆಹೋಗುತ್ತವೆಯೆಂದು ಯೆಣಿಸಬಹುದು.

೫ ಸೂರ್ಯ ಚಂದ್ರ ನಕ್ಷತ್ರಾದಿಗಳು ಗುಂಡಾಕಾರವಾಗಿವೆಯೆಂದು ದುರ್ಬೀನಿಂದ ನೋಡಿ ತಿಳಿಕೊಳ್ಳಬಹುದು ಯೀ ಪ್ರಕಾರ ಉಳಿದ ಯೆಲ್ಲಾ ನಕ್ಷತ್ರಗಳು ಗುಂಡಾಕಾರವಾಗಿದ್ದರೆ ಭೂಮಿಗೆ ಬೇರೆ ಆಕಾರ ಯಿದ್ದೀತೊ.

ಭೂಗೋಳದ ವ್ಯಾಸವು ಸುಮಾರು ೩೪೩೮ ಹರದಾರಿಯಾಗಿದೆ ಭೂಮಿಯ ಸುತ್ತಲು ಪ್ರಯಾಣಮಾಡಲಿಕ್ಕೆ ೧೦೮೦೦ ಹರದಾರಿ ಮಾರ್ಗವಾಗಿದ್ದೀತು.

ಭೂಮಿಯು ೩೬೫ ದಿವಸವೂ ಆರುತಾಸುಗಳೊಳಗೆ ಒಂದುಸಾರಿ ಸೂರ್ಯನ ಸುತ್ತಲು ಅಂಡಾಕಾರವಾದ ಮಾರ್ಗದಲ್ಲಿ ತಿರುಗುವದರಿಂದ ೩೬೫ ದಿವಸಗಳ ಸಮಯಕ್ಕೆ ಸಂವತ್ಸರವೆಂಬ ಹೆಸರು ಉಂಟಾಯಿತು ಸೂರ್ಯನ ಸುತ್ತಲು ತಿರುಗುವಂಥಾ ಮಾರ್ಗದಲ್ಲಿ ಭೂಗೋಳವು ಹೊರಳುತ್ತಾ ಮುಂದೆಮುಂದೆ ಹೋಗುತ್ತದೆ ಯೀ ಹೊರಳಾಡುವ ಕ್ರಮದಲ್ಲಿ ಸೂರ್ಯನ ಯೆದುರಾಗಿರುವ ಪಾರ್ಶ್ವಕ್ಕೆ ಹಗಲೂ ಸೂರ್ಯಗೆ ವಿಮುಖವಾಗಿರುವ ಪಾರ್ಶ್ವಕ್ಕೆ ಯಿರಳೂ ಉಂಟಾಗಿ ಭೂಮಿಯು ೨೪ ತಾಸುಗಳೊಳಗೆ ಒಂಮೆ ತನ್ನ ಸುತ್ತಲು ತಿರುಗುವದರಿಂದ ಅಂಥಾ ೨೪ ತಾಸುಗಳ ಸಮಯಕ್ಕೆ ಅಹೋರಾತ್ರಿಯೆಂಬ ಹೆಸರುಂಟಾಯಿತು ಸಮಸ್ತ ಭೂಮಿಯಲ್ಲಿ ೨೪ ತಾಸುಗಳೊಳಗೆ ನಿತ್ಯವಾಗಿ ಹಗಲೂ ಯಿರಳೂ ಉಂಟಾಗುವದರಿಂದ ಭೂಗೋಳವು ಸ್ಥಾವರವಾದ ಸೂರ್ಯನ ಸುತ್ತುಲಾಗಿ ತಿರುಗುವದರಲ್ಲಿ ಹೊರಳಾಡುತ್ತಾ ನಡೆಯುತ್ತದೆಂಬುವದಕ್ಕೆ ಸಂದೇಹವಿಲ್ಲ ಸೂರ್ಯನು ತಾನೆ ದಿನದಿನಕ್ಕೆ ಭೂಮಿಯ ಸುತ್ತಲು ತಿರುಗಾಡಿ ಮೂಡಣದಿಂದೆದ್ದು ಪಶ್ಚಿಮದಿಕ್ಕಿನಲ್ಲಿ ಅಸ್ತಮಿಸುತ್ತಾನೆಂಬದರಹಾಗೆ ನಮ್ಮ ಕಣ್ಣುಗಳಿಗೆ ತೋರುತ್ತದೆ ಆದಾಗ್ಯೂ ಯೀ ವಿಷಯದಲ್ಲಿ ಯಿಂದ್ರಿಯಂಗಳಿಂದ ಬರುವ ಪ್ರಮಾಣವು ತಪ್ಪಾಗಿದೆ ಒಬ್ಬ ಮನುಷ್ಯನು ರಥದ ಮೇಲೆ ಯಾದರೂ ದೋಣಿಯ ಮೇಲಾದರೂ ತೀವ್ರವಾಗಿ ಪ್ರಯಾಣಮಾಡುವಾಗ ನದೀತೀರದಲ್ಲಿಯಾದರೂ ಮಾರ್ಗದಂಚಿನಲ್ಲಿಯಾದರೂ ಯಿರುವ ಮರ ಮನೆ ಮೊದಲಾದವುಗಳು ಆಚೆಗೆ ಬೇಗಬೇಗ ನಡದುಹೋಗುತ್ತವೆ ತಾನುಮಾತ್ರ ಸ್ಥಿರವಾಗಿ ಅದೇ ಸ್ಥಳದಲ್ಲಿ ಕೂತುಕೊಂಡಿರುತ್ತೇನೆಯೆಂಬಹಾಗೆ ಆ ಮನುಷ್ಯನ ಕಣ್ಣಿಗೆ ತೋರುವದು ಅದೇ ಪ್ರಕಾರ ಹೊರಳಾಡುವ ಭೂಮಿಯು ಸ್ಥಿರವಾಗಿದೆ ಸ್ಥಾವರವಾದ ಸೂರ್ಯನು ಜಂಗಮವಾಗಿದ್ದಾನೆಂದು ಜ್ಞಾನರಹಿತವಾದ ಮನಸ್ಸಿಗೆ ಯಿಂದ್ರಿಯಂಗಳ ಮಾಯೆಯಿಂದ ಕಾಣುತ್ತದೆ ಯಿದಲ್ಲದೆ ಭೂಮಿಯು ಹೊರಳಾಡಿ ಹೋಗುವ ಮಾರ್ಗವು ಅಂಡಾಕಾರವಾಗಿದೆಯೆಂದು ತಿಳಿದುಕೊಂಡರೆ ಭೂಮಿಯು ವರುಷಕ್ಕೆ ಯೆರಡು ಸಾರಿ ಸೂರ್ಯನಿಗೆ ಸಮೀಪವೂ ಯೆರಡು ಸಾರಿ ಸೂರ್ಯನಿಂದ ದೂರವೂ ಯಿರುವದೆಂದು ಸೂಚಿಸಬಹುದು.

ಮೊದಲನೆ ಪುಸ್ತಕ ಮೂರನೆಅಂಕೆಯಲ್ಲಿ ತೀರದೆಯಿದ್ದ

ಯಿಂಗ್ಲಾಂಡ್ ದೇಶದ ಚರಿತ್ರೆ.

ಯೆರಡನೆ ಸಂಧಿ.

ಮೊದಲನೆ ಸಂಧಿಯಲ್ಲಿ ಯಿಂಗ್ಲಾಂಡ ದೇಶದ ಪೂರ್ವಸ್ಥಿತಿಯೂ ರೊಮಾಯರ ವಶದೊಳಗಿದ್ದಾಗ ಯೀ ರಾಜ್ಯದಲ್ಲಿ ಸಂಭವಿಸಿದ ಚರಿತ್ರೆಯೂ ಹೇಳಿದೆ ಆದರೆ ರೊಮಾಯರು ತಂಮ ಸ್ವದೇಶಕ್ಕೆ ತಂಮೊಳಗಿರುವ ಬೇರೆ ದೇಶಗಳಿಗೂ ಆಧಾರಮಾಡಕೂಡದ ಸಮಯದಲ್ಲಿ ಯಿಂಗ್ಲಿಷ್ ಜನರು ಸಕ್ಸೋನ್ ಯೆಂಬ ಒಂದು ದೈಚುಗೋತ್ರವನು ತಂಮ ಸಹಾಯಕ್ಕಾಗಿ ಸಮುದ್ರ ದಾಟಿಬರಬೇಕೆಂದು ಕರೆದದ್ದರಿಂದ ಯೀ ಸಕ್ಸೋನ್ ಜನರು ಆ ಮಾತಿಗೆ ಒಪ್ಪಿ ಯೀ ನಂಮ ಪ್ರಯಾಣದಿಂದ ಯೇನಾಗುವದೆಂದು ಮಂತ್ರಗಾರರಿಗೂ ಶಕುನಸ್ಥರಿಗೂ ಕೇಳಿದರು ಯಿವರು ಯಿಂಗ್ಲಿಷ್ ಜನರಿಗೆ ನೀವು ೧೫೦ ವರುಷಪರಿಯಂತ್ರ ಲೂಟಿಮಾಡಿ ಆ ಮೇಲೆ ೩೦೦ ವರುಷಪರಿಯಂತ್ರ ಅವರ ರಾಜ್ಯವನು ಆಳುವಿರಿಯೆಂದು ಉತ್ತರ ಕೊಟ್ಟರು ಯೀ ಪ್ರಕಾರ ೪೫೦ ನೆ ವರುಷದಲ್ಲಿ

ಸಕ್ಸೋನ್ ಜನರು ಸಮುದ್ರವಂನು ದಾಟಿ ಮೊದಲು ಸುಮಾರು ವೊಂದುವರೆ ಸಾವಿರ ಮಂದಿಯಾಗಿ ಯಿಂಗ್ಲಾಂಡದೇಶಕ್ಕೆ ಬಂದರು ಅಲ್ಲಿ ಅವರು ಕೆಲವು ವರುಷ ಪರಿಯಂತ್ರ ದೇಶದ ಪರಿಪಾಲನೆ ಮಾಡಿ ಜನರ ವಿಶ್ವಾಸವಂನು ಹೊಂದಿದ ಮೇಲೆ ತಂಮ ಸ್ವಜನರಲ್ಲಿ ಹೆಚ್ಚುಹೆಚ್ಚಾದ ಮಂದಿಯಂನು ತಂಮ ಬಳಿಗೆ ಕರೆದು ಕಡೆಗೆ ರಾಜ್ಯವಂನು ತಂಮ ಸ್ವಾಧೀನ ಮಾಡಿಕೊಂಡು ಅದಂನು ಯೇಳು ಪಾಲು ಮಾಡಿ ಯೇಳು ಅರಸುಗಳನಿಟ್ಟು ಸುಮಾರು ೪೦೦ ವರುಷ ಪರಿಯಂತ್ರ ನಡಸಿದರು ಆದರೆ ಯೀ ಯೇಳು ರಾಜ್ಯಗಳು ತಂಮೊಳಗೆ ವುಂಟಾದ ಕಲಹದಿಂದಲೂ ಪರಶತ್ರುಗಳ ಬಲತ್ಕಾರದಿಂದಲೂ ಹಾಳಾಗಿ ಹೋದ ಮೇಲೆ ೮೨೭ನೆ ವರುಷದಲ್ಲಿ ಐಗ್ಬೆರ್ಟ್ ಯೆಂಬ ವೊಬ್ಬ ಸಕ್ಸೋನ್ ಅರಸನು ವುಳಿದ ಆರು ಸಂಸ್ಥಾನಗಳನೆಲ್ಲ ಕೂಡಿಸಿ ತಾನೊಬ್ಬನೆ ಸಮಸ್ತ ದೇಶಕ್ಕೆ ಮಹಾರಾಜನಾದನು ಯೀ ಪ್ರಕಾರ ಯಿವನು ಮೊದಲಾಗಿ ಹದಿನೈದು ಮಂದಿ ಸಕ್ಸೋನ್ ಮಹಾರಾಜರು ಯಿಂಗ್ಲಾಂಡ ರಾಜ್ಯವಂನಾಳಿದರು ಅವರ ಸಮಯದಲ್ಲಿ ಯಿಂಗ್ಲಾಂಡದೇಶದ ಪೂರ್ವಕ್ಕೆ ಯಿರುವ ಡಿನ್ಮಾರ್ಕ ರಾಜ್ಯದ ಜನರು ಅನೇಕಸಾರಿ ಯುದ್ಧಕ್ಕಾಗಿ ಬಂದು ಅನೇಕ ಕ್ರೂರತ್ವಗಳಂನು ನಡಸಿ ಅನೇಕ ಪಟ್ಣ ಗ್ರಾಮ ಮೊದಲುಗಳಂನು ಹಾಳುಮಾಡಿ ಯಿರುವದರಿಂದ ಕಡೆಯಲ್ಲಿ ಯಿಂಗ್ಲಾಂಡರಾಜ್ಯವೂ ೧೦೧೭ ನೆ ವರುಷದಲ್ಲಿ ಡಿನ್ಮಾರ್ಕಕ್ಕರಸನಾದ ಕನೂತನ ಕೈಯಲ್ಲಿ ಬಿದ್ದು ಅವನು ಸತ್ತು ಹೋದ ಮೇಲೆಯು ಬೇರೆಯರಡು ಡಿನ್ಮಾರ್ಕ ಅರಸುಗಳೊಳಗಾಗಿತ್ತು ಆದರೆ ೧೦೪೧ನೆ ವರುಷದಲ್ಲಿ ೩ನೆ ಡಿನ್ಮಾರ್ಕ ಅರಸನು ಸತ್ತ ಮೇಲೆ ವೊಬ್ಬ ಸಕ್ಸೋನ್ ಜನಾಂಗದವನು ರಾಜ್ಯವಂನು ಸಂಪಾದಿಸಿದನು ಅವನು ಮಕ್ಕಳಿಲ್ಲದೆ ಸತ್ತ ಮೇಲೆ ಅರಸುಗಳ ಸಂತಾನದಿಂದ ಹುಟ್ಟದೆಯಿರುವ ವೊಬ್ಬ ಐಶ್ವರ್ಯವಂತ ಸಕ್ಸೋನನು ಸಿಂಹಾಸನವನೇರಿದನು ಆದರೆ ಫ್ರಾಂಷದೇಶದ ಭಾಗವಾಗಿರುವ ನೊರ್ಮಂದಿ ರಾಜ್ಯದ ಅರಸನೂ ಕಡೆ ಸಕ್ಸೋನ್ ಅರಸನ ನೆಂಟನಾಗಿದ್ದ ಜಯಪ್ರದನೆಂಬ ಪ್ರತಿನಾಮವುಳ್ಳ ವಿಲ್ಲಿಯಂ ಯೆಂಬವನು ೧೦೬೬ ನೆ ವರುಷದಲ್ಲಿ ಸ್ವರಾಜ್ಯವಂನು ಬಿಟ್ಟು ಸಮುದ್ರವಂನು ದಾಟಿ ಸಕ್ಸೋನ್ ಅರಸನಂನು ವೊಂದು ದೊಡ್ಡ ಯುದ್ಧದಲ್ಲಿ ಜಯಿಸಿ ತಾನೆ ರಾಜ್ಯವಂನು ಸಂಪಾದಿಸಿ ಅಂದಿನಿಂದೀವರಿಗೆ ಆಳಿದ ಸಮಸ್ತ ಯಿಂಗ್ಲಿಷ್ ಅರಸರಿಗೆ ಮೂಲತಂದೆಯಾದನು.

ಯೀ ಸಕ್ಸೋನ್ ಜನರು ಯಿಂಗ್ಲಾಂಡರಾಜ್ಯವಂನು ಸ್ವಾಧೀನ ಮಾಡಿಕೊಂಡ ಸಮಯದಲ್ಲಿ ಅವರಿಗೆ ವಿದ್ಯೆಯೂ ಬರಹವೂ ತಿಳಿದಿರಲಿಲ್ಲ ಮತ್ತು ಪೂರ್ವದಲ್ಲಿ ರೋಮಾಯರಿಂದ ಯಿಂಗ್ಲಾಂಡದೇಶದಲ್ಲಿ ಸ್ಥಾಪಿಸಲ್ಪಟ್ಟ ವಿದ್ಯೆಗಳು ಯಿವರ ರಾಜ್ಯದ ಆರಂಭದಲ್ಲಿ ಕ್ಷೀಣವಾಗಲಿಕ್ಕಿದ್ದವು ಅದೇ ಪ್ರಕಾರ ರೋಮಾಯರ ಸಮಯದಲ್ಲಿ ಕ್ರೈಸ್ತಮತವಂನು ಅಂಗೀಕರಿಸಿದವರಿಗೆ ಯೀ ಸಕ್ಸೋನರು ಆರಂಭದಲ್ಲಿ ಬಹಳ ಹಿಂಸೆ ಮಾಡುತ್ತಿದ್ದರು ಆದರೆ ಸ್ವಲ್ಪಕಾಲದ ಮೇಲೆ ಸಕ್ಸೋನ್ ಜನರು ತಾವೆ ರೋಮಾಪಟ್ಟಣದಿಂದ ಬಂದ ಪಾದ್ರಿಯರ ಮಾತುಗಳ ಕೇಳಿ ತಂಮಲ್ಲಿ ರೂಢಿಯಾಗಿದ್ದ ವಿಗ್ರಹಾರಾಧನೆಯಂನು ವಿಸರ್ಜಿಸಿ ಯೆಲ್ಲರು ಕ್ರೈಸ್ತಮತದಲ್ಲಿ ಸೇರಿ ಅಂದಿನಿಂದ ಬರಹ ಮೊದಲಾದ ಬೇರೆ ಬೇರೆ ವಿದ್ಯೆಗಳಂನು ಚೆನ್ನಾಗಿ ಕಲಿತು ಅನೇಕ ವಿದ್ವಾಂಸರೂ ಕವೀಶ್ವರರೂ ಅವರೊಳಗೆ ಹುಟ್ಟಿದರು ಅವರ ಅರಸರಲ್ಲಿಯು ವೊಬ್ಬನು ವಿದ್ಯೆಯ ಮೇಲೆ ಬಹಳ ಮನಸು ಮಾಡಿ ಯೀ ಹಿಂದು ದೇಶದಲ್ಲಿ ವಿಕ್ರಮಾದಿತ್ಯನು ಮಾಡಿದ ಪ್ರಕಾರ ತನ್ನ ಪ್ರಜೆಗಳಿಗೆ ಬುದ್ಧಿಯಂನು ತಿಳಿಸುವ ಪ್ರಯತ್ನ ಮಾಡಿದನು ಅದೇ ಸಮಯದಲ್ಲಿ ವುಳಿದ ವಿಲಾಯತಿಯಲ್ಲಿರುವ ಹೆಚ್ಚಾದ ಜನಾಂಗಗಳಿಗೆ ಕ್ರೈಸ್ತಮತವು ತಿಳಿಯಬಂದದರಿಂದ ವಿದ್ಯೆಯೂ ಚಮತ್ಕಾರವೂ ಹೆಚ್ಚುಹೆಚ್ಚಾಗಿ ಪ್ರಸಿದ್ಧಿಯಾಯಿತು ಹೀಗೆಯೇ ಯಿಂಗ್ಲಾಂಡದೇಶವು ಆ ನೊರ್ಮಂದಿ ಅರಸನ ಕೈಯಲ್ಲಿ ಬೀಳುವಾಗ ಕೆಲವು ಸ್ಥಳಗಳಲ್ಲಿ ವಿದ್ಯಾಶಾಲೆಗಳು ಆಗಿ ಬೇರೆಬೇರೆ ಚರಿತ್ರೆಗಾರರೂ ಬೋಧಕರೂ ರಾಜನೀತಿತಿಳಿದವರೂ ಯಿರುತ್ತಿದ್ದರು ಅದರ ಹೊರ್ತಾಗಿ ಆ ಸಮಯದಲ್ಲಿ ಅನೇಕ ಕುಶಲವಾದ ಶಿಲ್ಪಿಕಾರರು ಯಿದ್ದದರಿಂದ ಯೀ ಪರಿಯಂತ್ರ ಯಿವರ ವುತ್ತಮವಾದ ಮನೆಗಳೂ ದೇವಾಲಯಗಳೂ ವುಂಟಾದವು.

ಸಾಮತಿ ಕಥೆ.

ವೊಂದು ಗ್ರಾಮದಲ್ಲಿರುವಂಥಾ ಪರತಂತ್ರ ಬುದ್ಧಿಯುಳ್ಳ ವೊಬ್ಬ ರೈತನು ತಂನಲ್ಲಿರುವ ವೊಂದು ಕುದುರೆಯ ತಟ್ಟು ಸಮೀಪವಾದ ಪಟ್ಟದ ಬಜಾರದಲ್ಲಿ ಮಾರಾಟ ಮಾಡಬೇಕೆಂತ ಜಳಿಗೆ ಮಗನಿಗೆ ಕರೆದು ಆ ತಟ್ಟು ಕಡಿವಾಣ ಬಿಗಿದು ಸಿದ್ಧ ಮಾಡಿಸಿ ಅದರ ಮೇಲೆ ತಾನು ಯೇರಿ ಕೂತುಕೊಂಡು ಹುಡುಗನಾದ ಮಗನಿಗೆ ಹಿಂದೆ ನಡಕೊಂಡು ಬಾ ಯೆಂದ್ಹೇಳಿ ಹೊರಟನು ಸ್ವಲ್ಪದೂರ ಹೋದಾಗ ಸಂಮ್ಮುಖನಾಗಿ ಬರುವವನೊಬ್ಬನು ಯಿವನಂನು ನೋಡಿ ಯೆಲೇ ರೈತನೆ ನೀ ಯೇನು ಮಾಡಿದಿ ಯೆಳೆ ಪ್ರಾಯದ ಮಗನಂನು ಯಿಂಥಾ ಘಟಿತಗವಾದ ಮಾರ್ಗದಲ್ಲಿ ನಡಸಿ ತ್ರಾಣವಂತನಾದ ನೀನು ತಟ್ಟಿನ ಮೇಲೆ ಯೇರಿದ್ಯಾ ಮಗನ ಮೇಲೆ ನಿನಗೆ ಕರುಣವಿಲ್ಲವೋ ಯೆಂದನು ಯೀ ರೈತನು ಆ ಮಾತು ಖರೆಯಾಗಿ ತಿಳಕೊಂಡು ತಾನು ಕೆಳಗೆ ಯಿಳಿದು ಮಗನಂನು ಯೇರಿಸಿ ಹಿಂದೆ ನಡೆದು ಹೋದನು ಕೆಲವು ದೂರ ಹೋದಾಗ್ಯೆ ಅಲ್ಲಿರುವ ವೊಬ್ಬನು ಯಿವರಂನು ನೋಡಿ ಯೆಲೇ ದಡ್ಡನೇ ಮುದುಕನಾದ ತಂದೆಯಂನ ಕಾಲಹಾದಿ ನಡಿಸಿ ಶಕ್ತನಾದ ನೀನು ತಟ್ಟಿನ ಮೇಲೆ ಕೂತುಕೊಳ್ಳುವದು ಸಮವೋ ಯೆಂದನು ಆ ರೈತನು ಯೀ ಮಾತು ಕೇಳಿ ವೋಹೋ ನಾನು ನಡದರೂ ಸಮವಲ್ಲ ಹುಡುಗ ನಡದರೂ ಸಮವಲ್ಲ ಯಿಬ್ಬರು ಕೂತುಕೊಳ್ಳವದೆಂದು ಹೇಳಿ ಯಿಬ್ಬರು ಕುಳಿತರು ಹೀಗೆ ಸ್ವಲ್ಪದೂರ ನಡದ ಮೇಲೆ ಮಾರ್ಗಸ್ಥರಾದ ಕೆಲವರು ಮಧ್ಯಮಾರ್ಗದಲ್ಲಿ ಯಿವರಿಗೆದುರಾಗಿ ನಿಂತು ಯೆಲೇ ನಿಷ್ಕರುಣಿಯಾದ ವೃದ್ಧನೆ ಯೀ ಚಿಕ್ಕ ತಟ್ಟು ಹೀಗೆ ದಂಡಿಸುವದು ಸಮವೋ ಡೊಳ್ಳಾಗಿದ್ದ ನೀನು ಯೀ ಸಂಣ ತಟ್ಟಿನಲ್ಲಿ ಕೂತುಕೊಂಡು ಸಂನ ಭಾರ ಸಾಲದೆಂದು ದಡ್ಡನಾದ ನಿಂನ ಮಗನಂನು ಸಹಾ ಯೇರಿಸುವದು ಪಾಪವಲ್ಲವೋ ಯೆಂದರು ಅದಕ್ಕೆ ಆ ರೈತನು ವೊಹೋ ಯಿದೂ ಆಗಲಿಲ್ಲವೆಂದು ನಿಟ್ಟುಸುರಿನಿಂದ ಕೆಳಗಿಳಿದು ಮಗನಂನು ಯಿಳಿಸಿ ಆ ತಟ್ಟು ಮುಂದೆ ಹೊಡದು ಅದರ ಹಿಂದೆ ಮಗನ ಕೈ ಹಿಡಿದು ನಡೆದನು ಯಿನ್ನು ಮುಂದೆ ಹೋದಾಗ ವೊಬ್ಬನು ನೋಡಿ ಹಾಹಾ ಯೆಂದು ನಗಾಡಿ ಯೀ ತಟ್ಟು ಬಹಳ ಪುಂಣ್ಯವುಳ್ಳದ್ದು ಯಿದರ ಮೇಲೆ ಯೇರುವವನು ಯಾವನೂ ಯಿಲ್ಲ ಹಿಂದೆ ಬಾಲ ಹಿಡಿದು ಸೇವಕರಂತೆ ಯಿಬ್ಬರು ನಡಿಯುತ್ತಾರೆ ಯೆಂದನು ಆ ಮಾತು ಯಿವನು ಕೇಳಿ ಬಹಳ ವ್ಯಸನಪಟ್ಟು ಯೇನೇನು ಮಾಡಿದರೆ ಸಮವಲ್ಲ ನಾನು ಕೂತರೂ ಹುಡುಗ ಕೂತರೂ ಯಿಬ್ಬರು ಕೂತರೂ ಯಿಬ್ಬರು ನಡದರೂ ಯೇನು ಸಮವಾಗಲಿಲ್ಲವೆಂದು ವೊಂದು ಬಿದ್ರುತುಂಡು ನೋಡಿ ಆ ತಟ್ಟು ಮಗುಚಿ ಹಾಕಿ ಹುಡುಗನಿಂದ ಅದರ ಕಾಲು ಕಟ್ಟಿಸಿ ಆ ತುಂಡು ಕಾಲಮಧ್ಯದಲ್ಲಿ ಸೇರಿಸಿ ಅದಂನು ಯಿಬ್ಬರೂ ಹೊತ್ತುಕೊಂಡು ಹೋದರು ಅಷ್ಟರೊಳಗೆ ಪಟ್ಟದ ಸಮೀಪಕ್ಕೆ ಬಂದು ಖಂದಕಕ್ಕೆ ಯಿರುವ ಸಂಕ ದಾಟುವಾಗ್ಯೆ ಹಬ್ಬಾಗಲಿನಿಂದ ಬರುವ ಜನರು ಯಿಲ್ಲಿ ಯಿಬ್ಬರು ಹುಚ್ಚರು ಕುಂದ್ರುವ ತಟ್ಟು ಕಟ್ಟಿ ಹೊತ್ತುಕೊಂಡು ಬಂದಿದ್ದಾರೆ ಯೆಂದು ಕೂಗಿ ಗುಲ್ಲು ಮಾಡಿದರು ಆ ಮಾತು ಕೇಳಿ ರೈತನು ಕಂಗಾಲಾಗಿ ಮುಂದು ಕಡೆ ಹೊತ್ತುಕೊಂಡ ಹುಡುಗನಿಗೆ ಕರೆದು ಮಗಾ ಯೀ ದುಷ್ಟಮೃಗ ನಾಶವಾಗಲಿ ಯಿದರಿಂದ ನಾವು ಅಪಹಾಸ್ಯಕ್ಕೆ ಗುರಿಯಾದೆವು ಯೆಂದು

ಕೋಪೋದ್ರಿಕ್ತನಾಗಿ ಆ ಕಟ್ಟಂನು ಮುಣುಗಿಸಿದನು ಮತ್ತು ಕಟ್ಟೋಯಿಲ್ಲದೆ ಹಣವೂ ಯಿಲ್ಲದೆ ಮನೆಗೆ ತಿರುಗಿಬಂದರು.

ಪುರಂದರದಾಸನ ಪದ.

ಮೋಸಹೋಗುವೆನ್ನೈಯ್ಯಯ್ಯಾ.
ಯೀಮಾನವಜನರಂನುಮೆಚ್ಚಿಸಲುಂಟೆ.
ಮೋಸಹೋಗುವೆನ್ನೈಯ್ಯಯ್ಯಾ.
ಮಾತನಾಡದೆಮೂಕನಂತಿದ್ದರೆ.
ಮೂಕನೆಂದುಧಿಕ್ಕರಿಸುವರು.
ಚಾತುರ್ಯದಿಂದಲಿಮಾತುಗಳಾಡಲು.
ಆತನೇಚ್ಛೆಬಡಿಕನೆಂತೆಂಬರೂ.
ಮಡಿಯಂದುನೇಮವಮಾಡಿದರೆಬಹಳ.
ಬಡಿವಾರದವನೆಂದುಬೈಯ್ಯುವರೂ.
ಮಡಿನೇಮಜಪತಪಗಳಬಿಟ್ಟು.
ನಡದರೆನಿಷ್ಟೆಹೀನನೆಂದುಹೀನೈಸುವರೂ.
ವಲಪುಳ್ಳಚಂನಿಗತನವಂನುಮಾಡಲು.
ಬಲುಕಿಂಮಿಯವನೆಂದುಬೈಯ್ಯುವರೂ.
ಸುಲಭಿಯಾಗಿನಿಗರ್ವಿಯಾಗಿದ್ದರೆ.
ಕಲಿಯುಗದಲ್ಲಿಮಂದಮತಿಯೆಂಬರೂ.
ಘಟ್ಯಾಗಿಸೊಪ್ಪತ್ತಿನೂಟವನುಂಡರೆ.
ನಿಷ್ಠೆಸುಟ್ಟೀಕೆಂದುಬೈಯ್ಯುವರೂ.
ಹೊಟ್ಟೆತುಂಬಿಮೆದುರ್ಮೂರುಭಾರುಂಡರೆ.
ಹೊಟ್ಟೆಬಾಕನೆಂದುಹೀನೈಸುವರೂ.

ಯೀ ಮೆರಡರ ತಾತ್ಪರ್ಯವಂನು ಗ್ರಹಿಸಿ ಬುದ್ಧಿ ಹೀನರು ಮೆಚ್ಚು ಕೊರತೆ ಯಿಟ್ಟಾಗ್ಯೂ ಕಳವಳ ಪಡದೆ ಬುದ್ಧಿವಂತರು ಯೀ ಸಮಾಚಾರ ಕಾಗದವಂನು ಓದಿ ಅಂಗೀಕರಿಸ್ಯಾರು ಯೆಂದು ನಿಶ್ಚಿಂತೆಯಾಗಿರ ಬೇಕೆಂದು ಕಾಣುತ್ತದೆ.

ಗಾದೆಗಳು.

ಯೀಗಾಗಿ ೨೪೦೦ ವರುಷಗಳ ಹಿಂದೆ ಯೂದರಲ್ಲಿದ್ದ ಮಹಾತ್ಮನಾದ ಯೆರೆಮಿಯನು ಹೇಳಿದ್ದು ಹಬ್ಬಶಿಯು ತನ ತೊಗಲಂನೂ ಚಿರತೆಯು ತನ ಬೊಟ್ಟುಗಳಂನೂ ಬದಲುಮಾಡಬಹುದಾದರೆ ದುಷ್ಟತನದಲ್ಲಿ ರೂಢಿಯಾದ ನೀವು ವೊಳ್ಳೇದಂನು ಮಾಡಬಹುದು ಯಿದಕ್ಕೆ ಸರೀಸಮನಾಗಿ ಕೆಲವು ನೂರುವರ್ಷಗಳ ಹಿಂದೆ ಆನೆಗುಂದಿಯಲ್ಲಿದ್ದ ಕಂನಡ ಕವಿಯಾದ ಪುರಂದರದಾಸನು ಹೇಳಿದ ಪದವೇನಂದರೆ.

ಹಾಲಲ್ಲಿ ತೊಳದರೆ ಮಸಿಬಿಳುಪಹುದೇ.
ನೀರೊಳಗಣಕಲ್ಲು ಮೃದುವಹುದೇ.
ಹಾವಿನ ಮರಿತಂದು ಹಾಲೆರದು ಸಾಕಿದರೆ
ಹಾವೊಳಗಣವಿಷವಬಿಡಬಲ್ಲುದೇ
ಶ್ವಾನನಮರಿತಂದುಜ್ಞಾನವಂನುಕಲಿಸಿದರೆ
ಬಾಯಿತೆರದುನರೆಕಚ್ಚಿಓಡಿಹೋಹುದಲ್ಲವೇ.
ಕೆಟ್ಟದ ತುರುಚೆಗೆ ಪಂನೀರು ಯೆರೆದರೆ.
ಮುಟ್ಟಿದವರಕಯಿಹರುಕೊಳ್ಳದೇ.

ಅಯೋಧ್ಯ ಪಟ್ಟದ ವರ್ತಮಾನ.

ಫೇಬ್ರವರಿ ತಾರೀಕು ೭ಲು ಲೋಟ್ ಬಹದೂರ ಗ್ವಾಲಿಯರ್ ದೇಶದಲ್ಲಿ ಮಾಡಿದ ಪ್ರಕಾರ ಲಕ್ಷಣಾವತಿ ಪಟ್ಟದಲ್ಲಿ ಅಯೋಧ್ಯಾ ಅರಸನ ಸೈನ್ಯವಂನು ಖಿನಾಹಿಂಮಾಡಿ ಯಿಂಗ್ಲಿಷ್ ಸರದಾರರು ನಡಿಸುವ ಹೊಸಸೈನ್ಯವಂನು ಕೂಡಿಸಿ ಯಿಡಬೇಕೆಂದು ಆಲೋಚನೆಮಾಡಿ ಅರಸನಿಗೆ ತಿಳಿಸಿದನೆಂದು ಹೇಳುತ್ತಾರೆ ಲೋಟ್ ಬಹದೂರ ಅರಸನಿಗೆ ಕೊಡುವ ಹೊಸಸೈನ್ಯದಲ್ಲಿ ೨೦೦೦೦ ಶಿಪಾಯಿ ಜನರಂನು ನೇಮಿಸುವರು ಯಿದರ ಕಾರಣವೇನಂದರೆ ರಾಜಕಾರ್ಯವು ಚಂನಾಗಿ ನಡಿಯದೆ ಸರಕಾರಹಣಾ ವಸೂಲುಆಗುವದಿಲ್ಲ ಯೀಗಾ ಯಿರುವ ಮುಖ್ಯಪ್ರಧಾನಿ ಯಡೆಬಿಡದೆ ಅಫೀಮು ತಿಂನುವದರಲ್ಲಿಯೂ ಸೇದುವದರಲ್ಲಿಯೂ ಯಿರುತ್ತಾನೆ ಯಿವನ ಹೊರತು ನವಾಬ ಮಸೊನಾರವುದೌಲಾ ವುತ್ತಮ ಬುದ್ಧಿ ಶಾಲಿಗಳು ಬೇರೆ ಯಿಬ್ಬರು ದೇಶದಲ್ಲಿರುತ್ತಾರೆ ಯಿವರಲ್ಲಿ ವೊಬ್ಬನಿಗೆ ಮುಖ್ಯ ಪ್ರಧಾನಿಯ ವುದ್ಯೋಗ ಶಿಕ್ಕಿದರೆ ರಾಜ್ಯವು ಚಂನಾಗಿ ನಡಿಯೀತು ಆದರೆ ಶರ್ಫುದೌಲಾ ಯಂಬವನಿಗೆ ಅರಸನು ವುಪೇಕ್ಷೆಮಾಡುತ್ತಾನೆ ಸುಭಾನಲ್ಲೀ ಖಾನ್ ಅವನಿಗೆ ಅರಸನ ಬಳಿಯಲ್ಲಿರುವ ರೆಸಿಡೆಂಟ್ ದೊರೆಗಳು ವುಪೇಕ್ಷಿಸುತ್ತಾರೆ ಹೀಗಿರಲಾಗಿ ಆಕೆಟ್ಟಪ್ರಧಾನಿ ರಾಜ್ಯವಂನುಕೆಡಿಸುತ್ತಾ ಬಂದನು.

ಮದಾರಾಸ್ ಸಮಾಚಾರ.

ಮದಾರಾಸಿನಲ್ಲಿರುವ ನವಾಬ ಬಹದೂರರು ಹೋಳಿ ಹಬ್ಬಕ್ಕೋಸ್ಕರ ಕಾಲಂಪ್ರತಿಯಲ್ಲುನಾಲ್ಕು ಅಯಿದುಸಾವಿರ ರೂಪಾಯಿಖರ್ಚುಮಾಡುತ್ತಿದ್ದರು ಆದರೆ ಯೀಕಾಲ ಯೇನು ಖರ್ಚುಮಾಡಲಿಲ್ಲ ಯಾಕೆಂದರೆ ಹೋಳಿ ಹಬ್ಬದ ಮರ್ಯಾದೆಗಳು ಕೆಟ್ಟವುಗಳಾಗಿಯೂ ಮುಸಲ್ಮಾನರ ನೇಮ ನಿಷ್ಟೆಗಳಿಗೆ ವಿರೋಧವಾಗಿಯೂ ಅವೆಯೆಂದು ಹೇಳಿ ಹಣ ಖರ್ಚುಮಾಡುವಂಥಾದ್ದು ನಿಲ್ಲಿಸಿದರು ಅವರು ಹೀಗೆಮಾಡಿದದರಿಂದ ಬುದ್ಧಿಯಿಲ್ಲದ ಮನುಷ್ಯರು ಅವರಿಗೆ ಬೈದದರಿಂದ ಅವರುತಂಮಮತಬಿಟ್ಟು ಕ್ರೈಸ್ತಮತದಲ್ಲಿಸೇರಲಿಕ್ಕೆ ಮನಸ್ಸಾಗಿದ್ದಾರೆ ಸುದ್ಧಿಯೆಬ್ಬಿಸಿದರು ಯಿದುಸುಳ್ಳು ಆದರೆ ಯೀದೇಶಸ್ಥರಲ್ಲಿರುವ ದೊಡ್ಡದೊರೆಗಳು ಅಂಥನಾಚಿಕೆಯಾದ ಬುದ್ಧಿಹೀನ ಅಪಮರ್ಯಾದೆಗಳಂನು ಬಿಟ್ಟರೆ ವುತ್ತಮವು.

ಲಾಹೂರ್ ಸಮಾಚಾರ.

ಪಂಜಾಬ್ ದೇಶದ ರಾಜ್ಯವು ಯಿಂನು ಸಮಾಧಾನದಲ್ಲಿರುವದಿಲ್ಲ ತ್ರಾಣವಿದ್ದ ಮುಖ್ಯಸ್ಥರು ಮನಸ್ಸಿಗೆಬಂದಹಾಗೆ ದೊರೆತನದ ಅಧಿಕಾರವಂನು ನಡಸಿ ತಂಮೊಳಗೆ ಜಗಳಾಡಿ ದೇಶವಂನು ಕೆಡಿಸುತ್ತ ಬರುತ್ತಾರೆ ಲೋಟ್ ಬಹದೂರರು ಆದೇಶದಪ್ರಾಂತ್ಯಗಳಹತ್ತರ ಕುಂಪನಿಯವರ ದೇಶಕ್ಕೆ ನಷ್ಟಆಗದಹಾಗೆ ಯುದ್ಧಕ್ಕೆ ಶಿದ್ಧವಾದ ಸೈನ್ಯವಂನು ಯಿಟ್ಟಿರುತ್ತಾರೆ ಹೀಗಿರಲಾಗಿಯೀ ಸಂಗತಿಗಳಂನು ಚಂನ್ನಾಗಿ ತಿಳಿದವರು ಪಂಜಾಬ್ ರಾಜ್ಯವು ಕೆಲವು ವರ್ಷಗಳೊಳಗೆ ಕುಂಪನಿಯವರ ಸ್ವಾಧೀನವಾಗುವದೆಂದು ನೆನಸುತ್ತಾರೆ.

Printed at the Bellary Mission Press.
R. SAMPSON, PRINTER,—H. MOEGLING, EDITOR.

ಕಂನಡಸಮಾಚಾರವು.

೧೮೪೪.

೧ನೆ ಪುಸ್ತಕ. ೩ನೆ ಅಂಕೆ.] ಬಳ್ಳಾರಿ ೧ನೆ ಯೇಪ್ರಿಲ್ [ಟಪಾಲ ದಸ್ತೂರಿಕೂಡಿ. ಕ್ರಯ ೨ದುಡ್ಡು.

ಮೈಲಗಜ್ಜಿಗೆ ಅಭ್ಯಂತರಿಸುವ ಶಿಕ್ಲೆಯು.

ಕನ್ನಡಜಿಲ್ಲಾ ಮಂಗಳೂರಜಿಲ್ಲಾ ಡಾಕ್ತರವ ಮಂಗ್ಲೂರ ಮತ್ತು ಹೊಂನಾವರ ಜಿಲ್ಲೆಗಳ ಶಿಕ್ಲಾಮೇಲು ವಿಚಾರಣೆ ಕರ್ತರಾದ ಲವಲ್ ಸಾಹೇಬರು ಯೀದೇಶದ ಯಾಹೊತ್ತೂಜನರಿಗೆ ಪ್ರತ್ಯೇಕವಾಗಿ ವಿಶೇಷಜ್ಞಾನ ಮತ್ತು ಬುದ್ಧಿಯುಳ್ಳ ಶ್ರೇಷ್ಠ ಜನರಿಗೆ ಅವರವರ ಕುಲಕುಟುಂಬದಸುಖಕ್ಷೇಮಕ್ಕೋಸ್ಕರ ಶಿಕ್ಲೆವಿಷಯದಲ್ಲಿ ಯೀಜಿಲ್ಲಾಪ್ರಿನಿಸ್ಪಾಲ್ ಕಲೆಕಟರ್ ರಾದ ಟೊಂಬ್ಸನ್ ಸಾಹೇಬರ ಮುಖಾಂತ್ರವಾಗಿ ತಿಳಿಯಪಡಿಸುವದೇನೆಂದರೆ ನಾಂವು ಯೀದೇಶಕ್ಕೆ ಬಂದಂದಿನಿಂದ ವಿಶೇಷವಾಗಿ ಸನ್ ೧೮೪೩ ನೆ ಯಿಸವಿಯಲ್ಲಿ ಮಂಗಳೂರವ ಹೊಂನಾವರ ಜಿಲ್ಲೆಗಳಲ್ಲಿ ಯಿರುವಶಿಕ್ಲೆ ಡಾಕ್ತರರಿಂದ ಶಿಕ್ಲೆ ಡಾಗ ಹಾಕಿಸಲ್ಪಟ್ಟಜನರು ಬಹಾಳಕಡಿಮೆಯಾಗಿ ಅವರ ತಿಂಗಳ ಗಟ್ಲೆಲೆಖ್ಖದಿಂದ ನಮಗೆ ಕಂಡುಬಂದದರಿಂದ ಆಬಗ್ಯೆ ಅವರಹತ್ರಸಬಬುವಿಚಾರಿಸಿದ್ದಲ್ಲಿ ಡಾಗಹಾಕುವದರಿಂದ ವುಂಟಾಗುವಂಥಾ ವುಪಯೋಗವಂನು ತಿಳಿಸಿ ಅದಂನು ಹಾಕಿಸಿ ಕೊಳಬೇಕೆಂತಾ ಯೆಷ್ಟು ಹೇಳಿದ್ದಾಗ್ಯೂ ವಿಶೇಷ ಜನರು ತಂಮಮಕ್ಕಳಿಗೆ ಡಾಗ ಹಾಕಲಿಕ್ಕೆ ಬಹಾಳ ವುಪೇಕ್ಷೆ ತೋರಿಸುತ್ತಾರೆವ ಕೆಲವು ಜಾತಿವಿಶಿಷ್ಠಜನರು ಅತಿನಿಷ್ಪ್ರಯೋಜನವಾದ ನಿವನಗಳಂನು ಹೇಳಿ ಡಾಗ ಹಾಕಿಸಿಕೊಳುವರೆ ತೀರಾ ನಿರಾಕರಿಸುತ್ತಾರೆ ಯಂತಾ ಯೀಜಿಲ್ಲೆಯಲ್ಲಿರುವ ಯಲ್ಲಾ ವ್ರೊಂತ್ತುಜನ ಶಿಕ್ಲೆಡಾಕ್ತರರು ಪ್ರತ್ಯುತ್ತರ ಕೊಟ್ಟಿರುತ್ತಾರೆ ಶಿಕ್ಲೆ ಡಾಗಹಾಕಿಸುವಂಥಾದರ ಅರ್ಥವೂ ಅದರಿಂದುಂಟಾಗುವ ಗುಣವೂ ಜನರಿಗೆ ಗೊತ್ತಿಲ್ಲದರಿಂದಲೆ ಜನರು ಯಾಪ್ರಕಾರ ವುಪೇಕ್ಷೆ ತೋರಿಸುವರೆ ಕಾರಣವಾಗಿಯುತ್ತದೆ ಮತ್ತು ಅಂಥಾಗುಣ ವುಂಟಾಗುವದಕ್ಕೆ ಜನರ ಅಪ್ರಬುದ್ಧಿಯಿಂದ ವಿಳಂಬವಾಗಲೀ ಪೂರ್ಣ ಅಡ್ಡಿಯಾಗಲೀ ಸಂಭವಿಸುತ್ತದೆಯಂತ ನಮಗೆ ತೋರುತ್ತದೆ ಶಿಕ್ಲೆ ಡಾಗಹಾಕುವಂಥಾದ್ದು ಮೈಲಿಗೆರೋಗವು ಬಾರದ ಹಾಗೆ ಪೂರ ಪರಿಹಾರಮಾಡುವದಕ್ಕೋಸ್ಕರವಾಗಿರುತ್ತದೆ ಆದರು ಜನರು ಯಿಂಥಾಪ್ರಯೋಜನವಂನು ಗ್ರಹಿಸದೆ ಮೈಲಿಗೆರೋಗವು ವೂರಲ್ಲಿ ಪ್ರಬಲವಾಗಿ ನಡಿಯುವ ಕಷ್ಟವ್ಯಾಕುಲಗಳ ಸಮಯಗಳಲ್ಲಿ ಯೀ ಶಿಕ್ಲೆ ಡಾಗಹಾಕುವಂಥಾದ್ದು ವೊಂದುಔಷಧದೋಪಾಡಿಯಾಗಿ ತಿಳಕೊಂಡು ಭಯಗ್ರಸ್ತರಾಗಿ ಹಿರೆಕಿರಿಯರಿಗೂ ಶಿಕ್ಲೆ ಡಾಕ್ತರರಿಂದ ಡಾಗ ಹಾಕಿಸುವದಕ್ಕೆ ಬಹಾಳವಾಗಿ ಪ್ರಯತ್ನ ಮಾಡುತ್ತಾರೆ ಹೀಗೆ ಮೈಲಿಗೆ ರೋಗ ಬಾರದಹಾಗೆ ಮಾಡುವದು ಯಾವಾಗಲೂ ಜನರಕೈಯಲ್ಲಿರುತ್ತದೆ ಯೀಬಗ್ಯೆ ಅವರು ತಂಮಮಕ್ಕಳು ಸಂಣವರಾಗಿರುವ ಸಮಯದಲ್ಲಿ ಗ್ರಾಮದಮುಖ್ಯಸ್ತರಮುಖಾಂತ್ರ ಆಯಾವೂರಿನ ಶಿಕ್ಲೆಡಾಕ್ತರರಿಗೆ ವರ್ತಮಾನ ಕೊಡುವಂಥಾದ್ದಾಗಿರುತ್ತದೆ ಶಿಕ್ಲೆ ಡಾಕ್ತರರಿಗೆ ನೇಮಿಸಿರುವ ಕೆಲಸಗಳಂನು ಅತಿ ತಾತ್ಪರ್ಯದಿಂದಲೂ ಜಾಗ್ರತೆಯಿಂದಲೂ ನಡಿಸುವ ಹಾಗೆ ನಾಂವು ಬಹಾಳಾವರ್ತಿ ಯೆಚ್ಚರಿಸುತ್ತಾಬಂದೆವು ಆದರೆ ಶಿಕ್ಲೆ ಡಾಕ್ತರರು ತಮಗೆ ಜನರುಯೇನುಸಹಾಯ ಮಾಡುವದಿಲ್ಲಾ ಯಂತಲೂ ಯಿಷ್ಟುಕಠಿಣವಾದ ಮೈಲಿಗೆ ರೋಗವಂನು ಅಭ್ಯಂತರಿಸುವದಕ್ಕೋಸ್ಕರ ಸರ್ಕಾರದಿಂದ ತೋರಿಸೋಣಾದ ವಶ್ಯತಾತ್ಪರ್ಯವಂನು ಅಲಕ್ಷಿಸುವದರಿಂದ ಶಿಕ್ಲೆ ಡಾಗ ಹಾಕುವದಕ್ಕೆ ತಾಂವುಯೆಷ್ಟುಪ್ರಯತ್ನಮಾಡಿದ್ದಾಗ್ಯೂ ನಡೀಯುವದಿಲ್ಲವೆಂದು ಹೇಳುತ್ತಾರೆ ಮತ್ತು ಯೀ ಶಿಕ್ಲೆ ಡಾಗ ಹಾಕಿಸಿಕೊಳ್ಳುವಜನರು ಹೆಚ್ಚು ಆಗುತ್ತಾ ಬಂದು ಅದರ ಆದಾಯಗಳಲ್ಲಿ ಯಲ್ಲಾಜನರು ಪೂರ್ಣತಾತ್ಪರ್ಯ ಯಿಡುತ್ತಾರೆಯಂತಾ ತಿಳದವಿನಹಾ ಯಿಷ್ಟುಖರ್ಚುಮಾಡಿ ಸರ್ಕಾರದಿಂದಯಿಡೋಣಾದ ಪ್ರಯೋಜನಕರವಾದ ವುಪಾಯವಂನು ಗವರ್ನಮೆಂಟನವರು ಯಿಂನು ನಡಿಸ್ಯಾರುಯಂಬುವದು ನಿಶ್ಚಯವಿಲ್ಲಾ ಮೇಲೆಬರದ್ದಂಥಾದ್ದಕ್ಕೆ ದೃಷ್ಟಾಂತವಾಗಿ ಕಾಣಿಸುವದುಯೇನೆಂದರೆ ಸೂಪಿಬಿಳಿಗಿ ತಾಲೂಕುಗಳಲ್ಲಿ ಕಳೆದ ಇಡಿವರ್ಷ ಮತ್ತು ಸ್ವಲ್ಪ ಹೆಚ್ಚುಕಾಲದವರೆಗೆ ಮೈಲಿಗೆರೋಗ ನಡಿಯುತ್ತಿತ್ತು ಯಿದು ಇಂನೂಯಿರುತ್ತದೆ ಯಿದಕ್ಕೆ ಜನರು ತಂಮಮಕ್ಕಳಂನು ಡಾಗ ಹಾಕಿಸುವದಕ್ಕೋಸ್ಕರ ತಂಮ ಅಪ್ರಬುದ್ಧಿಯಿಂದ ತೊರದರಿಂದಲೇ ಕಾರಣವಾಗಿರುತ್ತದೆ ಯೀ ಜಿಲ್ಲೆಯಲ್ಲಿ ಡಾಗಹಾಕುವ ಶಿಕ್ಲೆಯುಸ್ಥಿರವಾಗಿ ನಡಿಯಲಿಕ್ಕೆ ಬಹಾಳಪ್ರಯಾಸ ವುಂಟಾಗಿರುತ್ತದೆ ಮತ್ತು ಯೀಜಿಲ್ಲೆಯ ಅನೇಕಸ್ಥಳಗಳಲ್ಲಿ ಶಿಕ್ಲೆ ಡಾಕ್ತರರು ಮಾಡುವಪ್ರಯತ್ನಗಳು ಕೆಲವು ಸುಳ್ಳುವೈದ್ಯರಿಂದ ಕೆಟ್ಟುಹೋಗುತ್ತವೆ ಯೀವೈದ್ಯರು ಸರ್ಕಾರದವರು ಇಟ್ಟಿರುವಶಿಕ್ಲೆಡಾಕ್ತರರ ಹತ್ರಯಿರುವಶಿಕ್ಲೆಬೀಜಕ್ಕಿಂತಲು ಮೈಲಿಗೆಮೊದಲಾದ ರೋಗಗಳಂನು ಅಭ್ಯಂತರಿಸುವದಕ್ಕೆ ವಿಶೇಷ ಬಲವುಳ್ಳಬೀಜ ತಂಮ ಹತ್ರಯಿರುತ್ತದೆ ಯಂತಾ ಹೇಳಿ ಬಡಅಜ್ಞಾನಿಗಳಿಗೆ ಠಕ್ವಾಸುವದಕ್ಕೆ ವುಪಯೋಗಿಸುವಯೆಷ್ಟೋ ವಡಾಂಬಡಿಕೆಯ ಮಾತುಗಳಿಂದಲೂ ಸಾಧನೆಗಳಿಂದಲೂ ಸರ್ಕಾರದ ಶಿಕ್ಲೆಡಾಕ್ತರರ ಸಹಜವಾದಪ್ರಯತ್ನಗಳಂನು ಅನೇಕಾವರ್ತಿ ಕೆಡಿಸಿಯಿರುತ್ತಾರೆ ಯೀಸುಳ್ಳುವೈದ್ಯರು ಯೀಪ್ರಕಾರ ಜನರಿಗೆ ಮೋಸಮಾಡಿ ಅದರಿಂದ ದ್ರವ್ಯವಂನು ಸಂಪಾದಿಸದೆ ಬಿಡೋದಿಲ್ಲಾ ಯೀವೈದ್ಯರ ಮಾತು ಯಾಹೊತ್ತು ಸುಳ್ಳಾಗಿ ಅದರಿಂದ ಯಾವದೊಂದು ಗುಣವುಂಟಾಗದೆ ಯಿರುವದಲ್ಲದೆ ಆವೈದ್ಯರು ಸಂಪಾದಿಸಿದ ಕೆಟ್ಟಬೀಜದಿಂದ ಅಸಂಖ್ಯವಾದರೋಗಗಳು ಅನೇಕಾವರ್ತಿ ವುಂಟಾದ್ದು ನೋಡಿಯೀಜನರು ಬಹು ಪಶ್ಚಾತ್ತಾಪಬಡುವರೆ ಕಾರಣವ್ಯಾತು ಶಿಕ್ಕುವಷ್ಟು ನಿರ್ಮಲವಾದ ಶಿಕ್ಲೆಬೀಜಯಿಟ್ಟಿರುವ ಸರ್ಕಾರಶಿಕ್ಲೆಡಾಕ್ತರರಂನ ಅಲಕ್ಷಿಸಿ

ಯೀಸುಳ್ಳುವೈದ್ಯರ ದುರ್ಬೋಧನೆಗೆ ವಳಗಾಗಿ ಜನರು ತಂಮ ಮೇಲೆಯೂ ಕುಟುಂಬದವರ ಮೇಲೆಯೂ ತರುವ ಕಷ್ಟಗಳಲ್ಲಿ ಮೇಲೆ ಕಾಣಿಸಿದ್ದು ಕೆಲವು ಮಾತ್ರವಾಗಿರುತ್ತವೆ ಯೀ ವಿಷಯದಲ್ಲಿ ಜನರಿಗೆ ಜಾಗ್ರತೆ ಕೊಡುವರೆ ಅನಾವಶ್ಯ ವಾದ್ಯಂತ ನಾಂವು ತಿಳಕೊಳ್ಳುತ್ತಿದ್ದೆವು ಆದರೂ ಯೀ ಸುಳ್ಳುವೈದ್ಯರ ವುಪದ್ರಕರವಾದ ನಡ್ತೆಯ ವಿಷಯದಲ್ಲಿ ಮೊದಲಿನ ಪ್ರಿನಿಸ್ಪಾಲ್ ಕಲೆಕಟರ್ ಬ್ಲೈರಸಾಹೇಬರು ಮಾತಾಡಿದ್ದು ನಾಂವು ಬಹಳ ಸರ್ತೆ ಕೇಳಿದ್ದೇವೆ ಮತ್ತು ಯೀವೈದ್ಯರು ಮಾಡುವ ನಷ್ಟವು ಯಿವರಿಗೆ ನಿಶ್ಚಯವಾಗಿ ತಿಳಿದು ಅವರು ಯೀಬಗ್ಯೆ ಸ್ವಲ್ಪ ಕಾಲ ಮೊದಲು ಗವರ್ನಮೆಂಟಿನವರಿಗೆ ಪ್ರತ್ಯೇಕವಾಗಿ ಅರಿಕೆಮಾಡಿರುತ್ತಾರೆ ಆದರೆ ಯಿಂಥಾ ನಡತೆಯು ಯಿಂನೂ ಯಿರುತ್ತದೆ ಮತ್ತು ಮೇಲೆ ಕಾಣಿಸಿದ ಪ್ರಕಾರ ಶಿತ್ಳೆಡಾಗ ಹಾಕಿಸಿಕೊಳುವ ಜನರ ಸಂಖೆ ಕಡಿಮೆಯಾಗಿರುವ ಸಂಗತಿಯಿಂದ ಯೀನಡತೆ ಪ್ರಬಲವಾಗಿರುತ್ತದೆ ಯಂತ ನಾಂವು ತಿಳಕೊಳುತ್ತೇವೆ ಯಿದಲ್ಲದೆ ನಂಮ ಅಧಿಕಾರದ ವಳಗಾದ ಜಿಲ್ಲೆಯಲ್ಲಿರುವ ಜನರಲ್ಲಿ ಬುದ್ಧಿಯುಳ್ಳ ಶ್ರೇಷ್ಟರಾದವರಿಗೆ ನಾಂವು ವಿಶೇಷವಾಗಿ ಹೇಳುವದೇನೆಂದರೆ ಯಿವರು ತಂಮ ತಂಮ ವೂರಿನವರಿಗೆ ಶಿತ್ಳೆಡಾಗ ಹಾಕಿದರಿಂದ ವುಂಟಾದ ಪ್ರಯೋಜನಗಳಂನು ತಿಳಿದ ಪ್ರಕಾರ ಸಕಲದೇಶಗಳಲ್ಲಿ ಶಿತ್ಳೆಡಾಗ ಹಾಕಿಸಿಕೊಂಡವರು ಯೀ ವುಪಾಯದಿಂದ ಮೈಲಿಗೆ ರೋಗಕ್ಕೆ ಅಡ್ಡವಾಗುವದೆಂದು ತಿಳಿದಿದ್ದಾರೆ ಯಾಕಂದರೆ ಮನುಷ್ಯರ ಬುದ್ಧಿಗೆ ಯೀವರೆಗೆ ತಿಳಿದುಬಂದಿರುವ ಮಟ್ಟಿಗೆ ಮೈಲಿಗೆ ರೋಗವಂನು ನಾಶನಮಾಡಬೇಕಾದರೆ ಯೀವಿಧದಿಂಲ್ಲೆ ಆಗಿರುತ್ತದೆ ಆದದರಿಂದ ಬುದ್ಧಿವಂತರು ಬುದ್ಧಿಹೀನರಿಗೆ ಬುದ್ಧಿಯಂನು ಹೇಳುವದು ಯೋಗ್ಯವಾಗಿರುವದು ಯೀಸಂಗತಿಯಂನು ಜನರೆಲ್ಲರಿಗೆ ಪ್ರಸಿದ್ಧಿಮಾಡಿದ ತರುವಾಯ ಹೆಚ್ಚುಮಂದಿ ಶಿತ್ಳೆಡಾಕ್ತರರ ಹತ್ರ ಬಂದು ಡಾಗ ಹಾಕಿಸಿದರೆ ನಾಂವು ನಂಮ ಅಧಿಕಾರದೊಳಗಿರುವ ಶಿತ್ಳೆಡಾಕರ್ತರ ರಿಪೋರ್ಟುಗಳಂನು ನೋಡಿ ಡಾಗ ಹಾಕಿಸಿಕೊಳುವ ಜನರ ಸಂಖೆ ಹೆಚ್ಚಾಗುವದೆಂದು ತಿಳಿದರೆ ಬಹುಸಂತೋಷದಿಂದ ಮದ್ರಾಸಿನಲ್ಲಿರುವ ಮೆಡಿಕೆಲ್ ಬೋರ್ಡು ಮುಖಾಂತ್ರವಾಗಿ ಗವರ್ನಮೆಂಟಿಗೆ ಅರಿಕೆಮಾಡುವೆವು.

ಜಾನ್ ಲವೆಲ್ ಸಾಹೇಬರ ದಸ್ಕತುವುಂಟು

ಮಂಗಳೂರ ಸನ್ ೧೮೪೪ನೆ ಯಿಸವಿ ಮಾರ್ಚಿ ತಾರೀಖು ೯.

ಮೊದಲನೇ ಪುಸ್ತಕ ಆರನೆ ಪುಟದಲ್ಲಿ ತೀರದೆಯಿದ್ದ

ಭೂಗೋಳದ ಸಾರವು.

ಮೂರನೆ ಸಂಧಿ.

ಭೂಮಿಯಂಬ ಗೋಳವು ಸುತ್ತಲು ಸಮವಾದ ಮಾರ್ಗದಿಂದ ಅಲ್ಲ ಸ್ವಲ್ಪ ವೋರೆಯಾದ ಹಾದಿಯಿಂದ ಹೊರಳಾಡುತ್ತದೆ ಯೀರೀತಿಯಾಗಿ ವೊಂದುಸಾರಿ ವುತ್ತರದೇಶಗಳೂ ಮತ್ತೊಂದುಸಾರಿ ದಕ್ಷಿಣದೇಶಗಳೂ ಸೂರ್ಯನ ಕಿರಣಗಳಿಗೆ ಯೆದುರಾಗಿರುವದರಿಂದ ಅರ್ಧ ವರ್ಷದಲ್ಲಿ ಭೂಮಧ್ಯದಿಂದ ವುತ್ತರವಾದ ದೇಶಗಳಲ್ಲಿಯೂ ಅರ್ಧ ವರ್ಷದಲ್ಲಿ ಅದರಿಂದ ದಕ್ಷಿಣವಾದ ದೇಶಗಳಲ್ಲಿಯೂ ಕಿರಣಗಳು ನೆಟ್ಟಗೆ ಬೀಳುವದರಿಂದ ಬಿಸಲು ಹೆಚ್ಚಾಗುತ್ತದೆ ವುಳಿದ ಭಾಗಗಳಲ್ಲಿ ಕಿರಣಗಳು ವೋರೆಯಾಗಿ ಬೀಳುವದರಿಂದ ಶೆಖೆ ಕಡಿಮೆಯಾಗುತ್ತದೆ ಅದೇ ಪ್ರಕಾರ ಹಗಲು ಸೂರ್ಯನಿಗೆದುರಾಗಿರುವ ದೇಶಗಳಲ್ಲಿ ದೊಡ್ಡದಾಗಿಯೂ ವುಳಿದ ದೇಶಗಳಲ್ಲಿ ಸಣ್ಣದಾಗಿಯೂ ಯಿರುತ್ತದೆ ಯೀಸಂಗತಿಯಂನು ಹಿಂದುಜನರು ಪೂರ್ವದಾರಭ್ಯ ತಿಳಿದುಕೊಂಡು ಭೂಮಿಯ ವುತ್ತರಭಾಗವು ಸೂರ್ಯನಿಗೆದುರಾಗಿರುವ ಸಮಯದಲ್ಲಿ ಸೂರ್ಯನು ವುತ್ತರಾಯಣಕ್ಕೆ ಹೋಗಿದ್ದಾನೆಂದೂ ದಕ್ಷಿಣ ಭಾಗವು ಯೆದುರಾಗಿರುವ ಸಮಯದಲ್ಲಿ ಸೂರ್ಯನು ದಕ್ಷಿಣಾಯಣಕ್ಕೆ ಹೋಗಿದ್ದಾನೆಂದೂ ಹೇಳುತ್ತಾ ಬರುತ್ತಾರೆ ಆದರೆ ಯೀಹಿಂದುದೇಶದಲ್ಲಿ ಮತ್ತು ಭೂಮಧ್ಯಕ್ಕೆ ಸಮೀಪವಾದ ಬೇರೆ ದೇಶಗಳಲ್ಲಿ ಹಗಲು ರಾತ್ರಿಗಳಿಗೆ ಅಷ್ಟು ಹೆಚ್ಚುಕಡಿಮೆ ಯಿರುವದಿಲ್ಲ ಅತಿ ವುತ್ತರವೂ ಅತಿ ದಕ್ಷಿಣವೂ ಯಿರುವ ಸೀಮೆಗಳಲ್ಲಿ ಅದರದರ ಅಯನದಾರಂಭದಲ್ಲಿ ಹಗಲು ಬಹಳ ದೀರ್ಘವಾಗಿಯೂ ಅದರ ಪ್ರತ್ಯಾಯನದಲ್ಲಿ ರಾತ್ರಿ ಅಧಿಕ ದೀರ್ಘವಾಗಿಯೂ ಯಿರುತ್ತದೆ ಭೂಮಿಯ ವುತ್ತರದಕ್ಷಿಣತುದಿಗಳಲ್ಲಿ ಕೆಲವು ತಿಂಗಳು ಯಿಡೀ ಹಗಲಾಗಿಯೂ ಕೆಲವು ತಿಂಗಳು ಯಿಡೀ ರಾತ್ರಿಯಾಗಿಯೂ ಯಿರುತ್ತದೆ ಆದರೆ ಆ ದೀರ್ಘರಾತ್ರಿಗಳಲ್ಲಿ ಆಕಾಶದಲ್ಲಿ ಪ್ರತ್ಯೇಕವಾದ ವೊಂದು ಬೆಳಕು ಕಾಣುವದರಿಂದ ಆ ದೇಶ ನಿವಾಸಿಗಳಿಗೆ ತಂಮ ತಂಮ ಕೆಲಸಗಳಂನು ನಡಿಸಲಿಕ್ಕೆ ಅಡ್ಡವಾಗುವದಿಲ್ಲ.

ಮೂರನೇ ಸಂಧಿ ಸಮಾಪ್ತ.

ನಾಲ್ಕನೆಸಂಧಿ ಭೂಮಿಯ ಪ್ರದೇಶಗಳು.

ಭೂಗೋಳ ವಿದ್ಯೆಯಂನು ವಿಚಾರಿಸುವದರಲ್ಲಿ ಭೂಮಿಯಂನು ಅದರ ಶೀತೋಷ್ಣಗಳ ಹೆಚ್ಚುಕಡಿಮೆಯ ಪ್ರಕಾರ ಮೂರುಭಾಗಗಳಾಗಿ ವಿಭಾಗಿಸುವ ಮರ್‍ಯಾದೆಯುಂಟು ಯೀ ಭಾಗಗಳಿಗೆ ಪ್ರದೇಶಗಳು ಯೆಂದು ಹೆಸರು ಸೂರ್ಯನಿಗೆ ದೂರವಾಗಿದ್ದು ಅದರ ಕಿರಣಗಳ ಪೂರ್ಣ ವುಷ್ಣತ್ವವಂನು ಅನುಭವಿಸದೆ ಯಿರುವ ಸೀಮೆಗಳಿಗೆ ಶೀತಪ್ರದೇಶವೆಂದು ಹೆಸರು ಅಂಥಾ ಶೀತಪ್ರದೇಶವು ಅತಿ ವುತ್ತರದಲ್ಲಿಯೂ ಅತಿ ದಕ್ಷಿಣದಲ್ಲಿಯೂ ಯಿರುತ್ತವೆ.

೨ ಭೂಮಧ್ಯಕ್ಕೆ ಸಮೀಪವಾಗಿಯೂ ಸೂರ್ಯನ ಕಿರಣಗಳಿಗೆ ನೆಟ್ಟಗೆದುರಾಗಿಯೂ ಯಿರುವ ಸೀಮೆಗಳಿಗೆ ವುಷ್ಣಪ್ರದೇಶವೆಂದು ಹೆಸರು ಯೀ ಸೀಮೆಗಳು ಮಕರ ಕರ್ಕಾಟಕವೆಂಬ ಯೆರಡು ಅಯನಸ್ಥಳಗಳೊಳಗಿರುತ್ತವೆ.

೩ ವುಷ್ಣಪ್ರದೇಶವಾದ ಅಯನದೇಶಗಳ ವುಭಯಪಾರ್ಶ್ವದಲ್ಲಿಯೂ ವುತ್ತರದಕ್ಷಿಣಗಳಲ್ಲಿ ಯಿರುವ ಶೀತಪ್ರದೇಶಗಳ ಯೀಚೆಯಲ್ಲಿಯೂ ಯಿರುವ ಮಧ್ಯದೇಸೆಗೆ ಮಿತಶೀತೋಷ್ಣಪ್ರದೇಶವೆಂದು ಹೆಸರುಂಟು ಯೀಪ್ರಕಾರ ಮೂರುವಿಧವಾದ ಪ್ರದೇಶಗಳು ಯಿದ್ದಾಗ್ಯೂ ಶೀತಪ್ರದೇಶಗಳು ವುತ್ತರದಲ್ಲಿ ವೊಂದು ದಕ್ಷಿಣದಲ್ಲಿ ವೊಂದು ಮಿತಶೀತೋಷ್ಣದ ಪ್ರದೇಶಗಳು ವುತ್ತರದಲ್ಲಿ ವೊಂದು ದಕ್ಷಿಣದಲ್ಲಿ ವೊಂದು ವುಷ್ಣಪ್ರದೇಶವು ಭೂಮಧ್ಯದಲ್ಲಿ ವೊಂದೇಯಾಗಿ ಅಯಿದು ಪ್ರದೇಶಗಳೆಂದು ವಿಭಾಗಿಸಬಹುದು.

ಅಯಿದನೇಸಂಧಿ ದಿಕ್ಕುಗಳು.

ಮುಖ್ಯವಾದ ದಿಕ್ಕುಗಳು ನಾಲ್ಕು ಸೂರ್ಯನು ವುದಯವಾಗುವ ದಿಕ್ಕಿಗೆ ಪೂರ್ವವೂ ಮೂಡಣವೂ ಯೆಂಬ ಹೆಸರುಗಳೂ ಅಸ್ತಮಯವಾಗುವ ದಿಕ್ಕಿಗೆ ಪಶ್ಚಿಮವೂ ಪಡುವಲೂ ಯೆಂಬ ಹೆಸರುಗಳೂ ಪೂರ್ವಾಭಿಮುಖವಾಗಿರುವವರ ಬಲಕಡೆಯಲ್ಲಿರುವ ದಿಕ್ಕಿಗೆ ದಕ್ಷಿಣವೂ ತೆಂಕಲೂ ಯೆಂಬ ಹೆಸರುಗಳೂ ಯೆಡಕಡೆಯಲ್ಲಿರುವ ದಿಕ್ಕಿಗೆ ವುತ್ತರವೂ ಬಡಗಲೂ ಯೆಂಬ ಹೆಸರುಗಳೂ ವುಂಟು ಆದರೆ ಹಿಂದುಜನರ ವಿದ್ವಾಂಸರು ಯಿವುಗಳ ಹೊರ್ತಾಗಿ ನಾಲ್ಕು ಅಂತರ್ದಿಕ್ಕುಗಳಂನು ಸ್ಥಾಪಿಸಿದ್ದಾರೆ ಅವು ಯಾವವೆಂದರೆ ಪೂರ್ವಕ್ಕೂ ದಕ್ಷಿಣಕ್ಕೂ ಮಧ್ಯವಾದದ್ದು ಆಗ್ನೇಯದಿಕ್ಕು ದಕ್ಷಿಣಕ್ಕೂ ಪಶ್ಚಿಮಕ್ಕೂ ಮಧ್ಯವಾದದ್ದು ನೈರುತ್ಯದಿಕ್ಕು ಪಶ್ಚಿಮಕ್ಕೂ ವುತ್ತರಕ್ಕೂ ಮಧ್ಯವಾದದ್ದು ವಾಯುವ್ಯ

ದಿಕ್ಕು ಉತ್ತರಕ್ಕೂ ಪೂರ್ವಕ್ಕೂ ಮಧ್ಯವಾದದ್ದು ಯೀಶಾನ್ಯ ದಿಕ್ಕು ನಾವಿಕರು ಸಮುದ್ರದಲ್ಲಿ ಸಂಚರಿಸುವಾಗ್ಯೆ ದಿಕ್ಕುಗಳಂನೇ ಹಿಡಿದು ತಂಮ ಮಾರ್ಗಗಳಂನು ಹುಡುಕ ಬೇಕಾಗಿರುವದರಿಂದ ದಿಗಚಕ್ರವಂನು ಬಹುಸೂಕ್ಷ್ಮವಾಗಿ ೩೨ ಯಿಲ್ಲವೆ ೬೪ ಅಂಶ ದಿಕ್ಕುಗಳಾಗಿವಿಭಾಗಿಸಿದ್ದಾರೆ ಅವುಗಳೆಲ್ಲದಕ್ಕೂ ಪ್ರತ್ಯೇಕವಾದ ಹೆಸರುಗಳಿರುತ್ತವೆ ಹಾಗೆಯೇ ಯೆಂದಿಗೂ ಉತ್ತರವಂನೇ ತೋರಿಸುವಂಥಾ ಸೂಜಿಕಲ್ಲಂನು ತಂಮದಿಗಚಕ್ರದಮೇಲೆ ಅಲ್ಲಾಡುವಹಾಗಿಟ್ಟು ಗುರ್ತಿಲ್ಲದ ಸಾಗರದಲ್ಲಿ ಹಗಲಿನಲ್ಲಿಯೂ ರಾತ್ರಿಯಲ್ಲಿಯೂ ವೊಂದು ನಕ್ಷತ್ರವಾದರು ಕಾಣದಿದ್ದರೂ ಬೇಕಾದ ಮಾರ್ಗಗಳಂನು ಕಂಡುಕೊಳ್ಳುತ್ತಾರೆ.

ಆರನೇಸಂಧಿ ಭೂಮಿಯಭಾವವು.

ಭೂಗೋಳವಿದ್ಯೆಯಲ್ಲಿ ಭೂಮಿಯಮೇಲ್ಭಾಗದಲ್ಲಿರುವ ಸಮುದ್ರ ಪರ್ವತ ನದಿ ಮೊದಲಾದವುಗಳ ವಿವರಮಾತ್ರಬರುತ್ತದೆ ಯೇನಂದರೆ ಮೇಲ್ಭಾಗದಲ್ಲಿ ಯಿದ್ದದ್ದಂನು ಪ್ರಯಾಣಸ್ಥರು ನೋಡಿ ಪ್ರಯಾಣತಂಮಚರಿತ್ರೆಗಳಲ್ಲಿಬರೆದು ಯಿರುವದರಿಂದ ಯಿದರವಿಷಯದಲ್ಲಿ ನಿಶ್ಚಯವಾದ ವರ್ತಮಾನವು ಬಂದದೆ ಆದರೆ ಭೂಮಿಯವೊಳಗೆ ಯೇನಿದ್ದೀತೋ ಅದರ ಗರ್ಭದಲ್ಲಿ ಯಾವದ್ರವ್ಯಗಳಾದರೂ ಅಗಾಧಗಳಾದರೂ ಸಮುದ್ರಗಳಾದರೂ ಯಿದ್ದಾವೋ ಅದಂನ ಯೀವರೆಗೂ ಯಾರೂ ನೋಡದೆ ಯಿರುವದರಿಂದ ಅದರ ನಿಶ್ಚಯವಾದ ತಿಳುವಿಕೆ ಯಿರುವದಿಲ್ಲ ಹ್ಯಾಗಾದರು ಕೆಲವು ಸ್ಥಳಗಳಲ್ಲಿ ಅಗಾಧವಾದ ಗುಹೆಗಳು ಯಿರುತ್ತವೆ ಅಂಥವುಗಳಲ್ಲಿಸೇರಿ ವಿದ್ವಾಂಸರು ಭೂಮಿಯ ವೊಳಗಿನ ಸ್ವರೂಪವಂನು ಸ್ವಲ್ಪಸ್ವಲ್ಪ ತಿಳುಕೊಂಡಿದ್ದಾರೆ ಬೇರೆ ಸ್ಥಳಗಳಲ್ಲಿ ಮನುಷ್ಯರು ಗುಂಡಿಯಾದ ಭಾವಿಗಳಂನೂ ಪಂಚಲೋಹಗಳಂನು ಹೊಂದುವಬಗ್ಯೆ ಗಣಿಗಳಂನೂ ಅಗಿದದರಿಂದ ಭೂಮಿಯವೊಳಗಿನಆಕಾರವು ಸ್ವಲ್ಪತಿಳಿಯಬಂತು ಆದರೆ ಆಳವಾಗಿ ಅಗಿದವರು ೨ ಸಾವಿರ ಮೊಳಪರಿಯಂತರ ಮಾತ್ರಅಗಿದದರಿಂದ ಭೂಮಿಯ ವೊಳಗಿನ ಆಕಾರವು ಸ್ವಲ್ಪಮಾತ್ರತಿಳಿದದೆ.

ಮೊದಲನೆ ಪುಸ್ತಕ ಯೇಳನೆ ಪುಟದಲ್ಲಿ ತೀರದೆಯಿದ್ದ

ಯಿಂಗ್ಲಂದರಾಜ್ಯದ ಪೂರ್ವಚರಿತ್ರೆ.

೩ ನೆ ಸಂಧಿ.

ಜಯಪ್ರದನಾದ ವಿಲ್ಲಿಯಮನು ೧೦೬೬ನೆ ವರ್ಷದಲ್ಲಿ ವೊಂದು ಸ್ಯೆನ್ಯದ ಸಂಗಡಯಿಂಗ್ಲಂದದೇಶದಲ್ಲಿ ಪ್ರವೇಶಿಸಿ ಹೇಸ್ಟಿಂಗ್ಸ ಯಂಬ ಊರಿನಸಮೀಪದಲ್ಲಿ ವೊಂದುದಂಡುಕಟ್ಟಿ ಅದಕ್ಕೆ ಯೆದುರಾದ ಗುಡ್ಡದಮೇಲೆ ಯಿಂಗ್ಲಿಷ್ ಸ್ಯೆನ್ಯವಂನು ನೋಡಿದನು ಹೀಗೆ ಆ ಯೆರಡುಸ್ಯೆನ್ಯದವರು ವೊಂದು ರಾತ್ರಿಪರಿಯಂತರ ಸುಂಮನಿದ್ದು ಯಿಂಗ್ಲಿಷ್ಜನರು ಗವಜಿಯೂಆಟವೂ ನೋರ್ಮನ್ ಜನರು ಜಪತಪಗಳಂನು ಮಾಡುತ್ತಿದ್ದರು ಬೆಳಿಗ್ಗೆ ಯುದ್ಧವುಂಟಾದಾಗ ಯಿಂಗ್ಲಿಷ್ ಜನರಿಗೆ ಸ್ವಲ್ಪ ಅನುಕೂಲವಾಯಿತು ಮತ್ತು ಜಯಪ್ರದನಾದ ವಿಲ್ಲಿಯಮನು ಸತ್ತುಹೋಗಿದ್ದಾನೆಂದುಸುದ್ದಿಬಂತು ಆದರೆ ಆ ವರ್ತಮಾನ ಸುಳ್ಳೆಂದು ತೋರಿಸಲಿಕ್ಕೆ ತಂನಶಿಪಾಯರ ಸಾಲಿನಮುಂದೆ ಯಡಬಲವಾಗಿ ಸವಾರಿಮಾಡಿ ನಾನು ಯಿಂನು ಯಿದ್ದೇನೆ ಯಿಂನು ಜಯವು ನಂನದಾಗಬೇಕು ಯೆಂದು ಅವರಿಗೆ ಧೈರ್ಯಪಡಿಸಿದನು ಹೀಗೆಯೇಅವರು ಅದೇ ದಿವಸಯುದ್ಧಮಾಡಿದದರಿಂದ ಕೆಲವುಳವಗಳಿಂದ ತುಂಬಿತು ಯಿಂನು ಉಭಯಪಾರ್ಶ್ವಗಳಲ್ಲಿ ಯುದ್ಧಸ್ಥರ ಧೈರ್ಯವು ಕುಂದಲಿಲ್ಲ ಆದರೆ ಸಾಯಂಕಾಲದಲ್ಲಿ ಯಿಂಗ್ಲಂದ ಅರಸನ ಕಂಣಿಗೆ ವೊಂದುಬಾಣತಾಗಿ ಅವನುಬಿದ್ದನು ಹೀಗೆ ಯಿಂಗ್ಲಿಷ್ಜನರು ತಂಮಅರಸನು ಸತ್ತನೆಂದು ತಿಳಕೊಂಡು ಭಯಸ್ಥರಾಗಿ ವೋಡಿಹೋದರು ನೋರ್ಮನವರು ಅವರಂನು ವೋಡಿಸಿ ಸಿಕ್ಕಿದವರಂನು ಕೊಂದುಹಾಕಿದರು ಯೀಪ್ರಕಾರ ನೋರ್ಮನ್ಅರಸನಾದ ವಿಲ್ಲಿಯಮನು ರಾಜ್ಯವಂನು ಸಂಪಾದಿಸಿ ಬಹಳಬುದ್ಧಿಯಿಂದ ನಡಿಸಿದನು ಆದರೆ ಯಿಂಗ್ಲಿಷ್ಜನರಮುಖ್ಯಸ್ಥರು ತನಗೆವಿರೋಧವಾಗಿ ಮತ್ತೊಬ್ಬನಂನು ಸ್ಥಾಪಿಸಬೇಕೆಂಬ ಪ್ರಯತ್ನವಂನು ಮಾಡಿದದರಿಂದ ವಿಲ್ಲಿಯಮನು ಕಠಿಣವಾದ ನೇಮಗಳಂನುಮಾಡಿ ಪೂರ್ವ ಅರಸರಗಳ ಸಮಯದಲ್ಲಿ ದೊಡ್ಡದೊಡ್ಡವರಾಗಿದ್ದವರಂನ ತಗ್ಗಿಸಿ ಹೆಚ್ಚಾದ ಉದ್ಯೋಗಗಳಲ್ಲಿ ತಂನಸ್ವದೇಶಸ್ಥರಂನು ಯಿಟ್ಟನು ಮತ್ತು ನ್ಯಾಯಸ್ಥಾನಗಳಲ್ಲಿ ನೋರ್ಮನ್ ಭಾಷೆಯೇ ನಡಿಯಬೇಕೆಂಬ ಆಜ್ಞೆಯಂನುಮಾಡಿ ಅರ್ಜಿ ಮೊದಲಾದ ಯಲ್ಲಾಕಾಗದಗಳೂ ಕಾನೂನಗಳೂ ಹೆಚ್ಚಾದನಿವಾಸಿಗಳಿಗೆ ತಿಳಿಯದಂಥಾ ಯಿದೇಭಾಷೆಯಲ್ಲಿ ಬರೆಸಿದನು ಆದರೆ ಯಿಂಗ್ಲಿಷ್ಜನರು ತನಗೆಬಹಳಪ್ರೀತಿ ಮಾಡುವದಿಲ್ಲವೆಂಬದು ತಿಳಿದು ರಾತ್ರಿರಾತ್ರಿಗೆ ತಾನುನೇಮಿಸಿದ ಸಮಯದಲ್ಲಿ ಘಂಟೆಹೊಡಿಸಿ ಅದರ ಶಬ್ದವಂನು ಕೇಳಿದಾಗಲೆಪ್ರಜೆಗಳೆಲ್ಲಾದೀಪಗಳಂನೂ ಮನೆಯಬೆಂಕಿಗಳಂನೂ ನೊಂದಿಸಬೇಕೆಂದು ಆಜ್ಞಾಪಿಸಿ ಅದಕ್ಕೆ ವಿರೋಧವಾಗಿ ನಡಿಯುವವರಿಗೆ ಪ್ರಾಣಾಂತ್ಯದ ಶೀಕ್ಷೆಕೊಟ್ಟನು ಪ್ರಜೆಗಳುವಿಧೇಯವಾಗುವಹಾಗೆ ಅವನು ಲೊಂದನ್ ಕೋಟೆ ಮೊದಲಾದ ಅನೇಕ ಕೋಟೆಗಳಂನು ಕಟ್ಟಿಸಿದನು ಮತ್ತುಸಿಸ್ತಿನ ಹಣಗಳಂನು ಯಥಾರ್ಥವಾಗಿ ಸ್ಥಾಪಿಸುವ ಅಪೇಕ್ಷೆಯಲ್ಲಿ ಯೀಗಿನಪರಿಯಂತರಕ್ಕೂ ನಡವಡಿಕೆಯಾದ ವೊಂದು ಪುಸ್ತಕವಂನು ತಂನ ವಿದ್ವಾಂಸರಿಂದ ಬರೆಸಿದನು ಯೀಪ್ರಕಾರ ಅವನುಯಿಂಗ್ಲಂದರಾಜ್ಯವಂನು ೨೧ ವರ್ಷದ ಪರಿಯಂತರ ಆಳಿ ಸತ್ತುಹೋದನು.

ಅವನು ಸತ್ತುಹೋದಮೇಲೆ ಯರಡನೆ ವಿಲ್ಲಿಯಮೆಂಬ ಅವನ ಮಗನು ರಾಜ್ಯವಂನುಹೊಂದಿ ೧೨ ವರ್ಷದಪರಿಯಂತರ ಆಳಿದನು ಯಿವನುಕ್ರೂರ ಮನುಷ್ಯನಾಗಿದ್ದದರಿಂದ ಮುಖ್ಯವಾಗಿ ಬೋಧಕರಿಗೂ ಆಚಾರ್ಯರಿಗೂ ಹಗೆ ಮಾಡುತ್ತಿದ್ದ ಯೀಪ್ರಕಾರ ಅವನುಕ್ರೂರಕೃತ್ಯಗಳಂನುನಡಿಸುವಸಮಯದಲ್ಲಿ ದೊಡ್ಡ ರೋಗದಲ್ಲಿಬಿದ್ದು ತಾನುಸಾಯುತ್ತೇನೆಂಬ ಭಯದಿಂದ ಪಶ್ಚಾತ್ತಾಪಪಟ್ಟು ತಾನು ಮುಂಚೆನಡಿಸಿದ ಅಕ್ರಮಗಳಲ್ಲಿ ಕೆಲವುತಿದ್ದಪಡಿಮಾಡಿ ಯಿಂನು ಮುಂದೆ ತಾನುಚಂನಾಗಿ ರಾಜ್ಯವಂನಾಳುತ್ತೇನೆಂದು ವಚನಕೊಟ್ಟನು ಆದರೆ ಅವನುಸ್ವಸ್ಥವಾದಮೇಲೆಮುಂಚಿನ ಪ್ರಕಾರಕ್ರೂರತ್ವವಂನೂ ನಾನಾವಿಧವಾದ ಪಾಪಗಳಂನೂಮಾಡಿದನು ಹೀಗೆಯೇ ಅವನುವೊಂದುದಿವಸ ಬೇಟೆಗೆಹೋದಾಗ ಅವನಸಂನಿಧಿಯಲ್ಲಿರುವ ಸರದಾರರಲ್ಲಿ ವೊಬ್ಬನು ಮೃಗವಂನು ಹೊಡಿಯುವಅಪೇಕ್ಷೆಯಲ್ಲಿಬಿಟ್ಟ ಬಾಣವುಬಂದು ಅರಸನಯೆದೆಗೆತಾಗಿ ಸತ್ತುಹೋದನು ಯಿವನ ಮೇಲೆ ಮೊದಲನೆ ಹೆನ್ರಿಯೆಂಬ ಅವನತಂಮನುಅರಸನಾಗಿ ಜನರ ಪ್ರೀತಿಯಂನು ಹೊಂದುವಅಪೇಕ್ಷೆಯಲ್ಲಿಮುಂಚಿನಅರಸುಗಳಕಾಲದಲ್ಲಿಭಂಡಾರಕ್ಕೆಸಲ್ಲಿಸಬೇಕಾದಕಂದಾಯದಹಣವಂನುಮಂನಿಸಿಬಿಟ್ಟುಬೇಕಾದವರೆಲ್ಲರುರಾತ್ರಿಯಲ್ಲಿಬೆಂಕಿಮಾಡಿದೀಪಹಚ್ಚಬಹುದೆಂದುಆಜ್ಞೆಮಾಡಿಅಳತೆತೂಕಮುಂತಾದದರಲ್ಲಿ ಮಿತಿಯಂನುನೇಮಿಸಿ ಪ್ರಜೆಗಳಿಗೆ ನಾನಾವಿಧವಾದ ಅಧಿಕಾರಗಳಂನು ಕೊಟ್ಟು ತಂನಅಂಣನುಗಡಿದಾಟಿಸಿದ ವೊಬ್ಬವೊಳ್ಳೆ ಅಚಿದರ್ಶಿಯಂನು ತಿರಿಗಿ ಕರಿಸಿ ಅವನಂನುಮುಖ್ಯವಾದಮಂತ್ರಿಯಾಗಿಟ್ಟನು ಹೀಗೆಯೆಜನರು ಅವನಿಗೆ

ಪ್ರೀತಿ ಮಾಡಲಾರಂಭಿಸಿದರು ತರುವಾಯ ನೊರ್ಮನ್ ದೇಶದ ಅರಸನಾದ ತಂನ ಅಂಣನ ಸಂಗಡ ಝಗಳಾಡಿ ಯುದ್ಧದಲ್ಲಿ ಜೈಯಿಸಿ ಅವನಂನು ಯಿಂಗ್ಲಂದ ದೇಶದ ವೊಂದು ಸೆರೆಯಲ್ಲಿ ಹಾಕಿ ೨೮ ವರ್ಷದ ಪರಿಯಂತರ ಭದ್ರವಾಗಿರಿಸಿದನು ಯೀ ಅರಸನು ತಂನ ಅಂಣನ ಸಂಗಡ ಮಾಡಿದ ಯುದ್ಧವು ತೀರಿ ಯಿಂಗ್ಲಂದ ದೇಶಕ್ಕೆ ತಿರಿಗಿ ಬರುವಾಗ್ಯೆ ವೊಬ್ಬ ನೊರ್ಮನ್ ನಾವಿಕನು ಅವನ ದರ್ಶನ ಮಾಡಿ ತಾನು ಜಯಪ್ರದನಾದ ವಿಲ್ಲಿಯಮನಂನು ಮುಂಚೆ ಯಿಂಗ್ಲಂದ ದೇಶಕ್ಕೆ ದಾಟಿಸಿ ಯಿರುವದರಿಂದ ಆತನ ಮಗನಾದ ಯೀ ಹೆಂನ್ರಿ ಅರಸನು ಸಹಾ ದಯಮಾಡಿ ತಂನ ಹಡಗವಂನೇರಿ ದಾಟ ಬೇಕೆಂದು ಅರಿಕೆ ಮಾಡಿದನು ಅರಸನು ನನಗೆ ಪ್ರತ್ಯೇಕ ವೊಂದು ಹಡಗ ಗೊತ್ತು ಮಾಡಿದ್ಧೇನೆ ಆದರೆ ನಂನ ಮಕ್ಕಳಂನೂ ದ್ರವ್ಯಗಳಂನೂ ನಿಂನ ಹಡಗದಲ್ಲಿ ದಾಟಿಸುತ್ತೇನೆಂದು ಹೇಳಿದನು ಯೀ ಪ್ರಕಾರ ಅರಸನ ಮಕ್ಕಳೂ ಅನೇಕ ದೊಡ್ಡದೊಡ್ಡ ಸರದಾರರೂ ಹಡಗವಂನೇರಿದರು ಅಲ್ಲಿಂದ ಹೊರಡುವದಕ್ಕಿಂತ ಮುಂಚೆ ಸಾಯಂಕಾಲದಲ್ಲಿ ಹಡಗದಲ್ಲೆ ವೊಂದು ಹಬ್ಬ ಮಾಡುವಾಗ್ಯೆ ನಾವಿಕರು ಹಡಗದ ಕೆಲಸವಂನು ಜಾಗ್ರತೆಯಾಗಿ ನೋಡದೆ ಯಿರುವದರಿಂದ ಅದು ಕಲ್ಲಿಗೆ ತಾಗಿ ಮುಣಿಗಿ ಹೋಯಿತು ಹೀಗೆ ಮುಂನೂರು ಮಂದಿ ದೊಡ್ಡದೊಡ್ಡವರೂ ಮುವ್ವರು ರಾಜಪುತ್ರರೂ ಸತ್ತು ದ್ರವ್ಯವೆಲಾ ಮುಣಿಗಿ ಹೋಗಿ ಯೀ ವರ್ತಮಾನ ತಿಳಿಸುವ ನಾವಿಕನೊಬ್ಬನೆ ಮಾತ್ರ ತಪ್ಪಿವುಳಿದನು ಯೀ ಸುದ್ದಿ ಕೇಳಿ ಅರಸನು ಬಹು ವ್ಯಥೆಪಟ್ಟು ಅಂದಿನಿಂದ ಆ ಶಾಂತದಲ್ಲೆ ಯಿರುತ್ತಿದ್ದನು ಮತ್ತು ಅರಸನು ಪ್ರಯಾಣ ಮಾಡುವಾಗ್ಯೆ ಅವನ ಸಂಗಡ ಯಿರುವ ಸರದಾರರೂ ಚಾಕ್ರಿಯವರೂ ಪೂರ್ವನೇಮಕದ ಪ್ರಕಾರ ಅರಸನ ಹೆಸರು ಹೇಳಿ ತಮಗೆ ಬೇಕಾದ ಸಾಮಾನುಗಳಂನು ಕ್ರಯ ವಿನಹಾ ಜನರಿಂದ ತೆಗದುಕೊಂಡರು ಆ ವರ್ತಮಾನ ಅರಸನು ತಿಳಿದು ತೆಗದುಕೊಂಡವರಲ್ಲಿ ಕೆಲವರಿಗೆ ಕೈಗಳಂನೂ ಕೆಲವರಿಗೆ ಕಾಲುಗಳಂನೂ ತುಟಿಗಳಂನೂ ಕೊಯ್ಸಿದನು ಯೀ ಪ್ರಕಾರ ಜನರಿಗೆ ಹೆದರಿಕೆಯಾಗಿ ಅಂದಿನಿಂದ ಆ ಮರ್ಯಾದಿ ನಿಂತು ಹೋಯಿತು ಹೀಗೆಯೆ ಯೀ ಅರಸನು ೩೮ ವರ್ಷದ ಪರಿಯಂತರ ಆಳಿ ಸತ್ತು ಹೋದನು ಅವನು ಸತ್ತ ಮೇಲೆ ಅವನ ಚೊಚ್ಚಲ ಮಗಳಿಗೆ ಪಟ್ಟವು ಸಿಕ್ಕಬೇಕಾಗಿತ್ತು ಆದರೆ ಸ್ತಿಫಾನೆಂಬ ಅವಳ ನೆಂಟರಲ್ಲಿ ವೊಬ್ಬನು ರಾಜ್ಯದಲ್ಲಿ ಪ್ರವೇಶಿಸಿ ಅವಳ ಸಂಗಡ ಝಗಳಾಡುವಾಗ ವೊಂದುಸಾರಿ ಅವನೂ ವೊಂದುಸಾರಿ ಯಿವಳೂ ಗೆಲ್ಲುತ್ತಿರುವದರಿಂದ ಪ್ರಜೆಗಳಿಗೆ ಬಹಳ ವುಪದ್ರವಾಯಿತು ಕಡೆಗೆ ಹೆಂನ್ರಿಯರಸನ ಮಗಳು ಅವನ ಸಂಗಡ ವೊಡಂಬಡಿಕೆ ಮಾಡಿ ಅವನ ತರುವಾಯ ತಂನ ಮಗನು ರಾಜ್ಯವಂನಾಳಬೇಕೆಂಬ ಶಪಥ ಮಾಡಿ ಕೊಂಡಳು ಹೀಗೆಯೆ ಸ್ತಿಫಾನೆಂಬ ಅರಸನು ಆ ವೊಡಂಬಡಿಕೆ ತೀರಿದ ವೊಂದು ವರ್ಷದ ಪರಿಯಂತರ ರಾಜ್ಯವಂನಾಳಿ ಸತ್ತು ಹೋದನು.

ರಾಜ್ಯ ವರ್ತಮಾನಗಳು.

ಲೊರ್ಡ್ ಬಹದೂರವರು ೩ ತಿಂಗಳು ವುತ್ತರಪಶ್ಚಿಮ ಸೀಮೆಗಳಲ್ಲಿದ್ದು ಗ್ವಾಲಿಯರ ಸಂಸ್ಥಾನದ ಸೈನ್ಯವಂನು ಯುದ್ಧದಲ್ಲಿ ಜೈಸಿ ಇಂಗ್ಲಿಷ್ ಸರ್ಕಾರದವರ ವಿರೋಧಿಯರಂನು ದಂಡಿಸಿ ತಮಗೆದುರಾಗಿ ಯುದ್ಧ ಮಾಡಿದ ದಂಡಂನು ಬಿಚ್ಚಿ ಕಳುಹಿಸಿ ಆ ಮೇಲೆ ಹುಡುಗನಾದ ರಾಜನಂನು ಕ್ಷಮಿಸಿ ಸಿಂಹಾಸನದಲ್ಲಿ ಕೂಡ್ರಿಸಿ ಇಂಗ್ಲಿಷ ಸರ್ದಾರರಿಗೆ ವಶವಾಗಿರುವ ಹತ್ತು ಸಾವಿರ ಮಂದಿಯ ಹೊಸ ಸೈನ್ಯವಂನು ಯಿಟ್ಟು ಕಲ್ಕತ್ತಾ ಪಟ್ಟಣಕ್ಕೆ ಸಮೀಪವಾಗಿರುವ ಬರಕಪೂರಕ್ಕೆ ತಿರಿಗಿ ಬಂದಿದ್ಧಾರೆ.

ಮಹಾರಾಜನಾದ ಜಿಯಜೀಸಿಂಧ್ಯ ಗ್ವಾಲಿಯಾರದಲಿ ಮದಿವೆ ಮಾಡಿಕೊಂಡು ಮಹೋತ್ಸಹವಂನು ಮಾಡಿ ಬ್ರಾಹ್ಮರಿಗೆ ಒಂದು ಲಕ್ಷ ರೂಪಾಯಿ ಧರ್ಮ ಕೊಟ್ಟರು ಆದರೆ ಮುಖ್ಯ ಪ್ರಧಾನಿಯಾದ ರಾವು ಫಲ್ಕೆಯು ಯೀ ಹಣದ ಒಂದು ಭಾಗವಂನು ಬ್ರಾಹ್ಮರಿಗೆ ಕೊಟ್ಟು ಮಿಕ್ಕಾದದ್ದಂನು ವಂಚಿಸಿ ಯಿಟ್ಟುಕೊಂಡನೆಂದು ಹೇಳುತ್ತಾರೆ.

ಲೋರ್ಡ್ ಬಹದೂರವರು ಬಂಗಾಳದ ಯೆಪ್ಪತ್ತುನಾಲ್ಕು ಪಟಾಲಾಮುಗಳಿಗೂ ಮುಂಚೆ ಕೊಸ್ತಿನಲ್ಲಿರುವ ಇಪ್ಪತ್ತೆಂಟು ಪಟಾಲಾಮುಗಳಿಗೂ ಒಂದೊಂದಕ್ಕೆ ನೂರು ನೂರು ಮಂದಿ ಸಿಫಾಯಿ ಜನರಂನು ಕೂಡಿಸಬೇಕೆಂದು ಅಪ್ಪಣೆ ಕೊಟ್ಟರು.

ಗ್ವಾಲಿಯಾರದಲ್ಲಿ ಇಂಗ್ಲಿಷ ಸರ್ಕಾರದವರಿಗೆ ವಿರೋಧವಾಗಿ ಮೋಸಮಾಡಿದ ಖಾಸ್ಸಿವಾಲಾಯೆಂಬ ಪ್ರಧಾನಿಯು ಗಡಿಪಾರಾಗಿ ಬಂಗಾಳಕ್ಕೆ ಕಳುಹಿಸಲ್ಪಟ್ಟನು ಇವರಿಗೆ ಮುಂಚೆಯಲ್ಲಿ ಸೆರೆಯವರಾಗಿದ್ದ ಸಿಂಧುದೇಶದ ಅಮೀರರು ಸಹಾ ಬಂಗಾಳಕ್ಕೆ ಹೋಗಿ ಅಲ್ಲಿ ವಸ್ತಿಯಾಗಿರಬೇಕೆಂದು ಅಪ್ಪಣೆ ಹೊಂದಿದರು.

ಫೆಬ್ರುಅರಿ ತಿಂಗಳಲ್ಲಿ ಮುಂಬೈಗೆ ಬಂದ ವಿಕ್ತೋರಿಯಾ ಯೆಂಬ ಸೆಖೆ ಹಡಗದಿಂದ ಯೆಂಬತ್ತೆರಡುಸಾವಿರ ಅರ್ವತ್ತುಮೂರು ಕಾಗದಗಳು ವಿಲೈತಿಯಿಂದ ಬಂದವು.

ಅಫ್ಗಾನ್ ದೇಶವಂನಾಳುವ ದೋಸ್ತಮೊಹಮದನು ತಂನ ಅಧಿಕಾರವಂನು ಸ್ಥಿರವಾಗಿ ಸ್ಥಾಪಿಸಿ ತಂನ ಮಗನಾದ ಅಕ್ಬಾರ್ ಖಾನನಂನು ಐದುಸಾವಿರ ಜನರ ಸೈನ್ಯದ ಸಂಗಡ ಜಲಲಾಬಾದಿಗೆ ಕಳುಹಿಸಿದನೆಂದು ಸುದ್ದಿಯುಂಟು ಅವನು ಪೆಶಾವರ ಸೀಮೆಯಂನು ಸಿಕ್ಖರ ಕೈಯಿಂದ ತೆಗದುಕೊಳ್ಳುವ ಪ್ರಯತ್ನ ಮಾಡಲಿಕ್ಕೆ ಮನಸ್ಸಾಗಿದ್ಧಾನೆಂದು ಕಾಣುವದು.

ಕಳೆದ ವರ್ಷದಲ್ಲಿ ಇಂಗ್ಲಿಷ್ ಸಂಸ್ಥಾನದವರಿಗೆ ತಂಮ ದೇಶದಿಂದ ಐವತ್ತು ಕೋಟಿ ಯೇಳು ಲಕ್ಷ ರುಪಾಯಿ ಆದಾಯವಾಯಿತು ಇದರ ಮೊದಲಿನ ವರ್ಷದಲ್ಲಿ ಬಂದ ಆದಾಯ ನಾಲ್ವತ್ತುನಾಲ್ಕು ಕೋಟಿ ಮುವ್ವತ್ತೆರಡು ಲಕ್ಷ ರುಪಾಯಿ ಆಗಿತ್ತು.

Printed at the Bellary Mission Press.
R. Sampson, Printer,—H. Moegling, Editor.

CANARESE NEWSPAPER.

ಕಂನಡ ಸಮಾಚಾರವು.

೧೮೪೪.

೧ನೆ ಪುಸ್ತಕ. ೪ನೆ ಅಂಕೆ.] ಬಳ್ಳಾರಿ ೧೫ನೆ ಏಪ್ರಿಲ್ [ಟಪಾಲ ದಸ್ತೂರಿಕೂಡಿ. ಕ್ರಯ ೨ದುಡ್ಡು.

General News.

ನಡಿಯುವ ವರ್ತಮಾನ.

ಗವರ್ನರ್ ಜನರಲ್ ಬಹದೂರ್ ಸಿಂಧು ದೇಶದಲ್ಲಿ ಹೋದ ವರ್ಷದ ಫೆಬ್ರುಅರಿ ತಿಂಗಳಾರಭ್ಯ ಯೀ ವರ್ಷದ ಫೆಬ್ರುಅರಿ ತಿಂಗಳ ಪರಿಯಂತರ ಸಿಂಧು ದೇಶದಲ್ಲಿದ್ದ ಹಿಂದುಸ್ತಾಯಿರಾದ ದಂಡಿನವರೆಲ್ಲರಿಗೆ ಭಕ್ತಿಗಾಗಿ ಮೂವತ್ತು ಲಕ್ಷ ರುಪಾಯಿ ಯಿನಾಮು ಕೊಟ್ಟುಬಿಟ್ಟರು.

ಮಾರ್ಚ ತಾರೀಕು ೨ರಲ್ಲಿ ಹೊಂದು ಉತ್ತಮ ಆಕ್ಟ್ ಹುಟ್ಟಾಯಿತು ಅದೇನಂದರೆ ಯಿನ್ನು ಮುಂದೆ ಗವರ್ನಮೆಂಟಿನವರ ಹುಕುಂ ಯಾರಾದರು ಲೋಟ್ತಿ ಮಾಡಕೂಡದು ಮಾಡಿದರೆ ತಕ್ಕ ಶಿಕ್ಷೆ ಕೊಡಲಾದೀತು ಮುಂಬೈ ಮತ್ತು ಕಲ್ಕತ್ತಾ ಕೋಸ್ತುಗಳಲ್ಲಿ ಲೋಟ್ತಿ ಮಾಡುವದಿಲ್ಲ ಅದೇ ಪ್ರಕಾರ ಮದ್ರಾಸ್ ಕೋಸ್ತಿನಲ್ಲಿಯೂ ಲೋಟ್ತಿ ಮಾಡದೆ ಯಿದ್ದರೆ ಜನರಿಗೆ ಹೊಳ್ಳಿದಾದೀತು ಯಿಂಗ್ಲಂಡ್ ದೇಶದ ಸರ್ಕಾರದವರು ಯೀ ಲೋಟ್ತಿಯಿಂದ ತಮಗೆ ಲಾಭ ಉಂಟಾಗುವದಾದರು ಜನರನ್ನು ಕೆಡಿಸುತ್ತದೆ ಯೆಂಬದರಿಂದ ಅದನ್ನು ಹತ್ತೊಂಭತ್ತು ವರ್ಷದ ಮೊದಲು ಮನಾ ಮಾಡಿದರು.

ಚೀನಾದೇಶದಲ್ಲಿ ಕೊನ್ ಫೂಚೆಯನ ವಂಶದಲ್ಲಿ ಹುಟ್ಟಿದ ಕಜ್ ಫಾನ್ ಯೂವೆನ್ ಯೆಂಬ ಹೊಬ್ಬ ಧೊರೆ ಕೆಲವು ತಿಂಗಳ ಹಿಂದೆ ಪೇಕಿನ್ ಪಟ್ಟಣದಲ್ಲಿರುವ ಚೀನಾದೇಶದ ಮಹಾರಾಜನ ದರ್ಬಾರಕ್ಕೆ ಬಂದನು ಯಿವನ ಹಿರಿಯರು ಯೆರಡು ಸಾವಿರ ವರ್ಷದ ಹಿಂದೆ ಆಗಿನ ಚೀನಾದೇಶದ ಮಹಾರಾಜನ ಕೈಯಿಂದ ಧೊರೆತನವನ್ನು ಹೊಂದಿದರು ಮಹಾರಾಜನು ಯಿವನಿಗೆ ಅವನ ಮಹಪಿತನಾದ ಕೊನ್ ಫೂಚೆಯೆಂಬ ಚೀನಾದೇಶದ ಮಹಾಜ್ಞಾನಿಯ ಹೆಸರಿಗಾಗಿ ನೂರು ತಲಾಂತರಕ್ಕೆ ಸಾಕಾಗುವಷ್ಟು ಐಶ್ವರ್ಯವನ್ನು ಯಿನಾಮಾಗಿ ಕೊಟ್ಟನು.

ಮುಂಬೈಯಲ್ಲಿ ವಾಸವಾಗಿರುವ ಸರ್ ಜಮ್ಸ ಜಿಕ್ ಜಿಜಿಬಾಯ್ ಯೆಂಬ ಫಾರ್ಸಿ ಧೊರೆ ಪೂನಾಪಟ್ಟಣದವರಿಗೆ ಹೊಳ್ಳೆನೀರು ದೂರದಿಂದ ತರುವ ಬಗ್ಗೆ ಕಾಲುವೆಯನ್ನು ಕಟ್ಟಿಸುವದಕ್ಕಾಗಿ ಹೊಂದು ಲಕ್ಷ ಯಿಪ್ಪತ್ತು ಸಾವಿರ ರುಪಾಯಿ ಕೊಡ ಮನಸ್ಸಾಗಿದ್ದೇನೆಂದು ಹೇಳಿ ಮುಂಬೈ ಗವರ್ನಮೆಂಟಿನವರು ತಾನು ಕಟ್ಟಿಸುವ ಕಾಲುವೆಯನ್ನು ಆಗಾಗ್ಯೆ ಕೆಟ್ಟುಹೋಗದಹಾಗೆ ಜಾಗ್ರತೆಯಿಡುವೆವೆಂದು ವಾಗ್ದತ್ತ ಕೊಟ್ಟರೆ ಯಿಷ್ಟು ಹಣವನ್ನು ಆ ಕೆಲಸಕ್ಕಾಗಿ ಖಜಾನೆಗೆ ಹೊಪ್ಪಿಸಿ ಕೊಡುತ್ತೇನೆಂದು ವಾಕ್ಯ ಕೊಟ್ಟರು.

ಜನವರಿ ತಾರೀಕು ೮ರಲ್ಲು ಮಾರಿಶಿಯ ದ್ವೀಪದ ಹತ್ತರ ಅಯ್ದು ಹಡಗಗಳು ಕಪ್ತಾನವರ ತಪ್ಪಿನಿಂದ ಹೊಡೆದು ಹೋದವು. ಮೂರು ಹಡಗಗಳಲ್ಲಿ ಹೆಚ್ಚು ಕಡಿಮೆ ಆರುನೂರಾ ಮೂವತ್ತು ಮಂದಿ ಹಿಂದು ಜನರಾದ ಕೂಲಿಯವರು ಯಿದ್ದರು. ಹೆಚ್ಚಾಗಿ ಬಂಗಾಳೆ ಮತ್ತು ತೆಲುಗು ದೇಶದ ಕೂಲಿಯವರು ಆ ದ್ವೀಪದಲ್ಲಿ ಕಬ್ಬಿನ ತೋಟಗಳಲ್ಲಿ ಕೆಲಸ ಮಾಡಿದರೆ ಬಹಳ ಹೆಚ್ಚು ಕೂಲಿ ಸಿಕ್ಕುತ್ತದೆಯೆಂದು ತೀಳಿ ಅಲ್ಲಿ ಸಮೂಹವಾಗಿ ಹೋಗುತ್ತಾ ಯಿರುತ್ತಾರೆ ಯೀ ಹಡಗಗಳ ಕಪ್ತಾನವರು ಅಳಿವೆಯ ಹೊಳಗೆ ಹೋದರೆ ಸುಂಕ ಕೊಡಬೇಕಾಗುವದೆಂದು ಹೊರಗೆ ಸಮುದ್ರದಲ್ಲಿ ಲಂಗರ ಹಾಕಿದರು ಆ ರಾತ್ರಿಯಲ್ಲಿ ಹೊಂದು ಬಿರುಗಾಳಿ ಬಂದದರಿಂದ ಯೀ ಹಡಗಗಳೆಲ್ಲಾ ತೀರದಲ್ಲಿರುವ ದೊಡ್ಡಬಂಡೆ ಕಲ್ಲುಗಳ ಮೇಲೆ ಬಿದ್ದು ಹೊಡೆದು ತುಂಡು ತುಂಡಾಗಿ ಹೋದವು ಯೀ ದ್ವೀಪದವರು ಬೇಗ ಬಂದು ಯೀ ಹಡಗಗಳಲ್ಲಿರುವ ಜನರಿಗೆ ಸಹಾಯ ಮಾಡಿದದರಿಂದ ಯಿವರಲ್ಲಿ ಖಲಾಸಿ ಹೊಬ್ಬ ಮಾತ್ರ ಮುಣಿಗಿ ಹೋದನು.

ಹೋದ ವರ್ಷದಲ್ಲಿ ಯಿಂಗ್ಲಂಡ್ ದೇಶದ ಸರ್ಕಾರದವರು ಆ ದೇಶಸ್ಥರಿಂದ ಮೂರು ಕೋಟಿ ಅರವತ್ತು ಲಕ್ಷ ರುಪಾಯಿ ಹೊಗೆಸೊಪ್ಪಿನ ಸುಂಕ ವಸೂಲು ಮಾಡಿದರು ಯಾಕಂದರೆ ಅಲ್ಲಿ ಹೊಂದು ರುಪಾಯಿ ಹೊಗೆಸೊಪ್ಪಿಗೆ ಹತ್ತು ರುಪಾಯಿ ಸುಂಕ ಉಂಟು ಯಿದು ಹೊರ್ತು ಯಿಂಗ್ಲಂಡ್ ದ್ವೀಪದಲ್ಲಿ ಹೊಗೆಸೊಪ್ಪನ್ನು ನೆಡುವದಕ್ಕೆ ಸರ್ಕಾರದವರ ಅಪ್ಪಣೆಯಿಲ್ಲ.

Cabool.

ಕಾಬುಲ್.

ದೋಸ್ತ್ ಮೊಹಂಮದ್ ಖಾನನ ಮಗನಾದ ಅಕ್ಬರ್ ಖಾನನು ಸೈನ್ಯದ ಸಂಗಡ ಜಲಾಲಾಬಾದಿಗೆ ಹೋದ ಮೇಲೆ ಅವನ ತಂದೆಯು ಸಹಾ ಅಲ್ಲಿಗೆ ಹೋಗಿ ಸಿಕ್ಕರ ಸಂಗಡ ಯುದ್ಧ ಮಾಡಲಿಕ್ಕೆ ಸನ್ನಾಹ ಮಾಡ ಮನಸ್ಸಾಗಿದ್ದಾನೆಂದು ವರ್ತಮಾನವುಂಟು ಹೊಂದುವೇಳೆ ಅಕ್ಬರ್ ಖಾನನು ಪೆಶಾವರ ಶೀಮೆಯನ್ನು ಸಿಕ್ಕರ ಕೈಯಿಂದ ತನ್ನ ವಶಮಾಡ ಮುಂಕೊಳ್ಳುವನೆಂದು ಕೆಲಬರು ಹೇಳುತ್ತಾರೆ ಕೆಲಬರು ಆಫ್ಗಾನ್ ಜನರು ಸಿಕ್ಕರ ಸಂಗಡ ಹೊಡಂಬಡಿಕೆ ಮಾಡಿ ಕುಂಪಣಿಯವರ ಸಂಗಡ ಯುದ್ಧ ಮಾಡಲಿಕ್ಕೆ ಬರುವರೆಂದು ನೆನಸುತ್ತಾರೆ ಹೊಂದೂ ನಿಶ್ಚಯವಲ್ಲ ಕುಂಪಣಿಯವರ ಸಂಗಡ ಯುದ್ಧ ಮಾಡಿದರೆ ಯಿವರಿಗೆ ನಷ್ಟವಾಗಿ ಪಂಜಾಬ್ ದೇಶವು ಕುಂಪಣಿಯವರ ಕೈಯಲ್ಲಿ ಬೀಳುವದೇನರಿ.

ಮೊದಲನೆ ಪುಸ್ತಕ ಹಂನೆರಡನೆ ಪುಟದಲ್ಲಿ ತೀರದೆಯಿದ್ದ

The History of England.

ಇಂಗ್ಲಾಂಡ್ ರಾಜ್ಯದ ಪೂರ್ವಚರಿತ್ರೆ.

೪ನೆ ಸಂಧಿ.

೧೧೫೪ನೇ ವರ್ಷ ಆರಭ್ಯ ೧೧೮೯ನೆ ವರ್ಷ ಪರಿಯಂತರ ಅರಸುಗಳ ವಿವರ.

ಮೂರನೆ ಸಂಧಿಯಲ್ಲಿ ಹೇಳಿದ ಹೊಡಂಬಡಿಕೆಯ ಪ್ರಕಾರ ೧ನೆ ಹೆನ್ರಿ ಅರಸನ ಮೊಮಗನಾದ ೨ನೆ ಹೆನ್ರಿ ರಾಜ್ಯವನ್ನು ಹೊಂದಿ ಆರಂಭದಲ್ಲಿ ಪ್ರಜೆಗಳಿಗೆ

ಬಹಳ ಸಂತೋಷಪಡಿಸಿದನು ಯೇನಂದರೆ ಮುಂಚಿನ ಅರಸರ ಕಾಲದಲ್ಲಿ ಕೂಲಿಗೆ ಶಿಪಾಯಿಕೆಲಸದಲ್ಲಿಡಲ್ಪಟ್ಟ ಪರದೇಶದವರನ್ನು ಕಳುಹಿಸಿಬಿಟ್ಟು ಪಕ್ಕಲಿಗರ ಮೇಲೆ ಅನ್ಯಾಯವನ್ನು ನಡಿಸುವಂಥಾ ದೊಡ್ಡ ದೊಡ್ಡವರ ಕೋಟೆಗಳನ್ನು ಮುರಿದುಬಿಟ್ಟು ಕೆಲವು ಪಟ್ಣಗಳಿಗೆ ಸ್ವಾಧೀನವಾದ ಅಧಿಕಾರಗಳನ್ನೂ ಬಿರಿದುಗಳನ್ನೂ ನೇಮಿಸಿ ಯೀಗಿನ ಇಂಗ್ಲಿಷ್ ಪ್ರಜೆಗಳ ಸೌಖ್ಯಕ್ಕೆ ಆರಂಭವಂನುಂಟುಮಾಡಿದನು ಅದರ ಮೇಲೆ ಯಿಂಗ್ಲಾಂಡ್ ರಾಜ್ಯದಲ್ಲಿ ಮಹಾಅಧಿಕಾರವನ್ನುಹೊಂದಿದ ರೋಮಾನ್ ಬೋಧಕರ ಗರ್ವವನ್ನು ತಗ್ಗಿಸಲಿಕ್ಕೆ ಪ್ರಯತ್ನಮಾಡಿ ಅನೇಕವರ್ಷಗಳಪರಿಯಂತರ ರೋಮಾಪಟ್ಣದಲ್ಲಿರುವ ಮಹಾಗುರುವಿನಸಂಗಡ ತರ್ಕಮಾಡುತ್ತಿದ್ದನು ಆದರೆಅವನು ಮುದುಕನಾದಮೇಲೆ ಅವನ ಮಕ್ಕಳು ಅವನಿಗೆತಿರಿಗಿಬಿದ್ದು ರಾಜ್ಯವನ್ನು ತೆಗಿಯಲಿಕ್ಕೆ ಪ್ರಯತ್ನಮಾಡಿದರು ಯೀಪ್ರಕಾರ ಅವರುಕೆಲವುಯುದ್ಧಗಳನ್ನು ಮಾಡಿದಮೇಲೆ ಕಡೆಯಲ್ಲಿ ಅವನಮಗನಾದ ರಿಚರ್ಡನು ರಾಜ್ಯವನ್ನು ತಂದೆಯಿಂದತೆಗೆದು ತಾನೇಅರಸನಾದನು ತಂದೆಯಾದ ೨ನೆ ಹೆನ್ರಿಯು ಸ್ವಲ್ಪಕಾಲದಮೇಲೆ ಅದೇಚಿಂತೆಯಿಂದ ಸತ್ತುಹೋದನು ಯೀಅರಸನು ರಾಜ್ಯವಂನಾಳುವ ಸಮಯದಲ್ಲಿ ಇಂಗ್ಲಾಂಡ್ ದೇಶಕ್ಕೆ ಸಮೀಪವಾದಅಯಿರ್ಲಂಡ್ ಯಂಬ ದ್ವೀಪವು ಯಿಂಗ್ಲಿಷ್ ಜನರಿಗೆವಶವಾಯಿತು ಅದು ಅಂದಿನಿಂದೀವರಿಗೆ ಇಂಗ್ಲಿಷ್ ರಾಜ್ಯದ ಪಾಲಾಗಿರುತ್ತದೆ.

ತಂದೆಯಕೈಯಿಂದ ರಾಜ್ಯವನ್ನುತೆಗದ ರಿಚರ್ಡನುತನ್ನಧೈರ್ಯಕ್ಕೋಸ್ಕರ ಸಿಂಹಹೃದಯವೆಂಬ ಹೆಸರುಪಡಕೊಂಡನು ತಂದೆಸತ್ತಮೇಲೆ ಅವನುತಾನುನಡಿಸಿದಅಕ್ರಮಕ್ಕೋಸ್ಕರ ಪಶ್ಚಾತ್ತಾಪಪಟ್ಟು ತಾನೇ ತಂದೆಯನ್ನುಕೊಂದುಹಾಕಿದೆನೆಂಭೇಳಿ ಅಧಿಕವಾಗಿ ಚಿಂತಿಸಿ ತಂದೆಗೆ ವಿರೋಧವಾಗಿ ತನಗೆಸಹಾಯಮಾಡಿದವರಿಗೆ ವೊಬ್ಬ ಅರಸನಿಗೆ ದ್ರೋಹಮಾಡಿದವರು ಮತ್ತೊಬ್ಬರಸನಿಗೆ ಹ್ಯಾಗೆಸತ್ಯಶೀಲವಾದ್ಯಾರೆಂಭೇಳಿ ಅವರಿಗೆ ಯೇನೂವುಚಿತ ಕೊಡದೆ ತನ್ನ ಸನ್ನಿಧಾನದಿಂದ ಅವರನ್ನು ವೋಡಿಸಿದನು ಆಮೇಲೆ ರಿಚರ್ಡನು ೧ ಲಕ್ಷಮಂದಿ ಸೈನ್ಯವನ್ನುಸೂರ್ಯದೇಶಕ್ಕೆ ತಂದು ಅಲ್ಲಿಮುಸಲ್ಮಾನರ ಸುಲ್ತಾನನಾದ ಸಲಾಹಿದ್ದಿನನ ಸಂಗಡ ಯುದ್ಧಮಾಡಿ ಅವನನ್ನು ಜೈಸಿ ಯೆರೂಸಲೇಮ್ ಪಟ್ಣಕ್ಕೆ ಬಿಡುಗಡೆಮಾಡಿ ಕಡೆಯಲ್ಲಿ ೩ ವರ್ಷ ಮೂರುತಿಂಗಳು ೩ ದಿವಸ ೩ ತಾಸುಗಳಕ್ಕೋಸ್ಕರ ಸಮಾಧಾನವನ್ನುನೇಮಿಸಿಮಹಾಕೀರ್ತಿಯಿಂದ ಮನೆಗೆಹೋದನು ಆದರೆಅವನು ಡೈಚ ದೇಶವನ್ನು ದಾಟಿಹೋಗುವಾಗ ಅವನಶತ್ರುವಾದ ಔಸ್ತ್ರಿಯಾಅರಸನು ಅವನನ್ನುಹಿಡಿದು ವೊಂದುಸೆರೆಯಲ್ಲಿಹಾಕಿದನು ಇಂಗ್ಲಿಷ್ ಜನರಿಗೆ ಅರಸನು ಯೆಲ್ಲಿಯಿದ್ದಾನೋ ಸತ್ತುಹೋದನೋ ಯೇನೋಯೆಂದು ತಿಳಿಯಲಿಲ್ಲ ಯೀಕಷ್ಟದಲ್ಲಿ ಅರಸನಿಗೆಮುಂಚೆ ಸ್ನೇಹಿತನಾಗಿದ್ದ ವೊಬ್ಬಕವೀಶ್ವರನು ಬೇರೆಬೇರೆದೇಶಗಳನ್ನು ಸಂಚರಿಸಿ ಅರಸನಿಗೆಮಾತ್ರತಿಳಿದಿರುವ ವೊಂದುರಾಗವನ್ನುಯೆಲ್ಲಿಯೂಹಾಡುತ್ತಿದ್ದನು ಕಡೆಯಲ್ಲಿ ಅವನುವೊಂದುಹಳೆಕೋಟೆಗೋಪುರದಹತ್ತರ ಆರಾಗವನ್ನುಹಾಡುವಾಗ ಆಗೋಪುರದ ವಳಗಿಂದ ವುತ್ತರಾಗಿ ಅದೇರಾಗಶಬ್ದವು ಹೊರಟಿದ್ದದರಿಂದ ಯಿದರೊಳಗೆ ಅರಸನಿದ್ದಾನೆಂದು ಅವನಿಗೆ ತಿಳೀತು ಆಗ್ಯೆ ಇಂಗ್ಲಿಷ್ ಜನರು ಬಹಳಹಣಕೂಡಿಸಿ ಅದನ್ನು ಔಸ್ತ್ರಿಯಾಅರಸನಹತ್ತರ ಕೊಟ್ಟು ಆರಿಚರ್ಡನಿಗೆಬಿಡುಗಡೆಮಾಡಿಸಿದರು.

ಯೀರಿಚರ್ಡನು ಪರದೇಶಗಳಲ್ಲಿರುವಸಮಯದಲ್ಲಿ ಅವನತಮ್ಮನಾದ ಯೋಹಾನನು ರಾಜ್ಯವನ್ನು ವಶಮಾಡಿಕೊಂಡಿದ್ದನು ಆದರೆ ತನ್ನಯುದ್ಧ ಕೀರ್ತಿಗೋಸ್ಕರ ನಿವಾಸಿಗಳಿಗೆ ಪ್ರಿಯನಾಗಿದ್ದ ರಿಚರ್ಡನು ತಿರಿಗಿಬಂದಾಗ ಯೋಹಾನನು ತನಗೆ ಕ್ಷಮಿಸಬೇಕೆಂದು ಅಣ್ಣನಿಗೆ ಬೇಡಿಕೊಂಡು ರಾಜ್ಯವನ್ನು ತಿರಿಗಿ ವೊಪ್ಪಿಸಿದನು ಅದರಮೇಲೆ ರಿಚರ್ಡನು ಫ್ರಾನ್ಸ್ ದೇಶದಮೇಲೆ ಮಾಡಿದ ಯುದ್ಧದಲ್ಲಿ ೧ ಬಾಣತಾಗಿ ಸತ್ತುಹೋದನು.

ಮೊದಲನೆ ಪುಸ್ತಕ ಆರನೆ ಪುಟದಲ್ಲಿ ತೀರದೇಯಿದ್ದ

The Life of Mohammad.

ಮೊಹಮ್ಮದನ ಚರಿತ್ರೆ.

ಕೆಲವರು ಮೊಹಮ್ಮದನು ಮೋಸಗಾರನಾಗಿ ಯೂದರ ಕಯ್ಯಲ್ಲಿಯೂ ಕ್ರೈಸ್ತರ ಕಯ್ಯಲ್ಲಿಯೂ ಯಿರುವ ತೌರಾತೂ ಯಿಂಜಿಲೂ ಯೆಂಬ ದೇವರ ವಾಕ್ಯವಂನು ಕೆಡಿಸಿ ದೇವದೂತರಲ್ಲಿ ಶ್ರೇಷ್ಠನಾದ ಗಾಬ್ರಿಯೇಲನು ತನಗೆ ಪ್ರತ್ಯಕ್ಷವಾಗಿ ದೇವರಚಿತ್ತವಂನು ತಿಳಿಸಿದನೆಂದೂ ತಾನುವೊಂದುರಾತ್ರಿಯಲ್ಲಿ ಪರಲೋಕಕ್ಕೇರಿಹೋಗಿ ದೇವರ ಸಂನಿಧಿಯಲ್ಲಿಶೇರಿ ತಿರುಗಿ ಯಿಳಿದು ಬಂದನೆಂದೂ ಯೀ ಮೊದಲಾದ ಕಟ್ಟುಕಥೆಗಳಂನು ತನ್ನಶಿಷ್ಯರಿಗೆ ಬೋಧಿಸಿದನೆಂದು ಹೇಳುತ್ತಾರೆ ಕೆಲವರು ಅವನು ಕಾಮಾತುರನಾಗಿ ಬಹಳಮಂದಿ ಹೆಂಡರಂನು ಮಾಡಿಕೊಂಡದರಿಂದ ಅವನು ದುರ್ಗುಣವುಳ್ಳವನೆಂದು ತೋರಿಸ ಪ್ರಯತ್ನಮಾಡುತ್ತಾರೆ ಹೀಗೆ ಹೇಳಲಿಕ್ಕೆ ಸಾಕಾದ ಕಾರಣಗಳು ಯಿರುವದಿಲ್ಲ ಯಾಕೆಂದರೆ ಮೊಹಮ್ಮದನು ಹುಟ್ಟಿದಕಾಲದಲ್ಲಿ ಯೂದರೂ ಕ್ರೈಸ್ತರೂ ದೇವರ ವಾಕ್ಯದ ಶುದ್ಧಬೋಧನೆಯಂನುಬಿಟ್ಟು ದೇವರ ಮಾರ್ಗದಿಂದ ತಪ್ಪಿ ಅನೇಕ ಕಟ್ಟುಕಥೆಗಳಂನೂ ಅಬದ್ಧ ಬೋಧನೆಗಳಂನೂ ಅನಾಚಾರಗಳಂನೂ ಕೈಕೊಂಡು ಯಿರುವದರಿಂದ ಬರಹ ತಿಳಿಯದವನಾದ ಮೊಹಮ್ಮದನು ದೇವರ ವಾಕ್ಯದಲ್ಲಿರುವ ಸತ್ಯಜ್ಞಾನವಂನು ತಿಳಿಯದೆ ಹೋದದರಿಂದ ಅವನು ವಂಚಿಸಿದನೆಂದು ಹೇಳಕೂಡದು ಯಿದಲ್ಲದೆ ಮೊಹಮ್ಮದನು ಗಾಬ್ರಿಯೇಲನು ತನಗೆ ಪ್ರತ್ಯಕ್ಷವಾದನೆಂಬುವದರಲ್ಲಿಯೂ ತಾನು ಪರಲೋಕಕ್ಕೆ ವಯ್ಯಲ್ಪಟ್ಟನೆಂಬುವದರಲ್ಲಿಯೂ ತಾನು ತಿಳಿದು ಅಸತ್ಯವಂನು ಹೇಳಿದನೆಂದು ದ್ರುಷ್ಟಾಂತ ತೋರಿಸುವದು ಕಷ್ಟವೇ ಯಾಕೆಂದರೆ ಮೊಹಮ್ಮದನು ಬೇರೆ ಕಾರ್ಯಗಳಲ್ಲಿ ಸತ್ಯವಂತನಾಗಿಯೂ ಬುದ್ಧಿವಂತನಾಗಿಯೂ ನಡಕೊಳ್ಳುತ್ತಿದ್ದನು ಮತ್ತುಅವನು ಯೀಮಾತುಗಳಂನು ತಾನು ನಂಬದೆ ಯಿರುತಿದ್ದನಾದರೆ ಯಿವನ ದೇಶಸ್ಥರಲ್ಲಿದ್ದ ಬುದ್ಧಿವಂತರು ನಂಬುತ್ತಿದ್ದಿಲ್ಲವೆಂದು ಕಾಣುವದು ಆದರೆ ಸೈತಾನನು ದೇವರ ಮಗನಾದಯೇಸುಕ್ರೀಸ್ತನಂನುಅರಣ್ಯದಲ್ಲಿ ಶೋಧಿಸಿದಪ್ರಕಾರ ಮೊಹಮ್ಮದನು ಮಹಾ ಪುರುಷನೆಂದು ತಿಳಿದುಕೊಂಡು ಯಿವನಿಗೆ ನಾನಾವಿಧ ಮೋಸಗಳಂನು ಮಾಡಲಿಕ್ಕೆ ಪ್ರಯತ್ನಿಸಿ ಅವನೇವಿಶ್ವಾಸಿಸುವಹಾಗೆ ಅಂಥಾದು ತೋರಮಾಡಿದನೆಂಬುವದು ಆಶ್ಚರ್ಯವಲ್ಲ ಹೀಗಿರಲಾಗಿ ಮೊಹಮ್ಮದನು ಸೈತಾನನಿಂದಲೂ ಅವನ ದೂತರಿಂದಲೂ ಕಂಣುಕಟ್ಟಿದವನಾಗಿ ತಾನು ನೋಡಿಕೇಳಿದ ಆಶ್ಚರ್ಯವಾದದರ್ಶನಮಾತುಗಳಂನು ಸುಳ್ಳುಹೇಳದೆ ತಾನು ತಿಳುಕೊಂಡಪ್ರಕಾರ ಸತ್ಯಸಾಕ್ಷಿಯ ಧೈರ್ಯದಿಂದ ಮತ್ತೊಬ್ಬರಿಗೆ ತಿಳಿಸಿ ಅವರಲ್ಲಿ ವಿಶ್ವಾಸವಂನು ಹುಟ್ಟಿಸುತ್ತಿದ್ದನು ಮೊಹಮ್ಮದನು ಕಾಮವಿಕಾರಿಯೆಂದು ಹೇಳುವದು ಸಮವಲ್ಲ ಯಾಕಂದರೆ ಬಹುಪತ್ನಿಯ ನೇಮ ಅರಬಿಯರಲ್ಲಿ ಪೂರ್ವದಾರಭ್ಯ ನಡವಡಿಕೆಯಾಗಿತ್ತು ಆದದರಿಂದ ಮೊಹಮ್ಮದನು ತಮ್ಮದೇಶಸ್ಥರ ಮರ್ಯಾದೆಯಂನು ಕೈಕೊಳ್ಳುತ್ತಾಬಂದದ್ದು ಅವನಿಗೆದೋಷವಾಗಿರಲಿಲ್ಲ ಆನೇಮಕೆಟ್ಟದೆಂಬದುಸಂ

ಆದರೆ ಆಯಾದೇಶಸ್ಥರು ತಂಮತಂಮ ದೇಶಗಳಮರ್ಯಾದೆಯಪ್ರಕಾರ ನಡಕೊಂಡರೆ ಆಮರ್ಯಾದೆಗಳಲ್ಲಿ ದೋಷವಿದ್ದರೂ ಆಜನರ ಮೇಲೆ ಅಪರಾಧ ವುಂಟೆಂದು ಹೇಳಿದರೆ ನ್ಯಾಯವಲ್ಲ ಯೀವಿಷಯದಲ್ಲಿ ಒಂದುಮಾತು ಹೇಳಬಹುದು ಒಬ್ಬ ಮನುಷ್ಯನು ಮನುಷ್ಯರಿಗೆ ಹೊಸ ನೀತಿಯ ಮಾರ್ಗವಂನು ತೋರಿಸ ಬೇಕೆಂದಿದ್ದರೆ ಮುಂಚಿನ ದುರ್ನೀತಿಗಳಂನು ತಿದ್ದಲಿಕ್ಕೆ ಯೋಗ್ಯವಾಗಿರುವದು.

ಮೊಹಮ್ಮದನು ಶಕ್ತಿಯೂ ನೀತಿಯೂ ದಾಕ್ಷಿಣ್ಯವೂ ಶಾಂತಿಯೂ ವಿನಯವೂ ಮಿತಾನುಭೋಗವೂ ವುಳ್ಳವನಾಗಿದ್ದನೆಂದು ಅವನಶಿಷ್ಯರು ಹೇಳುತ್ತಾಬರುತ್ತಾರೆ ಯೀಮಾತು ಸುಳ್ಳೆಂದು ಹೇಳಲಿಕ್ಕೆ ಕಾರಣವಿಲ್ಲ ಅವನು ಬುದ್ಧಿಶಾಲಿಯಾಗಿಯೂ ಸೂಕ್ಷ್ಮಗ್ರಾಹಿಯಾಗಿಯೂ ಯುಕ್ತಿಯುಳ್ಳವನಾಗಿಯೂ ಗುಣಾಢ್ಯನಾಗಿಯೂ ಯಿದ್ದನೆಂಬದು ನಿಶ್ಚಯವಾಗೇದೆ ಅವನು ಬರಹವಿಲ್ಲದವನಾಗಿರುವದರಿಂದ ಯುಕ್ತಿಯಿಂದ ವುಪಾಯವಂನು ಕಂಡು ತಾನು ದೇವರಿಂದ ಕಳುಹಿಸಲ್ಪಟ್ಟ ಮಹಾತ್ಮನಾಗಿದ್ದನೆಂಬುವದಕ್ಕೆ ಯಿದೇ ದೃಷ್ಟಾಂತವೆಂದು ಹೇಳಿದನು ಯೇನಂದರೆ ದೇವರ ವಿಶೇಷವಾದ ಸಹಾಯವು ಯಿಲ್ಲದಿದ್ದರೆ ನಾನು ವುತ್ತಮಭಾಷೆಯಲ್ಲಿ ಒಂದು ಧರ್ಮಶಾಸ್ತ್ರವಂನು ಉಂಟುಮಾಡುವದು ಅಸಾಧ್ಯವಾಗಿರುತ್ತಿತ್ತೆಂದು ಹೇಳುತ್ತಿದ್ದನು ಖುರಾನದಲ್ಲಿಯೇ ಅವನಿಗೆ ವಿದ್ಯೆಯಿಲ್ಲದ ಪ್ರವಾದಿಯೆಂಬ ಹೆಸರು ವುಂಟು.

The Indian Traveller. Letter the First.

ಹಿಂದುದೇಶ ಸಂಚಾರದ ಕಥೆಯು ಮೊದಲನೆ ಕಾಗದವು.

On Board the Gilmore—1842.

ಪ್ರಿಯರಾಮರಾಯನೇ ಗಿಲ್ಮೋರ್ ಹಡಗದಲ್ಲಿ—೧೮೪೨.

ಮೊಂನೆ ನಾನು ಹೊರಟುಬರುವಸಮಯದಲ್ಲಿ ನಿಮಗೆ ಹೇಳಿದ ಪ್ರಕಾರ ಕಾಬಿನಿನಲ್ಲಿ ಕೂತುಕೊಂಡು ಪ್ರಯಾಣ ಕಾಗದಗಳಂನು ಬರಿಯಲಾರಂಭಿಸುತ್ತೇನೆ ನಿಂನೆ ದಿವಸ ಬಹಳ ಯೆದುರುಘಾಳಿಯಿಂದಲೂ ತೆರೆಗಳಿಂದಲೂ ಹಡಗವು ಬಹಳ ಅಲ್ಲಾಡಿದನಗೆ ತಲೆತಿರಿಗಿ ಮನೆಯಲ್ಲಿ ಯಿರುತ್ತಿದ್ದರೆ ಒಳ್ಳೇದಿತ್ತೆಂದು ಆಲೋಚನೆಮಾಡುವಷ್ಟು ಉಪದ್ರವಾಯಿತು ಯೀಹೊತ್ತುಬೆಳಿಗ್ಗೆ ಘಾಳಿ ನೈರುತ್ಯ ದಿಕ್ಕಿನಿಂದಬಂದು ಸಮುದ್ರವು ನದಿಯಂತೆ ಶಾಂತವಾಗಿ ಹಡಗವು ಸಮಸ್ತಹಾಯಿಗಳುಬಿಟ್ಟು ಮೀನಿನಹಾಗೆ ನಡಿಯುವದರಿಂದ ನಾನು ಸ್ವಸ್ಥವಾಗಿ ಬಹಳ ಸಂತೋಷದಿಂದಿದ್ದೇನೆ. ನಾವಿಬ್ಬರು ಚಿಕ್ಕತನ ದಾರಭ್ಯ ಮೊದಲು ಜಮದಗ್ನಿಯಾದ ಸುಬ್ಬಯನ ಸಾಲೆಯಲ್ಲಿ ಜೈಮುನಿ ಬಾಯಿಪಾಠ ಮಾಡಿ ತದನಂತರ ಗೌರ್ನಮೆಂಟಿನ ಸ್ಕೂಲಿನಲ್ಲಿಯೂ ಕೊಲ್ಲೆಜಿನಲ್ಲಿಯೂ ವಿದ್ಯಾಭ್ಯಾಸ ಮಾಡಿ ಯಿಷ್ಟುವರ್ಷ ಒಟ್ಟಿಗೆ ಯಿದ್ದದರಿಂದ ನಿಂನಂನು ಬಿಟ್ಟುಬರುವದುಃಖ ನನಗೆ ದೊಡ್ಡದಾಗಿತ್ತು ಹೊಸಶಾಸ್ತ್ರದ ವಿಷಯವಾಗಿ ನಂಮೊಳಗೆ ಸ್ವಲ್ಪ ತರ್ಕ ಹುಟ್ಟಿದರೂ ನಂಮ ಸ್ನೇಹವು ಕಡಿಮೆ ಯಾಗಲಿಲ್ಲವೆಂದು ನೆನಸುತ್ತೇನೆ. ನಾನು ಸಮಸ್ತ ದೇಶವಂನು ಸಂಚರಿಸಿ ಮದ್ರಾಸಿಗೆ ತಿರಿಗಿ ಬಂದಮೇಲೆ ಯಾವ ಮತದಲ್ಲಿಯೂ ಮನುಷ್ಯಬುದ್ಧಿಹೊರ್ತು ಮತ್ತೇನಿಲ್ಲವೆಂದೂ ಮಧ್ವಾಚಾರಿಯಾಗಲಿ ವಾದಿರಾಚಾರಿಯಾಗಲಿ ಶಂಕರಾಚಾರಿಯಾಗಲಿ ಮನುವಾಗಲಿ ದೊಡ್ಡವೇದವ್ಯಾಸನಾಗಲಿ ಬುದ್ಧನಾಗಲಿ ಮೊಹಮ್ಮದನಾಗಲಿ ನೀನು ಒಂದೊಂದುವೇಳೆ ಮಾತಾಡುವ ಕ್ರಿಸ್ತನಾಗಲಿ ಯೀ ಯೆಲ್ಲವರು ದಿವ್ಯ ಸ್ವಭಾವವುಳ್ಳವರಲ್ಲ ಬುದ್ಧಿಶಾಲಿಗಳಾದ ಮನುಷ್ಯರೇ ಯೆಂದೂ ಮುಂಚೆಗಿಂತ ಚಂನಾಗಿ ತೋರಿಸಿ ಸ್ನೇಹವಾದ ತರ್ಕದಲ್ಲಿ ನಿಂನಂನು ಜೈಸುವೆನೆಂದು ಸಂಶಯವಿಲ್ಲದೆ ಯಿರುತ್ತೇನೆ ಯಿದೊಂದು ಯಿಟ್ಟುಕೋ ನಂಮೊಳಗೆ ಯಿರುವ ಮಾತುಯೆಂದಿಗೂ ಅಂತರಂಗದಲ್ಲಿಯೇ ಯಿರಲಿ ನೀನು ಯೇಸುಕ್ರಿಸ್ತನ ವಿಷಯವಾಗಿ ನಿಂನ ಚಿತ್ತದ ಪ್ರಕಾರ ಹೇಳು ತರ್ಕದಲ್ಲಿ ನೋಡಿಕೊಳ್ಳ ನಾನಾನು ಸಕಲಮತಗಳು ಸುಳ್ಳೆಂದು ಮನಸ್ಸಿನಲ್ಲಿ ತಿಳುಕೊಂಡ ಪ್ರಕಾರ ಸ್ಪಷ್ಟವಾಗಿ ತೋರಿಸುತ್ತೇನೆ ನೀನು ಮುಂಚಿನಹಾಗೆಯೇ ನಂನ ಮಾತು ಹೀನೈಸಲಿಕ್ಕೆ ಪ್ರಯತ್ನಮಾಡು ನನಗೇನು ಭಯವಿಲ್ಲ ಆದರೆ ತೋರಿಕೆಗೆ ಶುದ್ಧಬ್ರಾಹ್ಮರಹಾಗೆ ಯಿರುವಾ ನಾವು ಸತ್ಯವಂತರಾಗಿ ನಡದರೆ ಸತ್ತಮೇಲೆ ದೇವರಿದ್ದರೆ ಸೌಖ್ಯಪಡುವೆವು ದೇವರಿಲ್ಲದಿದ್ದರೆ ನಾವು ಸಹ ಸತ್ತಮೇಲೆ ಶೂನ್ಯರಾಗಿ ಹೋಗಿ ಸುಖದುಃಖ ಯೆರಡೂ ತಿಳಿಯದೇ ಯಿರುವೆವು ಆದರೆ ಯೀ ಜೀವದ ಆಟ ಆಡುವ ಪರಿಯಂತರ ವ್ಯರ್ಥಮಾತುಗಳಗೋಸ್ಕರ ಉಪದ್ರಪಡದೆ ಮತ್ತೊಬ್ಬರ ಹಾಗೆಯೇ ಚಂನಾಗಿ ಆಡುವಾ ಹುಚ್ಚರ ಸಮೂಹದಲ್ಲಿ ಬುದ್ಧಿವಂತಿಕೆಯಂನು ತೋರಿಸುವವನು ಹುಚ್ಚನೇ ಯಿಷ್ಟುಸಾಕು ಯೀ ಕಾಗದ ತಪ್ಪಿದಮೇಲೆ ನಂನ ಮನಿಗೆ ಹೋಗಿ ನನ್ನ ದೊಡ್ಡಪ್ಪನಿಗೆ ನಂನ ಸಾಷ್ಟಾಂಗ ಬಿಂನಹವಂನು ಹೇಳಿ ಅವರಿಗೆ ನಾನುಬಿಟ್ಟುಬಂದ ಪಾಪಕ್ಕೋಸ್ಕರ ಗಂಗಾಸ್ನಾನವಂನು ಮಾಡಿ ಶುದ್ಧನಾಗಲಿಕ್ಕೆ ಹೋಗುತ್ತೇನಾದದರಿಂದ ನಂನ ಮೇಲೆ ಸಿಟ್ಟುಮಾಡಬಾರದೆಂದೂ ನಂನ ಆಸ್ತಿ ಮುಂತಾದದ್ದೆಲ್ಲಾ ಚಂನಾಗಿ ಜಾಗ್ರತೆಯಿಂದ ನೋಡಿ ನಂನ ಮದಿವೇ ವಿಷಯ ಸುಮ್ಮನೆ ಕಷ್ಟಪಡುವದು ಬಿಡಬೇಕೆಂದೂ ನಾನು ಕಲ್ಕತ್ತಾ ಪಟ್ಣಕ್ಕೆ ತಪ್ಪಿದಮೇಲೆ ಜಗನ್ನಾಥ ಶೆಟ್ಟಿಹತ್ತರ ಅವರಿಗೆ ಹೇಳಿದ ಹಣಕ್ಕಿಂತ ಹೆಚ್ಚು ಹಣವಂನು ತೆಗದುಕೊಂಡು ಹುಂಡಿಕೊಡುತ್ತೇನೆಂದು ಹೇಳಬೇಕು ಯಿದು ದೊಡ್ಡಪ್ಪನಿಗೆ ಸಾಕು ನಿನಗೆ ನಂನ ಆಲೋಚನೆಯೆಲ್ಲಾ ಹೇಳುತ್ತೇನೆ ನಂನ ತಂದೆ ಸತ್ತಮೇಲೆ ಯೀ ಆರುತಿಂಗಳಿಂದ ಆ ಉತ್ತಮಗ್ರಹಸ್ಥನಾದ ರಾಘವೇಂದ್ರಶಾಸ್ತ್ರಿ ನಂನ ಹಣದಮೇಲೆ ಆಶೆಯಿಲ್ಲದವನ ಹಾಗೆ ನಂನ ಮೇಲೆ ಬಹು ಪ್ರೀತಿ ತೋರಿಸಿ ನಂನ ದೊಡ್ಡಪ್ಪನ ಮುಖಾಂತ್ರವಾಗಿ ರಾತ್ರಿಹಗಲು ತಂನ ಮಗಳಂನು ನಾನು ಮದಿವೆಮಾಡಿಕೊಳ್ಳಬೇಕೆಂದು ಉಪದ್ರಕೊಟ್ಟದರಿಂದ ನಂನ ನೆಂಟರಿಗೆ ನಾನು ಕಾಶಿಯಾತ್ರೆಗೆ ಹೋಗುತ್ತೇನೆಂದು ಹೇಳಿ ಭಕ್ತಿಉಳ್ಳವನಂತೆ ತಪ್ಪಿಕೊಂಡೆ ಅವರು ನಾನು ಫಾಲ್ಗುಣತಿಂಗಳೊಳಗೆ ತಿರಿಗಿಬರುವೆನೆಂದು ನಿರೀಕ್ಷಿಸುತ್ತಾರೆ ಆದರೆ ಯೆರಡುವರ್ಷದ ವೊಗಲು ಅವರು ನಂನಂನು ನೋಡಬೇಕಾದರೆ ಅಂಜನಹಾಕಬೇಕು ಯೀ ಹೆಡ್ಡಹೆಣ್ಣಿಗಾಗಲಿ ಯಿಂಥವಳ್ಯಾರಿಗಾಗಲಿ ಚಿಂನದ ಮುಲಾಮು ಕೊಟ್ಟಾಗ್ಯೂ ನಾನು ಮದಿವೆಮಾಡಲಿಕ್ಕಿಲ್ಲ.

ನಾನು ಹಿಂದುಸ್ಥಾನ ದೇಶವೆಲ್ಲಾ ಸಂಚರಿಸಿದಮೇಲೆ ಸೌಕಾಶದಿಂದ ಮನೆಯಲ್ಲಿಕೂತುಕೊಂಡು ನಂಮ ಜಾತಿ ಒಂದು ಬಡಹೆಂಣಿಗೆ ತಂದು ವಿದ್ಯಾಭ್ಯಾಸ ಮಾಡಿಸಿ ವಿವಾಹ ಮಾಡಿಕೊಳ್ಳುವೆನೆಂದು ನಿಶ್ಚಯಮಾಡಿಕೊಂಡಿದ್ದೇನೆ ಜನರು ತಂಮೊಳಗೆ ಬಾಯಿಬಂದಹಾಗೆ ಮಾತಾಡಲಿ ನನಗೇನು ನನಗೆ ಸಂಪತ್ತು ಉಂಟು ನಾನು ಕೆಲವು ಕೆರೆಗಳಂನು ಕಟ್ಟಿಸಿದರೆ ಶಾಸ್ತ್ರಿಗಳು ಯೆಷ್ಟು ದ್ವೇಷ ಮಾಡಿದರೂ ಜನರು ನನಗೆ ಪುಣ್ಯಪುರುಷನೆಂದು ಹೇಳುವರು ನೆಂಟರಕೈಯಿಂದಲೂ ಆಪೂಜೆಮಾಡುವ ಕರ್ತರೆಯಿಂದಲೂ ತಪ್ಪಿದ್ದು ನನಗೆ ಸುಖವೇ ನಿಂನೆ ಹಡಗಿನಲ್ಲಿ ವಾಂತಿಮಾಡುವಾಗ್ಯೆ ನಾನು ತಂದದೇವರಪೆಟ್ಟಿಗೆಜಾರಿ ಸಮುದ್ರದಲ್ಲಿಬಿತ್ತು ಯೀಗ ವರುಣನಿಗೆ ಸಿಕ್ಕಿತು ನಂನ ಬದಲಿಗೆ ಅವನು ಪೂಜೆಮಾಡಲಿ.

ಘಾಳಿಯು ನೈರುತ್ಯ ದಿಕ್ಕಿನಿಂದ ತಿರಿಗಿ ಆಗ್ನೇಯ ದಿಕ್ಕಿನಿಂದ ಬೀಸಲಾರಂಭಿಸುವದರಿಂದ ಖಲಾಶಿಯರು ಗಾಜಿಮಾಡಿ ಕಪ್ತಾನ್ ಘೋರೆಯ ಬೊಬ್ಬೆಯ ಪ್ರಕಾರ ಹಾಯಿಗಳಂನು ತಿರುಗಿಸುತ್ತಾರೆ ಹಡಗವು ಅಲ್ಲಾಡುತ್ತದೆ ರೋಜುಸ್ಥಿರವಾಗಿ ನಿಲ್ಲುವದಿಲ್ಲ ಕಾಗದವಂನು ಮುಗಿಸುತ್ತೇನೆ ಯೀರಾತ್ರೆಗೆ ಮಲ್ಲಬಂದ್ರದ

ಅಳಿವೆಯ ಹತ್ತಿರ ಬಂದರೆ ಯೀ ಕಾಗದವಂನು ಟಪ್ಪಾಲಿನಲ್ಲಿ ಹಾಕಿಸುತ್ತೇನೆ ನಿಂನ ಕಾಗದವಂನು ಕಲ್ಕತ್ತಾಪಟ್ಣಕ್ಕೆ ಜಗಂನಾಥ ಶೆಟ್ಟಿಯ ಮುಖಾಂತ್ರ ನನಗೆ ಸಿಕ್ಕುವ ಹಾಗೆ ಕಳುಹಿಸು ನಾವು ವೊಬ್ಬನಿಂದೊಬ್ಬನು ದೂರ ವಿರುವದರಿಂದ ಬರುವ ದುಃಖವಂನು ಸಂತೈಸಲಿಕ್ಕಾಗಿ ಆಗ್ಗಾಗ್ಯೆ ಕಾಗದಗಳಂನು ಬರೆಯುತ್ತಾಯಿರುವಾ ನಿಂನ ಸತ್ಕರ್ಮಗಳಲ್ಲಿ ಸಂತೋಷಪಟ್ಟು ಸುಖವಾಗಿರು.

ನಿಂನ ಸ್ನೇಹಿತನಾದ ಕೃಷ್ಣನು.

The Life of Confutse.

ಚೀನಾದೇಶಸ್ಥರ ಪೂರ್ವ ಮತಸ್ಥಾಪಕನಾದ ಕೊನ್ ಫೂಚೇನ ಚರಿತ್ರೆಯು.

ಕೊನ್ ಫೂಚೇನು ಕ್ರಿಸ್ತಶಕದ ೫೫೦ ನೆ ವರ್ಷದ ಮೊದಲು ಚೀನಾದೇಶದಲ್ಲಿ ಕೀಮೆಯೆಂಬ ಮಹಾರಾಜನ ವಂಶಸ್ಥನಾಗಿ ಹುಟ್ಟಿದನು ಅವನು ಮೂರು ವರ್ಷದ ಹುಡುಗನಾಗಿರುವಾಗ ಲೊಂಗ ದೇಶದ ರಾಜರ ಪ್ರಧಾನಿ ಯಾದ ಅವನ ತಂದೆ ಶೋಲಿಯಾಂಗನು ಸತ್ತು ಮಗನಿಗೂ ಅವನ ತಾಯಿಯಾದ ಚಿಂಗಳಿಗೂ ಏನು ಆಸ್ತಿ ಬಿಡದೆ ಹೋದನು ಕೊನ್ ಫೂಚೆ ಬೇರೆ ಹುಡುಗರ ಹಾಗೆ ಆಟಗಳಿಗೆ ಮನಸ್ಸು ಕೊಡದೆ ಚಿಕ್ಕತನದಿಂದ ಬಹು ಬುದ್ಧಿಯೂ ಯುಕ್ತಿಯೂ ವುಳ್ಳವನಾಗಿ ಹಿರೇರಿಗೆ ಬಹಳ ಮಾನ ಕೊಡುತ್ತಾ ಮುಖ್ಯವಾಗಿ ಕರ್ಮಕಾರಿಯಾದ ತಂನ ಅಜ್ಜನ ನಡತೆಯಂನು ನೋಡುತ್ತಾ ಪರಮೇಶ್ವರನ ಧ್ಯಾನವಂನು ನಿತ್ಯದಲ್ಲಿಯೂ ಮಾಡಿ ದಂಡವ್ರತಪೂರ್ವಕ ಊಟ ತೆಗದುಕೊಳ್ಳದೆ ನೇಮನಿಷ್ಟಿತನಾಗಿರುತ್ತಿದ್ದನು ಅಜ್ಜನು ತೀರಿ ಹೋದ ಮೇಲೆ ಚೇಪ್ಸಿಯೆಂಬ ಕೀರ್ತಿಯುಳ್ಳ ಗುರುವಿನ ಶಿಷ್ಯನಾಗಿ ಪೂರ್ವಗ್ರಂಥಗಳಂನು ನಿತ್ಯ ಅಭ್ಯಾಸ ಮಾಡುತ್ತಾ ದೊಡ್ಡ ವಿದ್ವಾಂಸನಾದನು ವೊಂದು ದಿವಸ ವೊಬ್ಬ ದೊಡ್ಡ ಅಧಿಕಾರಿಯೂ ಪೂರ್ವ ಗ್ರಂಥಗಳ ವಿಷಯವಾಗಿ ಮಾತಾಡಿ ಅವುಗಳು ಬಹು ಗೂಢಾರ್ಥವುಳ್ಳವುಗಳಾಗಿಯೂ ವಿಚಾರಿಸ ಅಯೋಗ್ಯನಾದವುಗಳಾಗಿಯೂ ಯಿರುತ್ತಾವೆಂದು ಹೇಳಲು ಕೊನ್ ಫೂಚೇನು ಪ್ರತ್ಯುತ್ತರವಾಗಿ ವೊಂದೆ ಮೂರ್ಖನೊಬ್ಬನು ಯಿದೇ ಮಾತು ನನಗೆ ಹೇಳಿದನು ವಿದ್ಯಾಹೀನನು ಯೀ ಪ್ರಕಾರ ಮಾತಾಡಿದದಕ್ಕೆ ಆಶ್ಚರ್ಯ ಪಡಲಿಲ್ಲ ಆದರೆ ವಿದ್ವಾಂಸರಾದ ನೀವು ಹೊಲೆಯವನ ಹಾಗೆ ಮಾತಾಡುವದು ಏನು ಎಂದು ಹೇಳಿದನು ಹತ್ತೊಂಭತ್ತು ವರ್ಷದವನಾಗಿ ಮದಿವೆ ಮಾಡಿಕೊಂಡು ತಂನಲ್ಲಿ ಹುಟ್ಟಿದ ಮಗನಿಗೆ ಪೇಯ್ಯು ಎಂಬ ಹೆಸರಂನಿಟ್ಟನು ಯಿವನ ಹೊರ್ತೆ ಮಕ್ಕಳು ಹುಟ್ಟಲಿಲ್ಲ ಯಿವನಲ್ಲಿಯೂ ವೊಬ್ಬನೇ ಮಗನು ಹುಟ್ಟಿದನು ಪೇಯ್ಯನು ಸಾಯುವ ಸಮಯದಲ್ಲಿ ಐವತ್ತು ವರ್ಷ ಪ್ರಾಯದವನಾಗಿದ್ದನು ಕೊನ್ ಫೂಚೇನ ವೊಂದು ಮಗನಾದ ಚಾಂಚೆ ಅಜ್ಜನ ಹಾಗೆ ಬುದ್ಧಿಶಾಲಿಯಾಗಿ ರಾಜೋದ್ಯೋಗಗಳಲ್ಲಿ ಸೇರಿದನು ಕೊನ್ ಫೂಚೆ ವೊಬ್ಬಳೇ ಹೆಂಡತಿಯಂನು ಮದಿವೆ ಮಾಡಿಕೊಂಡು ತಂನ ದೇಶಸ್ಥರಲ್ಲಿದ್ದ ಬೇರೆ ಹೆಂಡರಂನು ಯಿಡುವ ಮರ್ಯಾದೆಯು ಮನುಷ್ಯರಿಗೆ ಅಯೋಗ್ಯವೆಂದು ತಿರಸ್ಕರಿಸಿದನು ಆದರೆ ಸ್ವಲ್ಪ ಕಾಲದ ನಂತರದಲ್ಲಿ ಸಂಸಾರದ ತಾಪತ್ರಯಗಳಂನು ಪರಿಹರಿಸಿ ತಂನಲ್ಲಿರುವ ಜ್ಞಾನವಂನು ಸಮಸ್ತ ರಾಜ್ಯದಲ್ಲಿ ಪ್ರಸಿದ್ಧಿಮಾಡಬೇಕೆಂಬ ಆಲೋಚನೆಯಿಂದ ತನಗೆ ಯಿದ್ದ ಹೆಂಡತಿಯಂನು ಪರಿತ್ಯಜಿಸಿದನು ಆ ಕಾಲದಲ್ಲಿ ಚೀನಾ ರಾಜ್ಯವು ನೀತಿಕ್ರಮಯಿಲ್ಲದೆ ಯಿತ್ತು ಯಾಕೆಂದರೆ ಬೇರೆ ಬೇರೆ ಸೀಮೆಗಳ ಅರಸರು ತಂಮ ತಂಮ ಸೀಮೆಗಳಂನು ಅಯಾದೇಶದ ನ್ಯಾಯಪ್ರಕಾರ ನಡಿಸಿ ಮಹಾರಾಜನಿಗೆ ಚಂನಾಗಿ ವಿಧೇಯರಾಗದೆ ಲಂಪಟಿಕರಾಗಿಯೂ ಕಾಮಿಗಳಾಗಿಯೂ ನೇಮನಿಷ್ಟೆ ಹೀನರಾಗಿಯೂ ನಡಕೊಳ್ಳುತ್ತಿದ್ದರು.

The Miser.

ಲೋಭಿಯು.

ಅಬರ್ಸ್ಥಾನ ದೇಶದ ಕೂಫಾಪಟ್ಣದಲ್ಲಿ ಯಿದ್ದ ವೊಬ್ಬ ಲೋಭಿಯು ಬಸೋರದಲ್ಲಿ ಲುಬ್ಧರೆಲ್ಲರಲ್ಲಿ ಯುಕ್ತಿಯುಳ್ಳವನೊಬ್ಬನು ವಸ್ತಿಯಾಗಿದ್ದಾನೆಂದು ವರ್ತಮಾನ ಕೇಳಿ ಅಲ್ಲಿ ಹೋಗಿ ಆ ಮನುಷ್ಯನ ಹತ್ತಿರ ಕಲಿತುಕೊಳ್ಳಲಿಕ್ಕೆ ಆಲೋಚನೆ ಮಾಡಿ ಹೊರಟು ಹೋದನು ಆ ಪಟ್ಣದಲ್ಲಿ ಸೇರಿ ಅವನ ಮನೆಗೆ ಹೋಗಿ ನಾನು ನಿಂನ ಶಿಷ್ಯನಾಗುವೆನೆಂದು ಹೇಳಿದನು ಆ ಬಸೋರದವನು ನೀನು ಬಂದದ್ದು ವೊಳ್ಳೇದು ನಂನ ಸಂಗಡ ಬಜಾರಕ್ಕೆ ಜಿನಸಿನ ಕ್ರಯಮಾಡುವದಕ್ಕೆ ಬಾರೆ ಎಂದನು ಮೊದಲು ರೊಟ್ಟಿಗಾರನ ಹತ್ತಿರ ಹೋಗಿ ನಿಂಮ ಹತ್ತಿರ ವೊಳ್ಳೆ ರೊಟ್ಟಿ ಯುಂಟೋ ಎಂದು ಕೇಳಿದಾಗ ಆ ರೊಟ್ಟಿಗಾರನು ಧೊರೆಗಳೇ ನಾನು ನಿಂಮ ಚಾಕರಿಯವನು ವೊಳ್ಳೆರೊಟ್ಟಿ ಯುಂಟು ಅದು ಬೆಂಣೆಯ ಹಾಗೆ ಬಿಳುಪಾಗಿಯೂ ಮೃದುವಾಗಿಯೂ ಯಿರುತ್ತದೆ ಎಂದನು ಆ ಬಸೋರದವನು ಕೂಫಾದವನಿಗೆ ಹೇಳಿದ್ದು ನೀವು ಕೇಳಿದಿರೋ ಯಿವನು ತನ್ನ ರೊಟ್ಟಿ ಬೆಂಣೆಯ ಹಾಗೆ ಉಂಟೆಂದು ಹೇಳುತ್ತಾನೆ ಯಿದರಿಂದ ರೊಟ್ಟಿಗಿಂತ ಬೆಂಣೆ ವೊಳ್ಳೇದು ಎಂದು ಕಾಣುತ್ತದೆ ಬೆಂಣೆ ತೆಕ್ಕೊಳ್ಳುವ ಆಸೆಯಿಂದ ಬೆಂಣೆಗಾರನ ಹತ್ತರೆ ಹೋಗಿ ನಿಂಮಲ್ಲಿ ವೊಳ್ಳೆ ಬೆಂಣೆ ಯುಂಟೋ ಎಂದು ಕೇಳಿದರು ಅವನು ನಂನಲ್ಲಿ ಉಂಟು ನಂನ ಬೆಂಣೆ ಎಂಣೆಯ ಹಾಗೆ ಶುದ್ಧವಾಗಿಯೂ ಸೀಯಾಗಿಯೂ ಯಿರುತ್ತದೆ ಯೀ ಮಾತು ಕೇಳಿ ಬಸ್ಸೋರದವನು ತಂನ ಶಿಷ್ಯನಿಗೆ ಉತ್ತಮ ಬೆಂಣೆಯು ಎಂಣೆಯ ಹಾಗೆ ಯಿರುತ್ತದೆ ಎಂತಾ ಯಿವನು ಹೇಳುವದರಿಂದ ಎಂಣೆ ಉತ್ತಮವೆಂದು ತಿಳಿದುಕೊಳ್ಳುತ್ತೀಯೋ ಎಂದು ಕೇಳಿದನು ಆಗ ಅವರು ಎಂಣೆಗಾರನ ಹತ್ತರ ಹೋಗಿ ನಿಂಮಲ್ಲಿ ವೊಳ್ಳೆ ಎಂಣೆ ವುಂಟೋ ಎಂದು ಕೇಳಿದರು ಅವನು ಉಂಟು ಅದು ನೀರಿನ ಹಾಗೆ ಬಿಳುಪಾಗಿಯೂ ನಿರ್ಮಲವಾಗಿಯೂ ಯಿರುತ್ತದೆ ಎಂದನು ಆ ಬಸೋರದವನು ಹೇಳಿದ್ದು ಓಹೋ ನೀರು ಎಲ್ಲದಕ್ಕಿಂತ ಉತ್ತಮವೆಂದು ಪ್ರತ್ಯಕ್ಷವಾಗದೆ ನಂನ ಮನೆಯಲ್ಲಿ ನೀರು ತುಂಬಿದ ಪೀಪ ಉಂಟು ಅದರಿಂದ ನಿಮಗೆ ಬೇಕಾದಷ್ಟು ಕುಡಿಯಲಿಕ್ಕೆ ಕೊಡುತ್ತೇನೆ ಮನೆಗೆ ಬಂದ ಮೇಲೆ ಅವನು ಯಿವನಿಗೆ ರೊಟ್ಟಿಗಿಂತ ಬೆಂಣೆ ಉತ್ತಮವಾದದ್ದು ಬೆಂಣೆಗಿಂತ ಎಂಣೆ ಉತ್ತಮವಾದದ್ದು ಎಂಣೆಗಿಂತ ನೀರು ವುತ್ತಮವಾದದ್ದು ಎಂದು ನೀರು ಹೊರ್ತು ಏನು ಕೊಡಲಿಲ್ಲ ಕೂಫಾದಿಂದ ಬಂದ ಲೋಭಿಯು ವೊಳ್ಳೇದು ನಾನು ವ್ಯರ್ಥನಾಗಿ ಬರಲಿಲ್ಲ ಬೇಕಾದಷ್ಟು ಕಲಿತುಕೊಂಡೇನೆಂದು ಹೇಳಿ ಹೊರಟನು.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡ ಸಮಾಚಾರವು.

೧೮೪೪.

೧ನೆ ಪುಸ್ತಕ. ೫ನೆ ಅಂಕೆ.] ಬಳ್ಳಾರಿ ೧ನೆ ಮೇ [ಟಪಾಲ ದಸ್ತೂರಿಕೂಡಿ. ಕ್ರಯ ೨ದುಡ್ಡು.

Madras.

ಮದ್ರಾಸ.

ಯೀ ಕೋಸ್ತಿನಲ್ಲಿದ್ದ ೪೭ನೆ ಪಟಾಲಮು ಕೆಲವು ತಿಂಗಳ ಹಿಂದೆ ಸಿಂಧು ದೇಶಕ್ಕೆ ಹೋಗಬೇಕೆಂದು ಅಪ್ಪಣೆ ಹೊಂದಿ ಹಡಗವಂನೇರಿ ಮುಂಬೈಗೆ ಬಂದರು. ಅವರು ಮದ್ರಾಸ್ ಬಿಡುವಾಗ ಸಿಂಧುದೇಶದಲ್ಲಿ ಹೆಜ್ಜಾದ ಭತ್ತೆ ಸಿಕ್ಕುವದೆಂದು ನೆನಸಿದರು. ಮುಂಬೈಗೆ ಮುಟ್ಟಿದಮೇಲೆ ಆಸಿಂಧುದೇಶವು ಕುಂಪಣಿಯವರಿಗೆ ಪೂರ್ಣವಾಗಿ ಸ್ವಾಧೀನ ವಾದದರಿಂದ ಅಲ್ಲಿರುವ ಶಿಪಾಯಿ ಜನರಿಗೆ ವಿಶೇಷಭತ್ತೆ ಸಿಕ್ಕದೆಂದು ಕೇಳಿದರು. ಹೀಗಿರಲಾಗಿ ಅವರು ಗುಣುಗುಟ್ಟಿ ಕೆಲವರು ನಂಮ ಪಟಾಲಮು ಸಿಂಧುದೇಶಕ್ಕೆ ಹೋಗಲಿಕ್ಕಿಲ್ಲವೆಂದು ಹಟ ಮಾಡಿದರು. ಆದದರಿಂದಯೀ ಆಲೋಚನೆಮಾಡಿದಮುಖ್ಯಸ್ಥರಿಗೆಮಾರ್ಶಲ್ ಕೋರ್ಟಿನಯೆದುರಿಗೆತಂದು ಸುಬೇದಾರ್ ಮೇಜರ್ ಕಾಶೀರಾಮ್ ಆಮಾರ್ಶಲ್ ಕೋರ್ಟಿಗೆ ಪ್ರೆಸಿಡೆಂಟಾಗಿ ಶಿಕ್ಷೆನೇಮಿಸಿ ಠಾಣೆಗೆ ಕಳುಹಿಸಿದರು. ಯೀ ಅಪರಾಧಿಗಳ ಹೆಸರುಗಳ್ಯಾವವೆಂದರೆ ಶೇಖ್ ಫರೀದ್ ೬೧೩. ಫತ್ತೆಹಮ್ಮದ್ ೭೭೫. ಅಪ್ಪಯ್ಯ ೯೫೯. ಬಸವಣ್ಣ ೬೯೫. ರಂಗಣ್ಣ ೮೧೫. ಲಿಂಗಣ್ಣ ೬೫೦ ಬಂಕರ್ ಖಾನ್ ೧೩೦೪. ಅಲ್ಲೀಖಾನ್ ೯೮೧. ಅಪ್ಪಯ್ಯ ೯೮೩. ಅಪ್ಪಯ್ಯ ೯೮೫. ವೀರಯ್ಯ ೧೧೦೫.

Nizam's Government.

ನಿಜಾಮ್ ರಾಜರ ಸಂಸ್ಥಾನವು.

ಕಳೆದಮಾರ್ಚ್ ತಾರೀಕು ೨೧ಲ್ಲು ಸಿರ್ ರಾಜ ಉದ್ದೌಲಾ ರಾಜಾ ರಾಮಬಕ್ಷನಿಗೆ ಐದುಲಕ್ಷ ರುಪಾಯಿ ಇರೆಗ್ಯುಲರ್ ಪಟಾಲಮು ದವರಿಗೆ ನಾಲ್ಕು ತಿಂಗಳಿನ ಸಂಬಳ ಸಲ್ಲಿಸುವದಕ್ಕಾಗಿ ಕಳುಹಿಸಿದನು ಆದರೂ ಆಪಟಾಲಮಿನವರು ನಾಲ್ಕು ತಿಂಗಳುಗಳ ಸಂಬಳ ಸಾಲದು ತಮಗೆ ಸಲ್ಲತಕ್ಕ ಹದಿನಾಲ್ಕು ತಿಂಗಳುಗಳ ಸಂಬಳವೂ ಸಿಕ್ಕಲಿಲ್ಲ ಯೀಗ ನಾಲ್ಕು ತಿಂಗಳುಗಳ ಸಂಬಳವೇ ಮಾತ್ರ ಸಿಕ್ಕಿದರೆ ಆಗದು ಯೆಂದು ಗುಣುಗುಟ್ಟುತ್ತಾರೆ.

ಮಾಜಿ ಮುಖ್ಯಪ್ರಧಾನಿಯಾದ ಚಂದುಲಾಲನ ವಿಷಯವಾಗಿ ಒಂದು ಸುದ್ದಿಯುಂಟು ಅದೇನೆಂದರೆ ಅವನು ನಿಜಾಮರಿಗೆ ತಂನ ಮಗನಾದಬಾಲಪರ್ಸಾದ್ ಯಿಲ್ಲವೇ ಮೊಂಮಗನಾದ ರಾಜಾ ನಾರಾಯಣಪರ್ಸಾದ್ ಯಿವರಲ್ಲಿ ಒಬ್ಬನಿಗೆ ದಿವಾನನ ಉದ್ಯೋಗ ಕೊಟ್ಟರೆ ಯೆರಡುಕೋಟಿ ರುಪಾಯಿ ಕಾಣಿಕೆ ಕೊಡುತ್ತೇನೆಂದು ಅರಿಕೆ ಮಾಡಿಸಿದನು. ಚಂದುಲಾಲನಿಗೆ ಹಣ ವಿಲ್ಲವೆಂಬುವದು ಸರ್ವರಿಗೆ ಗೊತ್ತುಂಟು. ಆದರೆ ಅವನ ಮಗನಾದ ಬಾಲಪರ್ಸಾದನಿಗೆ ಯಥೇಷ್ಟ ಐಶ್ವರ್ಯ ಯಿರುವದರಿಂದ ಅವನು ಯೆರಡುಕೋಟಿಗಿಂತ ಹೆಚ್ಚುಹಣ ಬೇಕಾದರೆ ಸಲ್ಲಿಸ ಸಾಮರ್ಥ್ಯನಾಗಿದ್ದಾನೆ.

ಯೀ ಬಾಲಪರ್ಸಾದನಿಗೆ ತಂದೆಯ ಹಾಗೆ ಯಿಲ್ಲ ಆಮೊಂಮಗನಿಗೆ ಪ್ರಾಯ ಹದಿನೈದು ವರ್ಷ ಆದದರಿಂದ ಯಿವರಿಬ್ಬರಲ್ಲಿ ಒಬ್ಬನಿಗೆಯೀ ಉದ್ಯೋಗ ಸಿಕ್ಕಿದಂ ಚಂದುಲಾಲ್ ತಿರಿಗಿ ಕೆಲಸವೆಲ್ಲಾ ತಾನೇ ನೋಡುವನು.

Bengal.

ಬಂಗಾಳ ದೇಶ.

ಅಂಬಲದಲ್ಲಿ ೨೦ನೆ ಮಾರ್ಚಿನಲ್ಲಿ ಕೊಂಮಾಂಡರಿನ್ ಚೀಫ್ ಧೊರೆಗಳು ಬಂಗಾಳ ಪಟಾಲಮಿಗೆ ಅವರು ಹುಕುಮಿಗೆ ವಿರೋಧವಾಗಿ ಗುಣುಗುಟ್ಟಿ ನಾವು ಸಿಂದುದೇಶಕ್ಕೆ ಹೋಗುವದಿಲ್ಲವೆಂದು ಹೇಳಿದದರಿಂದ ನಾಚಿಕೆಯಾದ ಶಿಕ್ಷೆ ಕೊಟ್ಟು ಮಹಾಕವಾತುಮಾಡಿ ಆಪಟಾಲಮ್ ಬೇರೆವೆಲ್ಲಾ ಪಟಾಲಮುಗಳಮುಂದೆ ಯಿಟ್ಟು ಅವರ ಕೈಗಳಿಂದ ಆಯುಧಗಳಂನೂ ಅವರ ಶರೀರಗಳಿಂದ ವಸ್ತ್ರಗಳಂನೂ ತೆಗದು ಮೈದಾನಿನಲ್ಲಿ ಉಳಿದಸಂಬಳವಂನು ಅವರಿಗೆ ಸಲ್ಲಿಸಿ ಯೆಲ್ಲಿಗೆ ಮನಸ್ಸು ಬಂದಹಾಗೆ ಅವರಿಗೆ ನಾನಾ ಹಾಸ್ಯಮಾಡಿ ನಾಚಿಕೆ ಪಡಿಸಿ ದಂಡಿನಿಂದ ಹೊರಗೆ ಹಾಕಬೇಕೆಂದು ಅಪ್ಪಣೆ ಕೊಟ್ಟರು. ವಿಲಾಯಿತಿ ಸರ್ದಾರರು ಹೊರ್ತು ಬೇರೆ ಸುಬೇದಾರ್ ಮೇಜರ್ ಮೊದಲಾದವರೆಲ್ಲರಿಗೆ ಯೀ ಶಿಕ್ಷೆ ಆಯಿತು

ಮದ್ರಾಸಿನಿಂದ ಸಿಂಧುದೇಶಕ್ಕೆ ಹೋದ ಶ್ಪೈನಿಯರ ಕುಂಪನಿ ಅಲ್ಲಿತಂನ ಕೆಲಸ ಬಹು ಜಾಗ್ರತೆಯಿಂದ ಮಾಡಿದದರಿಂದ ಆದೇಶದ ಗೌವರ್ನರ್ ಧೊರೆಯಾದ ಸರ್ ಚಾರ್ಲ್ಸ್ ನೇಪಿಯರ್ ಅವರಿಗೆ ಬಹಳ ಸ್ತೋತ್ರವೂ ಮರ್ಯಾದೆಯೂ ಮಾಡಿ ತಿರಿಗಿ ತಂಮದೇಶಕ್ಕೆ ಕಳುಹಿಸಿದರು.

ಮದ್ರಾಸ್ ಕೋಸ್ತಿನಲ್ಲಿದ್ದ ಸುಂಕವು ಮಂನಾ ಆಗಬೇಕೆಂದು ಸುಪ್ರೀಮ್ ಕೌನ್ಸಿಲ್ ಅವರು ಕಳೆದ ಮಾರ್ಚಿ ತಿಂಗಳಲ್ಲಿ ಹುಕುಂ ಕೊಟ್ಟರು. ಯಿದರಿಂದ ರೈತನಿಹಣ ಬಹಳ ಕಡಿಮೆ ಯಾಗುವದರಿಂದ ಉಪ್ಪಿನ ಗುತ್ತಿಗೆ ಹೆಚ್ಚಿಸಬೇಕೆಂದು ಆಜ್ಞಾಪಿಸುತ್ತಾರೆ.

ಹಂನೊಂದನೆ ಪುಟದಲ್ಲಿ ತೀರದಿದ್ದ ಭೂಗೋಳದ ಸಾರವು.

Geography.—Continued.

೭ನೆ ಸಂಧಿ ಸಮುದ್ರವು.

ಭೂಮಿಯೆಂಬ ಗೋಳದ ಕೆಲವು ಸ್ಥಳದಲ್ಲಿ ಮಾತ್ರ ಸಂಚರಿಸಲಿಕ್ಕೆ ನೆಲವುಂಟು ಮಿಕ್ಕಾದ ಸ್ಥಳವೆಲ್ಲ ಸಮುದ್ರವೆಂಬ ಮಹಾಜಲದಿಂದ ತುಂಬಿರುತ್ತದೆ ಭೂಮಿಯ ಮೇಲಿರುವ ಜಲವನ್ನೂ ನೆಲವನ್ನೂ ಲೆಖ್ಖಮಾಡಿದರೆ ೩ ಪಾಲು ಜಲಯಿದ್ದು ಒಂದು ಪಾಲು ಮಾತ್ರ ನೆಲವಿರುವದು ಸಪ್ತದ್ವೀಪಗಳೂ ಸಪ್ತಸಮುದ್ರವೂಯಿರುತ್ತವೆಂದು ಹಿಂದುಜನರು ಅನ್ನುತ್ತಾರೆ ಆದರೆ ಸಮಸ್ತ ದೇಶಗಳನ್ನು ಸಂಚರಿಸಿ ನೋಡಿ ಅವುಗಳ ವರ್ತಮಾನವನ್ನು ತಂದ ವಿಲಾಯತಿಯವರು ೫ ಮುಖ್ಯವಾದ ಸಮುದ್ರಗಳನ್ನೂ ಆರು ಖಂಡಗಳನ್ನೂ ಗೊತ್ತುಮಾಡಿದ್ದಾರೆ ಯೀ ೫ ಸಮುದ್ರಗಳಾದರು ಕೆಲವು ಸ್ಥಳಗಳ ಮಧ್ಯದಲ್ಲಿ ಮಾತ್ರ ಭೂಮಿಯಿದ್ದು ಉಳಿದ ಸ್ಥಳಗಳಲ್ಲಿ ಪ್ರಾಂತ್ಯಯಿಲ್ಲದ ಕಾರಣ ಆ ಆರಕ್ಕೂ ಒಂದೆ ಮಹಾಸಮುದ್ರವೆಂದು ಹೆಸರಿಡಬಹುದು ಯೀರೀತಿಯಾಗಿ ಆಲೋಚಿಸಿದರೆ ೫ ಖಂಡಗಳು ಮಹಾಸಮುದ್ರದಲ್ಲಿ ದ್ವೀಪಗಳಹಾಗಿರುವವು ಆದರೆ ಆ ೫ ಮುಖ್ಯ ಸಮುದ್ರಗಳಿಗೆಯಿರುವ ಹೆಸರುಗಳು ಮುಂದೆ ಬರಿಯಲ್ಪಟ್ಟವೆ.

೧ ಅತ್ಯುತ್ತರವಾದ ಶೀತಪ್ರದೇಶದಲ್ಲಿರುವ ಸಮುದ್ರಕ್ಕೆ ಉತ್ತರಗಾರ ಸಮುದ್ರವೆಂದು ಹೆಸರು.

೨ ವಿಲಾಯಿತಿಯೂ ಆಫ್ರಿಕಾವೂಯೀ ೨ ಖಂಡಗಳಿಗೆ ಪಶ್ಚಿಮವಾಗಿಯೂ ಅಮೇರಿಕಾಖಂಡಕ್ಕೆ ಪೂರ್ವವಾಗಿಯೂ ಯಿರುವ ಸಮುದ್ರಕ್ಕೆ ಅತಾಂಲ್ಟಿಕ ಸಮುದ್ರವೆಂಬ ಹೆಸರು.

೩ ಆಫ್ರಿಕಾಖಂಡಕ್ಕೆ ಪೂರ್ವವಾಗಿಯೂ ಹಿಂದುದೇಶದ ಆಚೆ ಯೀಚೆ ತಡಿಯಾಗಿಯೂ ಯಿರುವ ಸಮುದ್ರಕ್ಕೆ ಹಿಂದುಸಮುದ್ರವೆಂಬ ಹೆಸರು ಯಿದಕ್ಕೆ ಮುಸಲಮಾನರಾದ ನಾವಿಕರು ಬಹರ್ ಓಮಾನ್ ಎಂಬ ಹೆಸರಂನಿಟ್ಟಿದ್ದಾರೆ.

೪ ಆಶಿಯಾಖಂಡದ ಪೂರ್ವದಲ್ಲಿಯೂ ಅಮೇರಿಕಾಖಂಡದ ಪಶ್ಚಿಮದಲ್ಲಿಯೂ ಯಿರುವ ಸಮುದ್ರಕ್ಕೆ ಮಹಾಸಮುದ್ರವೂ ಶಾಂತಸಮುದ್ರವೂ ಎಂಬ ಹೆಸರು.

೫ ಅತಿದಕ್ಷಿಣವಾದ ಶೀತಪ್ರದೇಶದಲ್ಲಿರುವ ಸಮುದ್ರಕ್ಕೆ ದಕ್ಷಿಣಗಾರ ಸಮುದ್ರವೆಂಬ ಹೆಸರು.

ಆದರೆ ಯೀಗ ನೆಲಭೂಮಿಯಾಗಿದ್ದ ಅನೇಕ ಶೀಮೆಗಳು ಪೂರ್ವದಲ್ಲಿ ಸಮುದ್ರದಿಂದ ಆವರಿಸಲ್ಪಟ್ಟವೆಂದು ಕಾಣುತ್ತದೆ ಯೀಪ್ರಕಾರ ಯೀಗಿನ ಕೊಂಕಣ ತೌಳವ ಮಲೆಯಾಳ ಮೊದಲಾದ ಶೀಮೆಗಳು ಪೂರ್ವದಲ್ಲಿ ಸಮುದ್ರದಿಂದ ಆವರಿಸಲ್ಪಟ್ಟವೆಂದು ಪರಶುರಾಮನ ಕಟ್ಟುಕಥೆಯಾದ ಚರಿತ್ರೆಯಿಂದ ಅನುಸರಿಸಬಹುದು.

ಸಮುದ್ರದ ನೀರು ಬಹಳ ಉಪ್ಪಾಗಿರುವದರಿಂದ ಬೇರೆ ನೀರಿಗಿಂತ ಭಾರವಾಗಿದೆ ಅದುಕಾರಣ ನದಿಯಲ್ಲಾಗಲಿ ಕೆರೆಯಲ್ಲಾಗಲಿ ಯೀಜುವದು ಕಷ್ಟ ಸಮುದ್ರದಲ್ಲಿ ಯೀಜುವದು ಅಷ್ಟು ಪ್ರಯಾಸವಿಲ್ಲ ಸಮುದ್ರದ ನೆಲವು ಭೂನೆಲದ ಪ್ರಕಾರವೆ ಎತ್ತರ ತಗ್ಗಾಗಿರುತ್ತದೆ ಕೆಲವು ಸ್ಥಳಗಳಲ್ಲಿ ಬಹುಸ್ವಲ್ಪ ನೀರು ಯಿರುವದರಿಂದ ಸಮುದ್ರದಲ್ಲಿ ಸಂಚರಿಸುವ ಹಡಗಗಳು ಸಹಾ ನಾಶನವಾಗುತ್ತಾವೆ ಬೇರೆ ಸ್ಥಳಗಳಲ್ಲಿ ಸೀಸದಗುಂಡಿಗೆ ಮೈಲುಉದ್ದ ಹಗ್ಗ ಕಟ್ಟಿದರೂ ನೆಲಸಿಕ್ಕಲಿಲ್ಲ ಹ್ಯಾಗಾದರು ಹೆಚ್ಚಾದ ಸ್ಥಳಗಳಲ್ಲಿ ಸುಮಾರು ೮ ಸಾವಿರ ಮೊಳ ಆಳವಾಗಿದ್ದೀತೆಂದು ನೆನಸುತ್ತಾರೆ ಸಮುದ್ರದ ನೀರಿನ ಒಳಗೆ ಸುಮಾರು ೬೦ ಮೊಳ ಪರಿಯಂತರ ಸೂರ್ಯನ ಕಿರಣಗಳ ಪ್ರಕಾಶಬೀಳುತ್ತದೆ ಅಲ್ಲಿಂದ ಕೆಳಗೆ ಯಲ್ಲಾ ಕತ್ತಲೆಯಾಗಿಧೆ ಆದರು ಆ ಅಗಾಧವಾದ ಸ್ಥಳಗಳಲ್ಲಿ ಖದ್ಯೋತವೆಂಬ ಹುಳದ ವೋಪಾದಿಯಲ್ಲಿ ಪ್ರಕಾಶಿಸುವಂಥಾ ನಾನಾವಿಧವಾದ ದೊಡ್ಡವುಗಳಾಗಿಯೂ ಸಣ್ಣವುಗಳಾಗಿಯೂ ಯಿರುವ ಜಂತುಗಳು ಜೀವಿಸಿರುವದರಿಂದ ಅವುಗಳ ಪ್ರಕಾಶದಿಂದ ಸ್ವಲ್ಪಾದರು ಬೆಳಕು ಉಂಟಾಗುತ್ತದೆ.

The Silver Wheel.

ಬೆಳ್ಳಿ ಚಕ್ರವು.

ಅಮೇರಿಕಾ ದೇಶದಲ್ಲಿರುವ ಫಿಲದೆಲ್ಫಿಯಾ ಪಟ್ಟಣದಲ್ಲಿ ಬಂದರ ಮಾರ್ಗದಿಂದ ಬರುವ ಹರಕುವಸ್ತ್ರವುಳ್ಳ ಒಬ್ಬ ಬಡಹುಡುಗನು ಒಳ್ಳೆವಸ್ತ್ರವುಳ್ಳ ಹುಡುಗರ ಗುಂಪಿನ ಬಳಿಗೆ ಬಂದು ನೋಡಿರಿ ನೋಡಿರಿ ನನಗೆ ಬೆಳ್ಳಿಚಕ್ರವು ಸಿಕ್ಕಿತು ಎಂದು ಕೂಗಿ ಹೇಳಿದನು ಆ ಹುಡುಗರೆಲ್ಲರು ನಗಾಡಿ ಹಾಸ್ಯಮಾಡಿದರು ಒಬ್ಬ ದ್ರವ್ಯವುಳ್ಳ ಹಡಗದ ಯಜಮಾನನ ಮಗನಾದ ನೆಹೆಮಿಯಾಸ್ ಬುದ್ದನು ಅವನಂನು ನೋಡಿ ಆಹಾ ಕ್ರಿಸ್ತ್ಮಸ್ ದಿವಸದಲ್ಲಿ ನಾನು ಹಂನೆರಡು ರುಪಾಯಿಗಳಂನು ಖರ್ಚುಮಾಡಲಿಕ್ಕೆ ಇಷ್ಟು ದಾನವಂನು ಹೊಂದಿದೆ ಯೀ ಹುಡುಗನು ಒಂದು ಚಕ್ರ ಸಿಕ್ಕಿದದರಿಂದ ಹೆಚ್ಚಳ ಪಡುತ್ತಾನೆಂದಂದನು ದೇವದತ್ತನೆಂಬ ಅಭಿಪ್ರಾಯವಾದ ಹೆಸರುಳ್ಳ ಥಿಯೊದೋರನು ಯಿವನ ಮಾತುಕೇಳಿ ಒಂದುಕ್ಷಣ ಮುಖವಂನು ನೆಲಕ್ಕೆ ಬೊಗ್ಗಿಸಿ ಆಮೇಲೆ ಧೈರ್ಯಪಟ್ಟು ಹಂನೆರಡು ರುಪಾಯಿಗಳಂನು ಖರ್ಚುಮಾಡಿದರೋ ಯಿರಲಿ ಒಂದು ಚಕ್ರವಂನು ಯಿಟ್ಟುಕೊಳ್ಳುವದು ಅದಕ್ಕಿಂತ ಉತ್ತಮವೆಂದು ಕೂಗಿದನು.

ದೇವದತ್ತನು ತಂನ ಚಕ್ರವಂನು ಕೆಲವುವಾರಗಳ ಪರಿಯಂತರ ತಂನ ಚೀಲದಲ್ಲಿಟ್ಟುಕೊಂಡ ತರುವಾಯ ಒಂದು ಹಂಣುಗಳ ಅಂಗಡಿಯಂನು ನಡಿಸುವ ಅವನ ದೊಡ್ಡಪ್ಪನು ಅವನಂನು ನೋಡಿ ದೇವದತ್ತನೇ ನಿಂನ ಚಕ್ರವು ನಿನ್ನ ಚೀಲದಲ್ಲಿರುವದರಿಂದ ಹೆಚ್ಚಾಗುವದಿಲ್ಲ ಅದಂನು ಹೊರಗೆ ಯಿಟ್ಟುಕೊಳ್ಳಬೇಕೆಂದು ಹೇಳಿದನು ಆ ಹುಡುಗ ದೊಡ್ಡಪ್ಪನ ಮಾತಿನ ಅಭಿಪ್ರಾಯವಂನು ತಿಳಿಯದೆ ಯಿದ್ದದರಿಂದ ಯಿವನು ಸ್ಪಷ್ಟವಾಗಿ ಬುದ್ಧಿಯಂನು ಹೇಳಿ ನಿಂನ ಚಕ್ರವಂನು ತೆಗದುಕೊಂಡು ಬಜಾರದಲ್ಲಿ ಹಂಣುಗಳಂನು ಕೊಂಡು ನಂನ ಅಂಗಡಿಯಲ್ಲಿಟ್ಟು ಜನರಿಗೆ ಮಾರಿಕೊಡೆಂದಂದನು.

ದೇವದತ್ತನು ಯಿವನ ಮಾತಿನ ಪ್ರಕಾರವೇ ಮಾಡಿ ಮೊದಲನೆ ದಿವಸದಲ್ಲಿ ಯೆರಡಷ್ಟು ಹಣವಂನು ಸಂಪಾದಿಸಿ ಕೊಂಡು ಯೆರಡನೆ ದಿವಸದಲ್ಲಿ ಅದೇ ಕೆಲಸ ಮಾಡಿ ಸ್ವಲ್ಪ ಕಾಲದ ತರುವಾಯ ದೊಡ್ಡಪ್ಪನು ತನಗೆ ಬಿಟ್ಟುಕೊಟ್ಟ ಕೋಣೆ ತುಂಬುವಹಾಗೆ ದಿನದಿನಕ್ಕೆ ಹಂಣುಗಳಂನು ಮಾರಲಿಕ್ಕೆ ಹುಡುಕುತ್ತಿದ್ದನು ಅವನ ದೊಡ್ಡಪ್ಪನು ದೇವದತ್ತನು ವಂಚನೆ ಯಿಲ್ಲದೆಯೂ ಜಾಗ್ರತೆಯಾಗಿಯೂ ತಂನ ಕೆಲಸ ಮಾಡುವದಂನು ನೋಡಿ ಅವನಂನು ತಂನ ವ್ಯಾಪಾರದಲ್ಲಿ ಪಾಲುಗಾರನಂನು ಮಾಡಿ ಕೆಲವುವಿಧದ ಜಿನಸುಗಳಂನು ಪ್ರತ್ಯೇಕವಾಗಿ ವ್ಯಾಪಾರವಂನು ಮಾಡಲಿಕ್ಕೆ ಅವನಿಗೆ ಕೊಟ್ಟುಬಿಟ್ಟನು ಆಮೇಲೆ ದೇವದತ್ತನು ತಂನ ದೊಡ್ಡಪ್ಪನ ಪಾಲುಗಾರನಾಗಿ ತಂನ ವ್ಯಾಪಾರದ ಕೆಲಸವಂನು ಬಹಳ ಬುದ್ಧಿಯಿಂದಲೂ ಸತ್ಯದಿಂದಲೂ ಎಚ್ಚರಿಕೆಯಿಂದಲೂ ನಡಿಸುವದರಿಂದ ಮೂರು ನಾಲ್ಕು ವರ್ಷದೊಳಗೆ ಹಣಗಳಂನು ಕೂಡಿಸಿ ತಂನ ದೊಡ್ಡಪ್ಪನ ಸಂಗಡ ಸಮಪಾಲು

ಗಾರನಾದನು ಹ್ಯಾಗೆಂದರೆ ದೇವದತ್ತನು ಎಷ್ಟು ಹಣದಿಂದ ವ್ಯಾಪಾರವನು ಮಾಡಿದನೋ ಅಷ್ಟೇ ಹಣ ತಾನೇ ಕೊಟ್ಟು ಅವನಹಾಗೆ ಯಜಮಾನನಾದನು.

ಅವನು ಯೀ ಪ್ರಕಾರ ಪಠಗಳನು ಚಂನಾಗಿ ಯಿಟ್ಟು ನಾವಿಕರು ಹೇಳುವ ಪ್ರಕಾರ ಘಾಳಿಯ ಮುಂಚೆ ಹೋಗಿ ಬಹು ಆಶ್ಚರ್ಯವಾದ ತ್ವರೆಯಿಂದ ಮುಂಚಿನಡದನು ಯಿಪ್ಪತ್ತೊಂದು ವರ್ಷದವನಾಗಿ ಯಿರುವಾಗ್ಯೆ ತನಗೆ ಸಿಕ್ಕಿದ ಹಣವನ್ನೆಲ್ಲ ತೆಗದುಕೊಂಡು ಒಬ್ಬ ದೊಡ್ಡ ಜೌಳಿ ಸಾವುಕಾರನ ಸಮಸ್ತ ಖಂಡಸಾಲೆಯನು ಕ್ರಯಕ್ಕೆ ತೆಗದುಕೊಂಡನು ಯೀ ಕೆಲಸದಲ್ಲಿ ಅವನಿಗೆ ಬಹಳ ಲಾಭ ಬಂದದರಿಂದ ಅವನು ಶಾರೀವರ್ತಕರಲ್ಲಿ ಒಬ್ಬನಾಗಿ ಹಡಗಗಳನು ಸಿದ್ಧಮಾಡಿ ಹಿಂದುದೇಶಕ್ಕೆ ಕಳುಹಿಸಲಾರಂಭಿಸಿದನು ಮತ್ತು ಸ್ವಲ್ಪ ಕಾಲದ ತರುವಾಯ ತನಷ್ಟು ದ್ರವ್ಯವುಳ್ಳ ಸಾವುಕಾರನ ಮಗಳನು ಮದುವೆ ಮಾಡಿಕೊಂಡು ಹೆಚ್ಚುಕಡಮೆ ಹಂನೆರಡು ಲಕ್ಷ ರೂಪಾಯಿಯ ಆಸ್ತಿಯುಳ್ಳವನಾದನು ಆಮೇಲೆ ನಂಕಬೀದಿ ಎಂಬ ಪೇಟೆಯಲ್ಲಿ ಬಹು ಅಲಂಕಾರವಾದ ಮನೆಯನು ತೆಗದುಕೊಂಡು ಗಾಡಿ ಕುದುರೆಗಳನು ಯಿಟ್ಟುಕೊಂಡು ಶಾರೀವ್ಯಾಪಾರವನು ನಡಿಸುತ್ತಿದ್ದನು ಆದರೆ ತಂನ ಸುಖದ ಆರಂಭವನು ಮರತು ಹೋಗದ ಹಾಗೆ ತಂನ ಬರೆಯುವ ಪೆಟ್ಟಿಗೆಯ ಮುಂಚೆ ಒಂದು ಚಿಲ್ಲಿಚಕ್ರವನು ಗೋಡೆಯಲ್ಲಿ ಹಚ್ಚಿ ತಂನ ಮುದ್ರೆಯಲ್ಲಿ ನಹ ಚಿಲ್ಲಿಚಕ್ರದ ರೂಪವನು ಕೆತ್ತಿಸಿದನು.

ದೇವದತ್ತನು ಯೀ ಪ್ರಕಾರ ಸುಖದಿಂದಿರುವಾಗ್ಯೆ ಬಿಸಲು ಕಾಲದಲ್ಲಿ ಒಂದಾನೊಂದು ಸೆಖೆದಿವಸದಲ್ಲಿ ಅವನು ತಂನ ಚಾವಡಿಯಲ್ಲಿ ಕುಳಿತುಕೊಂಡಿರುವಾಗ ಕ್ಷೀಣನಾದ ಒಬ್ಬ ಬಡವನು ಒಳಗೆಬಂದು ತನಗೆ ಚಾಕ್ರಿ ಕೊಡಬೇಕೆಂದು ಬೇಡಿಕೊಂಡನು ಅವನ ವಸ್ತ್ರಗಳು ಬಹಳ ಜೀರ್ಣವಾದವುಗಳು ಅವನ ಟೋಪಿಯು ಬಹಳ ಹಳತು ಅವನ ಮೊಚ್ಚೆಗಳು ತುಂಡಾಗಿ ಬೀಳಲಿಕ್ಕಿದ್ದವು ದೇವದತ್ತನು ಅವನನು ನೋಡಿ ನಿಮಗೆ ಎಂಥಾ ಚಾಕ್ರಿ ಬೇಕೆಂದು ಕೇಳಿದನು ಆ ಬಡವನು ಯಾವದಾದರು ಆದೀತು ಆದರೆ ನಂನ ತಂದೆಯು ಸಾವುಕಾರನಾಗಿ ತಂನ ಕೆಲಸವನು ನನಗೆ ಕಲಿಸಿದದರಿಂದ ವ್ಯಾಪಾರದಲ್ಲಿ ನನಗೆ ಚಾಕ್ರಿ ಸಿಕ್ಕಿದರೆ ಒಳ್ಳೆಯದೆಂದು ಹೇಳಿ ಕಂಣೀರು ಬಿಟ್ಟನು ದೇವದತ್ತನು ಅವನನು ಚಂನಾಗಿ ನೋಡಿ ಮುಂಚೆ ಅವನನು ನೋಡಿ ನೆನಪುಮಾಡಿ ನಿಂಮ ಹೆಸರೇನೆಂದು ಕೇಳಿದನು ಅವನು ತಲೆಬೊಗ್ಗಿಸಿ ಮೆಲ್ಲಗೆ ಸಂಣ ಶಬ್ದದಿಂದ ಎರೆಮಿಯಾಸ್ ಬುದ್ದನು ಎಂದನು ದೇವದತ್ತನು ಆಹಾ ನೀವು ಆರಂಚಿರಡು ರೂಪಾಯಿ ಖರ್ಚುಮಾಡಿ ಬಹಳ ದಿವಸ ಆಯಿತ್ತಲ್ಲವೋ ಎಂದನು ಎರೆಮಿಯನು ಅಹುದು ಆದರೆ ಚಿಲ್ಲಿಚಕ್ರ ತೆಗದುಕೊಂಡುಬಂದ ಆ ಸಂಣ ಬಡಹುಡುಗನನು ನಾನು ಮರತುಬಿಡಲಿಲ್ಲ ಅವನು ತಂನ ಚಕ್ರವನು ಎಷ್ಟುಜಾಗ್ರತೆಯಿಂದ ಕಾದುಕೊಂಡನೋ ಅಷ್ಟುಜಾಗ್ರತೆಯಾಗಿ ನಂನ ಸಹಸ್ರ ರೂಪಾಯಿಗಳನು ಕಾದುಕೊಂಡಿದ್ದೆನಾದರೆ ಯೀ ಪ್ರಕಾರ ನಿಂಮ ಮುಂಚೆ ಬಡಪರದೇಶಿಯಾಗಿ ನಿಲ್ಲುತ್ತಿದ್ದಿಲ್ಲವೆಂದಂದನು ದೇವದತ್ತನು ನಗಾಡಿ ಅವನಕ್ಕೈ ಹಿಡಿದು ಅವನನು ಒಂದು ಉದ್ಯೋಗದಲ್ಲಿ ಸೇರಿಸಿ ಅವನು ಒಳ್ಳೆಬುದ್ಧಿಯನು ಪಡಕೊಂಡು ತಿರಿಗಿ ಸಾವುಕಾರನಾಗುವ ಪರಿಯಂತರ ಅವನಿಗೆ ಸಹಾಯ ಮಾಡಿದನು.

ಹದಿನಾಲ್ಕನೆ ಪುಟದಲ್ಲಿ ತೀರದೆಯಿದ್ದ ಯಿಂಗ್ಲಾಂಡ್ ರಾಜ್ಯದ ಪೂರ್ವಚರಿತ್ರೆ

The History of England.——Continued.

೫ನೆ ಸಂಧಿ.

ಯೋಹಾನನೂ ೩ನೆ ಹೆನ್ರಿಯೂ ಮೊದಲನೆ ಅ್ಯಡ್ವರ್ಡನೂ ಯೀ ೩ ಅರಸರ ಕಾಲದಲ್ಲಿ ೧೧೯೯ನೆ ವರ್ಷ ಆಗಳ್ಯ ೧೩೦೭ನೆ ವರ್ಷ ಪರಿಯಂತರ ನಡದಸಂಗತಿಗಳು.

ರಿಚಾರ್ಡನು ಮರಣಕಾಲಕಬರದು ತಮ್ಮನಾದ ಯೋಹಾನನಿಗೆ ರಾಜ್ಯವನ್ನು ಕೊಟ್ಟಿದ್ದನು ಆದರೆ ಬೇರೆ ಒಬ್ಬ ತಮ್ಮನ ಚಿಕ್ಕಮಗನು ಯಿರುವದರಿಂದ ಯೋಹಾನನ ಶತ್ರುಗಳು ಯೀ ಹುಡುಗನಿಗೆ ಸಹಾಯಮಾಡಿ ಅವನನ್ನು ಸಿಂಹಾಸನದಲ್ಲಿರಿಸಲಿಕ್ಕೆ ಪ್ರಯತ್ನಮಾಡಿದರು ಯೀ ಪ್ರಕಾರ ಯುದ್ಧವುಂಟಾಗಿ ಯೀ ಹುಡುಗನಿಗೆ ಸ್ವಲ್ಪಕಾಲ ಪರಿಯಂತರ ಅನುಕೂಲವಾಯಿತು ಕಡೆಯಲ್ಲಿ ಅವನು ಅಪಜಯಪಟ್ಟು ದೊಡ್ಡಪ್ಪನಿಗೆ ಕೈಸೆರೆಸಿಕ್ಕಿ ಅಂದಿನಿಂದ ಕಾಣದೆಹೋದನು ಕೆಲವರು ಅವನು ಸೆರೆಯಿಂದ ಓಡಿಹೋಗುವ ಅಪೇಕ್ಷೆಯಲ್ಲಿ ಕಿಟಕಿಯಿಂದ ಹಾರಿ ತಲೆಬಡದು ಸತ್ತುಹೋದನೆಂದೂ ಕೆಲವರು ಅವನ ದೊಡ್ಡಪ್ಪನು ಅವನನ್ನು ಕೊಂದುಹಾಕಲಿಕ್ಕೆ ಕೆಲವರಿಗೆ ಅಪ್ಪಣೆಕೊಟ್ಟನು ಆದರೆ ಕೊಂದುಹಾಕಲಿಕ್ಕೆ ಯಾರಿಗೂ ಮನಸ್ಸಿಲ್ಲದದರಿಂದ ಆ ದೊಡ್ಡಪ್ಪ ತಾನೇ ಸೆರೆಗೆಹೋಗಿ ಅವನ ಎದೆಗೆ ತಿವಿದನೆಂದೂ ಹೇಳುತ್ತಾರೆ ಯೀ ಹುಡುಗನನ್ನು ನಾಶನ ಮಾಡಿದ್ದಾರಲ್ಯ ಯೋಹಾನನಿಗೆ ಅವನ ಪ್ರಜೆಗಳು ಯಿನ್ನು ಹೆಚ್ಚು ಹಗೆಮಾಡಿದರು ಮುಂಚೆ ನಾರಲ್ಯ ಇಂಗ್ಲಿಷ್‍ರಾಜ್ಯಕ್ಕೆ ಕೂಡಿಯಿದ್ದ ನೋರ್ಮಂದಿ ರಾಜ್ಯವು ಯೀ ಅರಸನಿಗೆ ತಿರಿಗಿಬಿದ್ದು ಫ್ರಾನ್ಸ್ ಅರಸನಿಗೆ ಒಳಗಾಯಿತು ಅದರಮೇಲೆ ಯೋಹಾನನು ರೋಮಾನ್ ಕ್ರೈಸ್ತರ ಮಹಾಗುರುವಿನ ಸಂಗಡ ತರ್ಕಮಾಡಿದದರಿಂದ ಯಿವನು ಸಮಸ್ತದೇಶಕ್ಕೆ ಶಾಪಕೊಟ್ಟು ದೇವಾಲಯಗಳನ್ನೆಲ್ಲಾ ಮುಚ್ಚಲಿಕ್ಕೂ ಸತ್ತವರ ಶವಗಳನ್ನು ಹೂಳಿಡದೆ ಮಾರ್ಗಗಳಲ್ಯಾದರೂ ಹೊಲಗಳಲ್ಯಾದರೂ ಬಿಸಾಡಲಿಕ್ಕೂ ವಿವಾಹಗಳನ್ನು ಸಮಾಧಿಸ್ಥಳಗಳಲ್ಲಿ ಆಚರಿಸಲಿಕ್ಕೂ ಯೀ ಮೊದಲಾದ ಬೇರೆಬೇರೆ ಶಿಕ್ಷೆಗಳನ್ನು ನೇಮಿಸಿದನು ಅದಲ್ಲದೆ ಯೀ ಯೋಹಾನನೆಂಬ ಅರಸನಿಗೆ ಯಾರೂ ಮಾನವೂ ಪ್ರೀತಿಯೂ ವಿಧೇಯತ್ವವೂ ಮಾಡಬಾರದೆಂದೂ ಅವನನ್ನು ಯಾರಾದರು ರಾಜ್ಯದಿಂದ ತೆಗದು ಹಾಕಿದರೆ ಮಹಾ ಪುಣ್ಯವಾದೀತೆಂದೂ ಆ ಮಹಾಗುರುವು ಎಲ್ಲರಿಗೆ ತಿಳಿಸಿದನು.

ಹೀಗಿರುವಾಗ್ಯೆ ಫ್ರಾನ್ಸ್ ಅರಸನು ಇಂಗ್ಲಾಂಡ್ ರಾಜ್ಯವು ತನಗೆ ಸಿಕ್ಕಿದರೆ ಒಳ್ಳೆದೆಂದೆಣಿಸಿ ಯುದ್ಧಮಾಡಲಿಕ್ಕೆ ಬರುವಾಗ ಇಂಗ್ಲಿಷ್‍ಜನರು ತಮ್ಮ ಅರಸನಿಗೆ ತಾವು ಎಷ್ಟು ಹಗೆಮಾಡಿದರೂ ಪರದೇಶಿಯು ತಮಗೆ ಬೇಡೆಂದು ನಿಶ್ಚೈಸಿ ತಮ್ಮ ಅರಸನ ಸಹಾಯಕ್ಕೆ ೬೦ ಸಾವಿರ ಮಂದಿಯನ್ನು ತಂದರು ರೋಮಾಯರ ಮಹಾಗುರುವು ಯೀ ವರ್ತಮಾನವನ್ನು ಕೇಳಿ ಯೋಹಾನನು ತನಗೆ ಯಿನ್ನುಮೇಲೆ ವಿಧೇಯನಾಗುವದಾದರೆ ತಾನು ಶಾಪವನ್ನು ತಿರುಗಿಸುವೆನೆಂದು ಬರೆದನು ಆಗಲು ಯೋಹಾನನು ಬಹು ವಿನಯವಾಗಿ ತಾನು ಗುರುವಿನ ದಯೆಯಿಂದಲೆ ಅರಸನಾಗಿದ್ದೇನೆಂದು ಅರಿಕೆಮಾಡಿ ಯಿನ್ನುಮೇಲೆ ಕರವನ್ನು ಸಲ್ಲಿಸುವೆನೆಂದು ವಚನ ಕೊಟ್ಟನು ಆದರೆ ಗುರುವಿನ ಅಪ್ಪಣೆಯಿಂದ ಯುದ್ಧಕ್ಕೆ ಬಂದ ಫ್ರಾನ್ಸ್ ಅರಸನು ಯಿಷ್ಟುದೂರ ಪರಿಯಂತರ ಬಂದು ಸುಂಮನೆ ತಿರಿಗಿ ಹೋಗುವದಕ್ಕೆ ಮನಸ್ಸಿಲ್ಲದ ಕಾರಣ ಯುದ್ಧವನ್ನು ಮುಂಚೆ ನಡಿಸಿದನು ಆಗ್ಯೆ ಯಿಂಗ್ಲಿಷ್‍ಜನರು ಯುದ್ಧಮಾಡಿ ಅನುಕೂಲವನ್ನು ಹೊಂದಿ ಅವನ ಹಡಗಗಳೆಲ್ಲಾ ನಾಶನ ಮಾಡಿ ಅವನನ್ನು

ತನ್ನದೇಶಕ್ಕೆ ಓಡಿಸಿದರು ಯೀ ಪ್ರಕಾರ ಮೋಹಾನನು ತನ್ನ ಶತ್ರುಗಳ ಕೈಯಿಂದ ತಪ್ಪಿದಮೇಲೆ ಮುಂಚಿನಕಿಂತ ಹೆಚ್ಚಾದ ಗರ್ವವನ್ನೂ ಅನ್ಯಾಯವನ್ನೂ ನಡಸಿದನು ಅದುಕಾರಣ ಅವನ ಪ್ರಜೆಗಳಲ್ಲಿ ದೊಡ್ಡವರು ತಮಗೆ ಕಾಪಾಡಿಕೊಳ್ಳುವ ಅಪೇಕ್ಷೆಯಲ್ಲಿ ಒಟ್ಟುಕೂಡಿಕೊಂಡು ಅರಸನಿಗೆ ಹೆದ್ರಿಸಿ ಅತನಿಗೆ ಮೇನೂ ಗತಿಯಿಲ್ಲದಸಮಯದಲ್ಲಿ ಮುಂಚಿನಬಿರುದಾವಳಿಯ ಹೊರ್ತಾಗಿ ಯಿನ್ನು ಅಧಿಕವಾದ ಅಧಿಕಾರಗಳನ್ನೂ ನೇಮನಿಷ್ಟೆಗಳನ್ನೂ ಅರಸನಿಂದ ಹೊಂದಿದರು ಹೀಗೆ ಅವರು ಒಂದುಶಾಸನಕಾಗದವನುಬರೆಸಿ ಅರಸನ ಹಸ್ತರತಂದಾಗಯೀತನು ೧೨೧೫ನೆ ವರ್ಷದ ಜೂನತಿಂಗಳ ೧೫ನೆ ತಾರಿಖಿನಲ್ಲಿ ಅದಕ್ಕೆ ರುಜುವುಹಾಕಿದನು ಯೀಶಾಸನದಿಂದಲೇ ಇಂಗ್ಲಿಷ್ ನ್ಯಾಯಗ ಮುಖ್ಯವಾದ ನಿಬಂಧನೆಗಳು ನೇಮಿಸಿರುವದರಿಂದ ಅದಕ್ಕೆ ಮಹಾಶಾಸನವೆಂದು ಯೀಗಿನಪರಿಯಂತರ ಹೆಸರುಂಟು ಯೀಶಾಸನದಲ್ಲಿ ಪ್ರಜೆಗಳಿಗೋಸ್ಕರ ನೇಮಿಸಿದ ಮುಖ್ಯವಾದ ನಿಬಂಧನೆಗಳು ಯಾವವೆಂದರೆ.

೧ ಸಮಸ್ತರಾಜ್ಯದಲ್ಲಿ ಒಂದೇ ಪ್ರಕಾರ ತೂಕ ಅಳತೆ ನಡಿಯಬೇಕು.

೨ ವ್ಯಾಪಾರಸ್ಥರಿಂದ ರಾಜ್ಯನಡೆಯಲ್ಲಿ ನೇಮಿಸಿದ ಗುತ್ತಿಗೆಗಳ ಹೊರ್ತಾಗಿ ಅರಸನಾದರೂ ಮತ್ಯಾರಾದರೂ ಬೇರೆಪ್ರಕಾರದ ಹಣಗಳನ್ನೂ ಜಾಸ್ತಿಯಾಗಿ ತೆಗಿಯಕೂಡದು

೩ ಯಿಂಗ್ಲಿಷ್ ಪ್ರಜೆಗಳೆಲ್ಲರು ಮನಸ್ಸಿಗೆಬಂದಹಾಗೆ ರಾಜ್ಯವನ್ನು ಬಿಟ್ಟು ಹೋಗಲೂ ತಿರುಗಿಬರಲೂ ಬಹುದು.

೪ ಪೂರ್ವಕಾಲಆರಭ್ಯನೇಮಿಸಿದ ಬಿರಿದುಗಳನ್ನುಯಾವ ಅರಸನಾದರು ಮನಸ್ಸಿಗೆಬಂದಹಾಗೆ ತಿರಿಗಿಸಕೂಡದು.

೫ ಮಾರ್ಗಸಂಕ ಮೊದಲಾದವುಗಳನ್ನು ಕಟ್ಟುವಬಗ್ಗೆ ಪ್ರಜೆಗಳು ಪೂರ್ವಮರ್ಯಾದೆಯಲ್ಲಿ ನೇಮಿಸಿದ್ದದನ್ನೇ ಹೊರ್ತು ಮತ್ತೇನೂ ಸಲ್ಲಿಸಕೂಡದು.

೬ ಒಬ್ಬೊಬ್ಬನು ತನ್ನ ಆಸ್ತಿಯನ್ನು ಮನಸ್ಸಿಗೆ ಬಂದಹಾಗೆ ಮರಣಜಾತಕಮಾಡಿ ವಿಭಾಗಿಸಬಹುದು ಮರಣಜಾತಕ ಮಾಡದೆ ಯಾವನಾದರು ಸತ್ತರೆ ಆಸ್ಥಿ ಅವನಬೊಜ್ಜಲಮಕ್ಕಳಿಗೆ ಸಿಕ್ಕುವದು.

೭ ಅರಸನಸೇವಕರಲ್ಲಿ ಯಾವನಾದರುಕುದುರೆಗಾಡಿಮೊತ್ತು ಕತ್ತೆ ಮೊದಲಾದವುಗಳನ್ನು ಉಂಟಾದವರಿಂದ ಅಪ್ಪಣೆ ಹೊರ್ತು ಕ್ರಯ ಕೊಟ್ಟಹೊರ್ತು ತೆಗಿಯಕೂಡದು.

೮ ಅರಸನ ನ್ಯಾಯಸ್ಥಾನಗಳು ಮುಂಚಿನ ಮರ್ಯಾದೆಯಪ್ರಕಾರ ದೇಶದಲ್ಲಿಸಂಚರಿಸದೆ ನಿಶ್ಚೈಸಿದಸ್ಥಳಗಳಲ್ಲಿ ಮಾತ್ರ ಯಿರಬೇಕು ದೊಡ್ಡವನೂ ನೀಚನೂ ಎಂಥವನಾದರೂ ಫಿರ್ಯಾದಿಮಾಡಿದರೆ ಅವನಫಿರ್ಯಾದಿ ಕೇಳದೆಯಿರಕೂಡದು.

೯ ನಿಶ್ಚಯವಿಲ್ಲದ ವರ್ತಮಾನಕ್ಕೋಸ್ಕರವಾದರೂ ಬರೇಸಂದೇಹಕ್ಕೋಸ್ಕರವಾದರೂ ಒಬ್ಬನಿಗೆ ನ್ಯಾಯತೀರಿಸಕೂಡದು ಎಲ್ಲಾನ್ಯಾಯಕ್ಕೆ ತಕ್ಕವಾದ ಸಾಕ್ಷಿಯಿರಬೇಕು.

೧೦ ಅಪರಾಧಿಗೆ ಅವನವನ ಸಮಜಾತಿಯವರು ಬಹಿರಂಗವಾಗಿ ದೇಶದಲ್ಲಿನಡವಡಿಕೆಯಾದಧರ್ಮಶಾಸ್ತ್ರಗಳ ಪ್ರಕಾರ ನ್ಯಾಯವನ್ನು ತೀರಿಸಿದಹೊರ್ತು ಯಾರನ್ನೂ ಸೆರೆಯಲ್ಲಿಹಾಕಲೂ ಆಸ್ಥಿಯನ್ನು ಮುದ್ರಾಪಣೆ ಮಾಡಲೂ ಗಡಿದಾಟಿಸಲೂ ಮತ್ತೇನಾದರುಕಷ್ಟವುಪದ್ರಪಡಿಸಲೂ ಕೂಡದು.

೧೧ ಒಂದೊಂದು ಅಪರಾಧಕ್ಕೆ ಆದರದರತಕ್ಕ ಶಿಕ್ಷೆಯೂ ತಕ್ಕ ದಂಡಣೆಯೂ ಯಿರಬೇಕು ಆದರು ಎಲ್ಲಾಆಸ್ಥಿ ನಾಶನವಾಗುವಷ್ಟುತಕ್ಕ ದಂಡಣೆಯಾರಿಗೂ ಮಾಡಕೂಡದು ಒಕ್ಕಲಿಗರಿಗೆ ತಕ್ಕ ದಂಡಣೆ ಮಾಡಿದರೆ ಅವರ ವ್ಯವಸಾಯ ಸಾಗುವಲ್ಲಿ ಸಾಮಾನಗಳನ್ನುತೆಗಿಯಕೂಡದು.

An Account of Hindostan.——Chapter First.

ಹಿಂದೂದೇಶದ ವರ್ಣನೆಯು.

ಹಿಂದುಸ್ಥಾನವೆಂಬ ಅರ್ಧ ದ್ವೀಪವು ಉತ್ತರದಲ್ಲಿ ಹಿಮಾಲಯ ಪರ್ವತಗಳಿಂದ ಮೊದಲ್ಗೊಂಡು ಅವುಗಳಿಂದಸಹಾ ಗಂಗಾ ಸಿಂಧು ಯೆರಡುಮಹಾನದಿಗಳಮೂಲವಾದ ದಕ್ಷಿಣದಲ್ಲಿ ಕನ್ಯಾಕುಮಾರಿ ಲಂಕಾಪರಿಯಂತರಕ್ಕು ವಿಸ್ತರಿಸಲ್ಪಟ್ಟು ಭೂಮಧ್ಯಕ್ಕೆ ಸಮೀಪವಾಗಿದೆ ಯೀ ಹಿಂದುದೇಶದಲ್ಲಿ ಛಳಿಯೂ ಸೆಖೆಯೂ ಉಂಟಾಗುವ ಸೀಮೆಗಳು ನಾನಾಪ್ರಕಾರವಾಗಿ ಯಿರುತ್ತವೆ ಹಿಮಾಲಯಪರ್ವತಗಳು ೧೭ ಸಾವಿರ ಮೊಳಕ್ಕಿಂತ ಮೇಲೆ ಉನ್ನತವಾಗಿದ್ದು ಬಹುಛಳಿಯಾದ ಉತ್ತರದೇಶಗಳಾಗಿರುತ್ತವೆ ದಕ್ಷಿಣದೇಶವು ಪ್ರಜ್ವಲಿಸುವ ಸೂರ್ಯನಿಗೆ ಯೀಡಾಗಿದ್ದು ಬೇಕಾಗದಸಮಯದಲ್ಲಿ ಮಳೆಗಾಲವನ್ನು ಹೊಂದುವದರಿಂದ ಉತ್ತಮವಾದ ಅಕ್ಕಿ ತೆಂಗಿನಕಾಯಿ ಕಬ್ಬು ಮೊದಲಾದ ಫಲಗಳಿಗೆ ಯೋಗ್ಯವಾದ ದೇಶವಾಗಿರುತ್ತದೆ.

ಯೀದೇಶದ ಪಶ್ಚಿಮ ಪೂರ್ವಗಳಲ್ಲಿ ಸಮುದ್ರವು ಗಡಿಯಾಗಿಯೂ ಮಾರ್ಗವಾಗಿಯೂ ಯಿರುತ್ತದೆ ಉತ್ತರದಲ್ಲಿ ಹಿಮಾಲಯ ಪರೋಪಮಿಸ ಮೊದಲಾದ ಪರ್ವತಗಳು ಯಿರುವದರಿಂದ ಅವುಗಳನ್ನುದಾಟಿ ಕಾಲುದಾರಿಯಿಂದಬರುವದು ಬಹಳಕಷ್ಟವು ಯೀದೇಶವು ಚಾಕಾಕಾರವಾಗಿರುತ್ತದೆ ಆಚಾಕವನ್ನು ಗಂಗಾನದಿಸಮುದ್ರಕ್ಕೆ ಕೂಡುವಸ್ಥಳಆಗ್ನೇಯ ಸಿಂಧುನದಿಸಮುದ್ರದಲ್ಲಿ ಬೀಳುವಸ್ಥಳ ಪರಿಯಂತರ ಒಂದು ಗೆರೆಹಾಕಿದರೆ ಯೆರಡುಸಮವಾದತ್ರಿಕೋಣಗಳಾಗಿ ಯೆಣಿಸಬಹುದು ಗಂಗಾಸಾಗರದಿಂದ ಸಿಂಧುಸಾಗರಪರಿಯಂತರ ಒಂದು ಗೆರೆಮಾಡಿದರೆ ಸಮಸ್ತಹಿಂದುದೇಶದ ಅಗಲವನ್ನು ತೋರಿಸುವ ಯೀಗೆರೆಯು ೬೬೦ ಹರಿದಾರಿದೀರ್ಘವಾಗಿದ್ದೀತು ಉತ್ತರದಲ್ಲಿ ಲವಕಡಿಸ್ಥಳ ಮೇಲಿನಸಿಂಧುನದಿತೀರದಲ್ಲಿಯೂ ಕಾಶ್ಮೀರದೇಶದಲ್ಲಿಯೂ ಯಿರುವ ಲದಾಕಪಟ್ಣವು ದಕ್ಷಿಣವಾದ ತುದಿ ಕನ್ಯಾಕುಮಾರಿಯು ಲದಾಕಪಟ್ಣದಿಂದ ಅಗ್ರಪಟ್ಣದಾಟಿ ನರ್ಮದಾತೀರಕ್ಕೆ ಹೋಗುವದು ೩೪೦ ಹರದಾರಿ ನರ್ಮದಾತೀರದಿಂದ ಕನ್ಯಾಕುಮಾರಿ ಪರಿಯಂತರ ೪೫೦ ಹರದಾರಿ ಹಾಗಾದರೆ ಲದಾಕಿನಿಂದ ಕನ್ಯಾಕುಮಾರಿಪರಿಯಂತರ ಸುಮಾರು ೮೦೦ ಹರದಾರಿಮಾರ್ಗವು ದಕ್ಷಿಣವಾದ ತ್ರಿಕೋಣದ ಕಾಲುಗಳು ಮಲಿಯಾಳ ತೌಳವ ಕೊಂಕಣ ಮುಂಬತೀರಗಳೂ ಚೋಳಮಂಡಲತೀರವೂ ನರ್ಮದಾತೀರವೂ ಉತ್ತರವಾದತ್ರಿಕೋಣದಕಾಲುಗಳು ಹಿಮಾಲಯಪರ್ವತವೂ ಪರೋಪಮಿಸಪರ್ವತವೂ ನರ್ಮದಾತೀರವೂ ಉತ್ತರವಾದತ್ರಿಕೋಣದಸಿತ್ತಿಯಲ್ಲಿ ಸಿಂಧು ಶತದ್ರು ಗಂಗಾ ಬ್ರಂಹ್ಮಪುತ್ರಿಯೆಂಬ ನಾಲ್ಕು ಮುಖ್ಯವಾದ ನದಿಗಳ ಬುಗ್ಗೆಗಳುಂಟು ಮೇಲಿನ ತ್ರಿಕೋಣದ ಅಳತೆ ೧೩೯೧೦೦ ಚಚ್ಚೌಕಹರದಾರಿ ಕೆಳಗಿನತ್ರಿಕೋಣದಅಳತೆ ೧೨೦೮೮೦ ಚಚ್ಚೌಕಹರದಾರಿ ಸಮಸ್ತಹಿಂದುದೇಶಕ್ಕೆ ಸುಮಾರು ೨೬೦೦೦೦ ಚಚ್ಚೌಕಹರದಾರಿ ಸಿಂಧುನದಿ ಆರಭ್ಯ ಕನ್ಯಾಕುಮಾರಿ ಪರಿಯಂತರ ದೇಶದ ತೀರವನ್ನುಹಿಡಿದು ಫಕೆಮಾರ್ಗದಿಂದ ಹೋಗುವದಕ್ಕೆ ೮೬೦ ಹರದಾರಿದೂರ ಮಾರ್ಗವಿದ್ದೀತು ಕನ್ಯಾಕುಮಾರಿಯಿಂದ ಗಂಗಾಸಾಗರ ಪರಿಯಂತರ ಅದೇಪ್ರಕಾರ ೮೪೦ಹರದಾರಿಹಿಂದುದೇಶದವು ತೀರಪ್ರಾಂತ್ಯಗಳನ್ನುಸುತ್ತಲುಹೋಗುವದು ಅಸಾಧ್ಯವಾಗಿರುವದು.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡಸಮಾಚಾರವು.

೧೮೪೪.

೧ನೆ ಪುಸ್ತಕ. ೭ನೆ ಅಂಕೆ.] ಬಳ್ಳಾರಿ ೧೫ನೆ ಮೇ [ಟಪಾಲ ದಸ್ತೂರಿಕೂಡಿ. ಕ್ರಯ ೨ದುಡ್ಡು

Bambay

ಮುಂಬೈ.

ಮುಂಬೈ. ಆದಿತ್ಯವಾರ ೨೧ನೆ ಏಪ್ರಿಲ್. ಮಧ್ಯಾಹ್ನದಲ್ಲಿ ಹನ್ನೆರಡು ಘಂಟೆ ಆದಮೇಲೆ ಕೆಲವು ಪಾರ್ಶಿಜನರು ಗುಂಪುಕೂಡಿ ತಂಮ ಜಾತಿಯವರಲ್ಲಿ ಶ್ರೇಷ್ಠನಾದ ಮಂಚರ್ಜಿ ಹೋರ್ಮಸ್ಜಿ ಯೆಂಬವನ ಮೇಲೆಬಿದ್ದು ಅವನಂನು ಕತ್ತಿಗಳಿಂದ ತಿವಿದು ಕೊಂದುಹಾಕಿದರು. ಹತವಾದ ಯಿವನು ಮುಂಬೈ ಚಬುಕ್ ಯೆಂಬ ವರ್ತಮಾನ ಕಾಗದವಂನು ಬರೆಯುವವನ ಸಹೋದರನಾಗಿ ಆಮುಂಬೈ ಚಬುಕಿನ ಆಫಿಸಿನಲ್ಲಿ ಉದ್ಯೋಗಸ್ಥನಾಗಿದ್ದನು. ಕಳೆದ ಯೊಂಭತ್ತು ವರ್ಷದಿಂದ ಮುಂಬೈಯಲ್ಲಿಯಿರುವ ಪಾರ್ಶಿಜನರು ಆ ವರ್ತಮಾನ ಕಾಗದವಂನು ಬರೆಯುವವನಿಗೆ ಬಹಳ ದ್ವೇಷ ಮಾಡುತ್ತಾಬಂದರು ಯಾಕೆಂದರೆ ಅವನು ಬಹಳಸಾರಿ ತಂನ ಜಾತಿಯವರ ಜ್ಞಾನಹೀನವಾದ ಮರ್ಯಾದೆಗಳಿಗೂ ಅವರ ಮತದ ಆಚರಣೆಗಳಿಗೂ ತಂನ ವರ್ತಮಾನ ಕಾಗದದಲ್ಲಿ ನಿಂದಿಸುತ್ತಿದ್ದನು. ಯೀಹತ ಮಾಡಿದವರಲ್ಲಿ ಕೆಲವರು ಆಯಾ ವೇಳೆಯಲ್ಲಿ ಆ ವರ್ತಮಾನ ಕಾಗದವಂನು ಬರೆಯುವವನಿಗೆ ಭಯತೋರಿಸಿದದರಿಂದ ಮಾಜಿಸ್ತ್ರೇಟಿಗೆ ಜಾಮೀನು ಕೊಟ್ಟಿರುತ್ತಿದ್ದರು. ಪೋಲೀಸ್ ಜನರು ಜಾಗ್ರತೆಯಾಗಿದ್ದುಯೀ ಅಪರಾಧಸ್ಥರಲ್ಲಿ ಮುಖ್ಯಸ್ಥರಂನು ಹಿಡಿದಿದ್ದಾರೆ.

ಪಂಜಾಬ್. ಯೀದೇಶದಲ್ಲಿರುವ ಶಿಖ್ಖಜನರು ಈಗ ರಾಜಾಧಿಕಾರವಂನು ನಡಿಸುವ ಹೀರಾಸಿಂಗನಿಗೆ ಅವಿಧೇಯರಾಗಿ ಅವನಿಗೆಯೊಂದೊಂದುವೇಳೆ ಹೆದರಿಸಿ ಅವನಕೈಯಿಂದ ಯಿನಾಮು ಹಣಗಳಂನು ತೆಗದುಕೊಳ್ಳುತ್ತಾ ಬರುತ್ತಾರೆ. ರಾಜಹೀರಾಸಿಂಗನು ಯಿವರೆಪರಿಯಂತರ ರಾಜಭಂಡಾರದಿಂದ ಅವರುಕೇಳಿದಷ್ಟುಅವರಿಗೆ ಕೊಡುತ್ತಾ ಬಂದನು. ಭಂಡಾರದಹಣ ತೀರಿದ ಮೇಲೆ ಯೇನು ಮಾಡುವನೊ. ಆಗಲು ಶಿಖ್ಖಜನರು ಕಾಟಕಾಯಿಮಾಡಿ ಹೀರಾಸಿಂಗನಂನು ಕೊಂದುಹಾಕಿ ರಾಜ್ಯವಂನು ಹಾಳುಮಾಡುವರೆಂದು ಕಾಣುತ್ತದೆ. ಹೀಗಾದರೆ ಲೋರ್ದ್ ಬಹದೂರವರುಕುಂಪಣಿಯವರರಾಜ್ಯಕ್ಕೆ ನಷ್ಟ ಆಗದಹಾಗೆಸೈನ್ಯವಂನುತೆಗದುಕೊಂಡು ಪಂಜಾಬಿನಲ್ಲಿ ಸೇರಿ ಅದಂನು ಕುಂಪಣಿಯವರಿಗೆವಶಮಾಡಿ ರಾಜನೀತಿಯಿಂದಲೇ ಆಳಿಕೊಳ್ಳಲಿಕ್ಕೆ ಆರಂಭಿಸುವದು ಅವಶ್ಯವಾಗುವದು. ಕುಂಪಣಿಯವರುಯೀಪ್ರಕಾರಮಾಡಿದರೆ ಆದೇಶಸ್ಥರಿಗೆಕ್ಷೇಮವಾದೀತು ಪಂಜಾಬ್ ದೇಶವು ಕುಂಪಣಿಯವರಿಗೆ ಸ್ವಾಧೀನವಾದರೆ ಹಿಮಕ್ಕೆ ಆಲಯವಾದ ಮೇರುಪರ್ವತಕ್ಕೂ ರಾಮೇಶ್ವರಕ್ಕೂ ಮಧ್ಯದಲ್ಲಿರುವ ಸಮಸ್ತಹಿಂದುದೇಶವು ಅವರದೇ ಆಗುವದು.

ಸಿಂಧುದೇಶವು. ಇಂಗ್ಲಂಡ್ ದೇಶದಲ್ಲಿರುವ ಕೋರ್ಟ್ ಆಫ್ ದಿರೆಕ್ತರ್ಸ್ ಯೆಂಬ ಕುಂಪಣಿ ಸರ್ವಾಧಿಕಾರಿಗಳು ಲೋರ್ದ್ ಬಹದೂರ ಸಿಂಧುದೇಶವಂನು ಬಲಾತ್ಕಾರದಿಂದ ತೆಗದುಕೊಂಡರೆಂಬ ವರ್ತಮಾನವಂನುಕೇಳಿ ರಾಣಿಯ ಪ್ರಧಾನಿಗಳಸಂಗಡಮಾತಾಡಿ ಯೀಲೋರ್ದ್ ಬಹದೂರ ಅನ್ಯಾಯಮಾಡಿದರೆಂದು ನಮಗೆ ಕಾಣುತ್ತದೆ ಯಂತಾಹೇಳಿ ತಿರ್ಯವರಾಗಿ ಮೊದಲು ಮುಂಬೈಗೆ ಆಮೇಲೆ ಬಂಗಾಳದೇಶಕ್ಕೆ ಕಳುಹಿಸಲ್ಪಟ್ಟ ಸಿಂಧುದೇಶದ ಅಮೀರರಿಗೆ ಅಲ್ಲಿ ಬಿಡುಗಡೆಮಾಡಿ ಕೆಲವು ಲಕ್ಷರುಪಾಯಿ ಪಿಂಚನ್ ಗಳಂನು ಕೊಡಬೇಕೆಂದು ಅರಿಕೆಮಾಡಿದರು ಪ್ರಧಾನಿಗಳು ಯೀಮಾತಿಗೆ ಒಪ್ಪಿಕೊಳ್ಳುವರೆಂದು ವರ್ತಮಾನ ಉಂಟು.

ಮೊದಲನೆ ಪುಸ್ತಕ ಹದಿನೆಂಟನೆ ಪುಟದಲ್ಲಿ ತೀರದೆಯಿದ್ದ ಭೂಗೋಳದಸಾರವು

Geography.——Continued.

೮ನೆ ಸಂಧಿ ಸಮುದ್ರದ ಚಲನೆಗಳು.

ಯಿಷ್ಟುದೊಡ್ಡನೀರಿನಸಮೂಹಕ್ಕೆ ಕೆರೆನೀರಿನಗುಣವಿದ್ದರೆ ಅದು ೧ ವರ್ಷದವೊಳಗೆ ಕೊಳತು ಅದರ ನಾತದಿಂದ ನಾನಾವಿಧವಾದವ್ಯಾಧಿರೋಗಗಳುಂಟಾಗಿ ಮನುಷ್ಯರಿಗೂ ಮೃಗಗಳಿಗೂ ಮರಣಪ್ರಾಪ್ತಿಯಾದೀತು ಆಪ್ರಕಾರ ಆಗದಹಾಗೆ ಸರ್ವಕರುಣೆಯುಳ್ಳ ದೇವರು ಯೀ ಮಹಾಜಲಕ್ಕೆ ಯೆರಡು ಗುಣಗಳನ್ನುಂಟುಮಾಡಿದ್ದಾನೆ.

೧ ಯೀನೀರು ಬಹಳಉಪ್ಪಾಗಿರುವದರಿಂದ ಅದು ಬೇರೆನೀರಿನಷ್ಟುಬೇಗ ಕೊಳತುಹೋಗುವದಿಲ್ಲ.

೨ ಅದು ಯೆಂದಿಗೂ ಮಗಚುತ್ತಾ ಯಿರುವದರಿಂದ ಹರಿಯುವ ನದಿಯ ನೀರಿನಪ್ರಕಾರ ಕೆಟ್ಟುಹೋಗದೆಯಿರುತ್ತದೆ.

ಆದರೆ ಸಮುದ್ರದಚಲನೆಗಳು ಯೆರಡುವಿಧವಾಗಿವೆ.

೧ ಸ್ವಲ್ಪವಾದರು ಘಾಳಿಬೀಸುತ್ತಲೆ ಅದರ ತ್ರಾಣದಿಂದ ತೆರೆಗಳು ಯೇಳುತ್ತಾವೆ ಪೂರ್ಣವಾಗಿ ಘಾಳಿಯಿಲ್ಲದಸಮಯದಲ್ಲಿ ಸಮುದ್ರವು ಕೆಲವು ತಾಸುಗಳಪರಿಯಂತರ ಶಾಂತವಾಗಿದ್ದೀತು ಆದರೆ ಘಾಳಿ ಹೆಚ್ಚಾಗುವಾಗ ತೆರೆಗಳು ಹೆಚ್ಚುಹೆಚ್ಚು ಉಕ್ಕುತ್ತಾವೆ ಬಿರುಘಾಳಿ

ಯಾವರಿ ಗುಡ್ಡಗಳಂತೆ ೨೫-೩೦ ಮೊಳ ಯೆತ್ತರವಾದ ತೆರೆಗಳು ಮಹಾ ಘೋಷದಿಂದ ಹೊರಳುತ್ತಾ ಬರುತ್ತಾವೆ ಯೀ ನಿತ್ಯವಾದ ಚಲನೆಯಿಂದ ಸಮುದ್ರದನೀರು ಶುದ್ಧವಾಗುವದಲ್ಲದೆ ಸಮೀಪವಾದ ದೇಶಗಳ ಘಾಳಿಗೆಸಹಾ ಗುಣಕೊಡುತ್ತದೆ.

೨ ಯೀ ತೆರೆಗಳ ಚಲನೆಯ ವಿನಹಾ ಸಮುದ್ರದ ನೀರು ಮಹಾನದಿಗಳ ಪ್ರಕಾರ ಒಂದುಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹರಿಯುತ್ತದೆ ಹ್ಯಾಗಂದರೆ ಶೀತಪ್ರದೇಶಗಳಿಂದ ತಂಪಾದನೀರು ಉಷ್ಣಪ್ರದೇಶಕ್ಕೆ ಹರಿಯುತ್ತದೆ ಉಷ್ಣಪ್ರದೇಶದಲ್ಲಿ ಸೂರ್ಯನ ಕಿರಣಗಳಿಂದ ಬಿಸಿಯಾದನೀರು ಶೀತಪ್ರದೇಶಗಳಿಗೆ ಹರಿಯುತ್ತದೆ ಮತ್ತು ಭೂಮಿಯು ಸೂರ್ಯನ ಸುತ್ತಲು ಹೋಗುವ ಮಾರ್ಗದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹೊರಳಾಡುತ್ತಾ ಹೋಗುವದರಿಂದ ಸಮುದ್ರಗಳನೀರು ಹಿಂದಕ್ಕೆ ತುಳುಕುವದರಲ್ಲಿ ಪಶ್ಚಿಮಕ್ಕೆ ಹರಿಯುವ ಪ್ರಕಾರವಿರುತ್ತದೆ.

ಯಿದುಹೊರ್ತಾಗಿ ಮಹಾ ನದಿಗಳ ದಡಗಳಲ್ಲಿರುವ ಮರಗಳು ನೀರಿನ ಸೆಳವಿನಿಂದ ಸಮುದ್ರಕ್ಕೆ ಸೇರಿ ಮೇಣುಮರಗಳು ಮುಂತಾಗಿ ಯಿಲ್ಲದೆ ಯಿರುವ ದೂರವಾದ ಉತ್ತರ ದೇಶಗಳಿಗೆ ಸಮುದ್ರದ ಸೆಳವು ಸೆಳಕೊಂಡು ಹೋಗುತ್ತಾ ಯಿರುವದರಿಂದ ಅಲ್ಲಿರುವ ಜನರಿಗೆ ಯಾವಾಗಲೂ ಆ ಮರಗಳು ಕಟ್ಟಿಗೆ ಮುಂತಾದ ಪ್ರಯೋಜನಕ್ಕೆ ಬರುತ್ತವೆ ಯೀ ನಿತ್ಯವಾದ ಚಲನೆಗಳ ಹೊರ್ತಾಗಿ ಕೆಲವು ಸ್ಥಳಗಳಲ್ಲಿ ಸುಳಿಗಳಿರುತ್ತವೆ ಯಿವುಗಳಲ್ಲಿ ಕೆಲವು ಸಮುದ್ರದೊಳಗಿರುವ ಕಲ್ಲುಗಳಿಂದ ಉಂಟಾಗಿ ನಿತ್ಯವಾಗಿ ಅದೇಸ್ಥಳದಲ್ಲಿರುತ್ತವೆ ಕೆಲವು ಮನುಷ್ಯರಿಗೆ ತಿಳಿಯದ ಕಾರಣದಿಂದ ಅಕಸ್ಮಾತ್ತಾಗಿ ಪ್ರಾರಂಭಿಸಿ ಸ್ವಲ್ಪಕಾಲದಮೇಲೆ ನಿಂತು ಹೋಗುತ್ತಾವೆ ಯೀಪ್ರಕಾರ ಯಿರುವದರಿಂದ ಒಂದುಸಾರಿ ಯಿಂಗ್ಲಿಷ್ ಸರಕಾರದವರ ೧೦ ದೊಡ್ಡ ಹಡಗಗಳು ಯೇನೂ ಆಪತ್ತಿಲ್ಲದ ಸ್ಥಳದಲ್ಲಿ ದಾಟಿ ಹೋಗುವಾಗ ಮಹಾಸುಳಿ ಯುಂಟಾಗಿ ಮೊದಲು ೧ ಹಡಗವೂ ಅದರ ಸಹಾಯಕ್ಕೆ ಉಳಿದ ಹಡಗಗಳೂ ಹತ್ತಿರ ಬರುವಾಗ ಯಿವು ಸಹಾ ಮುಣುಗಿ ಹೋಗಿ ೨ ಸಾವಿರ ಮಂದಿಗೆ ಜೀವಘಾತ ವಾಯಿತು ಅದರಲ್ಲಿಂದ ಯಿಬ್ಬರೇ ತಪ್ಪಿದರು.

History of Alexander's Entry into Hindostan.

೩ನೆ ಅಲಕ್ಸಾಂದ್ರಸು ತನ್ನ ಸೈನ್ಯದ ಸಂಗಡ

ಹಿಂದುದೇಶವನ್ನು ಪ್ರವೇಶಿಸಿದ ಕಥೆಯು.

ಗ್ರೀಕರ ಹಳೇಕವೀಶ್ವರರಲ್ಲಿ ಉತ್ತಮನಾದ ಹುಮೇರನಿಗೆ ಹಿಂದುದೇಶವು ಯಿನ್ನೂ ಗೊತ್ತಾಗಿರಲಿಲ್ಲ ಆದರೆ ಅವರ ಚರಿತ್ರೆಯನ್ನು ಮೊದಲನೆಸರ್ತಿ ಬರೆದ ಹೀರೋಡೋತಸು ಯೀಲೋಕದ ಪೂರ್ವದಿಕ್ಕಿನಲ್ಲಿ ನಿವಾಸವಾಗಿಯೂ ಮೇಸೊಂದು ಪ್ರಾಣಿಗಳನ್ನು ತಿನ್ನದೆಯೂ ಯಿರುವ ಕಪ್ಪಾದ ಹಿಂದು ಜನರನ್ನು ಕುರಿತೂ ಅವರ ದೇಶದಲ್ಲಿರುವ ಕುದುರೆ ಮೊದಲಾದ ಮೃಗಗಳನ್ನೂ ಪಕ್ಷಿಗಳನ್ನೂ ನದಿಗಳಲ್ಲಿ ಸಿಕ್ಕುವ ಬಂಗಾರಗಳನ್ನೂ ಮರಗಳಮೇಲೆ ಬೆಳಿಯುವ ಹತ್ತಿಯೆಂಬ ಹೂದಲನ್ನೂ ಅದರಿಂದಮಾಡಿದ ಉತ್ತಮವಾಗ ವಸ್ತ್ರಗಳನ್ನೂ ಕುರಿತು ಮೊದಲನೆಯವನಾಗಿ ವರ್ತಮಾನ ಕೊಡುತ್ತಾನೆ. ಯೇಸುಕ್ರೀಸ್ತನ ಮುಂಚೆ ೧೦೪ನೆ ವರುಷ ದಾರಯ್ಯ ಫಾರ್ಸ್‌ದೇಶದ ಮಹಾರಾಜನ ಹತ್ತಿರ ೧೭ ವರ್ಷ ಪರಿಯಂತರ ವೈದ್ಯನಾಗಿದ್ದ ಕ್ತೇಸೀಯ್ಯಾಸು ಸತ್ಯ ವರ್ತಮಾನಗಳಿಗೆ ಕೆಲವು ಸುಳ್ಳುಕಥೆಗಳನ್ನು ಕೂಡಿಸಿ ವಿವರವಾದ ಹಿಂದುದೇಶದ ಕಥೆಯನ್ನು ಕೊಟ್ಟಿದ್ದಾನೆ ಅವನು ನೋಡಿದ ಜಿನಸುಗಳು ಯಾವವೆಂದರೆ ಯುದ್ಧದ ಆನೆಗಳೂ ಹಿಂದುಮಾತು ಆಡುವ ಗಿಣಿಪಕ್ಷಿಗಳೂ ಮಂಗಗಳೂ ಉತ್ತಮವಾದ ಉಕ್ಕಿನಿಂದ ಮಾಡಿದ ಖಡ್ಗಗಳೂ ಶ್ಯಾಲುಗಳೂ ರಕ್ತವರ್ಣದ ಉತ್ತಮವಾದ ಕುರಿ ಆಡುಗಳೂ ಅನು ಹೊತ್ತು ಮಾನಸ ಸರೋವರಾದಿ ಹಿಮಾಲಯ ಸರೋವರಗಳಿಗೆ ಹೋಗುವ ಜಾತ್ರೆಗಳನ್ನೂ ಗುಲಾಬಿನ ನೀರು ಮಾಡುವದೂ ಅಫೀಮು ಮಾಡುವದೂ ಕಾಶ್ಮೀರದಲ್ಲು ಯಿರುವ ಅರಸರ ತೋಟಗಳನ್ನೂ ಕುರಿತು ಕಥೆ ಹೇಳುತ್ತಾನೆ. ಅವನ ಮೇಲೆ ಯೇಸುಕ್ರಿಸ್ತನ ಮುಂಚೆ ೩೩೬ನೆ ವರ್ಷದಲ್ಲಿ ರಾಜ್ಯವನ್ನು ಹೊಂದಿದ ಅಲೆಕ್ಸಾಂದ್ರಸು ತಾನೆ ಸಿಂಧುನದಿಗೆ ಸಮೀಪವಾದ ದೇಶಗಳ ಪರಿಯಂತರ ಸೈನ್ಯದ ಸಂಗಡ ಹೋಗಿ ನಿಶ್ಚಯ ವರ್ತಮಾನವನ್ನು ಸಂಪಾದಿಸಿದನು ಅಲೆಕ್ಸಾಂದ್ರಸು ಫಾರ್ಸಿದೇಶವನ್ನು ವಶಮಾಡಿಕೊಂಡು ಜಯವುಳ್ಳವನೆಂದು ಸಿಂಧುದೇಶದ ಪ್ರಾಂತ್ಯಗಳಲ್ಲಿ ಕೀರ್ತಿವುಳ್ಳವನಾದದರಿಂದ ಸಿಂಧುನದಿಯ ಹತ್ತಿರ ಯಿರುವ ತಕ್ಷಿಲಸೀಷಿಯ ರಾಯನು ಅವನಿಗೆ ಯೆದುರುಬಂದು ಪೋರವ ಮೊದಲಾದ ಶತ್ರುಗಳಿಗೆ ತನ್ನ ಸಾಹಿತ್ಯವಾಗಿ ಯುದ್ಧಮಾಡಬೇಕೆಂದು ಅಲೆಕ್ಸಾಂದ್ರನಿಗೆ ಬೇಡಿಕೊಂಡನು ಯೀ ತಕ್ಷಿಲರಾಯನು ಬೇರೊಬ್ಬ ಶಿಶುಗುಪ್ತರಾಯನ ಸಂಗಡ ಅಲೆಕ್ಸಾಂದ್ರನಿಗೆ ಸಹಾಯವನ್ನು ಕೊಟ್ಟದರಿಂದ ಯಿವನು ಮುಂಚೆ ಆಲೋಚಿಸಿದ ಪ್ರಕಾರ ಹಿಂದುದೇಶದಲ್ಲಿ ಪ್ರವೇಶಿಸಿದನು ಯೀಮಾರ್ಗದಲ್ಲಿ ಅವನು ಪರೋಪಮಿಸ ಪರ್ವತವನ್ನು ದಾಟಿ ಕಬೂಲ್ ನದಿ ತಗ್ಗಿನಲ್ಲಿ ಮುಂದೆಹೋಗಿ ಹಿಂದುಕೂ ಅಥವಾ ಗ್ರಾವಕಾಶವೆಂಬ ಮಹಾಹಿಮವುಳ್ಳ ಪರ್ವತಗಳನ್ನು ನೋಡಿ ಪರ್ವತ ನಿವಾಸಿಗಳಲ್ಲಿ ಕೆಲವರನ್ನು ಅಪಜಯಮಾಡಿ ಕೆಲವರಿಗೆ ಹೆದರಿಸಿ ಮಲ್ಲಾಯಿ ಪಟ್ಣ ಸಮೀಪದಲ್ಲಿ ಸಿಂಧುನದಿಗೆ ಮುಟ್ಟಿದನು ಅದು ಯೀಗಿನ ಶಿಶಾವರ ಪಟ್ಣವಾಗಿ ತೋರುತ್ತದೆ ಅಲ್ಲಿ ಮೊದಲನೆಸಾರಿ ಆನೆಬೇಟೆ ಆಡಿದನು ಆಮೇಲೆ ಅಲ್ಲಿಂದ ದೋಣಿಗಳಲ್ಲಿಳಿದು ತಕ್ಕ ಸ್ಥಳದಲ್ಲಿ ದೋಣಿಗಳಿಂದ ವೊಂದು ಸಂಕಮಾಡಿಸಿ ತನ್ನ ಸೈನ್ಯವನ್ನು ಸಿಂಧುನದಿ ದಾಟಿಸಿದನು ಅಲ್ಲಿಂದ ವಳ್ಳೆಬೈಲಾದ ಸ್ಥಳಕ್ಕೆ ಹೋಗಿ ತಕ್ಷಿಲರಾಜ್ಯದ ಅರಸನ ಪಟ್ಣಕ್ಕೆ ಬಂದನು ಅಲ್ಲಿಂದ ಮುಂದೆಹೋಗಿ ಅನೇಕ ರಾಯರ ಸಂಗಡಲೂ ಜನಾಂಗಗಳ ಸಂಗಡಲೂ ಯುದ್ಧಮಾಡಿ ಸಮಸ್ತ ಪಂಚನದವೆಂಬ ಯೀಗಿನ ಪಂಜಾಪ ದೇಶವನ್ನು ಸಂಚರಿಸಿದನು. (ಯೇಸುಕ್ರಿಸ್ತನು ಹುಟ್ಟುವ ಮುಂಚೆ ೩೨೬ನೆ ೩೨೫ನೆ ವರ್ಷದಲ್ಲಿ) ಅಲೆಕ್ಸಾಂದ್ರನು ಮಳೆಕಾಲ ಆರಂಭದಲ್ಲಿ ಪೂರ್ವಕ್ಕೆ ಹೋಗಿ ಹಿದಸ್ಪ ಅಥವಾ ಜಿಲಂನ್ ಎಂಬ ನದಿಯನ್ನು ದಾಟಿ ಪೋರವನ ಸಂಗಡ ದೊಡ್ಡ ಯುದ್ಧಮಾಡಿ ಅವನಿಗೆ ಅಪಜಯ ಮಾಡಿದನು ಆ ಪೋರವನಿಗೆ ೪ ಸಾವಿರ ಕುದರೆ ೩೦ ಸಾವಿರ ಪಾಯಿದಳ ೩೦೦ ರಥ ೨೦೦ ಆನೆಗಳು ಯಿದ್ದವು ಯಿವನಿಗೆ ಅಪಜಯವಾದದರಿಂದ ಅಲೆಕ್ಸಾಂದ್ರನ ಕೀರ್ತಿ ಹೆಚ್ಚಿತು ಕಾಶ್ಮೀರ ಅರಸನಾದ ಅಬಿಸಾರನು ಅಲೆಕ್ಸಾಂದ್ರನಿಗೆ ವಂದನೆ ಮಾಡಿದನು ಪೋರವನ ಅಳಿಯನು ತನ್ನ ಸ್ನೇಹಿತರ ಸಂಗಡ ಗಂಗಾತೀರ ಪರಿಯಂತರವೋಡಿಹೋದನು ಯೀಪ್ರಕಾರ ಜಯಿಸಿದ ಮೇಲೆ ಅಲೆಕ್ಸಾಂದ್ರನು ಪೋರವನಿಗೆ ಬಹಳ ಅನುಗ್ರಹಮಾಡಿ ರಾಜ್ಯವನ್ನು ಅವನಕೈಯಿಂದ ತೆಗಿಯದೆ

ಹಿದಸ್ಪನ ಹತ್ತಿರ ಬುಕ್ಸೆಫಲ ಮತ್ತು ನಿಕಯವೆಂಬ ಯೆರಡುದೊಡ್ಡ ಪಟ್ಣಗಳನ್ನು ಕಟ್ಟಿಸಿ ಪುತ್ತರಕ್ಕೆ ಹೋಗಿ ಪುತ್ತರ ಪೂರ್ವದಲ್ಲಿ ಚಂದ್ರಭಾಗ ಐರಾವತಿ ನದಿಗಳನ್ನು ದಾಟಿ ಬಾಹೀಕರ ಮತ್ತು ಅರಾಷ್ಟ್ರರ ದೇಶಗಳಿಗೆ ಬಂದು ಹಿಫಾಸೀಸ್ವೆಂಬ ವಿಪಾಶ ನದಿ ಪರಿಯಂತರ ಬಂದನು ಸಿಂಧುನದಿಯ ೫ ಕುಡಿಗಳಲ್ಲಿ ಪೂರ್ವದಿಕ್ಕಿನ ಶತದ್ರುವೆಂಬ ಕುಡಿ ದೊಡ್ಡದಾಗಿದೆ ಆನದಿಯನ್ನು ನೋಡದೆ ವಿಪಾಶ ನದಿಯ ತೀರದಲ್ಲಿ ಗೋಪುರಗಳಂತೆ ಉದ್ದವಾದ ೧೨ ಪೀಠಗಳನ್ನು ಕಟ್ಟಿಸಿ ಬಲಿಗಳನ್ನು ಅರ್ಪಿಸಿ ಗ್ರೀಕರ ಮರ್ಯಾದೆಗಳ ಪ್ರಕಾರ ಯುದ್ಧ ಆಟಗಳನ್ನು ಮಾಡಿ ಮನಸ್ಸಿಗೆ ಕರಕರೆಯಾಗಿ ತಿರುಗಿದನು. ಪಶ್ಚಿಮಕ್ಕೆ ಸೈನ್ಯದ ಸಂಗಡ ಹೋಗಿ ಚಂದ್ರಭಾಗ ನದಿಯನ್ನು ತಿರುಗಿ ದಾಟಿ ಹಿದಸ್ಪನದಿ ಹತ್ರ ಬಂದು ೮೦ ಯುದ್ಧಹಡಗಗಳಿಂದಲೂ ೨೦೦ ಮಂಜಿಗಳಿಂದಲೂ ಅನೇಕ ದೋಣಿಗಳಿಂದಲೂ ಸಮಸ್ತ ಸೈನ್ಯದ ಸಂಗಡ ಹಿದಸ್ಪ ನದಿ ಯಿಳಿದನು ಐದುದಿನ ಯಿಳಿದು ಹಡಗಗಳು ಹಿದಸ್ಪ ಚಂದ್ರಭಾಗ ಯೀ ೨ ನದಿ ಕೂಡುವ ಸ್ಥಳಕ್ಕೆ ಬಂದಾಗ್ಯೆ ಸಮುದ್ರದಹಾಗೆ ದೊಡ್ಡ ಥೆರೆಗಳೂ ಘೋಷವೂ ಯಿರುವದರಿಂದ ಅನೇಕಹಡಗಗಳು ನಾಶನವಾಗಿ ಅಲೆಕ್ಸಾಂದ್ರನಿಗೆ ಮರಣಭಯವು ಹುಟ್ಟಿತು ಯಿಳಿಯುವಾಗ್ಯೆ ನದಿಯ ಬಲಕಡಿಗೆ ಶೈವರ ಜನಾಂಗವೂ ಯೆಡಗಡಿಗೆ ಅರಾಷ್ಟ್ರರಾದ ಮಲ್ಲರೂ ಶೂದ್ರಕರೂ ಸೈನ್ಯದ ಸಂಗಡ ಯುದ್ಧಮಾಡಲಾಗಿ ಅಲೆಕ್ಸಾಂದ್ರನು ಹಡಗದಿಂದಿಳಿದು ಪೂರ್ವಕ್ಕೆ ಹೋಗಿ ಅಗಲಸ ಆದಿ ೬ ಮಲ್ಲರಪಟ್ಣಗಳನ್ನು ಮಹಾಕಠಿಣ ಯುದ್ಧಮಾಡಿ ತೆಗದುಕೊಂಡು ಕಡೆ ಪಟ್ಣದಲ್ಲಿ ತಾನೇ ಮೊದಲಾಗಿ ಗೋಡೆಯೇರಿ ವೊಳಗೆ ಯಿಳಿದು ಭಯಂಕರವಾದ ಘಾಯ ಹೊಂದಿದನು ೭ ದಿವಸದಮೇಲೆ ಸ್ವಲ್ಪ ವಾಸಿಯಾಗಿ ಐರಾವತಿನದಿ ಯಿಳಿದು ಯೀನದಿ ಚಂದ್ರಭಾಗಕ್ಕೆ ಕೂಡುವ ಸ್ಥಳದಲ್ಲಿ ತನ್ನ ಹಡಗಗಳನ್ನು ತಿರುಗಿ ನೋಡಿದನು ಅಲ್ಲಿ ಸ್ವಸ್ಥವಾಗುವ ಪರಿಯಂತರ ನಿಂತು ಅನೇಕ ಹೊಸಹಡಗಗಳನ್ನು ಕಟ್ಟಿಸಿ ತಾನು ಅಪಜಯಮಾಡಿದ ಮಲ್ಲರ ಮತ್ತು ಶೂದ್ರಕರ ದೂತರನ್ನು ನೋಡಿ ಅವರಿಗೋಸ್ಕರ ಹೊಸತಾಗಿ ವೊಬ್ಬ ಅರಸನನ್ನು ಯಿಟ್ಟನು ಅಂದಿನಿಂದ ಚಂದ್ರಭಾಗನದಿ ಯಿಳಿದು ಯೀನದಿ ಸಿಂಧುವಿಗೆ ಕೂಡುವ ಸ್ಥಳಪರಿಯಂತರ ಬಂದು ಯೀಗಿನ ಮಿತ್ತುನ್ ಕೋಟೆ ಹತ್ತರ ನಿಂತನು ಅಲ್ಲಿಗೆ ಅನೇಕ ಗೋತ್ರಗಳ ದೂತರು ಬಂದು ನಮಸ್ಕಾರ ಮಾಡಿ ರತ್ನ ಮುತ್ತುಗಳಿಂದ ಅಲಂಕರಿಸಿದ ಪಟ್ಟೆಗಳನ್ನೂ ವಿಚಿತ್ರವಾದ ಸರ್ಪದಹೆರೆಗಳನ್ನೂ ಕೂರ್ಮಗಳನ್ನೂ ಮನುಷ್ಯರ ಅಭ್ಯಾಸದ ಹುಲಿ ಸಿಂಹಗಳನ್ನೂ ಮೊದಲಾದ ಬೆಲೆಯುಳ್ಳ ಕಾಣಿಕೆಗಳನ್ನು ತರುತಿದ್ದರು ಯಿಲ್ಲಿ ಸೈನ್ಯವೂ ಹಡಗದ ಸಮೂಹವೂ ಕೂಡ ಬರುವಷ್ಟರಲ್ಲಿ ಅಲೆಕ್ಸಾಂದ್ರನಿಗೆ ಸ್ನೇಹಿತರಾದ ಕ್ಷತ್ರರೆಂಬ ಜನಾಂಗದವರು ಹೊಸ ಹಡಗಗಳನ್ನು ಕಟ್ಟುತ್ತಿದ್ದರು ಅಲೆಕ್ಸಾಂದ್ರಿಯಾವೆಂಬ ಪಟ್ಣವು ಸಹಾ ಸಿಂಧುನದಿ ತೀರದಲ್ಲಿ ಕಟ್ಟಿದ ತರುವಾಯ ಸಿಂಧುಮಹಾನದಿಯ ಮೇಲೆ ಹಡಗಗಳು ೩೨೫ ನೆ ವರ್ಷದ ಆರಂಭದಲ್ಲಿ ಸಮುದ್ರಕಡೆಗೆ ಮುಂಚೆಹೋದವು ಸೈನ್ಯವು ಆನೆಗಳನ್ನು ಸಂಪಾದಿಸಿ ನದಿಯ ಪೂರ್ವತೀರದಲ್ಲಿ ಕಾಲುನಡೆಯಾಗಿ ಪ್ರಯಾಣವನ್ನು ಮಾಡಿತು ಯೀಗಿನ ಬಕ್ಕರ್ ಪಟ್ಣದ ಹತ್ತಿರ ಮೂಷಿಕನೆಂಬ ಅರಸನಿಗೆ ಅಪಜಯಮಾಡಿ ಪಶ್ಚಿಮ ಪರ್ವತಗಳಲ್ಲಿ ಯೀಗಿನ ಬೋಲಾನ್ ಘಟ್ಟದಲ್ಲಿ ಕೂತುಕೊಂಡ ತಷಿಲರಾಯನಿಗೆ ಹಿಡಿದು ಮೂಷಿಕನು ತಿರಿಗಿಬಿದ್ದದರಿಂದ ಬೇಗ ಅವನ ರಾಜ್ಯಕ್ಕೆ ತಿರುಗಿ ಅವನಿಗೆ ವಳ್ಳೆಶಿಕ್ಷೆ ಕೊಟ್ಟು ವೊಂದು ಬ್ರಾಹ್ಮರ ಪಟವನ್ನು ಭೂಮಿಕೆಳಗಿನಿಂದ ಗವಿಮಾಡಿ ಆಗವಿಮಾರ್ಗದಿಂದ ತನ್ನ ಸಿಪಾಯಿ ಜನರ ಸಂಗಡ ಫಕ್ಕನೆ ಕೋಟೆಬಾಜಾರಿನ ಮಧ್ಯದಲ್ಲಿ ಪ್ರತ್ಯಕ್ಷವಾಗಿ ಆಕೋಟೆಯನ್ನು ವಶಮಾಡಿಕೊಂಡನು ಅಲೆಕ್ಸಾಂದ್ರನು ತಿರುಗಿ ಹಡಗಗಳ ಹತ್ತಿರ ಬಂದಮೇಲೆ ಅವನಿಗೆ ನಮಸ್ಕಾರ ಮಾಡಲಿಕ್ಕೆ ಪಶ್ಚಿಮ ಸಿಂಧುದೇಶವೆಂಬ ಪಾತಾಳದೇಶದ ಮಹಾರಾಜನು ಬಂದನು ಯಿವನಿಗೆ ಹಡಗಗಳಿಗೂ ಸೈನ್ಯಕ್ಕೂ ಬೇಕಾದ ಸಾಹಿತ್ಯವನ್ನು ಸಿದ್ಧಮಾಡಿ ಯಿಡಬೇಕೆಂದು ಅಲೆಕ್ಸಾಂದ್ರನು ಅಪ್ಪಣೆ ಕೊಡಲಾಗಿ ಮಹಾರಾಜನು ತನ್ನ ಪ್ರಜೆಗಳ ಸಂಗಡ ವೂರುದೇಶಬಿಟ್ಟು ಅಡವಿಗೆ ವೋಡಿಹೋದನು ಅಲೆಕ್ಸಾಂದ್ರನು ೩೨೫ ನೆ ವರ್ಷದ ಮಧ್ಯದಲ್ಲಿ ಯೀಗಿನ ತಠಾನಗರವೆಂಬ ಪಾತಾಳಪಟ್ಣಕ್ಕೆ ಮುಟ್ಟಿದನು ಪಾತಾಳರಾಜ್ಯದ ಪ್ರಜೆಗಳಿಗೆ ಯಾವ ವುಪದ್ರವು ಆಗುವದಿಲ್ಲವೆಂದು ದೂತರನ್ನು ಕಳುಹಿಸಿ ಕೆಲವರು ಅಡವಿಯಿಂದ ತಿರುಗಿಬರುವಹಾಗೆ ಮಾಡಿದನು ಅಲೆಕ್ಸಾಂದ್ರನು ಆಸೀಮೆಯಲ್ಲಿ ಅನೇಕ ಕೆರೆಗಳನ್ನು ಕಟ್ಟಿಸಿ ಹಡಗಗಳು ಸಮುದ್ರಮಾರ್ಗದಿಂದ ಫಾರ್ಸಿದೇಶಕ್ಕೆ ತಿರುಗಬೇಕೆಂದು ಅಪ್ಪಣೆ ಕೊಟ್ಟು ತಾನು ಕಾಲುದಾರಿಯಿಂದ ಗೆದ್ರಿಸಿಯಾ ಕರ್ಮಾನಿಯ ಎಂಬ ಯೀಗಿನ ಬೆಲುಚಿಸ್ಥಾನ್ ದೇಶವನ್ನು ಹೇಳಲಾರದ ಕಷ್ಟದಿಂದ ದಾಟಿ ಫಾರ್ಸಿದೇಶಕ್ಕೆ ತಿರುಗಿಬಂದು ಯೆರಡುವರ್ಷದಮೇಲೆ ಯಿನ್ನು ಯವ್ವನಸ್ಥನಾಗಿ ಸತ್ತುಹೋದನು.

ಮೊದಲನೆ ಪುಸ್ತಕ ಹದಿನೈದನೆ ಪುಟದಲ್ಲಿ ತೀರದೆಯಿದ್ದ

The Life of Mohammad.—Continued.

ಮೊಹಂಮದನ ಚರಿತ್ರೆಯು.

ಮೊಹಂಮದನು ತಂನಲ್ಲಿದ್ದ ಆಲೋಚನೆಯಂನು ತೀರಿಸಬೇಕೆಂದು ನಿಶ್ಚಯಿಸಿಕೊಂಡಾಗ ಪರರಿಗೆ ತಂನ ಮಾತಂನು ತಿಳಿಸುವದಕ್ಕಿಂತ ಮುಂಚೆ ತಂನ ಮನೆಯವರಂನು ತಂನ ಶಿಷ್ಯರಾಗ ಮಾಡಬೇಕೆಂದು ತಿರಿಗಿ ಹಾರಾಪರ್ವತದಲ್ಲಿರುವ ಗವಿಗೆ ಧ್ಯಾನಕ್ಕೋಸ್ಕರ ಹೋಗುವ ಸಮಯದಲ್ಲಿ ತಂನ ಹೆಂಡತಿ ಮೊದಲಾದವರಂನು ಕರಕೊಂಡು ಗವಿಯಲ್ಲಿ ಸೇರಿದ ಮೇಲೆ ಖದೀಜಾ ಎಂಬವಳಿಗೆ ಗಾಬ್ರಿಯೇಲನೆಂಬ ದೂತನು ತನಗೆ ಪ್ರತ್ಯಕ್ಷವಾಗಿ ನಾನು ದೇವರ ಪ್ರೇಷಿತನಾಗಿ ನೇಮಿಸಲ್ಪಟ್ಟಿದ್ದೇನೆಂದು ಹೇಳಿ ಖುರಾನದ ಯಿಪ್ಪತ್ತೊಂಭತ್ತನೆ ಸಂಧಿಯಲ್ಲಿ ಬರೆದಿರುವ ಮಾತಂನು ಆ ದೂತನ ಬಾಯಿಂದ ಕೇಳಿದೆನೆಂದು ತಿಳಿಸಿದನು ಖದೀಜಾ ಯೀ ವರ್ತಮಾನವಂನು ಕೇಳಿ ಬಹು ಸಂತೋಷಪಟ್ಟು ತಂನ ಆತ್ಮವಂನು ಪಾಲಿಸುವ ದೇವರ ಹೆಸರಿನಲ್ಲಿ ಮೊಹಂಮದನು ತಂನ ಜನಾಂಗದ ಪ್ರವಾದಿಯಾಗುವನೆಂಬುವದಂನು ನಂಬುತ್ತೇನೆಂದು ಪ್ರಮಾಣಮಾಡಿ ತತ್ಕ್ಷಣದಲ್ಲೆ ತಂನ ದಾಯಾದಿಯಾದ ವಾರಕಾ ಐಬ್ನನಾಫಾಲನಿಗೆ ಕರೆದು ಯೀ ವೃತ್ತಾಂತವಂನು ತಿಳಿಸಿದಳು ಯಿವನು ಹೀಬ್ರಿಯ ಬರಹವಂನು ತಿಳಿದು ದೇವರ ವಾಕ್ಯವಂನು ಸ್ವಲ್ಪ ಗ್ರಹಿಸಿ ಕೊಂಡವನಾದ ಕ್ರೈಸ್ತನಾಗಿದ್ದನು ಯೀ ವಾರಕಾ ಖದೀಜಾಳ ಮಾತಿಗೆ ತ್ವರೆಯಾಗಿ ವೊಪ್ಪಿಕೊಂಡು ಅವಳಿಗೆ ಮೊಹಂಮದನಿಗೆ ಪ್ರತ್ಯಕ್ಷವಾದ ಗಾಬ್ರಿಯೇಲನು ಪೂರ್ವದಲ್ಲಿ ಮೋಶೇನಿಗೆ ದರ್ಶನವಾದ ದೇವದೂತನಾಗಿದ್ದಾನೆಂದು ಹೇಳಿದನು ಯೀ ಕಾರ್ಯವು ಮೊಹಂಮದನು ನಾಲ್ವತ್ತುವರ್ಷ ಪ್ರಾಯದವನಾಗಿರುವಾಗ ರಮಜಾನ್ ತಿಂಗಳಲ್ಲಿ ಸಂಭವಿಸಿದದರಿಂದ ಯೀ ವರ್ಷ ವೊಹಂಮದನ ಪ್ರೇರಣೆಯ ವರ್ಷವೆಂದು ಮುಸಲ್ಮಾನರಲ್ಲಿ ಹೇಳುತ್ತಾರೆ ಕೆಲವು ದಿವಸದ ತರುವಾಯ ಅವನ ಗುಲಾಮನಾದ ಜೈದ್ ಐಬ್ನ್ ಹಾರೆಥಾ ತಂನ ಯಜಮಾನನ ಶಿಷ್ಯನಾದನು ಅದು ಕಾರಣ ಮೊಹಂಮದನು ಅವ

ನನ್ನು ಗುಲಾಮತನದಿಂದ ಬಿಡುಗಡೆ ಮಾಡಿದನು ಆದದರಿಂದ ಮುಸಲ್ಮಾನರಲ್ಲಿ ತಂಮ ಮತದಲ್ಲಿ ಸೇರುವ ದಾಸರಿಗೆ ಬಿಡುಗಡೆಮಾಡುವ ಸಂಪ್ರದಾಯ ಉಂಟಾಯಿತು ತರುವಾಯ ಅಬುತಾಲೆಬನ ಮಗನಾಗಿಯೂ ಮೊಹಂಮದನ ದಾಯಾದಿಯಾಗಿಯೂ ಯಿರುವ ಚಿಕ್ಕ ಪ್ರಾಯದವನಾದ ಅಲ್ಲಿಯವನು ಮೊಹಂಮದನಲ್ಲಿ ನಂಬಿದನು ಯಿವನು ಖದೀಜಾಳಂನೂ ಜೈದನಂನೂ ಲೆಖ್ಖಿಸದೆ ತನಗೆತಾನೇ ಪ್ರಥಮವಿಶ್ವಾಸಿಯೆಂಬ ಹೆಸರಂನಿಟ್ಟುಕೊಂಡನು ಆಮೇಲೆ ಮೊಹಂಮದನು ಕೊರೈಷ್ ಗೋತ್ರದವರ ಮುಖ್ಯಸ್ಥರಲ್ಲಿ ವೊಬ್ಬನಾದ ಅಬುಬೇಕರನಲ್ಲಿ ವಿಶ್ವಾಸವಂನು ಹುಟ್ಟಿಸುವ ಪ್ರಯತ್ನವಂನು ಮಾಡಿದನು ಯಿವನು ವೊಪ್ಪಿಕೊಂಡದ್ದು ಮೊಹಂಮದನಿಗೆ ಬಹು ಉಪಯೋಗವಾಯಿತು ಯಾಕಂದರೆ ಅಬುಬೇಕರನು ತಾನು ವಿಶ್ವಾಸಿಸಿದ ಮೇಲೆ ಮಖ್ಖ ಪಟ್ಟಣದ ಹಿರಿಯರಾದ ಒಥ್ಮಾನ್ ಐಬ್ನ ಅಫ್ಫಾನ್ ಅಬ್ದುಲ್ ರಹ್ಮಾನ್ ಐಬ್ನ ಔಫ್ ಸಾದ್ ಐಬ್ನ ಅಬೀವಕ್ಕಾಸ್ ಅಲ್ ಜೊಬೈರ್ ಐಬ್ನ ಅವಾಮ್ ತೆಲ್ಹಾ ಐಬ್ನ ಒಬೈದ್ ಅಲ್ಲಾ ಯೀ ಐದು ಜನರಂನು ಮೊಹಂಮದನ ಬಳಿಗಾಗ ಮಾಡಿದನು.

ಮೊಹಂಮದನು ಮೂರುವರುಷದ ವೊಳಗೆ ಯಿಷ್ಟು ಶಿಷ್ಯರಂನು ಸಂಪಾದಿಸಿದ ಮೇಲೆ ತನ್ನನೆಂಟರೆಲ್ಲರಿಗೆ ಪ್ರಸಂಗಮಾಡಲಿಕ್ಕೆ ತಕ್ಕ ಸಮಯವು ಬಂತೆಂದು ನೆನಸಿಕೊಂಡು ಅಲ್ಲಿಯವನಿಗೆ ಅಬ್ದುಲ್ಮೋತಾಲೇಬನ ಸಂತಾನದವರೆಲ್ಲರಿಗೆ ಔತಣ ಮಾಡಬೇಕೆಂದು ಆಜ್ಞಾಪಿಸಿದನು ಯಿವರು ಹೆಚ್ಚುಕಡಿಮೆ ೪೦ ಮಂದಿ ಬಂದು ಭೋಜನ ಮಾಡುವಾಗ ಅಬುಲಾಹೇಬನು ಮೊಹಂಮದನು ಪ್ರಸಂಗ ಮಾಡದಕ್ಕಿಂತ ಮುಂಚೆಯೇ ಮೆದ್ದು ಮಿಕ್ಕಾದವರಂನು ಸಹಾ ತಂನಸಂಗಡ ಮೇಳಮಾಡಿದದರಿಂದ ಅಲ್ಲಿಗೆ ಮತ್ತೊಂದು ಔತಣ ಮಾಡಬೇಕಾಯಿತು ಯಿವರು ಮರುದಿವಸದಲ್ಲಿ ತಿರಿಗಿ ಔತಣಕ್ಕೆ ಬಂದಲ್ಲಿ ಮೊಹಂಮದನು ಸಾರಿಹೇಳಿ ನಾನು ನಿಮಗೆ ತೋರಿಸುವಂಥಾದಕ್ಕಿಂತ ಉತ್ತಮವಾದದ್ದಂನು ತಂನ ಸಂತಾನದವರಿಗೆ ತೋರಿಸುವವನು ಯೀ ಯೆಲ್ಲಾ ಅರಬಸ್ಥಾನದಲಿ ವೊಬ್ಬನಾದರು ಯಿಲ್ಲ ಯಿಹದಲ್ಲಿಯೂ ಪರದಲ್ಲಿಯೂ ಸಿಕ್ಕುವ ಸುಖದ ಮಾರ್ಗವಂನು ಬೋಧಿಸುತ್ತೇನೆ ಸರ್ವತ್ರಾಣಿಯಾದ ದೇವರು ನಿಮಂನು ತಂನಹತ್ತರ ಕರಿಯಲಿಕ್ಕೆ ನನಗೆ ಅಪ್ಪಣೆ ಕೊಟ್ಟಿದ್ದಾನೆ ಹೇಗಿರಲಾಗಿ ನಂನ ಸಹಾಯಕನೂ ಸಹೋದರನೂ ಮೊಖ್ತ್ಯಾಗನೂ ಆಗಬೇಕೆಂದಿರುವವನ್ಯಾವನು ಯೆಂದು ಕೇಳಿದ್ದಲ್ಲಿ ಯೆಲ್ಲರು ಬೇಡೆಂದು ಸುಂಮನೆ ಕೂತುಕೊಂಡಿರುವಾಗ ಅಲ್ಲಿಯು ಯೆದ್ದು ನಾನಿದ್ದೇನೆಂದು ಕೂಗಿ ಯಾಗಾದರು ವಿರೋಧವಾಗಿ ಮಾತಾಡಿದರೆ ಭಂಗ ಮಾಡುವೆ ನೆಂದನು ಆಗಲು ಮೊಹಂಮದನು ಬಹಳ ಪ್ರಿಯಕರವಾದ ಮುಖದಿಂದ ಅಲ್ಲಿಯನಿಗೆ ಅಪ್ಪಿಕೊಂಡು ಯಿವನೇ ನಂನ ಬಾಧ್ಯಸ್ಥನು ಯಿವನ ಮಾತುಯೆಲ್ಲರು ಕೇಳಬೇಕೆಂದು ಹೇಳಲು ಭೋಜನಕ್ಕೆ ಬಂದವರೆಲ್ಲರು ಬಹಳ ನಗೆಯಿಂದ ಗಾಜಿಮಾಡಿ ಅಬುತಾಲೇಬನಿಗೆ ನಿಂನ ಮಗನಿಗೆ ಯೀಗ ವಂದಿಸೆಂದು ಕುಚೋದ್ಯ ಮಾಡಿದರು.

Revenue Department.

ರೇವನಿ ಯಿಲಾಖೆ.

ದರಿವಿಲ್ಲಾ ಉಪ್ಪು ಫುರೋಖ್ತು ಕ್ರಯ ಗಾರನ ೧೪ ೧೦೫ ರೂಪಾಯಿ ಮೇರೆಗೆ ಯೀವರೆಗೆ ಯಿರುವಂಥಾದರ ತಬದಿಲ್ ಆಗಿ ಐಕ್ಟಿವ ಬೋರ್ಡ್ ಹುಕುಂ ಕಟ್ಟಿದ ಪ್ರಕಾರ ಕ್ರಯ ಜಾಸ್ತಿ ಆಗುವಂಥಾದ್ದಕ್ಕೆ ಬಂಗಾಳಿಮಣ ೧೦೩೫ ೧೦ ರ ಗಾರನ ೧೪ ಕ್ರಯ ರುಪಾಯಿ ೧೫೫. ಲ್ಲು ಮರಕಾಲ ೧ ಕ್ಕೆ ಆಣೆ ೬ ಪೈ ೨೫೭ ಯೀ ಮೇರೆಗೆ ಫುರೋಖ್ತುಮಾಡುವಂಥಾದ್ದು ನಿಶ್ಚೈಸಿ ಆಬಗ್ಗೆ ತಯಾರಮಾಡಿಸಿದ ಯಿಸ್ತಿಹಾರ ಕಿರ್ತೆ ೧ ಖಾನದಸ್ತು ಮೊಹೋರ ನಿಶ್ಯಾಂ ಮಲ್ಫೂಫ್ ಅದೆ ಅದರ ನಕಲು ಜರೂರು ಯಿದ್ದಷ್ಟು ತಯಾರಮಾಡಿಸಿ ಹರಟಾ ೧ ರ ಪ್ರಕಾರ ರವಾನೆಮಾಡಿ ಯಾಹೂಕ್ತು ಜನರಿಗೆ ಫಾಯಿಷ ಮಾಡಿ ಅಸಲು ಯಿಸ್ತಿಹಾರ ನಿಂಮ ಕಚೇರಿಗೋಡೆಗೆ ಹಚ್ಚಿಸಿ ಯಿದೇ ಏಪ್ರಿಲ್ ತಾರೀಕು ೧೬ ರ ಲಾಗಾಯ್ತು ಆಗರದಲ್ಲಿ ಫುರೋಖ್ತುಮಾಡಿ ಲೆಖ್ಖಕ್ಕೆ ದಾಖಲು ಮಾಡಿಕೊಳ್ಳುವಂತೆ ನಿಂಮ ಯಿಲಾಖೆಯಾ ಹೋಕ್ತು ನಾಕರ ಜನರಿಗೆ ಬರೆದುಕಳುಹಿಸಿ ಆ ಪ್ರಕಾರ ನಡಿಯುವ ತಕ್ಕೈದಿ ಯಿಡುವದು. ಬತಾರೀಕು ೧೨ ನೆ ಏಪ್ರಿಲ್ ಸನ್ ೧೮೪೪ ನೆ ಯಿಸುವಿ ಮೊಕ್ಕಾಂ ಕುಂದಾಪುರ ಕಸಬಾ.

ದರಿವಿಲ್ಲಾ ಹೊಂನಾವರದಲ್ಲಿ ಯಿದ್ದ ಮಾಜಿ ಪ್ರಿನ್ಸಪಾಲ್ ಸದರ ಅಮೀನ ಕೋರ್ಟಿನ ಫಾರ್ಸಿ ಮುನ್ಷಿ ಸೈದ್ ಹಸನ್ ಅಲ್ಲಿ ಯೆಂಬವನಿಗೆ ಕೋರ್ಟಿನ ಶಿಬಂದಿ ತಬದಿಲ್ ಆದಸಂಬಂಧ ಮಿನಾಹಿಸ್ಟ ಕಾರಣ ಕಳೆದಮಾರ್ಚಿ ತಾರೀಕು ೨೩ ನೆ ಗೌರ್ನಮೆಂಟ್ ಶಂಕ್ಷನ್ ಮೇರಿಗೆ ಸಲ್ಲತಕ್ಕ ಯಿನಾಮು ರುಪಾಯಿ ೧೬೮ ನೂರು ಅರ್ವತ್ತೆಂಟು ಆತಗೆ ಬಟವಾಡೆ ಆಗತಕ್ಕ ಬಗ್ಯೆ ವಸೂಲಿ ಐವಜಿನಿಂದ ತೆಗದು ಯಿರಸಾಲ್ ಪಟ್ಟಿಗೆ ಖರ್ಚ ದಾಖಲು ಮಾಡಿ ಸಿವಿಲ್ ಜಡ್ಜ ಫೊರಸ್ಟೆಕ್ಸ್ ಸಾಹೇಬರ ಬಳಿಗೆ ರವಾನೆ ಮಾಡುವದು ಬತಾರೀಕು ೧೨ ನೆ ಏಪ್ರಿಲ್ ಸನ್ ೧೮೪೪ ನೆ ಯಿಸುವಿ ಮೊಕ್ಕಾಂ ಕುಂದಾಪುರ ಕಸಬಾ.

ದರಿವಿಲ್ಲಾ ಕುಂಮಟೆ ಅಳಿವೆ ಸಾಯರ ಸಿಗಸ್ತಿ ದಾಗ್ ಫೋತಿ ಸಾದ ಅನಂತಯ್ಯನ ಐವಜಿಗೆ ಕುಂಮಟೆ ನಿಂಮಕ್ ಮುತ್ಸದ್ದಿ ಶೇಷಗಿರಿರಾಯಗೆ ಯಿವನ ಐವಜಿಗೆ ಹಜೂರ್ ದರಿಯಾ ಸಾಯರ ಗುಮಾಸ್ತ ರಾಮರಾಯನೆ ಯಿವನ ಐವಜಿಗೆ ಹಜೂರ ಅಮಾನಿ ಗುಮಾಸ್ತ ಕೃಷ್ಣರಾಯಗೆ ಯಿವನ ಐವಜಿಗೆ ಖಜಾನೆ ಗುಮಾಸ್ತ ಅಪ್ಪಾಜಿರಾಯಗೆ ಯಿವನ ಐವಜಿಗೆ ಖಜಾನೆ ಗುಮಾಸ್ತ ಲಕ್ಷ್ಮಯ್ಯಗೆ ಯಿವನ ಐವಜಿಗೆ ಖಜಾನೆ ಗುಮಾಸ್ತ ಗುಂಡುರಾಯಗೆ ಯಿವನ ಐವಜಿಗೆ ರಕ್ತವಾನ್ ಭುಜಂಗರಾಯಗೆ ಸಹ ಮೊಕರರ ಮಾಡಿ ಅದೆ. ಯೀ ಜನರ ವರ್ಗಾವರ್ಗಿ ಅಮಲು ಏಪ್ರಿಲ್ ಗುರ್ರೆಲಾಗಾಯ್ತು ಬರಾವರ್ದ ದಾಖಲು ಮಾಡಿ ಮೊಕರರ ಯಿರುವ ತಲಬು ಕೊಡುತ್ತಾಬರುವದು ಬತಾರೀಕು ೧೩ ನೆ ಏಪ್ರಿಲ್ ಸನ್ ೧೮೪೪ ನೆ ಯಿಸುವಿ ಮೊಕ್ಕಾಂ ಕುಂದಾಪುರ ಕಸಬಾ.

ದರಿವಿಲ್ಲಾ ಮಾಜಿ ಹೊಂನಾವರ ಪ್ರಿನ್ಸಪಾಲ್ ಕೋರ್ಟಿನ ಹೆಡ್ ರೈಟರ್ ಜುಜೆಕೈತಾವ ಫಿನರ್ಂದವ ರಿಕಾರ್ಡ ಕೀಪರ ಶಾಂತಯ್ಯ ಯೀ ೨ ಜನರಿಗೆ ಜೈಫಿಶಿನ್ ಶನ್ ಮೊಕರರ ಆಗಿ ಗೌರ್ನಮೆಂಟ್ ಹುಕುಂ ನಿಶ್ಯಾಂ ತಲ್ಪಿದ ಸರ್ಟಿಫಿಕೆಟ್ ಚೀಟಿತರ್ಜಿಮೆ ೧ ಮಲ್ಫೂಫ ಅದೆ ಅದರಲ್ಲು ನಮೂದುಯಿರುವ ಪ್ರಕಾರ ಕಳೆದ ಸಪಟಂಬರ್ ತಾರೀಕು ೧೬ ನೆ ಲಾಗಾಯ್ತು ಮಾರ್ಚಿ ಆಖೈರವರೆಗಿನ ಬಾಬ್ತು ತಿಂಗಳು ೬೫ ಗೆ ರುಪಾಯಿ ೯೧ ಜುಜೆಕೈತಾನ ಫಿನರ್ಂದಗೆ ದರಮಾಹೆ ೧೪ ರುಪಾಯಿ ರುಪಾಯಿ ೬೫ ಶಾಂತಯ್ಯಗೆ ದರಮಾಹೆ ೧೧ ರುಪಾಯಿ ಪ್ರಕಾರ. ನೂರಾ ಐವತ್ತಾರು ರುಪಾಯಿ ಹಾಲಿವಸೂಲಿ ಐವಜಿನಿಂದ ಖರ್ಚಬರೆದು ಬಟವಾಡೆವ ಆಯಿಂದಾ ಸಲುವಂಥಾದ್ದಕ್ಕೆ ಆಯಾ ತಿಂಗಳ ಆಖೈರ ಆದಮೇಲೆ ಮರುತಿಂಗಳ ಶುರುವಿಗೆ ಸರ್ಕಾರ ಹುಕುಂಪ್ರಕಾರ ಅವರ ಹಾಜ್ರಿ ವಗೈರೆ ರುಜ್ತಿನೋಡಿ ರೂಬರು ಬಟವಾಡೆ ಮಾಡಿ ಯಿರಸಾಲ್ ಪಟ್ಟಿಗೆ ಖರ್ಚ ನಮೂದು ಮಾಡುತ್ತಾಬರುವದು ಮತ್ತುಅಸಲು ಸರ್ಟಿಫಿಕೆಟ್ ಅವರಿಗೆ ಸಂದಿರುತ್ತದೆ ಅದರಲ್ಲಿ ಅವರಿಗೆ ಸಂದತಲಬು ಸರ್ಕಾರ ಹುಕುಂ ಮೇರೆಗೆ ಬರೆದು ಕೊಡುತ್ತಾಯಿರತಕ್ಕದ್ದು ಬತಾರೀಕು ೧೦ ನೆ ಏಪ್ರಿಲ್ ಸನ್ ೧೮೪೪ ನೆ ಯಿಸುವಿ ಮೊಕ್ಕಾಂ ಕುಂದಾಪುರ ಕಸಬಾ.

Printed at the Bellary Mission Press.

R. Sampson, Printer,—H. Moegling, Editor.

CANARESE NEWSPAPER.

ಕಂನಡಸಮಾಚಾರವು

೧೮೪೪.

೧ನೆ ಪುಸ್ತಕ. ೭ನೆ ಅಂಕೆ.] ಬಳ್ಳಾರಿ ೧ ನೆ ಜೂನ್ [ಟಪಾಲ ದಸ್ತೂರಿಕೂಡಿ. ಕ್ರಯ ೨ ದುಡ್ಡು

ಮೊದಲನೆ ಪುಸ್ತಕ ಯಿಪ್ಪತ್ತನೆ ಪುಟದಲ್ಲಿ ತೀರದೆ ಯಿದ್ದ

An Account of Hindostan.——Chapter Second.

೨ನೆ ಹಿಂದುದೇಶವನ್ನು ಕುರಿತು ವಿಲಾಯಿತಿಯವರು ಪೂರ್ವದಲ್ಲಿ ತಿಳಿದ ವರ್ತಮಾನಗಳು.

ಹಿಂದುದೇಶದ ಸ್ವಭಾವವನ್ನು ಕುರಿತು ಪಶ್ಚಿಮದೇಶಸ್ಥರಿಗೆ ಪೂರ್ವದಲ್ಲಿ ನಿಶ್ಚಯ ವರ್ತಮಾನ ಯಿರಲಿಲ್ಲ ಆದರೆ ವ್ಯಾಪಾರದಿಂದಲೂ ಯುದ್ಧಗಳಿಂದಲೂ ಯೀ ದೇಶವನ್ನು ಕುರಿತಂಥಾ ಅನೇಕ ಮಾತುಗಳು ಬಹು ಪೂರ್ವಕಾಲದಲ್ಲಿ ಪಶ್ಚಿಮ ದೇಶಗಳಿಗೆ ಬಂದವು ಅನೇಕ ವ್ಯಾಪಾರಗಳ ಹೆಸರುಗಳು ಸಂಸ್ಕೃತ ಮಾತಿನಿಂದ ವಿಲಾಯಿತಿನ ಮಾತುಗಳಿಗೆ ಸೇರಿದವು ಅದರ ವುದಾಹರಣೆಗಳು ಹ್ಯಾಗಂದರೆ ಹತ್ತಿಗೆ ಸಂಸ್ಕೃತದಿಂದ ಕಾರ್ಪಾಸ ಹೇಳುತ್ತಾರೆ ಯೀಮಾತು ಯೆಹೂದಿಯ್ಯರಮಾತಿನಲ್ಲಿಯೂ ಲಾತಿನ್ ಭಾಷೆಯಲ್ಲಿಯೂ ಸೇರಿತು ತವರಕ್ಕೆ ಸಂಸ್ಕೃತಮಾತಿನಿಂದ ಕಸ್ತಿರ ಅದೇಮಾತು ಗ್ರೇಕ್ ಅರಬ್ಬಿ ಭಾಷೆಗಳಲ್ಲಿ ಸೇರಿತು ಯಿದಕ್ಕೆ ಯವನೇಷ್ಟವೆಂಬ ಹೆಸರು ವುಂಟಾದದರಿಂದ ಪೂರ್ವದಲ್ಲಿ ಅದು ಯವನರಾದ ಗ್ರೇಕರು ಹಿಂದುಜನರಿಂದ ತಂದಿದ್ದಾರೆಂದು ತೋಚುತ್ತದೆ ಮೆಣಸಿಗೆ ರೂಢಿಯಾಗಿ ಪಿಪ್ಪಲಿಯೆಂಬ ಹೆಸರು ಸಂಸ್ಕೃತದಲ್ಲಿರುತ್ತದೆ ಸಮಸ್ತ ವಿಲಾಯಿತಿ ಯವರ ಭಾಷೆಗಳಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗಿ ಅದೇಮಾತು ನಡೆಯುತ್ತದೆ ಬೆಲ್ಲಕ್ಕೆ ಶರ್ಕರಾಯೆಂದು ಯೆಲ್ಲಿಯೂ ಪೂರ್ವದಾರಭ್ಯ ಹೇಳುತ್ತಾರೆ ಯೀಗಿನ ಸಮಯದಲ್ಲಿರುವ ಪ್ರಕಾರ ಪೂರ್ವದಲ್ಲಿ ಸಹಾ ಪರದೇಶಿಯ್ಯರು ಹಿಂದುದೇಶಕ್ಕೆ ಬಂದು ಮುಖ್ಯವಾಗಿ ವ್ಯಾಪಾರ ನಡಿಸಿದರು ಆದರೆ ಬ್ರಾಹ್ಮರಿಗೂ ಕ್ಷತ್ರಿಯರಿಗೂ ದೇಶಾಂತರ ಪ್ರಯಾಣ ಮಾಡಕೂಡದೆ ಯಿದ್ದರೂ ವೈಶ್ಯರಿಗೆ ಯಿಂಥಾ ಕಟ್ಟಳೆಯಿರಲಿಲ್ಲ ಮನು ೮—೪೧೫೭ ಸಮುದ್ರಯಾನಕುಶಲಾಃ ದೇಶಕಾಲಾರ್ಥದರ್ಶಿನಾಃ ಸ್ಥಾಪಯಂತಿತು ಯಾಂ ವೃದ್ಧಿಂ ಸಾತತ್ರಾಧಿಗಮಂಪ್ರತಿ ಟೀಕು ಸಮುದ್ರಪ್ರಯಾಣದಲ್ಲಿ ಅತಿಕುಶಲರಾದಂಥಾ ದೇಶಕಾಲದ ಅರ್ಥವನ್ನು ತಿಳಿದವರು ಯೊಂದಾನೊಂದು ವೃದ್ಧಿ ಸ್ಥಾಪಿಸಿದ್ದಾದರೆ ಅಂಥಾ ವೃದ್ಧಿಯೆಂಬ ಬಡ್ಡಿ ನಡಿಯತಕ್ಕದ್ದು ಹೀಗೆ ಮನುಸ್ಮೃತಿಯಲ್ಲಿ ಬರದಿರುವದರಿಂದ ಆಸಮಯದಲ್ಲಿ ಸಮುದ್ರಪ್ರಯಾಣಮಾಡುವ ವೈಶ್ಯರಿದ್ದರೆಂದು ತೋರುತ್ತದೆ.

೯—೪೩೩ ಭೃತ್ಯಾನಾಂಚ ಭೃತಿಂವಿದ್ಯಾದ್ಭಾಷಾಶ್ಚ ವಿವಿಧಾನೃಣಾಂ ದ್ರವ್ಯಾಣಾಂಸ್ಥಾನಯೋಗಾಂಶ್ಚ ಕ್ರಯವಿಕ್ರಯಮೇವಚ ಟೀಕು ಯೊಳ್ಳೆವೈಶ್ಯನಿಗೆ ಸೇವಕರ ಸಂಬಳಗಳೂ ಮನುಷ್ಯರ ಬೇರೆಬೇರೆ ಭಾಷೆಗಳೂ ದ್ರವ್ಯಗಳು ಯಿಡುವ ಜಾಗ್ರತೆಯೂ ಕ್ರಯವಿಕ್ರಯವೂ ತಿಳಿದಿರಬೇಕು.

ಹೀಗೆಯೆ ವ್ಯಾಪಾರಸ್ಥರಿಗೆ ಆಸಮಯದಲ್ಲಿಯು ಪರದೇಶಗಳ ಭಾಷೆಗಳು ತಿಳಿದಿರಬೇಕಾದವು ಬ್ರಾಹ್ಮರು ಸಹ ಕೆಲವು ಮಂದಿ ಬಹು ಪೂರ್ವಕಾಲದಲ್ಲಿ ಪ್ರಯಾಣವಾಗಿ ಹೋಗಿದ್ದಾರೆ ಕಲ್ಯಾಣನೆಂಬ ಯೊಬ್ಬನು ೨೧೦೦ ವರುಷಗಳ ಮುಂಚೆ ಸ್ವದೇಶವನ್ನು ಬಿಟ್ಟು ಅರಸನಾದ ಅಲೆಕ್ಸಾಂದ್ರನ ಸಂಗಡ ಪಶ್ಚಿಮಕ್ಕೆ ಹೋಗಿ ಪಸರ್ಗಾದ ಪಟ್ಟಣದಲ್ಲಿ ರೋಗದಲ್ಲಿಬಿದ್ದು ಆತ್ಮವನ್ನು ಶರೀರವೆಂಬ ಬಂಧದಿಂದ ವಿಮೋಚಿಸಬೇಕೆಂದು ತನ್ನನ್ನು ತಾನೆ ಬೆಂಕಿಯಿಂದ ಸುಟ್ಟುಕೊಂಡನು ಮತ್ತೊಬ್ಬನು ೧೮೦೦ ವರುಷದ ಮುಂಚೆ ಭೃಗುಗಜವೆಂಬ ಸ್ವಪಟ್ಟಣವನ್ನು ಬಿಟ್ಟು ಅಥೇನ್ ಪಟ್ಟಣಪರಿಯಂತರಬಂದು ಯೋಗಿಯಾಗಿ ಜನರಿಗೆ ಆಶ್ಚರ್ಯವೆಬ್ಬಿಸಿ ಅದೇಪ್ರಕಾರ ಬೆಂಕಿಯಿಂದ ಸತ್ತುಹೋದನು ಯಿವು ಮೊದಲಾದ ಪ್ರಯಾಣಸ್ಥರಾದ ಬ್ರಾಹ್ಮರ ಉದಾಹರಣೆಗಳು ಸ್ವಲ್ಪವುಂಟು ಆದರೆ ವ್ಯಾಪಾರಕ್ಕೋಸ್ಕರ ಪ್ರಯಾಣವಾಗಿ ಹೋದಜನರು ಪೂರ್ವದಲ್ಲಿ ಬಹಳಮಂದಿ ಯಿದ್ದರು ಅವರು ೨ ಸಾವಿರ ವರುಷಕ್ಕಿಂತ ಮುಂಚೆ ಅರಬಿದೇಶದಲ್ಲಿರುವ ಅಥೇನ್ ಪಟ್ಟಣಕ್ಕೂ ಅದರ ಹುತ್ತರವಾದ ಸುಕೋತ್ತರ ದ್ವೀಪಕ್ಕೂ ಸಂಚರಿಸಿ ಮೆಣಸು ಯಾಲಕ್ಕಿ ಲವಂಗ ಅಕ್ಕಿ ಹತ್ತಿ ಕೂರ್ಮಾದಿಗಳನ್ನು ತರುತ್ತಿದ್ದರು ಯೀ ಹಿಂದು ವ್ಯಾಪಾರಸ್ಥರಿಗೆ ವಾಣಿಜ್ಯರುಯೆಂದು ಸಂಸ್ಕೃತ ಹೆಸರುಯಿರುವದರಿಂದ ಬನಿಯರುಯೆಂದು ಪ್ರಾಕೃತ ಹೆಸರು ಸುಮಾರು ೧ ಸಾವಿರ ವರ್ಷದಾರಭ್ಯ ವುಂಟಾಯಿತು ಅವರು ಪಶ್ಚಿಮ ಮತ್ತು ವುತ್ತರ ಆಸಿಯಾಖಂಡಕ್ಕೆ ಮಾತ್ರ ಹೋಗದೆ ಆಫ್ರಿಕಾದೇಶಕ್ಕೆ ಸಹ ಬಹುಪೂರ್ವದಲ್ಲಿ ಹೋಗುತ್ತಿದ್ದರು ಅಲ್ಲಿಯಿರುವ ಮೆಲಿಂದಾಯೆಂಬ ಪಟ್ಟಣದಲ್ಲಿ ಮೊದಲನೆ ವಿಲಾಯಿತಿನವನಾಗಿ ಸಮುದ್ರಮಾರ್ಗದಿಂದ ಹಿಂದುದೇಶಕ್ಕೆ ಬಂದ ವಸ್ಕೊದೇಗಾಮಯೆಂಬವನು ಅವರನ್ನು ನೋಡಿ ಅವರಿಂದ ಹಿಂದುದೇಶಕ್ಕೆ ಹೋಗುವ ಮಾರ್ಗವನ್ನು ತಿಳಿದುಕೊಂಡನು ಪೂರ್ವದಲ್ಲಿರುವ ದ್ವೀಪಗಳಿಗೆ ಸಹ ಬಹುಪೂರ್ವಕಾಲದಲ್ಲಿ ಹಿಂದುವರ್ತಕರೂ ಬ್ರಾಹ್ಮರೂ ಬೌದ್ಧರೂ ಬಂದಿದ್ದಾರೆಂದು ನಾನಾವಿಧ ಪ್ರಮಾಣಗಳಿಂದ ನೋಡಬಹುದು.

ಮೊದಲನೆ ಪುಸ್ತಕ ಹದಿನಾರನೆ ಪುಟದಲ್ಲಿ ತೀರದೆಯಿದ್ದ

The Life of Confutse.—Continued.

೨ನೆ ಕೊನ್ಫೂಚೆಯನ ಚರಿತ್ರೆಯು.

ಕೊನ್ಫೂಚೆಯನು ತನ್ನ ಜನರು ದ್ರವ್ಯಾಭಿಲಾಷೆಯೂ ಮಾನಾಶೆಯೂ ಲಂಪಟತ್ವವೂ ವಂಚಕತನವೂ ಯೀ ಮೊದಲಾದ ಪಾಪಗಳಿಂದ ಕೆಟ್ಟುಹೋಗುವದಂನು ನೋಡಿ ನೀತಿಮಾರ್ಗವಂನು ಹೇಳಿ ಮುಂಕೊಂಡು ಮಿತಭೋಗದಲ್ಲಿಯೂ ನ್ಯಾಯದಲ್ಲಿಯೂ ಯೀ ಮೊದಲಾದ ಸದ್ಧರ್ಮಗಳಲ್ಲಿ ನಡೆದುಕೊಂಡು ದ್ರವ್ಯಾಶೆಯಂನೂ ಡಂಬಕತನವಂನೂ ವಿಸರ್ಜಿಸಿ ವಂಚನೆಯಿಲ್ಲದ ಸತ್ಯಮಾರ್ಗವಂನು ಕೈಕೊಳ್ಳಬೇಕೆಂದು ಬೋಧಿಸಿ ತಂನ ದೇಶಸ್ಥರಂನು ಪ್ರಪಂಚದ ಮಾರ್ಗದಿಂದ ತಿರಿಗಿಸಿ ಜ್ಞಾನಮಾರ್ಗದಲ್ಲಿ ಸೇರಿಸಲಿಕ್ಕೆ ನಾನಾವಿಧವಾದ ಪ್ರಯತ್ನಗಳಂನು ಮಾಡುತ್ತಿದ್ದನು ಅವನ ಕೀರ್ತಿಯು ಸಮಸ್ತ ದೇಶದಲ್ಲಿ ಪ್ರಸಿದ್ಧಿಯಾಗಿ ಅವನು ಸರ್ವರಿಗೂ ಪ್ರಿಯವುಳ್ಳವನಾದನು ಅವನ ಬುದ್ಧಿ ಜ್ಞಾನ ಸುಗುಣಗಳಿಗಾಗಿ ಸಮಸ್ತರಿಂದಲೂ ಅವನು ಸನ್ಮಾನಿಸಲ್ಪಟ್ಟನು ಅರಸುಗಳು ಯಿವನ ಬೋಧನೆಯ ಪ್ರಕಾರ ದೇಶವಂನು ಆಳಿಕೊಳ್ಳಲೂ ಪ್ರಜೆಗಳು ಅವನಿಗೆ ಸಿದ್ಧನೆಂದು ವಂದಿಸಲೂ ಆರಂಭಿಸಿದರು. ಯಿವನು ಅವಶ್ಯಬಿದ್ದಾಗ್ಯೆ ರಾಜೋದ್ಯೋಗಗಳಲ್ಲಿ ಸೇರಿ ಉಪಯೋಗವಿಲ್ಲದ ಸಮಯದಲ್ಲಿ ಬಿಟ್ಟುಬಿಡುತ್ತಿದ್ದನು. ವ್ಯಾಪಾರದಲ್ಲಿ ನಡವಳಿಕೆಯಾದ ಅನೇಕ ಅನ್ಯಾಯ ಮೋಸಗಳಂನು ನಿಲ್ಲಿಸಿ ಸಮವಾದ ಅಳತೆ ಭಾರಗಳಂನು ನೇಮಿಸಿದನು. ಮನುಷ್ಯರಿಗೆ ಸತ್ಯಮಾತಂನಾಡಿ ಏಕಪತ್ನಿ ಪ್ರತದಲ್ಲಿರಬೇಕೆಂದೂ ಸ್ತ್ರೀಯರಿಗೆ ಕಾಮವಿಕಾರವಿಲ್ಲದೆ ವಿನಯವುಳ್ಳವರಾಗಿರಬೇಕೆಂದೂ ಬೋಧಿಸಿದನು. ಸಮಸ್ತರು ಕೊನ್ಫೂಚೆಯನಿಗೆ ಸನ್ಮಾನಿಸಿ ವಿಧೇಯರಾಗಿದ್ದದರಿಂದ ಅರಸುಗಳೂ ಪ್ರಜೆಗಳೂ ಸದ್ಧರ್ಮದಲ್ಲಿಯೂ ಸುಖದಲ್ಲಿಯೂ ಯಿರುತ್ತಿದ್ದರು.

ಯೀ ರಾಜ್ಯಕ್ಕೆ ಸುತ್ತಲಿರುವ ಅರಸುಗಳು ಯಿದಂನು ನೋಡಿ ಅರಸನು ಕೊನ್ಫೂಚೆಯನು ತೋರಿಸುವಮಾರ್ಗದಲ್ಲಿ ನಡಿಯುವದರಿಂದ ಹೆಚ್ಚು ಹೆಚ್ಚು ಸಾಮರ್ಥ್ಯವಂನು ಹೊಂದಿದರೆ ತಮಗೆ ಉಪದ್ರವಾಧೀತೆಂದು ಭಯಪಡಲು ಚೀನಾದೇಶದ ರಾಜನು ತಂನ ಪ್ರಧಾನಿಗಳಂನು ಕೂಡಾಕರಿಸಿ ಯೀ ಭಯವಂನು ಪರಿಹರಿಸಬೇಕೆಂದು ಆಲೋಚನೆ ಮಾಡಿದನು. ಅವರು ಮಾಡಿದ ಉಪಾಯವೇನೆಂದರೆ ಅವರು ಚಿಕ್ಕತನದಿಂದ ಹಾಡುವದಂನೂ ನಾಟ್ಯವಂನೂ ಚಂನಾಗಿ ಕಲಿತುಕೊಂಡವರಾದ ಬಹಳ ಸೌಂದರ್ಯವೂ ಯುಕ್ತಿಯೂ ಉಳ್ಳ ಸೂಳೆಯರ ಸಮೂಹವಂನು ಆಮೆಂಬ ದೇಶದ ಅರಸನಿಗೆ ಕಾಣಿಕೆಯಾಗಿ ರಾಯಭಾರಿಗಳಂನು ಕಳುಹಿಸಿ ಮುಟ್ಟಿಸಿದರು. ಕೊನ್ಫೂಚೆಯನು ವಿರೋಧಿಯಾದ ಅರಸನ ಮೋಸವಂನು ತಿಳಿದುಕೊಂಡು ತಂನ ಅರಸನಿಗೆ ಹೇಳಿ ಯೀ ಕಾಣಿಕೆಯಂನು ನಿರಾಕರಿಸಬೇಕೆಂದು ಬಹಳವಾಗಿ ಬೇಡಿಕೊಂಡನು. ಅರಸನು ಅವನ ಮಾತು ಕೇಳದೆ ಆ ಸ್ತ್ರೀಯರಂನು ಅಂಗೀಕರಿಸಿದರಿಂದ ಅವನೂ ಅವನ ಸೇವಕರೂ ಕ್ರೀಡಾವಿನೋದದಲ್ಲಿಯೇ ಯಿದ್ದು ರಾಜಕಾರ್ಯಗಳಂನು ಕೆಡಿಸಿದರು. ಹೀಗಿರಲಾಗಿ ಕೊನ್ಫೂಚೆಯನು ತಿರಿಗಿ ಅರಸನ ಹತ್ರ ಬಂದು ಅವನಿಗೆ ಬುದ್ಧಿಹೇಳಿ ರಾಜ್ಯಕ್ಕೆ ಯೀ ಪ್ರಕಾರ ನಷ್ಟವಾಧೀತೆಂದು ಅವನಂನು ಗದರಿಸಿ ಪೂರ್ವ ಸದ್ಧರ್ಮದಲ್ಲಿಯೇ ತಿರಿಗಿ ತರ ಪ್ರಯತ್ನ ಮಾಡಿದನು. ಆದರೆ ಅರಸನು ಕ್ರೋಧಗೊಂಡು ಯಿವನ ಬೋಧನೆಯಂನು ತಿರಸ್ಕರಿಸಿದದರಿಂದ ಕೊನ್ಫೂಚೆಯನು ತಂನ ಪ್ರಯತ್ನಗಳೆಲ್ಲಾ ವ್ಯರ್ಥವಾದವೆಂದು ನೋಡಿ ಅರಮನೆಯಂನೂ ದೇಶವಂನೂ ಬಿಟ್ಟು ಜ್ಞಾನಮಾರ್ಗದ ಬೋಧನೆಯಂನು ಅಂಗೀಕರಿಸುವದಕ್ಕೆ ಮನಸ್ಸುಳ್ಳ ಜನರಂನು ಹುಡುಕಬೇಕೆಂದು ಪರದೇಶಸಂಚಾರ ಮಾಡಿದನು. ಯೀ ಸಂಚಾರದಲ್ಲಿ ಚೀಗು ಚೀಜೋನ್ ಯೆಂಬ ಯೀ ಮೂರು ದೇಶಗಳಿಂದಲೂ ಕಾಟಿಕಾಯಿಗಳಿಂದಲೂ ಆ ಕಾಲದಲ್ಲಿ ಗಲಿಬಿಲಿಯಾಗಿರುತ್ತಿದ್ದದರಿಂದ ತಂನ ಮಾತಂನು ಯೆಲ್ಲಿಯೂ ನಡಿಸಕೂಡದೆ ಹೋದನು. ಯಾಕಂದರೆ ಜನರು ಪ್ರಪಂಚದ ತಾಪತ್ರಯಗಳಲ್ಲಿ ಮುಣಿಗಿಹೋಗಿ ಜ್ಞಾನಬೋಧನೆಯಂನು ಗ್ರಹಿಸಲಿಕ್ಕೆ ಮನಸ್ಸಿಲ್ಲದವರಾಗಿದ್ದರು. ಯಿದು ಹೊರ್ತು ಉಪದೇಶವಂನು ಕೇಳಲಿಕ್ಕೆ ಸಮಯವುಯಿರಲಿಲ್ಲ. ಆದದರಿಂದ ಕೆಲವರು ಯಿವನಂನು ಹಾಸ್ಯಮಾಡಿದರು ಕೆಲವರು ತಂಮ ಹತ್ತರ ಬಾರದಹಾಗೆ ಓಡಿಸಿದರು. ಕೆಲವರು ಕೊಂದುಹಾಕಬೇಕೆಂದು ಆಲೋಚನೆ ಮಾಡಿದರು. ಮತ್ತು ಅವನು ವೈರಾಗಿಯಾಗಿರುತ್ತಿದ್ದನಾದದರಿಂದ ಆಸ್ತಿಯೆಲ್ಲಾ ಕಳಕೊಂಡು ಅಂನಕ್ಕೆ ಆಸ್ಪದವಿಲ್ಲದೆ ಯಿದ್ದನು. ಹೀಗಿರಲಾಗಿ ಆ ದುಷ್ಕಾಲದಲ್ಲಿ ಊರುದೇಶಗಳಂನುಬಿಟ್ಟು ಹಿಂದುದೇಶದಲ್ಲಿದ್ದ ಋಷಿಗಳಹಾಗೆ ಅರಣ್ಯವಾಸಿಗಳಾದ ಬೇರೆ ಜ್ಞಾನಿಗಳು ಕೊನ್ಫೂಚೆಯನಂನು ನೋಡಿ ಅವನಿಗೆ ತಂಮಹಾಗೆ ಮಾಡಬೇಕೆಂದು ಬುದ್ಧಿಹೇಳಲೂ ಯಿವನು ನಾನು ಮನುಷ್ಯನಾಗಿದ್ದೇನೆ ಮನುಷ್ಯರ ಸಖ್ಯೆಯಂನುಬಿಟ್ಟು ಮೃಗಗಳ ಸಖ್ಯೆಯಲ್ಲಿ ಸೇರಲೊಲ್ಲೆನು. ಯೀ ಕಾಲದ ಮನುಷ್ಯರು ಕೆಟ್ಟುಹೋದದರಿಂದ ನಾನು ಅವರಿಗೆ ನೀತಿಮಾರ್ಗವಂನು ಬೋಧಿಸುವದು ಅವಶ್ಯವೆಂದು ನೆನಸುತ್ತೇನೆ. ಮನುಷ್ಯನು ತಾನು ಸನ್ಮಾರ್ಗಿಯಾದಮೇಲೆ ಮತ್ತೊಬ್ಬರಂನು ಸನ್ಮಾರ್ಗದಲ್ಲಿ ಸೇರಿಸುವದು ಯೋಗ್ಯವಾದದ್ದುಯೆಂದು ಹೇಳಿದನು.

The Indian Traveller. Letter the Second.

೨ನೆ ಹಿಂದುದೇಶದ ಸಂಚಾರದ ಕಥೆಯು.

ಪ್ರಿಯ ರಾಮರಾಯನೇ — *On Board the Gilmore*—1841.

ಮಚ್ಲಿಬಂದ್ರದಿಂದ ನಾನು ನಿನಗೆ ಬರೆದ ಕಾಗದವು ಯಿಷ್ಟುವರಿಗೆ ಮುಟ್ಟಿದ್ದೀತು. ಯೀ ಹತ್ತುದಿವಸಗಳಲ್ಲಿ ಘಾಳಿಯೂ ತೆರೆಗಳೂ ನಂಮ ಶತ್ರುಗಳಂತೆ ನಂಮ ಮೇಲೆ ಬಿದ್ದದರಿಂದ ಹಡಗವು ಒಡದುಹೋಗಿ ನಾವೆಲ್ಲರು ಮುಣಿಗಿ ಮೀನುಗಳ ಬಾಯಿಯಲ್ಲಿ ಬೀಳುವ ಭಯದಲ್ಲಿದ್ದೆವು ಯೀಗ ಸಮುದ್ರವು ಶಾಂತವಾಗಿ ನಾವು ಹುಗಲಿನದಿಯ ಬಾಯಿಯಲ್ಲಿಸೇರಿ ಒಂದು ಶಿಖಿ ಹಡಗದ ಸಹಾಯದಿಂದ ಕಲ್ಕತ್ತಾ ಪಟ್ಟಣದ ಕಡೆಗೆ ಯೇರಿಹೋಗುತ್ತಾಯಿದ್ದೇವೆ ಕೂಹಿಮರಗಳೆಲ್ಲಾ ಮುರಿದು ಬಗಲಿನ ಹಲಿಗೆಗಳು ಒಡದುಹೋಗಿ ಅವೆ ನಂನ ಮೇಜಂನು ತಿರಿಗಿ ಕಟ್ಟಿ ಸಮಾಧಾನವಾಗಿ ಅದರ ಮುಂದೆ ಕೂತುಕೊಂಡು ಯೀಗ ಕಳೆದ ಸಂಕಟದ ದಿವಸಗಳ ಚರಿತ್ರೆಯಂನು ವಿವರವಾಗಿ ಬರೆಯುತ್ತೇನೆ ನೀನು ಮೊದಲು ಒಂದುಸಾರಿ ತರ್ಕಮಾಡುವ ಸಮಯದಲ್ಲಿ ಮರಣದ ಭಯವು ಬಂದಾಗ ನಂನ ಆಲೋಚನೆಗಳಂನುಬಿಟ್ಟು ದೇವರು ಯಿದ್ದಾನೆಂದು ತಿಳಿದು ಆತನಿಗೆ ಹೆದರುವೆನೆಂದು ಹೇಳಿದಿ ಯಿದು ಮಾತ್ರ ಆಗಲಿಲ್ಲ ನಿನಗೆ ಸತ್ಯವಂನೇ ಹೇಳುತ್ತೇನೆ ನಾನು ಸಾಯಲಿಕ್ಕಿರುವಾಗ ನಂನಲ್ಲಿದೇ ಮನಸಿತ್ತು ಸತ್ತರೆ ಮರಣವು ಯೇನೆಂದು ತಿಳಿದುಕೊಳ್ಳುವದಕ್ಕೆ ಕಾಯುತ್ತಾಯಿದ್ದೆನು ಸತ್ತಮೇಲೆ ಮನುಷ್ಯನಲ್ಲಿ ಯೇನು ಅನುಭವ ಉಳಿಯುವದಿಲ್ಲವೆಂದು ನೆನಸಿಕೊಂಡು ಯೇನಾದರು ತಿಳುವಿಕೆ ಉಳಿಯುವದಾದರೆ ಯೀ ಜೀವವು ಹೋದತರುವಾಯ ಯಾವಸ್ಥಿತಿ ಬರುವದೆಂದು ನಿರೀಕ್ಷಿಸುತ್ತಾಯಿರುತ್ತಿದ್ದೆನಲ್ಲದೆ ಬೇರೆ ಭಯವು ನಂನ ಮನಸ್ಸಿಗೆ ತಗಲಲಿಲ್ಲ ನಂಮ ಹಡಗವು ಮಚ್ಲಿಬಂದ್ರಕ್ಕೆ ದುರಿನಲಿದ್ದ ರಾತ್ರಿಯಲ್ಲಿ ಘಾಳಿಯಿಲ್ಲದೆ ನೀರೋಟದಿಂದಲೇ ಹಡಗವು ಸ್ವಲ್ಪ ನಡಿಯುತು ಹಾಯಿಗಳೆಲ್ಲಾ ಸಡ್ಲಾಗಿದ್ದು ಕೂಹಿಮರಗಳಿಗೆ ಬಡಿಯುತ್ತಾಯಿದ್ದವು ಆಕಾಶದಲ್ಲಿ ಯೇನುನೋಡಲಿಲ್ಲದೆ ಚಂದ್ರಪ್ರಕಾಶವು ನಿರ್ಮಲವಾಗಿ ಹಡಗದಮೇಲೆಯೂ ಸಮುದ್ರದಮೇಲೆಯೂ ವಿಸ್ತಾರವಾಗಿತ್ತು ಹಡಗದಲ್ಲಿದ್ದ ಪ್ರಯಾಣಸ್ಥರೂ ಮದ್ರಾಸಿನಿಂದ ಹಡಗವಂನೇರಿ ಬಂದ ಶಿಪಾಯಿಗಳಲ್ಲಿ ಅನೇಕರೂ ಮೇಲ್ಮಾಳಿಗೆಯಲ್ಲಿನಿಂತು ಮಾತಾಡುತ್ತಾ ಖಲಾಶಿಗಳಲ್ಲಿ ಕೆಲವರು ಹಡಗದ ಮುಖದಲ್ಲಿ ಕೂತುಕೊಂಡು ಗಾನಹಾಡುತ್ತಾ ಭೋರೆಗಳಲ್ಲಿ

ಕೆಲವರು ಭೋಜನಶಾಲೆಯಲ್ಲಿ ಕುಡಿಯುತ್ತಾ ಕೆಲವರು ಹಿಂದಿನ ಮೇಲ್ಮಾಳಿಗೆಯಾದ ಪುಪ್ಪಿನಲ್ಲಿ ತಿರುಗಾಡಿ ಸಂಭಾಷಣೆ ಮಾಡುತ್ತಾ ಯಿದ್ದರು ನಾನು ಸಹಾ ಮೇಲೆ ಹೋಗಿ ಯಿವರ ಸಂಗಡ ಮಾತಾಡುತ್ತಾಯಿದ್ದೆನು ಯೀ ದೊರೆಗಳಲ್ಲಿ ಕೆಲವರು ಸರ್ದಾರರೂ ವೊಬ್ಬ ಸಮರ್ಥನಾದ ಡೊಕ್ಟರ್ ದೊರೆಯು ಬಂಗಾಳದೇಶಕ್ಕೆ ಹೋಗುವ ವೊಬ್ಬ ಚ್ಯಾಪ್ಲಿನ್ ದೊರೆಯೂ ವಿಲಾಯಿತಿಗೆ ಸ್ವಸ್ಥಮಾಡಿಕೊಳ್ಳಲಿಕ್ಕೆ ಹೋಗಿ ತಿರಿಗಿಬಂದ ವೊಬ್ಬ ಪಾದ್ರಿ ದೊರೆಯೂ ಯಿದ್ದರು ಅವರು ಲೋರ್ದ ಆಕ್ಲ್ಯಾಂಡ್ ಬಹದೂರ್ ಅಫ್ಗಾನ್ ದೇಶದಲ್ಲಿ ಮಾಡುವ ಯುದ್ಧದ ವಿಷಯವಾಗಿ ಮಾತಾಡಿ ಕೆಲವರು ಅದು ಅನ್ಯಾಯವಾದ ಯುದ್ಧವೆಂದೂ ಸರ್ಕಾರದವರಿಗೆ ಅದರಿಂದ ನಷ್ಟವು ಹೊರ್ತು ಯೇನು ಪ್ರಯೋಜನ ಆಗುವದಿಲ್ಲವೆಂದೂ ಹೇಳಿ ಕೆಲವರು ಅಫ್ಗಾನ್ ಜನರ ನಾಯಕನಾದ ದೊಸ್ತಮೊಹಂಮದನು ಯಿಂಗ್ಲಿಷ್ ಜನರಿಗೆ ವಿರೋಧವಾಗಿರುವ ರುಸ್ಸರ ಮಹಾರಾಜನ ಸಂಗಡ ವೊಡಂಬಡಿಕೆ ಮಾಡ ಮನಸ್ಸಾಗಿದ್ದದರಿಂದ ಹಿಂದುದೇಶವಂನಾಳುವ ಲೋರ್ದ ಬಹದೂರರು ಅವನ ಸಂಗಡ ಯುದ್ಧಮಾಡಬೇಕಾಗಿದ್ದೆಂದೂ ಹೇಳಿದರು. ಆ ಪಾದ್ರಿಯವರು ಯೀ ಲೋಕದ ಅಧಿಕಾರಿಗಳು ಅಹಂಕಾರದಿಂದಲಾಗಲಿ ರಾಜ್ಯಾಶೆಯಿಂದಲಾಗಲಿ ಅನ್ಯಾಯವಾದ ಯುದ್ಧಗಳಂನು ಆರಂಭಿಸಿದರೂ ದೇವರು ಅನೇಕಾವರ್ತಿ ಮನುಷ್ಯರ ದುಷ್ಟತನದಿಂದಲೇ ತನಗೆ ಮಹಿಮೆಯಂನು ಉಂಟುಮಾಡುತ್ತಾನೆಂದೂ ಅಫ್ಗಾನ್ ದೇಶವು ಇಂಗ್ಲಿಷ್ ಜನರಿಗೆ ವಶವಾದರೆ ಯೇಸುಕ್ರೀಸ್ತನ ಭಕ್ತರಿಗೆ ಆ ದೇಶದಲ್ಲಿ ಸಹ ಶುಭಸಮಾಚಾರವಂನು ಪ್ರಸಂಗಿಸುವದಕ್ಕೂ ಆ ದೇಶಸ್ಥರಿಗೆ ಜೀವದ ಮಾರ್ಗವಂನು ತಿಳಿಸುವದಕ್ಕೂ ಮಾರ್ಗವಾದೀತೆಂದು ಅಂದರು ಆ ಸರ್ದಾರರಲ್ಲಿ ವೊಬ್ಬನು ನಗಾಡಿ ಯಿದು ಯೆಂಥಾ ಮಾತು ಅಫ್ಗಾನ್ ಜನರಿಗೆ ಮುಸಲ್ಮಾನರ ಮತ ಉಂಟು ಅವರು ತಂಮ ಮತದ ಪ್ರಕಾರ ಸನ್ಮಾರ್ಗದಲ್ಲಿ ನಡೆದರೆ ಅವರಿಗೆ ಸಾಕು ದೇವರು ಪಕ್ಷಾಪರಿಪಕ್ಷ ನೋಡುವವನಲ್ಲ ಸಕಲ ಜನರಲ್ಲಿ ನೀತಿಯಂನು ಅನುವರ್ತಿಸುವವನು ಆತನಿಗೆ ಪ್ರಿಯನಾಗಿದ್ದಾನೆಂದನು ಪಾದ್ರಿಯವರು ಅವರಂನು ನೋಡಿ ನೀವು ಕ್ರೈಸ್ತರಲ್ಲವೋ ಯೇಸುಕ್ರೀಸ್ತನ ನಾಮವಂನು ಹೊರ್ತಾಗಿ ಮನುಷ್ಯರು ವಿಶ್ವಾಸಿಸಿ ರಕ್ಷಣೆಯಂನು ಹೊಂದುವಹಾಗೆ ಆಕಾಶದ ಕೆಳಗೆ ಬೇರೊಂದು ನಾಮವು ಯಿಲ್ಲವೆಂದು ದೇವರ ವಾಕ್ಯದಲ್ಲಿ ಬರೆದದೆ ನೀವು ಯೀ ಮಾತಂನು ನಂಬುವದಿಲ್ಲವೋ ಯೆಂದರು ಆಗಲು ಸರ್ದಾರರಲ್ಲಿ ವೊಬ್ಬ ಮುದುಕರು (ಅವರಿಗೆ ಜನರು ಕರ್ನಲ್ ಯೆಂದು ಹೇಳಿದರು) ಪಾದ್ರಿಯವರ ಕಡೆಗೆ ತಿರಿಗಿಕೊಂಡು ನೀವು ಅಫ್ಗಾನ್ ದೇಶದಲ್ಲಿ ಆಗುವ ಯುದ್ಧದಲ್ಲಿ ಸಂತೋಷಪಡುವದು ವೊಳ್ಳೇದು. ವೊಂದೊಂದುವೇಳೆ ಯುದ್ಧವು ಹುಟ್ಟದೆ ಯಿದ್ದರೆ ಸರ್ಕಾರದವರು ರಾಣುವೆಯವರಂನು ಅಲಕ್ಷ್ಯ ಮಾಡುವರು. ಯುದ್ಧದ ಕಾಲಗಳಲ್ಲಿ ಸಂಸ್ಥಾನದ ತ್ರಾಣವು ದಂಡಿನಲ್ಲಿ ವುಂಟೆಂದು ತಿಳಿದು ಕೊಂಡು ನಮಗೆ ಮಾನ ಕೊಡುತ್ತಾರೆ. ಆದರೆ ಅಫ್ಗಾನರಂನು ಜೈಸಿ ಅವರ ದೇಶವಂನು ತೆಗದುಕೊಂಡರೆ ನಮಗೆ ಸಾಕು. ಅವರ ಸನ್ಮಾರ್ಗ ದುರ್ಮಾರ್ಗಗಳಿಗೋಸ್ಕರ ಚಿಂತೆಪಡುವದು ಯಾಕೆ ಯಿದು ಅವರೇ ನೋಡತಕ್ಕದ್ದು. ಅವರು ನಮಗೆ ವಿಧೇಯರಾಗಿ ನಂಮ ಹುಕುಂ ಪ್ರಕಾರ ನಡೆದರೆ ಮನಸ್ಸಿದ್ದರೆ ನರಕಕ್ಕೆ ಹೋಗಲಿ ಯೆಂದರು. ಆ ಪಾದ್ರಿಯವರು ದೊರೆಯೇ ನೀವು ಕಾಯೀನನ ಹಾಗೆ ನಾನು ನಂನ ಸಹೋದರನ ಕಾವಲಿಯವನೋ ಯೆಂದು ಹೇಳಲಿಕ್ಕೆ ನಾಚಿಕೆಯೂ ಭಯವೂ ಪಡುವದಿಲ್ಲವೋ ಯೆಂದರು ಆ ಕರ್ನಲ್ ದೊರೆಗಳು ನಗಾಡಿ ನಾನು ಸೋಲ್ಜರನಾಗಿದ್ದೇನೆ. ಖಡ್ಗವಂನು ಹಿಡಿದುಕೊಂಡು ಶತ್ರುಗಳ ತಲೆಗಳಂನು ಹಾರಿಸುವದು ನಂಮ ಕೆಲಸ ಪ್ರಾರ್ಥಿಸುವದೂ ಪ್ರಸಂಗಿಸುವದೂ ನಿಂಮದು. ನೀವು ನಿಂಮ ಕೆಲಸಕ್ಕೆ ನಾವು ನಂಮ ಕೆಲಸಕ್ಕೆ ನೋಡಿಕೊಳ್ಳುವಾ ಯೆಂದರು. ಪಾದ್ರಿಯವರು ಪ್ರತ್ಯುತ್ತರವಾಗಿ ನಾವು ಯಾವ ವುದ್ಯೋಗಗಳಂನು ನಡಿಸಿದರೂ ನಂಮ ನೆರೆಯವರಂನು ಸ್ನೇಹಿಸಿ ದೇವರಂನು ಸೇವಿಸುವದು ಯೆಲ್ಲರಿಗೆ ಯೋಗ್ಯವಾದದ್ದು. ಆತನು ಯೆಲ್ಲರಿಗೆ ಸರಿಯಾಗಿ ತಂನ ವಾಕ್ಯದ ಪ್ರಕಾರ ನ್ಯಾಯ ತೀರಿಸುವನು. ನೀವು ಮನಸ್ತಾಪಪಟ್ಟು ಯೇಸುಕ್ರೀಸ್ತನಲ್ಲಿ ವಿಶ್ವಾಸಿಸಿದರೆ ಹೊರ್ತು ಆತನ ನ್ಯಾಯತೀರ್ವಿಕೆಯಲ್ಲಿ ಹ್ಯಾಗೆ ನಿಲ್ಲುವಿರಿ ಯೆಂದರು. ಅವರು ಅದಕ್ಕೆ ಬಹು ಕಾಲವುಂಟು ಯೆಂದು ಸ್ವಲ್ಪ ಸಿಟ್ಟಿನಿಂದ ತಂಮ ಮುಖವಂನು ತಿರಿಗಿಸಿದರು. ಆಗಲು ಐದುಆರು ವರ್ಷದ ವೊಬ್ಬ ಹುಡುಗ ಯೇಣಿಯಿಂದ ಯೇರಿ ಪಾದ್ರಿಯವರ ಹತ್ತರ ವೋಡಿಬಂದು ಅವರ ಕೈ ಹಿಡಿದು ಪಪ್ಪಾ ಪಪ್ಪಾ ಚಾತಯಾರ್ ಹೈ ಛೋಟಿ ಮೇರಿನೀಂದ್ ಮೆಹೈ ಅಂಮ ಮುಜ್ಕೊ ಭೇಜ್ ತಿಹೈ ಅಂದನು. ಪಾದ್ರಿಯವರು ಯೆದ್ದು ಪ್ರಿಯ ಚಾರ್ಲೀ ಯಾವಾಗಲು ಹಿಂದುಸ್ಥಾನ ಮಾತಾಡುವದು ಯಾಕೆಂದು ಹುಡುಗನಂನು ಯೆತ್ತಿ ಅಪ್ಪಿಕೊಂಡು ಕೆಳಗೆ ಯಿಳಿದು ಹೋದರು. ಆಗಲು ವೊಬ್ಬ ಯೌವನಸ್ಥ ಸರ್ದಾರನು ಅಫ್ಗಾನ್ ದೇಶದ ಪಟಾಲಮುಗಳಲ್ಲಿ ಪಾದ್ರಿಯವರು ಹೋಗದೆಯಿದ್ದದ್ದು ಬಹುಬುದ್ಧಿಯಾಗಿದೆ. ಅವರು ಯಿಂಥಾ ಮಾತುಗಳಾಡಿ ಜನರಿಗೆ ತೊಂದರೆ ಮಾಡುತ್ತಾರೆ ಹೊರ್ತು ಬೇರೊಂದು ವುಪಯೋಗವಿಲ್ಲವೆಂದನು. ವೊಬ್ಬ ಕಪ್ತಾನ್ ದೊರೆಗಳು ಯಿವರಂನು ನೋಡಿ ಛೀ ಛೀ ಹೀಗೆ ಮಾತಾಡಬಾರದು ಯಾರಾದರು ಘಾಯಪಟ್ಟು ಆಸ್ಪಿತಲಿನಲ್ಲಿಯಿದ್ದರೆ ಯಿಲ್ಲವೆ ರೋಗದಲ್ಲಿಬಿದ್ದು ಸಾಯಲಿಕ್ಕಿರುವಾಗ ಸಮಾಧಾನಪಡಿಸುವದಕ್ಕಾಗಿ ಪಾದ್ರಿಯವರು ಅವರ ಸಂಗಡಲಿದ್ದರೆ ವೊಳ್ಳೇದು. ಆದರೆ ಪಾದ್ರಿಯವರು ಅಫ್ಗಾನ್ ದೇಶಕ್ಕೆ ಹೋಗದೆ ಯಿದ್ದದ್ದು ಕ್ಷೇಮವೇ. ಯಾತಕೆಂದರೆ ಅವರು ವಾತ್ಸಲ್ಯಉಳ್ಳ ಮುಸಲ್ಮಾನರಾಗಿ ನಂಮ ಮತದ ಆಚರಣೆಗಳಂನು ನೋಡಿದರೆ ನಮಗೆ ಹೆಚ್ಚು ದ್ವೇಷ ಮಾಡುವರು. ಅವರಂನು ಜೈಸಿದಮೇಲೆ ಸಮಾಧಾನಪಡಿಸುವದು ಅವಶ್ಯವಾಗಿದೆ. ಚ್ಯಾಪ್ಲಿನ್ ದೊರೆಗಳು ಯೀ ಮಾತಂನು ಕೇಳಿ ತಿರಿಗಿಕೊಂಡು ಕಪ್ತಾನ್ ದೊರೆಗಳೇ ನಿಂಮ ಮಾತಿಗೂ ವೊಪ್ಪಿಕೊಳ್ಳುವದಿಲ್ಲ. ಸರ್ಕಾರದವರು ತಂಮ ಪಟಾಲಮುಗಳ ಸಂಗಡ ಸಾಕಾದ ಬೋಧಕರಂನು ಕಳುಹಿಸದೇ ಯಿದ್ದದ್ದು ಕೇವಲ ಅಯುಕ್ತವಾಗಿದೆ. ಯೇಸುಕ್ರೀಸ್ತನ ನಾಮವಂನು ಮನುಷ್ಯರ ಮುಂದೆ ಪ್ರಸಿದ್ಧಿಮಾಡದೇ ಯಿರುವ ಕ್ರೈಸ್ತರಿಗೆ ದೇವರಿಂದ ಶಿಕ್ಷೆ ಬರುವದು ಯುಕ್ತವಾಗಿದೆ. ಯಿದು ಕಾರಣ ಯೀ ಯುದ್ಧದಿಂದ ಕಡೆಯಲ್ಲಿ ಕೇಡು ಬರುವದೆಂದು ಭಯಪಡುತ್ತೇನೆಂದರು. ಆ ಕರ್ನಲ್ ದೊರೆಗಳು ಯೀ ಭಯವು ವ್ಯರ್ಥ ಆದರೆ ನಂನಲ್ಲಿ ಸಹಾ ಭಯ ಉಂಟು ಸರ್ಕಾರದವರು ಅಫ್ಗಾನ್ ದೇಶದ ಕೆಲಸವಂನು ಬುದ್ಧಿಯಿಂದ ನಡಿಸುವದಿಲ್ಲ ಸರ್ವಾಧಿಕಾರವಂನು ಸಿವಿಲ್ ದೊರೆಗಳ ಕೈಯಲ್ಲಿ ಕೊಟ್ಟಿದ್ದಾರೆ ಯಿದರಿಂದ ನಷ್ಟವು ಅಧಿಕವಾದೀತು. ಯುದ್ಧಸ್ಥರು ಯುದ್ಧಕಾರ್ಯಗಳಂನು ನಡಿಸಬೇಕಾದದ್ದು ಯೆಂದರು. ಚ್ಯಾಪ್ಲಿನ್ ದೊರೆಗಳು ದೇವರು ಸರ್ಕಾರದವರಿಗೆ ಶಿಕ್ಷೆ ಕೊಡ ಮನಸ್ಸಾಗಿದ್ದರೆ ಅವರಿಗೆ ಬುದ್ಧಿ ಕೊಡದೆ ಅವರಂನು ತಂಮ ಸ್ವಂತ ತಪ್ಪುಗಳಿಂದಲೇ ಶಿಕ್ಷಿಸಬಹುದು ಯೆಂದು ಹೇಳಿ ಕೆಳಗೆ ಹೋದರು. ಆ ಮೇಲೆ ಡೊಕ್ಟರ್ ದೊರೆಗಳು ಅವರು ಕೆಳಗೆ ಹೋಗುವವರೆಗೆ ಮೌನವಾಗಿದ್ದ ಸರ್ದಾರರಂನು ನೋಡಿ ನೀವು ಪಾದ್ರಿಯವರ ಸಂಗಡ ಹೀಗೆ ಮಾತಾಡಿದರೆ ಆಗದು ನೀವು ಬೈಬಲಿನಲ್ಲಿ ವಿಶ್ವಾಸವಿಡುತ್ತೀವೆಂದು ಹೇಳುವ ಪರಿಯಂತರ ಅಂಥವರ ಸಂಗಡ ಮಾಡುವ ತರ್ಕಗಳಲ್ಲಿ ಯಾವಾಗಲು ಅಪಜಯವಾಗುವದು. ಆದರೆ ನೀವು ವಿಶ್ವಾಸಿಗಳಂತೆ ಮುಖವಂನು ತೋರಿಸುವದು ಯಾಕೆ. ನೀವು ಬೈಬಲಿನಲ್ಲಿ ಬರೆದ ವೊಂದು ಮಾತಂನಾದರು ಕೈಕೊಳ್ಳುವದಿಲ್ಲವೆಂದು ನನಗೆ ಗೊತ್ತುಂಟು. ಆದಾಗ್ಯು ಬೈಬಲ್ ನಂಬುವದಿಲ್ಲವೆಂದು ಹೇಳಲಿಕ್ಕೆ ಧೈರ್ಯ ಸಾಲದು. ಯಿದು ಮಾತ್ರ ಸಮವಲ್ಲ ನಾನು ನಂನ ಮನಸ್ಸಂನು ಪ್ರಕಟವಾಗಿ ಹೇಳುತ್ತೇನೆ. ನಾನು ಚಿಕ್ಕವನಾಗಿದ್ದಾಗ್ಯೆ ನಂನ ತಾಯಿ ನನಗೆ ಹೇಳಿದ್ದಂನೆಲ್ಲಾ ನಂಬಿ ಭಕ್ತನಾಗಿದ್ದೆನು. ಆ ಮೇಲೆ ವಿದ್ಯಾಭ್ಯಾಸಮಾಡಿ ಸ್ವಂತ ಬುದ್ಧಿಯಿಂದ ವಿಚಾರಣೆಮಾಡಿ ಕ್ರೈಸ್ತರ ವಿಶ್ವಾಸಕ್ಕೆ ಯೇನೂ ಆಧಾರವಿಲ್ಲವೆಂದು ಕಂಡುಕೊಂಡೆ ಸಮಸ್ತ ದೇಶಗಳಲ್ಲಿ ನೂರಲ್ಲಿ ತೊಂಭತ್ತೊಂಭತ್ತು ಜನರು ಪರತಂತ್ರ ಬುದ್ಧಿಯುಳ್ಳವರಾಗಿದ್ದಾರೆ. ಅದು ಕಾರಣ ಜನರ ಸಮೂಹವು ತಮ್ಮ ತಮ್ಮ ಗುರುಗಳೂ ತಾಯಿ ಅಜ್ಜಿ ಮೊದಲಾದವರೂ ಉಪದೇಶಿಸುವ ಮಾತುಗಳಂನು ಸುಂಮನೆ ನಂಬಿ ಪೂರ್ಣಮನಸ್ಸಿನಿಂದ ಅದರಲ್ಲಿ ಆಸಕ್ತರಾಗಿದ್ದಾರೆ. ಮುಸಲ್ಮಾನನು ಮೊಹಂಮದನಿಗೋಸ್ಕರ ಯುದ್ಧದಲ್ಲಿ ಸೇರಿ ಪ್ರಾಣವಂನು ಕೊಡುವನು. ಬ್ರಾಹ್ಮಣನು ತಂನ ಮತವಂನು ಬಿಡುವದಕ್ಕಿಂತ ಸಾಯುವದು ವೊಳ್ಳೆಯದೆಂದು ಹೇಳುವನು. ಬೌದ್ಧನು ಹಾಗೆಯೇ ತಂನ ಜೀವವಂನು ಬಿಡಬೇಕಾದರೆ ಅದಂನೇ ಬಿಟ್ಟು ತಂನ ಹಿರಿಯರ ಮಾರ್ಗ ಬಿಡುವದಿಲ್ಲ. ಕೆಲವರು ಘೋರ ಪಿಶಾಚಿಗಳಿಗೆ ಆರಾಧನೆ ಮಾಡುತ್ತಾರೆ. ಕೆಲವರು ನೊಸಳೆ ಬೆಕ್ಕು ಯೆತ್ತು ಯಿತ್ಯಾದಿಗಳಿಗೆ ಪೂಜಿಸುತ್ತಾರೆ ಆದರೆ ಯೆಲ್ಲಗಳಲ್ಲಿ ವಿಶ್ವಾಸವೊಂದೆ. ತಾಯಿಯ ಮೊಲೆಕುಡಿ

ಯುವದರ ಸಂಗಡ ಸಂಪಾದಿಸಿದ ಬುದ್ಧಿಯೇ ಸಮೂಹಜನಗಳಲ್ಲಿ ಸ್ಥಿರವಾಗಿರುತ್ತದೆ ಕ್ರಿಸ್ತರಾಗಿ ಹುಟ್ಟಿದ ನಮ್ಮಲ್ಲಿಯೂ ಹೀಗೆಯೇ ಪೂರ್ವಬುದ್ಧಿಶಾಲಿಗಳ ಯಿದನ್ನು ಚೆನ್ನಾಗಿ ತಿಳಿಕೊಂಡು ಬೇರೆಬೇರೆ ದೇಶಗಳಲ್ಲಿ ಸಮೂಹ ಜನರನ್ನು ಆಳುವದಕ್ಕಾಗಿ ಒಂದೊಂದು ಮತವನ್ನು ಸ್ಥಾಪಿಸಿ ಜನರಲ್ಲಿ ದೇವರ ಭಯವನ್ನು ಹುಟ್ಟಿಸಿ ಅವರನ್ನು ತಮ್ಮವಶಮಾಡಿ ಕೊಂಡರು. ಬುದ್ಧಿಹೀನರು ಏನಾದರೂ ವಿಶ್ವಾಸಿಸಲಿ ಸ್ವತಂತ್ರಬುದ್ಧಿಯುಳ್ಳವರು ತಾವು ವಿಚಾರಿಸಿ ಸತ್ಯವೆಂದು ತಿಳಿದುಕೊಂಡರೆ ಹೊರ್ತು ಏನೂ ನಂಬಲಾಗದು ಎಂದರು. ನಾನು ಸುಮ್ಮನೆ ಹಿಂದೆ ಕುಳಿತುಕೊಂಡು ಮೊದಲು ಬೇರೆ ದೊರೆಗಳ ಮಾತನ್ನು ಕೇಳಿ ಆಶ್ಚರ್ಯಪಟ್ಟು ಯೀ ಡೊಕ್ತರ್ ದೊರೆಗಳ ಮಾತನ್ನು ಕೇಳುತ್ತಲೇ ನನ್ನ ಸ್ವಂತ ಆಲೋಚನೆಯನ್ನು ಯಿವರ ಬಾಯಿಂದ ಕೇಳಿ ಅಧಿಕವಾಗಿ ಆಶ್ಚರ್ಯಪಟ್ಟೆ. ನೋಡು ರಾಮರಾಯನೇ ಕ್ರಿಸ್ತರಲ್ಲಿಯೂ ಯಿಂಥವರಿದ್ಧಾರೆ. ನೀನು ಕ್ರಿಸ್ತಮತವನ್ನು ಅವರಿಗಿಂತ ಚೆನ್ನಾಗಿ ತಿಳಿದುಕೊಳ್ಳುತ್ತಿ ಎಂದು ನೆನಸುತ್ತಿಯೋ ಯಿದಕ್ಕೆ ಉತ್ತರ ಕೊಡು ಆ ದೊರೆಗಳು ಯೀ ಪ್ರಕಾರ ಮಾತಾಡುತ್ತಾ ಯಿರಲಾಗಿ ಕಪ್ತಾನ್ ದೊರೆಗಳು ಮೇಲೆ ಬಂದು ದೊರೆಗಳಿಗೆ ಸಲಾಮು ಮಾಡಿ ನೀವು ನಿಮ್ಮ ಕಾಬೀನಗಳಿಗೆ ಹೋಗಬೇಕೆಂದು ಬೇಡಿಕೊಳ್ಳುತ್ತೇನೆ. ಖಲಾಶಿಗಳ ಮೇಲ್ಮಾಳಿಗೆಯ ಮೇಲೆ ಮಾಡತಕ್ಕ ಕೆಲಸವು ಬಹಳವುಂಟು ಯೀಗ ತುಫಾನು ಹುಟ್ಟುವದೆಂದು ಕಾಣುತ್ತದೆ ಎಂದರು. ಆ ದೊರೆಗಳು ಸುತ್ತಲು ನೋಡಿ ಆಶ್ಚರ್ಯದಿಂದ ತುಫಾನು ಹುಟ್ಟುವದೋ ಎಲ್ಲಿಂದ ಎಂದು ಕೇಳಿದರು ಕಪ್ತಾನರು ನಿಮ್ಮ ಸಂಗಡ ಮಾತಾಡಲಿಕ್ಕೆ ನನಗೆ ಸಮಯವಿಲ್ಲ.

ನನ್ನ ಕೆಲಸ ನೋಡಬೇಕು ನೀವು ದಯಮಾಡಿ ಕೆಳಗೆ ಯಿಳಿಯಿರೆಂದರು ಆಗಲವರು ಯಿಳಿದು ಹೋದರು. ನಾನು ಅವರ ಸಂಗಡಲೇ ಹೋಗಿ ನನ್ನ ಕಾಬೀನಿಗೆ ಸೇರಿದೆ. ಅಲ್ಲಿ ಪಾತ್ರಿಯವರು ತಮ್ಮ ಹೆಂಡತಿ ಮಕ್ಕಳ ಸಂಗಡ ಪ್ರಾರ್ಥನೆ ಮಾಡಿ ತೀರಿಸುವದನ್ನು ಕೇಳಿದೆ. ಸಣ್ಣ ಮಕ್ಕಳು ಸಹಾ ತಮ್ಮ ಮೃದುಮಾತುಗಳಿಂದ ದೇವರಿಗೆ ಸ್ತುತಿಯನ್ನರ್ಪಿಸಿದರು. ಅಷ್ಟರೊಳಗೆ ಕಪ್ತಾನವರು ದೊಡ್ಡಶಬ್ದದಿಂದ ಖಲಾಶಿಗಳಿಗೆ ಹಾಯಿಗಳನ್ನು ಮಡಿಸಿಕಟ್ಟಬೇಕೆಂದು ಬೊಬ್ಬೆಹಾಕಿದರು. ಮೇಲ್ಮಾಳಿಗೆಯಲ್ಲಿರುವ ದೋಣಿಗಳನ್ನೂ ಕೋಳಿಹಲಿಗೆ ಯಿತ್ಯಾದಿಗಳನ್ನೂ ಬಿಗಿಸಿದರು. ಮತ್ತು ಬಡಿಗೆಯವನು ಕಾಬೀನುಗಳಲ್ಲಿ ಬಂದು ಕಿಟಿಕಿಗಳನ್ನೆಲ್ಲಾ ಮುಚ್ಚಿ ಕಟ್ಟಿದನು. ಘಾಳಿ ಏನೂ ಯಿಲ್ಲದೇ ಶೆಖೆಹುಟ್ಟಿ ಪ್ರಯಾಸದಿಂದ ಕೂತುಕೊಂಡು ಯಿದೇನು ಯಿಂದು ಸಮುದ್ರ ಶಾಂತವಾಗಿದೆ ಘಾಳಿ ನಿರ್ಮಲವಾಗಿದೆ. ಯೀ ಭಯವೂ ಗಡಿಯೂ ಯಾತಕ್ಕೆ ಎಂದು ಆಲೋಚಿಸುತ್ತಾ ಯಿದ್ದೆ. ಒಂದು ಘಳಿಗೆಯೊಳಗೆ ಹಡಗವು ಒಂದೇ ಕಡೆಯಲ್ಲಿ ನಿಂತಿತ್ತು. ದೂರದಿಂದ ಮಿಂಚು ಝಳಕಿಸಿತು. ಚಂದ್ರ ಅಸ್ತಮಾನವಾದಾಗಲೇ ನೀರಿನಲ್ಲಿ ಝುಂಕಾರ ಹುಟ್ಟಿ ಹಡಗಕ್ಕೆ ಘಾಳಿಯ ಗುಂಡು ಹೊಡದ ಹಾಗಾಗಿ ಹಡಗವೆಲ್ಲಾ ನಡಗಿತು. ಕಪ್ತಾನರು ಖಲಾಶಿಗಳಿಗೆ ಕೂಗಿ ತಮ ತಮ್ಮ ಸ್ಥಳದಲ್ಲಿ ನಿಲ್ಲಿರಿ ಎಂದು ಆಜ್ಞಾಪಿಸಿದರು. ಸ್ವಲ್ಪ ಕಾಲದ ಮೇಲೆ ಘಾಳಿಯು ಪಶ್ಚಿಮ ದಿಕ್ಕಿನಿಂದಲಾರಂಭಿಸಿ ಕ್ರಮದಿಂದ ತಿರಿಗಿ ನಾಲ್ಕು ದಿಕ್ಕುಗಳಿಂದ ಬೀಸಲಾರಂಭಿಸಿತು. ಕಪ್ತಾನರು ಹಡಗವನ್ನು ತಮ್ಮಿಂದಲಾಗುವಷ್ಟು ಹೊರಗೆ ನಡಿಸಲಿಕ್ಕೆ ಪ್ರಯತ್ನ ಮಾಡಿದರು. ಕೆಲವು ತಾಸುಗಳ ಮೇಲೆ ಆಗ್ನೇಯ ದಿಕ್ಕಿನಿಂದ ಪ್ರಚಂಡವಾಯು ಬಂದು ಸಮುದ್ರವು ಬೇಯುವ ನೀರಿನಂತೆ ಉಕ್ಕಿ ಹಡಗವು ಚೆಂಡಿನ ಹಾಗೆ ತೆರೆಗಳ ಮೇಲೆ ಹಾರ್ಯಾಡುತ್ತಾ ಯಿತ್ತು ಬಹಳ ಬರದೆ ಆದರೂ ನನ್ನ ಕಥೆಯು ಮುಗಿಯಲಿಲ್ಲ. ಯೀ ಕಾಗದ ಲಕೋಟೆ ಮಾಡಿ ಮಿಕ್ಕಾದದ್ದು ಕಲ್ಕತ್ತಾದಲ್ಲಿ ಮುಟ್ಟಿದ ತರುವಾಯ ಮೂರನೆ ಕಾಗದದಲ್ಲಿ ವಿವರಸುವೆನು. ಯೀ ಸಮಾಚಾರವನ್ನು ನಮ್ಮ ಸ್ನೇಹಿತರಿಗೆ ತಿಳಿಸಿ ನನ್ನ ನಮಸ್ಕಾರ ಸಲಾಮುಗಳನ್ನು ಹೇಳಬೇಕು.

ನಿನ್ನ ಸ್ನೇಹಿತನಾದ ಕೃಷ್ಣನು.

ಯಿಪ್ಪತ್ತೊಂದನೆ ಪುಟದಲ್ಲಿ ತೀರದೆಯಿದ್ದ ಭೂಗೋಳದ ಸಾರವು

Geography.—Continued.

ಒಂಭತ್ತನೆ ಸಂಧಿ. ಸಮುದ್ರದ ಭರತೆಯಿಳಿತೆಗಳು.

ಸಮುದ್ರವು ಹನ್ನೆರಡು ತಾಸುಗಳೊಳಗೆ ಒಂದು ಸಾರಿ ಉಬ್ಬಿ ತಗ್ಗುತ್ತದೆ ಯಿದಕ್ಕೆ ಯಾವ ಕಾರಣವೆಂದರೆ ಹಿಂದೂಜನರು ಒಂದು ಕಥೆಯನ್ನು ಮಾಡಿದ್ಧಾರೆ ಸಮುದ್ರದ ಸುತ್ತಲು ಎರಡು ದೊಡ್ಡ ಮೀನುಗಳು ಯಿರುತ್ತವೆ ಅವುಗಳ ಹೆಸರು ತಿಮಿ ತಿಮಿಂಗಿಲ ಅವುಗಳಲ್ಲಿ ಒಂದು ನಿಶ್ವಾಸ ಮಾಡಿದರೆ ನೀರು ಕಡಮೆಯಾಗಿ ಯಿಳಿತೆವಾಗುತ್ತದೆ ಮತ್ತೊಂದು ಉಶ್ವಾಸ ಮಾಡಿದರೆ ನೀರು ಹೆಚ್ಚಾಗಿ ಭರತೆವಾಗುತ್ತದೆ ಎಂದು ಹೇಳುತ್ತಾರೆ ಆದರೆ ಹಿಂದೂಜನರಲ್ಲಿಯೂ ಸ್ವಲ್ಪ ಹೆಚ್ಚು ಆಲೋಚನೆ ಮಾಡಿದವರಿಗೆ ಚಂದ್ರನು ಯೀ ಭರತೆ ಯಿಳಿತೆಗಳಿಗೆ ಕಾರಣವಾಗಿದ್ಧಾನೆಂದು ತಿಳಿಯುತ್ತದೆ ಮತ್ತು ಚಂದ್ರನ ಉದಯಾಸ್ತಮಯಗಳನ್ನು ತಿಳಿದುಕೊಂಡು ನಾವಿಕರೂ ಮೀನಗಾರರೂ ನೀರು ಯಾವ ಸಮಯದಲ್ಲಿ ಬರುವದೋ ಯಾವ ಸಮಯದಲ್ಲಿ ಕಡಿಮೆಯಾಗುವದೋ ಎಂದು ಮೊದಲೇ ತಿಳಿದುಕೊಳ್ಳುತ್ತಾರೆ ಆದರೆ ಚಂದ್ರನಿಗೆ ಭೂಮಿಯ ಮೇಲೆ ಯಿಷ್ಟು ಅಧಿಕಾರ ಹ್ಯಾಗೆ ಬಂತು ಸಮಸ್ತ ನಕ್ಷತ್ರಗಳು ಆಕಾಶದಲ್ಲಿ ನೆಲಗಟ್ಟು ಯಿಲ್ಲದೆ ತೂಗುತ್ತಾ ತಮ್ಮತಮ್ಮೊಳಗೆ ಆಕರ್ಷಿಸಿ ಕೊಳ್ಳುತ್ತಾವೆ ಅದೇ ಪ್ರಕಾರ ಚಂದ್ರನು ಭೂಮಿಯನ್ನು ಆಕರ್ಷಿಸುವಾಗ ಯಿಂಥಾ ಆಕರ್ಷಣೆಯಿಂದ ಸ್ಥಾವರವಾದ ನೆಲಭೂಮಿಯಲ್ಲಿ ಏನಾದರು ಆಕಾರಭೇದವಾಗುವದಿಲ್ಲ ಆದರೆ ಜಂಗಮವಾದ ಸಮುದ್ರದ ನೀರು ಆಕರ್ಷಣೆ ಹೆಚ್ಚಾಗುವ ಸ್ಥಳದಲ್ಲಿ ಕೂಡಿ ಬರುತ್ತದೆ ಆಕರ್ಷಣೆ ಕಡಿಮೆಯಿರುವ ಸ್ಥಳದಿಂದ ಹೋಗಿಬಿಡುತ್ತದೆ ಯೀ ಪ್ರಕಾರ ಯಾವ ಯಾವ ಸ್ಥಳಕ್ಕೆ ಚಂದ್ರನು ಅಭಿಮುಖವಾಗಿರುತ್ತಾನೋ ಆಯಾ ಸ್ಥಳದಲ್ಲಿ ನೀರು ಕೂಡಿಬಂದು ಭರತೆವಾಗುತ್ತದೆ ಚಂದ್ರನಿಗೆ ವಿಮುಖವಾದ ಸ್ಥಳದಲ್ಲಿ ನೀರು ಆಕರ್ಷಿಸಲ್ಪಡದೇ ಯಿರುವದರಿಂದ ಯಥಾಪ್ರಕಾರ ಯಿರುತ್ತದೆ ಚಂದ್ರನಿಗೆ ಅಭಿಮುಖವಾಗಿರುವ ಸ್ಥಳದ ಉಭಯಪಾರ್ಶ್ವಗಳಿಂದ ನೀರು ಚಂದ್ರನ ಕಡೆಗೆ ಎಳೆಯಲ್ಪಡುವದರಿಂದ ಕಡಿಮೆಯಾಗುತ್ತದೆ ಅದಕ್ಕೆ ಪೂರ್ಣವಿಮುಖವಾದ ಸ್ಥಳಗಳಲ್ಲಿ ನೀರು ಆಕರ್ಷಣೆ ಪಡದೆ ಯಿದ್ದರು ಅಭಿಮುಖವಾದ ಸ್ಥಳದಲ್ಲಿ ಗುಂಪಾದದರಿಂದ ವಿಮುಖವಾದ ಸ್ಥಳದಲ್ಲಿಯೂ ಗುಂಪಾಗುತ್ತದೆ ಯಿದು ಕಾರಣ ಸಮುದ್ರತೀರದಲ್ಲಿರುವ ನಾವಿಕರು ಚಂದ್ರನು ತಮ್ಮ ತಲೆಗಳ ಮೇಲಿರುವ ಸಮಯದಲ್ಲಿಯೂ ಚಂದ್ರನು ಭೂಮಿಯ ಆಚೆಯಲ್ಲಿ ತಮ್ಮ ಕಾಲುಗಳ ಕೆಳಗಿರುವ ಸಮಯದಲ್ಲಿಯೂ ಭರತೆವಾಗುವದೆಂದು ತಿಳಿದು ಕೊಳ್ಳುತ್ತಾರೆ ಹುಣ್ಣುಮೆ ದಿವಸದಲ್ಲಿ ಚಂದ್ರನು ಆರುಘಂಟೆ ಸಾಯಂಕಾಲದಲ್ಲಿ ಉದಯವಾಗುವದರಿಂದ ರಾತ್ರಿ ಹನ್ನೆರಡು ಘಂಟೆಗೂ ಮಧ್ಯಾಹ್ನ ಹನ್ನೆರಡು ಘಂಟೆಗೂ ಭರತೆವಾಗುತ್ತದೆ ಅದೇ ಪ್ರಕಾರ ಅಮಾವಾಸ್ಯೆ ದಿವಸದಲ್ಲಿ ಚಂದ್ರನು ಬೆಳಿಗ್ಯೆ ಆರುಘಂಟೆಗೆ ಉದಯಿಸುವದರಿಂದ ಮಧ್ಯಾಹ್ನ ಹನ್ನೆರಡು ಘಂಟೆಗೂ ಮಧ್ಯರಾತ್ರಿ ಹನ್ನೆರಡು ಘಂಟೆಗೂ ಭರತೆವಾಗುತ್ತದೆ ಹೀಗೆಯೆ ಸಪ್ತಮಿ ದಿವಸದಲ್ಲಿ ಚಂದ್ರನು ರಾತ್ರಿ ಸುಮಾರು ಹನ್ನೆರಡು ಘಂಟೆಗೆ ಉದಯವಾಗುವದರಿಂದ ಬೆಳಿಗ್ಯೆ ಆರುಘಂಟೆಗೂ ಸಾಯಂಕಾಲ ಆರುಘಂಟೆಗೂ ಭರತೆವಾಗುವದು ಆದರೆ ಹುಣ್ಣುಮೆ ದಿವಸದಲ್ಲಿ ಸೂರ್ಯನು ಭೂಮಿಯ ಒಂದು ಕಡೆಯಲ್ಲಿಯೂ ಚಂದ್ರನು ಅದರ ಮತ್ತೊಂದು ಕಡೆಯಲ್ಲಿಯೂ ತಮತಮಗೆ ಅಭಿಮುಖವಾಗಿರುವದರಿಂದಲೂ ಹುಣ್ಣುಮೆ ದಿವಸದಲ್ಲಿ ಸೂರ್ಯನೂ ಚಂದ್ರನೂ ಭೂಮಿಯ ಒಂದು ಕಡೆಯಲ್ಲಿ ತಮತಮಗೆ ಸಮೀಪವಾಗಿರುವದರಿಂದಲೂ ಆ ಸೂರ್ಯಚಂದ್ರರ ಆಕರ್ಷಣೆಯಿಂದ ಭರತೆಯಿಳಿತೆಗಳು ಹೆಚ್ಚಾಗುತ್ತವೆ ಯಿನ್ನು ಅಯನ ಸಮಯದಲ್ಲಿ ಯಿದಕ್ಕಿಂತಲು ದೊಡ್ಡಭರತೆಯಿಳಿತೆಗಳು ಬರುತ್ತವೆ ಭರತೆಯಿಳಿತೆಗಳಿಂದ ಸಮುದ್ರನೀರಿನ ಆಳದ ಹೆಚ್ಚುಕಡಿಮೆ ಕೆಲವು ಸ್ಥಳಗಳಲ್ಲಿ ಮೂರು ನಾಲ್ಕು ಮೊಳವಾಗಿರುತ್ತದೆ ಬೇರೆ ಸ್ಥಳಗಳಲ್ಲಿ ಸಮುದ್ರದ ಅಡ್ಡವೂ ನೀರಿನ ಪ್ರವಾಹವೂ ಗಾಳಿಯ ಬೀಸುವಿಕೆಯೂ ಯೀ ಕಾರಣಗಳ ಸಹಾಯದಿಂದ ಭರತೆವಾಗುವಾಗ ಸಮುದ್ರವು ನಲ್ವತ್ತು ಐವತ್ತು ಮೊಳ ಎತ್ತರವಾಗಿ ಏರುತ್ತದೆ ಯಿಳಿತೆಕ್ಕೆ ಅಷ್ಟೇ ತಗ್ಗುತ್ತದೆ.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡಸಮಾಚಾರವು.

೧೮೪೪.

೧ನೆ ಪುಸ್ತಕ. ೮ನೆ ಅಂಕೆ.] ಬಳ್ಳಾರಿ ೧೫ ನೆ ಜೂನ್ [ಟಪಾಲ ದಸ್ತೂರಿಕೂಡಿ. ಕ್ರಯ ೨ ದುಡ್ಡು

Bengal.
ಬಂಗಾಳ.

ಸಿಂಧುದೇಶದ ಅಮೀರರು ಮುಂಬೈಯಲ್ಲಿ ಸರ್ ಆರ್ಥರ್ ಗವರ್ನರವರಿಂದ ಪುಸ್ತಕಗಳೂ ಭೂಷಣಗಳೂ ಮೊದಲಾದ ದಾನಗಳನ್ನು ಹೊಂದಿ ತಮಗೆ ಯೋಗ್ಯವಾದ ಮಾನಮರ್ಯಾದೆಯಿಂದ ಅಪ್ಪಣೆ ತೆಗೆದುಕೊಂಡು ಹಡಗವನ್ನೇರಿ ತಕ್ಕ ಕಾಲದಲ್ಲಿ ಬಂಗಾಳದೇಶದಲ್ಲಿಳಿದರು ಅಲ್ಲಿ ಬಂದ ಕೆಲವು ದಿವಸಗಳ ಮೇಲೆ ಅಲ್ಲಿರುವ ಗವರ್ನರ್ ಜನರಲ್ ಬಹದೂರವರು ಅವರನ್ನು ಬರಕ್‌ಪೂರದಲ್ಲಿರುವ ತಮ್ಮ ಅರಮನೆಗೆ ಕರೆದು ಅವರಿಗೆ ತಕ್ಕ ಮಾನಮರ್ಯಾದೆಗಳನ್ನು ಮಾಡಿದರು ಕಲ್ಕತ್ತಾಪಟ್ಟಣಕ್ಕೆ ಹೋಗಲಿಕ್ಕೆ ಅವರಿಗೆ ಅಪ್ಪಣೆ ಸಿಕ್ಕಲಿಲ್ಲ ಆದರೆ ಅವರು ಸೆರೆಯವರಾಗಿದ್ದರೂ ಲೋರ್ಡ್ ಬಹದೂರ್ ಅವರಿಗೆ ಸೆರೆಯವರ ಹಾಗೆ ನಡಿಸುವದಿಲ್ಲ ಇದಲ್ಲದೆ ಸ್ವಲ್ಪಕಾಲದ ಮೇಲೆ ಅವರಿಗೆ ಕುಂಪಣಿಯವರ ಕೈಯಿಂದ ಕೆಲವು ಲಕ್ಷರೂಪಾಯಿ ಪಿಂಚನ್ ಪ್ರತಿವರ್ಷಕ್ಕೆ ಸಿಕ್ಕುವದೆಂಬುವದಕ್ಕೆ ಸಂದೇಹವೇನೂ ಇಲ್ಲ.

Scinde.
ಸಿಂಧುದೇಶ.

ಸಿಂಧುದೇಶದಲ್ಲಿರುವ ಹೈದರಾಬಾದ್ ಸಿಂಧುದೇಶದ ಗವರ್ನರ್ ದೊರೆಯಾಗಿರುವ ಸರ್ ಚಾರ್ಲ್ಸ್ ನೇಪಿಯರ್ ಕರಾಚಿಯಿಂದ ಹೈದರಾಬಾದಿಗೆ ತಿರಿಗಿಬಂದು ಸಿಂಧುದೇಶದಲ್ಲಿ ಉಳಿದಿರುವ ಸಕಲ ಅಮೀರರಿಗೂ ಮುಖ್ಯಸ್ಥರಿಗೂ ಪತ್ರಿಕೆಗಳನ್ನು ಕಳುಹಿಸಿ ಮೇ ತಾರೀಖು ೨೪ ನೆಯಲ್ಲು ಹೈದರಾಬಾದಿನಲ್ಲಿ ಆಗುವ ಮಹಾದರ್ಬಾರಿಗೆ ಬರಬೇಕೆಂದು ಅಪ್ಪಣೆಕೊಟ್ಟರು ಯಾವ ಕೆಲಸಕ್ಕೆ ಈ ರಾಜನೀತಿಯನ್ನು ಮಾಡುತ್ತಾರೆಂದು ಜನರಿಗೆ ತಿಳಿಯುವದಿಲ್ಲ ಒಂದುವೇಳೆ ರಾಜಕೆಲಸಕ್ಕೋಸ್ಕರ ಅವರಸಂಗಡ ಮಾತಾಡಲಿಕ್ಕೆ ಅವರಿಗೆ ಕರೆದಿದ್ದಾರೆ ಒಂದುವೇಳೆ ಅಮೀರರಲ್ಲಿ ಒಬ್ಬನು ಇಂಗ್ಲಿಷ್ ಸರ್ಕಾರದವರಸಂಗಡ ಯುದ್ಧಮಾಡಲಿಕ್ಕೆ ದಂಡು ಕಟ್ಟುತ್ತಾನೆಂಬ ವರ್ತಮಾನ ಬಂದದರಿಂದ ಕರೆದಿರಬಹುದು.

Lahore.
ಲಾಹೂರ್.

ನಾವು ಮುಂಚೆ ಹೇಳಿದಪ್ರಕಾರ ಹೀರಾಸಿಂಗನಿಗೆ ಆಯಿತು ಭಂಡಾರದ ಹಣ ಹೋಯಿತು ಸಿಪಾಯಿಜನರು ಅವನಿಗೆ ಹೆದರಿಸಿ ಇನ್ನು ಇನ್ನು ಹಣ ಕೇಳುತ್ತಾರೆ ಮನಸ್ಸುಬಂದಹಾಗೆ ರಜಾ ತೆಗೆದುಕೊಂಡು ಗುಂಪುಗುಂಪಾಗಿ ದೇಶದಲ್ಲಿ ತಿರುಗಾಡಿ ಲೂಟಮಾಡುತ್ತಾರೆ. ಹೀರಾಸಿಂಗನು ರಜಾ ತೆಗೆದುಕೊಳ್ಳುವವರು ತಮ್ಮ ಆಯುಧಗಳನ್ನು ಇಟ್ಟುಹೋಗಬೇಕೆಂದು ಅಪ್ಪಣೆ ಕೊಟ್ಟಂದಿನಿಂದ ಅವರು ಹೀಗೆಮಾಡಿ ಬಹಳ ಹಣ ಇರುವದರಿಂದ ಬಾಜಾರಿಗೆಹೋಗಿ ಬೇಕಾದ ಆಯುಧಗಳನ್ನು ಕ್ರಯಕ್ಕೆ ತೆಗೆದುಕೊಂಡು ಹೋಗುತ್ತಾರೆ. ರಹಿತರೆಲ್ಲಾ ಗೋಳಾಡಿ ಇಂಗ್ಲಿಷ್ ಸರ್ಕಾರದವರು ದೇಶವನ್ನು ತೆಗೆದುಕೊಂಡು ಆಳಿದರೆ ಕ್ಷೇಮವಾದೀತೆಂದು ಹೇಳುತ್ತಾರೆ. ಐಶ್ವರ್ಯವಂತರು ಹೊನ್ನು ಹಣ ಒಡವೆಗಳನ್ನು ಭೂಮಿಯಲ್ಲಿ ಆಚ್ಛಾದನೆ ಮಾಡಿಡುತ್ತಾರೆ ಸಾಹುಕಾರರು ತಮ್ಮ ವ್ಯಾಪಾರ ಜಿನಸುಗಳನ್ನು ಮಾರಿ ದೇಶಬಿಟ್ಟು ಹೋಗುತ್ತಾರೆ ಈ ಪ್ರಕಾರವಾಗಿ ರಣಜಿತ್ ಸಿಂಗನು ಸ್ವಲ್ಪಕಾಲದ ಹಿಂದೆ ಕಟ್ಟಿದ ದೊಡ್ಡರಾಜ್ಯವು ಹಾಳಾಗುತ್ತಾ ಬರುತ್ತದೆ.

Cabool.
ಕಾಬೂಲ್.

ದೊಡ್ಡವರಲ್ಲಿ ಕೆಲಬರು ಅಂತರಂಗದಲ್ಲಿ ಒಡಂಬಡಿಕೆ ಕಟ್ಟಿಕೊಂಡು ದೊಸ್ತ ಮಹಂಮದ್ ಖಾನನಿಗೆ ವಿರೋಧವಾಗಿ ಎದ್ದರೆಂದು ವರ್ತಮಾನ ಬಂತು ದೊಸ್ತ ಮಹಂಮದ್ ಖಾನ್ ದೂರಸ್ಥಳದಲ್ಲಿದ್ದು ಈ ಸುದ್ದಿ ಕೇಳುತ್ತಲೆ ತನ್ನ ದಂಡಿನ ಸಂಗಡ ಕಾಬೂಲಿಗೆ ತಿರಿಗಿಹೋಗಿ ಆ ದ್ರೋಹಿಗಳನ್ನು ದಂಡಿಸಲಿಕ್ಕೆ ತ್ವರೆಮಾಡಿದನು ಇದಲ್ಲದೆ ಅವನ ಮಗನಾದ ಅಕಬಾರ್ ಖಾನ್ ಜಲಲಾಬಾದ್ ಒಂದು ಸೈನ್ಯದಸಂಗಡ ಬಿಟ್ಟು ಪಿಶಾವರ ಹತ್ತರ ಇರುವ ಕೆಲವು ತಾಲೂಕುಗಳಲ್ಲಿ ಖಿಸ್ತಿ ಹಣ ಕೂಡಿಸಿ ಅವಿಧೇಯರಾಗಿರುವ ಕೆಲವು ಮುಖ್ಯಸ್ಥರನ್ನೂ ಊರುಗಳನ್ನೂ ಆಫಗಾನ್ ಜನರ ಮರ್ಯಾದೆಯ ಪ್ರಕಾರ ಶಿಕ್ಷಿಸುತ್ತಾ ಇರುವದರಲ್ಲಿ ಕಾಬೂಲಿನಲ್ಲಿ ಆದ ಕಾಟಕಾಯಿ ವರ್ತಮಾನ ಕೇಳುತ್ತಲೆ ಜಲಾಲಾಬಾದಿಗೆ ತಿರಿಗಿದನು.

Madras.
ಮದ್ರಾಸ್.

ಗವರ್ನರ್ ಬಹದೂರ್ ಬರುವ ಜನವರಿ ತಿಂಗಳಲ್ಲಿ ಉತ್ತಮ ಶುದ್ಧಬಿಳುಪಾದ ರೇಶಿಮೆಯ ಇಪ್ಪತ್ತು ಪೌಂಡ್ ಭಾರವನ್ನು ಮದ್ರಾಸಿಗೆ ಕಳುಹಿಸಿ ತೋರಿಸುವವರಿಗೆ ಮುನ್ನೂರು ರೂಪಾಯಿ ಇನಾಮು ಸಿಕ್ಕುವದೆಂದು ಪ್ರಕಟಮಾಡಿದ್ದಾರೆ ಒಂದು ಪೌಂಡ್ ನಾಲ್ವತ್ತು ರೂಪಾಯಿ ತೂಕವಾಗಿದೆ ಈ ಇನಾಮು ಹೊಂದಬೇಕೆಂದಿರುವವರು ಶುದ್ಧಬಿಳುಪಾದ ರೇಶಿಮೆಯ ಹೊರತು ಬೇರೆ ಯಾವ ವರ್ಣದ ಉತ್ತಮ ರೇಶಿಮೆಯನ್ನಾದರೂ ಕಳುಹಿಸಿ ತೋರಿಸಿದರೆ ವ್ಯರ್ಥವಾಗಿದೆ ದೊರೆಗಳೂ ಹಿಂದೂಜನರೂ ಅನೇಕರು ಈ ಇನಾಮು ಸಿಕ್ಕಿದರೆ ಮಾನವೆಂದು ತಿಳಿದುಕೊಂಡು

ತಂಮತಂಮ ರೇಶಿಮೆಮನೆಗಳಿಂದ ನೇಮಿಸಿದ ಕಾಲದಲ್ಲಿ ರೇಶಿಮೆಯ ಮಾದ್ರಿಗಳಂನು ಮದ್ರಾಸಿಗೆ ಕಳುಹಿಸುವರು ಆದರೆ ವೊಬ್ಬರಿಗೆ ಮಾತ್ರ ಯಿನಾಮು ಸಿಕ್ಕುವದು ಗವರ್ನರ್ ಧೊರೆಗಳು ಆ ರೇಶಿಮೆಯ ಪರೀಕ್ಷೆ ಮಾಡಿದ ಮೇಲೆ ಮಾದ್ರಿಗಳಂನೆಲ್ಲಾ ಅವುಗಳಂನು ಕಳುಹಿಸಿದ ಜನರಿಗೆ ತಿರಿಗಿ ಕೊಡುವರು.

ಮೊದಲನೆ ಪುಸ್ತಕ ಯಿಪ್ಪತ್ತೈದನೆ ಪುಟದಲ್ಲಿ ತೀರದೆಯಿದ್ದ

An Account of Hindostan.—— Chapter Third.

ಹಿಂದೂದೇಶದ ವರ್ಣನೆಯು.

ಇನಿ ಅಲೆಕಸಾಂದ್ರನ ಮೇಲೆ ಮುಸಲ್ಮಾನರು ಬರುವ ಪರಿಯಂತ್ರ ಹಿಂದುದೇಶವಂನು ಕುರಿತು ವಿಲಾಯಿತಿನವರಿಗೆ ಬಂದ ವರ್ತಮಾನವು ಅಲೆಕಸಾಂದ್ರನ ಮೇಲೆ ಜಯ ಉಳ್ಳವನಾದ ಸೆಲ್ಯೂಕಸ ಯೇಸುಕ್ರೀಸ್ತನ ಮುಂಚೆ ೩೧೨ನೆ ವರ್ಷದಲ್ಲಿ ಚಂದ್ರಗುಪ್ತನಿಗೆ ವಿರೋಧವಾಗಿ ಶತದ್ರು ನದಿಯಂನು ದಾಟಿ ಯಮುನಾತೀರದ ಪರಿಯಂತ್ರ ಹೋಗಿ ಯಿವನ ಸಂಗಡ ವೊಡಂಬಡಿಕೆ ಮಾಡಿ ಯಿವನ ಹತ್ರ ದೂತನಾಗಿ ಮೆಗಾಸ್ಥಿನಸನಂನು ಯಿರಿಸಿದನು ಯೀ ಮೆಗಾಸ್ಥಿನಸನು ಹಿಂದು ದೇಶದ ಮರ್ಯಾದೆಗಳನ್ನೂ ಸಂಸ್ಥಾನವನ್ನೂ ನ್ಯಾಯವನ್ನೂ ಯುದ್ಧವಿದ್ಯೆಯನ್ನೂ ಕುರಿತೂ ಅಶ್ವತ್ಥಮರ ಹೆಬ್ಬಾವು ಹುಲಿ ಯಿತ್ಯಾದಿ ಪ್ರಾಣಿಗಳನ್ನು ಕುರಿತೂ ತಾನೆ ಪಾಟಲಿಪುತ್ರವೆಂಬ ಪಟ್ಣದಲ್ಲಿ ನೋಡಿದ ಪ್ರಕಾರ ವರ್ತಮಾನ ಕೊಡುತ್ತಾನೆ ಅದರ ಮೇಲೆ ಮಿಸ್ರಾಯಿಂದೇಶದಲ್ಲಿ ಅರಸುಗಳಾದ ಟೋಲೆಮ್ಯೆಯರು ಹಿಂದುದೇಶದವರ ಸಂಗಡ ವ್ಯಾಪಾರ ಮಾಡಿ ಕೆಂಪುಸಮುದ್ರದಿಂದ ಹಿಂದುದೇಶಕ್ಕೆ ಹೋಗುವ ವ್ಯಾಪಾರ ಮಾರ್ಗವಾಗಿ ಕೆಲವು ನಿಶ್ಚೈಸಿದರು ಯೇಸುಕ್ರೀಸ್ತನ ಮೇಲೆ ೨ನೆ ವರ್ಷಶತಕದಲ್ಲಿ ಹುಟ್ಟಿದ ಆರ್ರಿಯಾನನು ಹಡಗದವಿದ್ಯಕ್ಕೆ ಬೇಕಾದ ಅಳವೆಗಳನ್ನೂ ಬಜಾರಗಳನ್ನೂ ವ್ಯಾಪಾರಗಳನ್ನೂ ಸುಂಕಗಳನ್ನೂ ಕುರಿತು ಅನೇಕ ವರ್ತಮಾನವನ್ನು ಕೊಡುತ್ತಾನೆ ಯೀಗಿನ ಬೋಖಾರಾ ಕಬೂಲ್ ಪಂಚಾಪವೆಂಬ ಬಕ್ತ್ರಿಯ ರಾಜ್ಯವು ಸೆಲ್ಯೂಕರಿಗೆ ವಶವಾಗದೇ ಯೇಸುಕ್ರೀಸ್ತನು ಹುಟ್ಟುವ ಮುಂಚೆ ೩೫೦ನೆ ಮೇಲೆ ೨೫೦ ವರ್ಷ ಪರಿಯಂತ್ರ ಪ್ರಬಲವಾಯಿತು ಪೂರ್ವದಿಕ್ಕಿನಲ್ಲಿ ಪ್ರಾಸಿಯವೆಂಬ ಬಂಗಾಳರಾಜ್ಯವು ಬೆಳದು ಅಲೆಕಸಾಂದ್ರನು ಸತ್ತುಹೋದ ಕೆಲವು ವರ್ಷದ ಮೇಲೆ ೬ ಲಕ್ಷ ಪಾಯದಳ ೩೦ ಸಾವಿರ ಸವಾರರು ೯ ಸಾಪಿರ ಆನೆಗಳು ಸಂಪಾದನೆ ಆಯಿತು ಯೀ ರಾಜ್ಯದಲ್ಲಿ ಚಂದ್ರಗುಪ್ತನು ಅವನ ಮಗನಾದ ಅಮಿತ್ರಘಾತ ಆ ಮೇಲೆ ಅಶೋಕ ಯಿತ್ಯಾದಿ ಅರಸುಗಳಿದ್ದರು ಅಷ್ಟರೊಳಗೆ ಬಕ್ತ್ರಿಯರು ಪ್ರಾಸಿಯರ ರಾಜ್ಯವನ್ನು ಕೆಡಿಸಿದ ಮೇಲೆ ಯೀ ಬಕ್ತ್ರಿಯರಿಗೆ ವಿರೋಧವಾಗಿ ಶಾಕರು ಬಂದು ರಾಜ್ಯವನ್ನು ತೆಕೊಂಡರು ಯಿವರು ಹೆಚ್ಚು ಕಡಿಮೆ ೫೦ ವರ್ಷ ಪರಿಯಂತ್ರ ಪಂಚನದದಲ್ಲಿ ಆಳಿದ ಮೇಲೆ ಯೇಸುಕ್ರೀಸ್ತನ ಮುಂಚೆ ೫೬ನೆ ವರ್ಷದಲ್ಲಿ ವಿಕ್ರಮಾದಿತ್ಯನು ಅವರಿಗೆ ಮಹಾ ಕೀರ್ತಿ ಮಹಾಘನದಿಂದ ಅಪಜಯ ಮಾಡಲಾಗಿ ಉತ್ತರ ಹಿಂದುದೇಶದಲ್ಲಿ ಸಂಪ್ರದಾಯವಾದ ಶಕಾಬ್ದವೆಂಬ ವಿಕ್ರಮಾದಿತ್ಯಶಕ ಉಂಟಾಯಿತು. ಯೀ ವಿಕ್ರಮಾದಿತ್ಯನ ಮೂಲಪಟ್ಣ ಉಜ್ಜಯನಿಯಾಗಿತ್ತು. ಅಲ್ಲಿಂದ ಬೌದ್ಧನಾಗಿದ್ದ ವಿಕ್ರಮಾದಿತ್ಯನು ಗಂಗಾತೀರಕ್ಕೆ ಹೋಗಿ ಕನ್ಯಾಕುಬ್ಜದಲ್ಲಿಯೂ ಅಯೋಧ್ಯೆಯಲ್ಲಿಯೂ ದರ್ಬಾರ ಮಾಡಿ ಕಾಶಿಯಲ್ಲಿ ವಿದ್ಯೆಯನ್ನು ಹೆಚ್ಚಿಸಿ ನವರತ್ನನಿವೆಂಬ ಉತ್ತಮವಾದ ಕವೀಶ್ವರರನ್ನೂ ಜ್ಞಾನಿಯರನ್ನೂ ತನ್ನ ದರ್ಬಾರಿಗೆ ಕರಕೊಂಡು ಕಡೇಲಿ ದಕ್ಷಿಣದೇಶದವನಾದ ಶಾಲಿವಾಹನನ ಕೈಯಿಂದ ಸತ್ತುಹೋದನು. ಆ ಸಮಯದಲ್ಲಿ ಬೌದ್ಧರ ಮತ ಮತ್ತು ಜೈನರ ಮತ ದೇಶದಲ್ಲಿ ಪ್ರಬಲವಾಗಿ ಶಂಕರಾಚಾರ್ಯನು ಬರುವ ಪರಿಯಂತ್ರ ಅವುಗಳು ಮುಖ್ಯ ಮತಗಳಾಗಿದ್ದವುವೆಂದು ಹಿಂದುಶಾಸ್ತ್ರಗಳಿಂದಲೂ ಪ್ರಯಾಣಸ್ಥರಾದ ಗ್ರೀಕರ ಮತ್ತು ಚೀನಿಯರ ಚರಿತ್ರೆಗಳಿಂದಲೂ ತೋಚುತ್ತದೆ.

ಇನಿ ಹಿಂದುಸ್ಥಾನದೇಶದಲ್ಲಿದ್ದ ಸೀಮೆ ಪಟ್ಣ ಪರ್ವತಾದಿಗಳ ಪೂರ್ವ ಹೆಸರುಗಳು ಹಿಂದುದೇಶಕ್ಕೆ ಜಂಬುದ್ವೀಪ ಭರತವರ್ಷ ಭರತಖಂಡವೆಂದು ಹೆಸರುಂಟು ಅದರಲ್ಲಿ ಉದೀಚ್ಯದೇಶ ಮಧ್ಯದೇಶ ದಕ್ಷಿಣದೇಶವೆಂಬ ಮೂರು ಭಾಗಗಳಾಗಿರುತ್ತವೆ ಪೂರ್ವಕ್ಕೂ ಪಶ್ಚಿಮಕ್ಕೂ ಮ್ಲೇಂಛದೇಶವು ಯಿರುತ್ತದೆ ಸಿಂಧುನದಿಗೆ ಮಹಾನದಿಯೆಂದು ಹೆಸರು ಮಧ್ಯದೇಶ ದಕ್ಷಿಣದೇಶ ಯಿವುಗಳ ಪ್ರಾಂತ್ಯದಲ್ಲಿ ವಿಂಧ್ಯಪರ್ವತವು ಯಿರುತ್ತದೆ ಘಟ್ಟಗಳಿಗೆ ಸಿಂಹಾದ್ರಿಯೆಂದು ಹೆಸರು ದಕ್ಷಿಣತುದಿಯಲ್ಲಿರುವ ಪರ್ವತಕ್ಕೆ ಕನ್ಯಾಕುಮಾರಿಯೆಂದು ಹೆಸರು. ಗಂಗಾನದಿಗೆ ಹತ್ರವಾದ ಸೀಮೆಗಳಿಗೆ ಅನುಗಂಗವೆಂದು ಹೆಸರು. ಭಾಗೀರಥೀ ಜಾನ್ಹವೀ ಅಳಕಾನಂದಾವೆಂಬ ೩ ಬುಗ್ಗೆಗಳಿಂದ ಕೂಡಿದ ಗಂಗಾನದಿಗೆ ತ್ರಿಪಥಗಂಗಾವೆಂಬ ಹೆಸರು ದೇವಪ್ರಯಾಗದ ಮೇಲೆ ಶಿವನು ಗಂಗೆಗೆ ಮಾರ್ಗ ತೋರಿಸಿದನೆಂದು ಕಟ್ಟುಕಥೆಯುಂಟು. ಅಲ್ಲಿಂದ ಅಲಹಾಬಾದ ಪರಿಯಂತ್ರ ಹರಿದ್ವಾರವಾದ ಜೋಗುಗಳಿಗೆ ಕತದ್ವೀಪವೆಂದು ಹೆಸರು. ಸರಸ್ವತಿ ದೃಷದ್ವತಿನದಿಗಳ ಮಧ್ಯದಲ್ಲಿಯಿದ್ದ ದೇಶವು ಆರ್ಯಾವರ್ತ ಅಥವಾ ಬ್ರಹ್ಮಾವರ್ತದೇಶವು. ಅದರ ಪಶ್ಚಿಮಕ್ಕೆ ಬರ್ಬರ ಗೋತ್ರಗಳು. ಪೂರ್ವಕ್ಕೆ ಯಮುನಾ ಗಂಗಾ ಮಧ್ಯವಾದ ಬ್ರಹ್ಮರ್ಷಿದೇಶವು. ಅದರಲ್ಲಿ ಕುರುಕ್ಷೇತ್ರ ಮತ್ಸ್ಯ ಪಾಂಚಾಲ ಅಥವಾ ಕನ್ಯಾಕುಬ್ಜ ಸೂರಸೇನ ಅಥವಾ ಮಥುರಾವೆಂಬ ೪ ಸೀಮೆಗಳು ಮನು ೨-೧೯ ಗಂಗಾನದಿಗೆ ಮೇಲುಮುಖವಿರುವದರಿಂದ ಸಪ್ತಮುಖೀಯೆಂದು ಹೆಸರುವುಂಟಾಯಿತು. ಮುಖಗಳು ಹೆಚ್ಚು ಆಗುವಾಗ್ಯೆ ಶತಮುಖಿಯೆಂದು ಹೇಳಿದರು. ಪಾಂಚಾಲದೇಶದ ಅರಸನ ಪಟ್ಣವು ಹಸ್ತಿನಾಪುರ. ಯಮುನಾತೀರದಲ್ಲಿ ಯೀಗಿನ ಡಿಲ್ಲಿಪಟ್ಣದಸ್ಥಳದಲ್ಲಿ ಯಿಂದ್ರಪ್ರಸ್ಥ. ಅದರದಕ್ಷಿಣದಲ್ಲಿ ಸೂರಸೇನರ ಮುಖ್ಯಪಟ್ಣವಾದ ಮಥುರಾ ಯೀ ಮಥುರಾಪಟ್ಣವನ್ನು ಹಾಳುಮಾಡಿದ ಮೊಹಮ್ಮದನು. ೮೦೦ ವರ್ಷಗಳ ಮುಂಚೆ ಲೆಕ್ಕವಿಲ್ಲದ ದ್ರವ್ಯಗಳಂನು ವೈದನು. ಯಮುನಾ ಗಂಗಾ ಕೂಡಾಬರುವ ಸ್ಥಳಗಳಲ್ಲಿ ಯೀಗಿನ ಅಲಹಾಬಾದವೆಂಬ ದೇವಪ್ರಯಾಗವಿತ್ತು. ಯೀಗಿನ ಗೋಗ್ರವೆಂಬ ಸರಯೂನದೀತೀರದಲ್ಲಿರುವ ಕೋಸಲರಾಜ್ಯದ ಮುಖ್ಯಪಟ್ಣವು ಅಯೋಧ್ಯಾ. ಗಂಗಾ ಪಶ್ಚಿಮತೀರದಲ್ಲಿ ಯೀಗಿನ ಕನೋಜಿಯೆಂಬ ಕನ್ಯಾಕುಬ್ಜ. ಆಯೆರಡು ಪಟ್ಣಗಳ ಮಧ್ಯದಲ್ಲಿ ಗೋಮತೀ ತೀರದಲ್ಲಿ ಯೀಗಿನ ಲಕ್ನಾವೆಂಬ ಲಕ್ಷ್ಮಣಾವತೀ ದೇವಪ್ರಯಾಗದ ತೆಳಗೆ ವಿಹಾರದೇಶವು ಅದರ ಮೇಲೆ ಗಂಗಾ ಬ್ರಹ್ಮಪುತ್ರಿ ಮಧ್ಯದಲ್ಲಿ ಕುಮಾರಖಂಡ ಅಥವಾ ಗೌರವೆಂಬ ಬಂಗ ಅಥವಾ ಬಂಗಾಲದೇಶ ಪ್ರಯಾಗದ ಹತ್ರ ಕಾಶೀವೆಂಬ ವಾರಣಾಸಿ ವಾರಣಾಸಿಯ ದಕ್ಷಿಣಕ್ಕೆ ಕಿರಾತಪರ್ವತಗಳು ಉತ್ತರಕ್ಕೆ (ಬಸಲ)ದೇಶವು ನರಜನಿ ಅಥವಾ ಗಂಡಕಿ ಗಂಗಾ ಮತ್ತು ಕೌಶಿಕಾವೆಂಬ ನದಿಗಳ ಮಧ್ಯದಲ್ಲಿ ಮಿಥಿಲಾದೇಶ ಅದರ ಪೂರ್ವಕ್ಕೆ ಕೌಶಿಕಾ ಬ್ರಹ್ಮಪುತ್ರಿಯೆಂಬ ನದಿಗಳ ಮಧ್ಯದಲ್ಲಿ ಮತ್ಸ್ಯದೇಶವು ಬ್ರಹ್ಮಪುತ್ರಿ ಆಚೆಗೆ ಕಾಮರೂಪಾ ತ್ರಿಹತಾ ತ್ರಿಪುರಾವೆಂಬ ಸೀಮೆಗಳು ಗಂಗಾ ಬ್ರಹ್ಮಪುತ್ರಿ ತುದಿಯಲ್ಲಿ ಬಂಗಾಲದೇಶವು ಭಾಗೀರಥಿ ಅಥವಾ ಹುಗಳಿನದೀ ಹತ್ರ ಯೀಗಿನ ಕಲಕತ್ತಾಸೀಮೆಯಲ್ಲಿ ಅಂಗದೇಶವು ಪದ್ಮಾವೆಂಬ ಯೀಗಿನ ಬಲಸೋರ್ನದಿಯ ಹತ್ರ ಉಪವಂಗಸೀಮೆ ವಿಹಾರದ ಮುಖ್ಯಪಟ್ಣವಾದ ಯೀಗಿನ ಪಟ್ಣವೆಂಬುವದಕ್ಕೆ ಶ್ರೀನಗರ ಪಾಟಲಿಪುತ್ರ ಕುಸುಮಪುರವೆಂಬ

ಪೂರ್ವ ಹೆಸರುಗಳುಯಿದ್ದವು ಅದರ ಹತ್ರ್ರಯಿರುವ ನದಿಗೆ ಸ್ವರ್ಣನದಿ ಅಥವಾ ಹಿರಣ್ಯವಾಹಾಎಂಬ ಹೆಸರು ಯಿತ್ತು ಅದರ ಹತ್ರ್ರವಾದ ಗಯಾಊರು ಗೌತಮಬುದ್ಧನು ಹುಟ್ಟಿದಸ್ಥಳ ಅದರ ದಕ್ಷಿಣಪೂರ್ವಕ್ಕೆ ವೀರಭೂಮಿಸೀಮೆ ಯೀಗಿನ ಕಚ್ಛದೇಶಕ್ಕೆ ನಾಗಖಂಡವು ನರ್ಮದಾಯೀಚೆಗೆ ದಕ್ಷಿಣಭಾಗವು ಅದರಲ್ಲಿ ಮೊದಲನೆರಾಜ್ಯವು ಮಲ್ವಾ ಅದರಮುಖ್ಯಪಟ್ಣಗಳು ಭ್ರುಗುಗಜ ಪಿಲಿತಾನಾ ಎಂಬವು ಸಮಸ್ತ ಸಮುದ್ರತೀರಕ್ಕೆ ಮಲಯವರವೆಂದುಹೆಸರು ಅದರ ಭಾಗಗಳು ಕೊಂಕಣ ಹವಿಗ ತೌಳವ ಕೇರಳ ಪರ್ವತಗಳಮೇಲೆ ಮಹಿಷಾಸುರದೇಶವೆಂಬ ಯೀಗಿನ ಮಹಿಸೂರು ಅದುಹೊರ್ತು ದಕ್ಷಿಣವಾದ ಹಿಂದು ದೇಶವನ್ನುಕುರಿತು ವಿಶೇಷ ಪರಿಚಿತಿ ಯಿರಲಿಲ್ಲ.

ಮೊದಲನೆ ಪುಸ್ತಕ ಯಿಪ್ಪತ್ತನೆಪುಟದಲ್ಲಿ ತೀರದೆಯಿದ್ದ

The History of England.— Continued.

ಯಿಂಗ್ಲಾಂಡ್ ರಾಜ್ಯದ ಪೂರ್ವದ ಚರಿತ್ರೆ.

ಯಿಂಗ್ಲಾಂಡ್ ರಾಜ್ಯದ ಮುಖ್ಯಸರು ತಂಮ ಅರಸನಕೈಯಿಂದ ಮುಂಚೆ ಹೇಳಿದ ಮಹಾಶಾಸನವಂನು ಹೊಂದಿದಮೇಲೆ ರೋಮಾನ್ ಕ್ರೀಸ್ತರ ಮಹಾಗುರುವು ತನಗೆ ಯೀವಿಷಯದಲ್ಲಿ ಕೇಳಲಿಲ್ಲವೆಂದು ಯಿಂಥಾ ದೊಡ್ಡ ಕೆಲಸವಂನು ತಂನ ಅಪ್ಪಣೆಹೊರ್ತು ನಡಿಸಿದರೆ ತನಗೆ ಅವಮಾನವಾದೀತೆಂದು ಕೋಪಮಾಡಿ ಅರಸನಿಗೆ ಆಮಹಾಶಾಸನವಂನು ಲಕ್ಷಿಸಬಾರದೆಂದುಅದರವಿಷಯದಲ್ಲಿ ಯಿಟ್ಟುಕೊಂಡಆಣೆಗಳುಸಹಾ ವ್ಯರ್ಥವಾಗಿವೆಯೆಂದೂ ಅದು ಯಿಂನು ಮುಂದೆ ನಡಿಯುವಂತೆ ಯಾರಾದರು ಪ್ರಯತ್ನಮಾಡಿದರೆ ಅಂಥವರಿಗೆ ಶಾಪಕೊಡಲಾದೀತೆಂದು ಕಾಗದಬರೆದನು ಯೀಮಾತಂನು ಅರಸನು ಸಂತೋಷದಿಂದವೊಪ್ಪಿಕೊಂಡು ತಾನುಕೊಟ್ಟ ವಚನಗಳಲ್ಲಿ ವೊಂದಂನಾದರು ಕೈಕೊಳ್ಳದೆಪೂರ್ವದ ಅನ್ಯಾಯಗಳನ್ನೇ ನಡಿಸುವದರಿಂದ ದೊಡ್ಡವರುಅರಸನಿಗೆ ಪುನಃ ತಿರುಗಿಬಿದ್ದು ಯುದ್ಧವ ಪ್ರಾರಂಭಿಸಿದರು ಆದರೆ ಅರಸನು ಪರದೇಸಿಯಾದ ಶಿಪಾಯರಂನು ಸಂಬಳದಲ್ಲಿಟ್ಟು ಅವರಿಗೆ ಅಪಜಯಮಾಡಿದಮೇಲೆ, ಅವರು ಪ್ರಾನ್ಸಅರಸನಾದ ಲುಬಿನ್ಸಎಂಬವನಿಗೆ ಕರೆದು ರಾಜ್ಯವಂನು ಕೊಡಬೇಕೆಂಬ ಉಪಾಯವಂನು ಮಾಡಿದರು ಯಿವನುಬಂದು ಬಹಳಗರ್ವವಂನುತೋರಿಸಿದರಿಂದಯೀಪ್ರಯತ್ನವು ಬಿಟ್ಟು ಕೆಲವರು ತಂಮ ಅರಸನಹತ್ರ ತಿರುಗಿದರು ಆದರೆ ಅರಸನು ತಂನ ರಾಜ್ಯವಂನುಹೊಸದಾಗಿ ಸ್ಥಾಪಿಸುವಬಗ್ಯೆ ಸೈನ್ಯವನ್ನುಕೂಡಿಸಿ ಆ ಸೈನ್ಯದ ಸಂಗಡಸಮುದ್ರತೀರದಲ್ಲಿ ಯಿಳತಭರತಗಳಂನು ತಿಳಿಯದೆಪ್ರಯಾಣಮಾಡುವಾಗ ಅಕಸ್ಮಾತ್ತಾಗಿ ಸಮುದ್ರವುಯೆದ್ದು ಅವನಯೆಲ್ಲಾ ಗಾಡಿ ದ್ರವ್ಯ ಸಾಮಾನು ಮೊದಲಾದವುಗಳಂನು ಕೊಂಡುಹೋಯಿತು ಅರಸನ ಕಿರೀಟವು ವಜ್ರಗಳು ಸಹಾಮುಳಿಗಿಹೋದವು ಯೀ ಆಪತ್ತಿಗೋಸ್ಕರ ಅರಸನು ಬಹಳ ವ್ಯಸನಪಟ್ಟು ವೊಂದು ರೋಗದಲ್ಲಿ ಬಿದ್ದು ಸತ್ತುಹೋದನು. ಯಿವನು ಆಳಿದ ಸಮಯವು ೧೮ ವರುಷಗಳು.

ಯೋಹಾನನುಸತ್ತುಹೋದಮೇಲೆ ಅವನ ಜ್ಯೇಷ್ಠಮಗನಾದ ೩ನೆ ಹೆನರಿಯು ರಾಜ್ಯವಂನು ಪಡಕೊಂಡನು ತಂದೆ ಸಾಯುವಸಮಯದಲ್ಲಿ ಅವನು೯ ವರ್ಷಪ್ರಾಯದಹುಡುಗನಾಗಿರುವದರಿಂದ ಅವನ ಬಾಲ್ಯದಮಟ್ಟಿಗೆರಾಜ್ಯವಂನು ನಡಸುವಅಧಿಕಾರವು ಪೆಂಬ್ರೋಕುಎಂಬ ವೊಬ್ಬಬುದ್ಧಿಯೂಘನವೂ ವುಳ್ಳಮನುಷ್ಯನಿಗೆ ಸಿಕ್ಕಿತು ಅವನು ರಾಜ್ಯವಂನು ಬಹಳ ಕುಶಲವಾಗಿ ಆಳುವದರಿಂದ ಮುಂಚಿನ ಅರಸರಿಗೆ ತಿರಿಗಿಬಿದ್ದ ದೊಡ್ಡದೊಡ್ಡವರು ಯೀ ಅರಸನಿಗೆ ಪುನಹ ವೊಳಗಾದಮೇಲೆ ಪ್ರಾನ್ಸದೇಶದವರು ಯಿಂಗ್ಲಾಂಡ್ದೇಶದಿಂದ ಹೊರಡಿಸಲ್ಪಟ್ಟರು ಆದರೆ ಅರಸನು ಪ್ರಾಯಸ್ಥನಾದಮೇಲೆ ಆಗಿನ ರಾಜ್ಯದಗಲಿಬಿಲಿಯಂನು ನಿಲ್ಲಿಸುವದಕ್ಕೂ ದುಷ್ಟರಿಗೆ ಹೆದರಿಸುವದಕ್ಕೂ ಸಜ್ಜನರಿಗೆ ಕ್ಷೇಮವಂನುಂಟುಮಾಡುವದಕ್ಕೂ ಶಕ್ತಿಯಿಲ್ಲದವನಾಗಿದ್ದನು ಆ ಸಮಯದಲ್ಲಿ ದೊಡ್ಡದೊಡ್ಡವರಿಗೆ ರಾಜ್ಯದ ಬೇರೆ ಸೀಮೆಗಳಲ್ಲಿ ಕೋಟೆಗಳಿದ್ದವು ಯೀ ಕೋಟೆಗಳಂನ ಅವರು ಶಿಪಾಯರಿಂದ ಭದ್ರಮಾಡಿಸಿ ನೀಚರಿಗೆ ಉಪದ್ರವಂನೂ ಸಮಾನಸ್ಥರಿಗೆ ಜಗಳವಂನೂನಡಸಿ ಅರಸನಿಗೆಸಹಾ ಭಯಪಡದೆ ಯಿರುತಿದ್ದರು ಯೀಪ್ರಕಾರ ಆಗಿನ ಸರದಾರರಲ್ಲಿ ವೊಬ್ಬನು ಬಲಾತ್ಕಾರದಿಂದ ಜನರಂನು ತಂಮ ಭೂಮಿಗಳಿಂದಹೊರಡಿಸಿ ಆ ಭೂಮಿಗಳಂನು ಆಕ್ರಮಿಸಿ ಕೊಂಡಿದ್ದಾನೆಂದು ೩೫ ಬೇರೆ ಬೇರೆ ಫಿರಿಯಾದಿಗಳು ಆದಾಗ ಅವನು ತಂನಶಿಪಾಯಗಂನುನ್ಯಾಯಸ್ಥಾನಕ್ಕೆ ತಂದು ನ್ಯಾಯಾಧಿಪತಿಯಂನು ಬಲಾತ್ಕಾರವಾಗಿ ಹಿಡಿದು ವೈದು ತಂನ ಕೋಟೆಯಲ್ಲಿ ಮಡಗಿದನು ಅರಸನು ಅವನಿಗೆ ವಿರೋಧವಾಗಿ ಸೈನ್ಯವಂನು ಕಳುಹಿಸಿದ್ದಾಗ ಅವನು ಸ್ವಲ್ಪಹೊತ್ತು ಪರಿಯಂತರ ಯುದ್ಧವಂನುಮಾಡಿ ಕಡೆಗೆ ವಶವಾದನು ಅರಸನಿಗೆ ಯಾರೂ ಭಯಪಡದೆಯಿರುವದರಿಂದ ಯೆಲ್ಲಾರಾಜ್ಯವು ನಾಶನವಾಗಿಹೋಗುತ್ತಿತ್ತು ಆದರೆ ರೋಮಾನ್ ಪಾದ್ರಿಯರು ಯಿಂಥಾ ಗರ್ವವಂನು ನಡಸಿದರೆ ಮಹಾಗುರುವಿನಿಂದ ಶಾಪವುಂಟಾದೀತುಎಂದು ಹೆದರಿಸಿ ಆ ಅಕ್ರಮವಂನು ಸ್ವಲ್ಪಶಾಂತಪಡಿಸಿದರು. ಆ ಮೇಲೆ ಹೆನರಿಯು ದಕ್ಷಿಣ ಪ್ರಾನ್ಸದೇಶದಲ್ಲಿರುವ ವೊಂದುಸಂಣರಾಜ್ಯದರಾಜಪುತ್ರಿಯಂನುಮದಿವೆಮಾಡಿ ಅವಳ ಸಂಗಡ ಆ ದೇಶದಿಂದ ಬಂದವರಿಗೆ ಬಹಳ ಮಾನವಂನೂ ಅಧಿಕಾರವಂನೂ ದೊಡ್ಡದೊಡ್ಡ ಚಾಕರಿ ಮೊದಲಾದವುಗಳಂನೂ ಕೊಟ್ಟು ತಂನ ಪ್ರಜೆಗಳಿಗೆ ಕೋಪವಂನೆಬ್ಬಿಸಿದನು ಬೇರೆ ಖರ್ಚುಸಹಾ ಬಹಳವಾದದರಿಂದ ಅವನು ರಾಜಸಭೆಯಂನು ಕೂಡಿಸಿ ರಾಜಖರ್ಚಿಗೆ ಹಣ ಕೂಡಿ ಕೊಡಬೇಕೆಂದು ಹೇಳಿದನು ಅವರು ಅನೇಕಸಾರಿ ತಿರಸ್ಕರಿಸಿದ ಮಹಾಶಾಸನವಂನು ಹೊಸ್ತಾಗಿ ಸ್ಥಿರಪಡಿಸಿದರೆಹೊರ್ತು ತಾವು ಯೇನು ಕೊಡಲಿಕ್ಕಿಲ್ಲವೆಂದರು ಆದಕಾರಣ ಅರಸನು ಮಹಾಶಾಸನವಂನು ಸ್ಥಿರಪಡಿಸಿದನು ಹಣ ಕೊಡಬೇಕೆಂದು ನಿಶ್ಚೈಸಿದಮೇಲೆ ಅರಸನು ತಂನಪ್ರಮಾಣವಂನು ಮೀರಿ ಪರದೇಶದವರಕೈಯಿಂದ ಪ್ರಜೆಗಳಿಗೆ ಉಪದ್ರ ಕೊಡಿಸಿದನು ಯೀಸಂಗತಿಯಂನುನೋಡಿ ದೊಡ್ಡವರುಅರಸನಿಗೆ ಪುನಹಾ ತಿರುಗಿಬಿದ್ದು ತಾವು ಕೊಡುತ್ತೇವೆಂದು ಹೇಳಿದ ಹಣಸಹಾ ಸಲ್ಲಿಸಲಿಲ್ಲ ಆಸಭೆಯ ಅರಸನು ಹೊಸಅಧಿಕಾರಗಳಂನು ತಮಗೆ ಕೊಡುವಹಾಗೆಮಾಡಿ ಬಹಳ ಆಶ್ಚರ್ಯವಾದ ನೇಮನಿಷ್ಟೆಗಳಂನುಂಟುಮಾಡಿದರಿಂದ ಅದಕ್ಕೆ ಹುಚ್ಚುಸಭೆಎಂದುಹೆಸರಾಯಿತು ಆದರು ಅವರು ನೇಮಿಸಿದಕಾರ್ಯಗಳಲ್ಲಿ ಕೆಲವು ಚಂದಾಗಿತ್ತು ಯಿಂಗ್ಲಾಂಡ್ದೇಶದವೊಂದೊಂದುಸೀಮೆಯಲ್ಲಿ ನಾಲ್ಕುನಾಲ್ಕುಜನರು ಆರಿಸಲ್ಪಟ್ಟು ಅದರದರಲ್ಲಿ ನಡಿಯುವ ಅನ್ಯಾಯಗಳಂನು ವಿಚಾರಿಸಿ ರಾಜಸಭೆಯಲ್ಲಿ ಅವುಗಳವಿವರವಂನು ತಿಳಿಸಬೇಕೆಂಬ ನೇಮಕದಿಂದ ಯೀಗಿನ ಪಾರ್ಲಿಮೆಂಟ್ಎಂಬ ಯಿಂಗಲೀಷ್ರಾಜಸಭೆಗೆ ಆರಂಭವಾಯಿತು ಮುಂಚೆ ರಾಜ್ಯದಲ್ಲಿ ಅಧಿಕಾರ ನಡಿಸಿದವರೆಲ್ಲರಂನು ಅಧಿಕಾರದಿಂದ ತಳ್ಳಿಬಿಟ್ಟು ಹೊಸರಾಜನೀತಿಯಂನು ಸ್ಥಾಪಿಸಲಿಕ್ಕಾಗಿ ಎರ್ಲಅಫ್ಲೈಸ್ತರ್ ಮೊದಲಾದ ೨೪ ಸರದಾರರಂನು ಯಿಟ್ಟರು ಆದರೆ ಯಿವರು ರಾಜ್ಯವು ತಮಗೆ ಆಗಬೇಕೆಂದು ಅರಸನೂ ಅವನಮಗನೂ ಸಹಾ ಬಾಳುವಮಟ್ಟಿಗು ತಾವೆ ಯೆಲ್ಲಾಕೆಲಸವಂನು ನಡಸುವಂತೆ ವೊಂದು ನೇಮವಂನುಮಾಡಿದರು ಯೀನೇಮವಂನು ಅರಸನು ವೊಪ್ಪಲಿಕ್ಕಿದ್ದನು ಆದರೆ ಅವನಮಗನಾದ ಎಡವರ್ಡನು ಅದಕ್ಕೆ ಬಹಳ ಅಡ್ಡಿಮಾಡಿದನು ಅವನಿಗೆಪ್ರಜೆಗಳಲ್ಲಿಅನೇಕರುಪ್ರೀತಿಮಾಡುವದರಿಂದಅವನುವೊಂದುಸೈನ್ಯವಂನು ಕೂಡಿಸಿ ದೇಶವಂನು ಹಾಳುಮಾಡಿ ಕಡೇಲಿ ಅಪಜಯವಂನು ಹೊಂದಿ ತಾನೂ ತಂದೆಯೂ ಎರ್ಲಅಫ್ಲೆಸ್ತರ್ಎಂಬವನಿಗೆ ಸೆರೆಯಾಗಿಸಿಕ್ಕಿದನು ಅಂದಿನಿಂದ ಲಿವನು ಅರಸನ ಹೆಸರಿನಿಂದ ರಾಜ್ಯವಂನು ನಡಿಸಿ ಹೊಸ ರಾಜಸಭೆಯಂನು ಕರೆಸಿದನು ಆಸಭೆ ಯೀಗಿನಪರಿಯಂತರ ನಡಿಯುವಕ್ರಮದಪ್ರಕಾರ ಕರೆಯಲ್ಪಟ್ಟು ಯೀಗಿನ ರಾಜಸಭೆಗೂ ಅನುಸರಣೆಯಾಗಿ ಯಿದ್ದದರಿಂದ ಅದಕ್ಕೆ ಚರಿತ್ರೆಗಾರರು ಮೊದಲನೆರಾಜಸಭೆಎಂದು ಹೇಳುತ್ತಾರೆ ಅರಸನು ಸೆರೆಯಲ್ಲಿರುತಿದ್ದರೂ ಅವನಮಗನು ಯುಕ್ತಿಯಿಂದ ತಪ್ಪಿಹೋಗಿ ಬೇರೊಂದು ಸೈನ್ಯವಂನುಕೂಡಿಸಿ

ಗರ್ವಕ್ಕೋಸ್ಕರ ಬೇರೆ ಜನರ ಹಾಗಲ್ಲಿ ಬಿದ್ದ ಎರ್ಲ್ ಅಫ್ ಲೆಸ್ತರ್ ಎಂಬವನಿಗೆ ಯುದ್ಧಮಾಡಿ ಜೈಸಿ ಅವನಂನು ಕೊಂದುಹಾಕಿದನು ಆ ಯುದ್ಧದಲ್ಲಿ ಆ ಸರದಾರನು ಸೆರೆಯಾದ ಅರಸನಂನು ಮೊದಲನೆ ಪಙ್ತಿಯಲ್ಲಿಟ್ಟದರಿಂದ ಯಿವನಿಗೆ ಘಾಯ ತಾಗಿ ಸಾಯಲಿಕ್ಕಿದ್ದನು ಆದರೆ ನಾನು ನಿಂಮ ಅರಸನಾಗಿದ್ದೇನೆಂದು ಅವನು ಕೂಗಿದ್ದರಿಂದ ಕೊಂದುಹಾಕಲಿಕ್ಕಿರುವ ಸಿಪಾಯಿಯು ಅವನಂನು ತಪ್ಪಿಸಿದನು ಯೀ ಕಾಟಕಾಯಿ ನಿಲ್ಲಿಸಿದಮೇಲೆ ಹೆನರಿಯು ಕ್ಷೇಮವಾಗಿ ಕೆಲವು ವರ್ಷ ಬದುಕಿ ತಾನು ಆಳಿದ ೫೭ನೆ ವರ್ಷದ ೧೨೭೨ನೆ ಯಿಸವಿಯಲ್ಲಿ ಸತ್ತನು.

ಯಿವನು ಆಳುವ ಸಮಯದಲ್ಲಿ ಯಿವನಿಗೆ ಏನು ಧೈರ್ಯವಿಲ್ಲದ ಕಾರಣ ರಾಜ್ಯವು ಬಹಳ ದುಃಖದಲ್ಲಿತ್ತು ಒಂದು ದಿವಸ ಸುಖದಿಂದ ಆ ಸ್ಥಿತಿಯಂನನುಭವಿಸುವವರಿಗೆ ಮರುದಿವಸ ಏನಾದೀತೆಂದು ತಿಳಿಯುತ್ತಿದ್ದಿಲ್ಲ ಅನೇಕಸಾರಿ ಕಳ್ಳರು ಬಂದು ಊರು ಗ್ರಾಮಗಳಂನು ಲೂಟಿಮಾಡಿ ಬೆಂಕಿಯಿಂದ ಸುಡುತ್ತಿದ್ದರು ಒಂದು ವೇಳೆ ಕೆಲವು ಕಳ್ಳರಂನು ಹಿಡಿದು ನ್ಯಾಯತೀರಿಸಬೇಕಾದರೆ ನ್ಯಾಯ ತೀರಿಸುವವರು ಅವರ ಕೂಟದಲ್ಲಿದ್ದಾರೆಂದು ಪ್ರಸಿದ್ಧಿಯಾಯಿತು ಸರದಾರರೂ ಅರಸನ ಮನೆತನದವರು ಸಹಾ ಯಿಂಥಾ ಅನ್ಯಾಯಗಳಂನು ನಡಸುತ್ತಿದ್ದರು ಹೀಗೆ ಯಾಕೆ ಮಾಡುತ್ತೀರೆಂದು ಕೇಳುವಾಗ ಅರಸನಿಂದ ಬಹಳ ಸಿಕ್ಕುವದಿಲ್ಲ ಜೀವನಕ್ಕೋಸ್ಕರ ಮತ್ತೇನು ಮಾಡಬೇಕೆಂದು ಹೇಳಿದರು.

ಆ ಸಮಯದಲ್ಲಿ ಮುಖ್ಯವಾಗಿ ವಿಲಾಯಿತಿಯಲ್ಲಿ ಚದರಿ ಯಿರುವ ಎಹೂದಿಯರಿಗೆ ಬಹಳ ಶ್ರಮೆವುಂಟಾಯಿತು ನಗದು ಹಣಬೇಕಾದ ದೊಡ್ಡದೊಡ್ಡವರೂ ಅರಸನು ಸಹಾ ನ್ಯಾಯದ ವಿನಹ ಅವರಿಂದ ಹಣ ತೆಗದುಕೊಂಡರು ಅರಸನಾದ ಯೋಹಾನನು ೧೦೦೦೦ ರುಪಾಯಿ ಕೊಡಬೇಕೆಂದು ಒಬ್ಬನಿಗೆ ಅಪ್ಪಣೆಕೊಟ್ಟನು ಆ ಎಹೂದಿಯನು ಕೊಡಕೂಡದೆಂದು ಹೇಳುವಾಗ ದಿವಸಕ್ಕೊಂದೊಂದು ಹಲ್ಲು ಕೀಳಬೇಕೆಂದು ಅಪ್ಪಣೆಕೊಟ್ಟ ಮೇಲೆ ಏಳು ಹಲ್ಲು ತೆಗದಾದ ಮೇಲೆ ಆ ಶ್ರಮೆಯಂನು ತಾಳಕೂಡದೆ ಅವನು ಆ ಹಣವೆಲ್ಲ ಸಲ್ಲಿಸಿದನು ಹೆನರಿಯು ಸಾಯುವ ಸಮಯದಲ್ಲಿ ಪರಾಕ್ರಮವುಳ್ಳ ಅವನ ಮಗನಾದ ಎಡವರ್ಡನು ಶಾಮ ರಾಜ್ಯದಲ್ಲಿ ಮುಸಲ್ಮಾನರ ಸಂಗಡ ಯುದ್ಧಮಾಡುತ್ತಿದ್ದನು ಆಗ್ಯೆ ಅವನು ಸ್ವದೇಶಕ್ಕೆ ತಿರಿಗಿ ಹೋಗಿ ಸೇರಿದಾಗ ಪ್ರಜೆಗಳಿಂದ ಬಹುಸಂತೋಷವಾಗಿ ಅಂಗೀಕರಿಸಲ್ಪಟ್ಟನು ಯಿವನು ಪಟ್ಟಾಭಿಷೇಕವಂನು ಪಡಕೊಂಡ ಕೂಡ್ಲೆ ತಂದೆಯ ಕಾಲದಲ್ಲಿ ನಡದ ಅನ್ಯಾಯಗಳಂನು ನಿಲ್ಲಿಸಲಿಕ್ಕೆ ಆರಂಭಮಾಡಿ ಪೂರ್ವ ರಾಜ್ಯದಲ್ಲಿ ಲಂಚಗಳಂನು ತಿಂದ್ದ ಬಹಳ ಮಂದಿ ನ್ಯಾಯಾಧಿಪತಿಗಳಂನು ತೆಗದುಹಾಕಿ ಅನ್ಯಾಯದಿಂದ ಭೂಮಿಯಂನು ಸೆಳಕೊಂಡವರಿಗೆ ವಿಚಾರಣೆಮಾಡಿ ಅನೇಕ ದುಷ್ಟರಿಗೆ ಭಯಪಡಿಸಿದನು ಆಗಿನ ಪರಿಯಂತ್ರ ಯಿಂಗ್ಲಾಂಡ್ ದೇಶದ ಪಶ್ಚಿಮದಲ್ಲಿರುವ ವೆಲ್ಸ ರಾಜ್ಯವು ಸ್ವಾಧೀನವಾಗಿಯೂ ಯಿಂಗ್ಲಾಂಡ್ ಅರಸರಿಗೆ ಒಳಗಾಗದೆಯೂಯಿತ್ತು ಆ ರಾಜ್ಯದಲ್ಲಿ ಪೂರ್ವ ಬ್ರಿಟನ್ ಜನರು ಬೇರೆ ಭಾಷೆಯಂನು ಮಾತಾಡುತ್ತಾ ಪ್ರತ್ಯೇಕ ಮರ್ಯಾದೆ ನೇಮನಿಷ್ಠೆಗಳಂನು ನಡಸುತ್ತಾ ಉಳಿದ ಯಿಂಗ್ಲಾಂಡ್ ರಾಜ್ಯವಂನ್ನು ಪಡಕೊಂಡ ಸಾಕ್ಸನ್ ಜನರಿಗೆ ಬಹಳ ಹಗೆಮಾಡುತ್ತಿದ್ದರು ಯಿಂಗಲೀಷ್ ಜನರಲ್ಲಿ ಜಗಳವಾದರೂ ಪರಯುದ್ಧವಾದರೂ ಬೇರೆ ಯಾವ ಕಷ್ಟವಾದರೂ ಉಂಟಾದ ಸಮಯದಲ್ಲಿ ಯಿವರು ಆ ದೇಶದಲ್ಲಿ ಪ್ರವೇಶಿಸಿ ಲೂಟಿಮಾಡಿ ಸೀಮೆಯಂನೆಲ್ಲಾ ಹಾಳುಮಾಡುತ್ತಿದ್ದರು ಯೀ ಪ್ರಕಾರ ಹೆನರಿ ಅರಸನ ಕಾಲದಲ್ಲಿ ಅವರು ಅನೇಕಸಾರಿ ಉಪದ್ರ ಕೊಟ್ಟು ಎರ್ಲ್ ಆಫ್ ಲೆಸ್ತರ್ ಎಂಬವನಿಗೆ ಸಹಾಯ ಮಾಡಿದವರಾಗರು ಎಡವರ್ಡನು ಪಟ್ಟಾ ಹೊಂದಿದಾಗ ಅವರ ಅರಸನು ಯಿವನ ಒಡಂಬಡಿಕೆಯಲ್ಲಿ ಸೇರಲೊಲ್ಲದಿದ್ದನು ಅದು ಕಾರಣ ಎಡವರ್ಡನು ವೆಲ್ಸ ದೇಶದಲ್ಲಿ ಪ್ರವೇಶಿಸಿ ೧೨೮೨ನೆ ವರ್ಷದಲ್ಲಿ ಯುದ್ಧಮಾಡಿದನು ಆ ಯುದ್ಧದಲ್ಲಿ ವೆಲ್ಸ ಅರಸನು ಅಪಜಯವಾಗಿ ಸತ್ತುಹೋದನು ಆಮೇಲೆ ಎಡವರ್ಡನು ಆ ರಾಜ್ಯವಂನು ವಶಮಾಡಿ ಅಲ್ಲಿ ಬೇರೆ ನ್ಯಾಯಗಳಂನು ಸ್ಥಾಪಿಸಿ ಯಿಂಗಲೀಷ್ ಜನರಿಗೆ ಹಗೆಮಾಡಬೇಕೆಂದು ಬೋಧಿಸುವ ಕವೀಶ್ವರರಂನು ಕೊಂದುಹಾಕಿಸಿ ತಿರುಗಿಬೀಳ ಮನಸ್ಸುಳ್ಳವರಿಗೆ ಹೆದರಿಸಿದನು ಆದರೆ ಆ ಜನರು ತಂಮ ಸ್ವದೇಶದಲ್ಲಿ ಹುಟ್ಟಿದ ಅರಸನಿಗೆ ಒಳಗಾಗೆವು ಪರದೇಶದ ಅರಸನಿಗೆ ತಾವು ವಶವಾಗಲಿಕ್ಕಿಲ್ಲವೆಂದು ಹೇಳಿದ್ದರಿಂದ ಎಡವರ್ಡನು ನಿಂಮ ದೇಶದಲ್ಲಿ ಹುಟ್ಟಿದ ಅರಸನಂನು ನಿಮಗೆ ಕೊಡುತ್ತೇನೆಂದು ಹೇಳಿ ಆ ಸಮಯದಲ್ಲಿ ಗರ್ಭಿಣಿಯಾಗಿದ್ದ ತಂನ ರಾಣಿಗೆ ಕರದು ಆ ದೇಶದ ಕೋಟೆಗಳಲ್ಲೊಂದರಲ್ಲಿ ಅವಳಂನು ಕುಂಡ್ರಿಸಿದನು ಅವಳು ಮಗನಂನು ಹೆತ್ತಮೇಲೆ ಯಿವನೆ ನಿಂಮ ದೇಶದಲ್ಲಿ ಹುಟ್ಟಿದ ಅರಸನೆಂದು ಹೇಳಿ ಅವರಂನು ಶಾಂತಪಡಿಸಿದನು ಅಂದಿನಿಂದ ಯಿಂಗ್ಲಾಂಡ್ ಅರಸರ ಜ್ಯೇಷ್ಠ ಮಕ್ಕಳಿಗೆ ವೆಲ್ಸ ಅರಸು ಎಂದು ಹೆಸರು ನಡದುಬರುತ್ತದೆ ಆ ನಂತರ ರಾಜ್ಯವು ಯಿಂಗ್ಲಾಂಡ್ ರಾಜ್ಯದ ಒಳಗಾಗಿದ್ದರೂ ಅದರ ನಿವಾಸಿಗಳಿಗೆ ಯಿಂನು ಪ್ರತ್ಯೇಕನಾದ ಭಾಷೆಯೂ ಕೆಲವು ಬೇರೆ ವಿಧವಾದ ಮರ್ಯಾದೆಗಳೂ ಯಿರುತ್ತವೆ

ಯೀ ಯುದ್ಧವಾದ ಮೇಲೆ ಸ್ಕಾಟ್ಲಾಂಡ್ ದೇಶವಂನು ತಂನ ರಾಜ್ಯದಲ್ಲಿ ಸೇರಿಸಬೇಕೆಂದು ಅಪೇಕ್ಷಿಸಿದನು ಆ ರಾಜ್ಯದಲ್ಲಿ ಅರಸನ ಸಂತಾನವು ತೀರಿಹೋದದರಿಂದ ಹೊಸ ಅರಸನಂನು ಆರಿಸುವಂಥಾದ್ದು ಅವಶ್ಯವಾಯಿತು ಆ ರಾಜ್ಯವಂನು ಹೊಂದಲಿಕ್ಕೆ ತಕ್ಕ ಜನರು ಯಿಬ್ಬರಾಗಿದ್ದರು ಅವರು ಜಗಳಾಡುವಾಗ್ಯೆ ಎಡವರ್ಡನು ತಂಮ ಜಗಳವಂನು ತೀರಿಸಲಿ ಎಂದು ಹೇಳಿದರು ಎಡವರ್ಡನು ಆ ಕಾರ್ಯವಂನು ವಿಚಾರಿಸಿ ಒಬ್ಬನು ಬಹಳ ಧೈರ್ಯವಾಗಿಯೂ ಮತ್ತೊಬ್ಬನು ಅತಿಶಾಂತನಾಗಿಯೂ ಯಿರುವದರಿಂದ ಆ ಶಾಂತನಾದವನಿಗೆ ರಾಜ್ಯವಂನು ಕೊಟ್ಟನು ಅವನಂನು ರಾಜ್ಯದಲ್ಲಿರಿಸಿದ ಮೇಲೆ ಎಡವರ್ಡನು ಸ್ಕಾಟ್ಲಾಂಡ್ ಅರಸನು ತಂನ ಸುಭೇದಾರನ ಹಾಗೆ ತಂನ ಅಪ್ಪಣೆಯಿಂದಲೆ ಎಲ್ಲಾ ನಡಿಸಬೇಕೆಂದು ಮನಸ್ಸುಮಾಡಿದ್ದರಿಂದ ಆ ಅರಸನೂ ಅವನ ಪ್ರಜೆಗಳೂ ಯುದ್ಧವಂನಾರಂಭಿಸಿದರು ಆದರೆ ಎಡವರ್ಡನು ಜೈಸಿ ಆ ಅರಸನಂನು ಹಿಡಿದು ಅವನು ಅರಸತನವಂನು ಬಿಡಬೇಕೆಂದು ಬಲತ್ಕರಿಸಿ ಅವನಂನು ಫ್ರಾನ್ಸ ದೇಶಕ್ಕೆ ಕಳುಹಿಸಿದನು ಮತ್ತು ಸ್ಕಾಟ್ಲಾಂಡ್ ರಾಜ್ಯವು ತಂನದಾಯಿತೆಂದು ಹೇಳಿಕೊಂಡನು ಆದರೆ ಉಲ್ಲಿಯಂ ವಾಲೀಷ್ ಎಂಬ ಒಬ್ಬ ಶೂರನು ಯಿವನಿಗೆ ವಿರೋಧನಾಗಿ ಎದ್ದು ೮ ವರುಷ ಪರಿಯಂತರ ಯುದ್ಧಮಾಡಿದನು ಕಡೆಗೆ ಎಡವರ್ಡನಿಗೆ ಬಹಳ ಸೈನ್ಯವಿರುವದರಿಂದ ಯಿವನಿಗೆ ಜಯವಾಯಿತು ಆ ವಾಲೀಷ್ ಎಂಬವನು ತಂನ ಸ್ನೇಹಿತನ ದ್ರೋಹದಿಂದ ಎಡವರ್ಡನ ಕೈಯಲ್ಲಿ ಬಿದ್ದು ಲಂಡನ್ ಪಟ್ಣಕ್ಕೆ ಒಯ್ಯಲ್ಪಟ್ಟು ಬಹಳ ಹಿಂಸೆಗಳಂನೂ ಕಡೆಯಲ್ಲಿ ಕಳ್ಳನಂತೆ ಮರಣವಂನೂ ಹೊಂದಿದನು ಅವನ ಶವವಂನು ಕೊಯಿದು ಕೈಕಾಲು ಮೊದಲಾದ ಅವಯವಗಳಂನು ಬೇರೆಬೇರೆ ಪಟ್ಣಗಳ ಬಾಗಲುಗಳಿಗೆ ಕಟ್ಟಿದರು ಯೀ ಒಂದೆ ಕ್ರೂರಕ್ರಿಯೆಯಿಂದ ಹೆನರಿ ಅರಸನಿಗೆ ಬಹಳ ಅಪಕೀರ್ತಿ ಉಂಟಾಯಿತು ವಾಲೀಷೋನು ಸತ್ತಮೇಲೆ ರೊಬೆರ್ಟ್ ಬ್ರೂಸ್ ಎಂಬವನು ಸ್ಕೊಟರ ಸೈನ್ಯಗಳಂನ್ನು ನಡಸಿ ಯಿಂಗ್ಲಿಷ್ ಜನರಂನು ಆ ದೇಶದಿಂದ ಹೊರಡಿಸಿ ಸ್ಕಾಟ್ಲಾಂಡಕ್ಕೆ ಅರಸನಾದನು ಯೀ ವರ್ತಮಾನವಂನು ಕೇಳಿ ಎಡವರ್ಡನು ಬಹಳ ಕೋಪಪಟ್ಟು ತಾನು ಸ್ಕಾಟ್ಲಾಂಡ್ ದೇಶಕ್ಕೆ ಹೋಗುತ್ತೇನೆ ಅದಂನು ಚಂನಾಗಿ ತಂನ ವಶವಾಗುವ ಪರಿಯಂತ್ರ ತಿರಿಗಿ ಬರುವದಿಲ್ಲವೆಂದು ಪ್ರಮಾಣಮಾಡಿಕೊಂಡನು ಹಾಗೆ ಅವನು ಸೈನ್ಯದ ಸಂಗಡ ಅಲ್ಲಿಗೆ ಹೋಗಿ ಕೆಲವುಸಾರಿ ಯುದ್ಧಮಾಡಿ ಅದರಲ್ಲಿ ಅನುಕೂಲವಾಗದೆ ಬಹಳ ನಷ್ಟವಂನು ಪಟ್ಟು ರೋಗದಲ್ಲಿ ಬಿದ್ದು ಸತ್ತುಹೋದನು ಯೀ ಪ್ರಕಾರ ತಾನು ತಿರುಗಿ ಬರುವದಿಲ್ಲವೆಂದು ಮಾಡಿದ ಶಪಥವು ಸತ್ಯವಾಯಿತು ಆದರೆ ಸ್ಕಾಟ್ಲಾಂಡ್ ದೇಶವು ವಶವಾಗಲಿಲ್ಲ ಅವನು ಆಳಿದ ವರುಷಗಳ ಲೆಖ್ಖ ೩೫ ಸತ್ತುಹೋದ್ದು ೧೩೦೭ನೆ ವರ್ಷದಲ್ಲಿ ಆಗಿರುತ್ತದೆ.

Printed at the Bellary Mission Press.

R. Sampson, Printer,—H. Moegling, Editor.

CANARESE NEWSPAPER.

ಕಂನಡ ಸಮಾಚಾರವು.

೧೮೪೪.

೧ನೆ ಪುಸ್ತಕ. ೯ನೆ ಅಂಕೆ] ಬಳ್ಳಾರಿ ೧ನೆ ಜೂಲಾಯಿ [ಟಪಾಲ ದಸ್ತೂರಿಕೂಡಿ ಕ್ರಯ ೨ದುಡ್ಡು.

Dismissal of Lord Ellenborough.

ಲೊರ್ಡ್ ಅಲ್ಲೆನ್ಬೊರೊಯೆಂಬ ಲೊರ್ಡ್ ಬಹದೂರವರ ಬರ್ತರಫ್

ಮೊನ್ನೆ ಬಂದ ಆನೆಹಡಗದಿಂದ ವೊಂದು ಆಶ್ಚರ್ಯವಾದ ವಿಲಾಯಿತಿವರ್ತಮಾನ ಬಂತು ಯೇನೆಂದರೆ ಕೋರ್ಟ್ ಆಫ್ ದಿರೆಕ್ತರ್ಸೆಂಬ ಇಪ್ಪತ್ತುನಾಲ್ಕುಮಂದಿ ಕುಂಪಣೀ ಹಿರೇಸಖೆಯವರು ಇಂಗ್ಲಾಂಡ್ ದೇಶದ ರಾಣಿಯ ಮುಖ್ಯ ಪ್ರಧಾನಿಯಾದ ಸರ್ ರೊಬರ್ಟ್ ಪೀಲವರೂ ಬಹು ಮಾನಪಟ್ಟಿರುವ ಸೈನ್ಯಾಧಿಪತಿಯಾದ ದ್ಯೂಕ್ ಆಫ್ ವೆಲ್ಲಿಙ್ಟನ್ ಧೊರೆಗಳೂ ಯೀಯಿಬ್ಬರ ಚಿತ್ತಕ್ಕೆ ವಿರೋಧವಾಗಿ ಯೀಗಿನ ಗವರ್ನರ್ ಜನರಲವರಿಗೆ ಬರ್ತರಫ್ ಮಾಡಿದರು.

ಯೆರಡು ವರ್ಷದ ಹಿಂದೆ ಆ ಕುಂಪಣೀ ಹಿರೇಸಖೆಯವರೂ ಮುಖ್ಯಪ್ರಧಾನಿಯೂ ವೊಪ್ಪಿತರಾಗಿ ಲೊರ್ಡ್ ಅಲ್ಲೆನ್ಬೊರೊವರನ್ನು ಆರಿಸಿ ತೆಗದುಕೊಂಡು ಗವರ್ನರ್ ಜನರಲ್ ಆಗಮಾಡಿ ಯೀದೇಶಕ್ಕೆ ಕಳುಹಿಸಿದರು. ಆಗಲವರು ಇಂಗ್ಲಾಂಡ್ ದೇಶವನ್ನು ಬಿಡುವದಕ್ಕಿಂತ ಮುಂಚೆ ಹಿಂದುದೇಶದಲ್ಲಿಯೂ ಸುತ್ತಲಿರುವ ಸಮಸ್ತ ದೇಶಗಳಲ್ಲಿಯೂ ಯುದ್ಧಾಗ್ನಿಯನ್ನು ಆರಿಸಿ ಸಮಾಧಾನವನ್ನು ಸ್ಥಾಪಿಸಿ ನಂನ ಕೈಕೆಳಗಿರುವ ಜನಗಳನ್ನು ಸುಖಪಡಿಸುವದಕ್ಕಾಗಿ ಹಿಂದುದೇಶಕ್ಕೆ ಹೋಗುತ್ತೇನೆಂದು ಹೇಳಿ ಹೊರಟು ಬಂದರು ಬಂದ ಮೇಲೆ ಅವರು ಮಾಡಿದ್ದು ಯೇನೆಂದರೆ ಆಫ್ಗಾನ್ ದೇಶವನ್ನು ಬಿಡುತ್ತಾ ಬರುವ ತಮ್ಮ ಸೈನ್ಯಗಳನ್ನು ತಿರಿಗಿ ಕಾಬೂಲಿಗೆ ಕಳುಹಿಸಿ ಆಫ್ಗಾನ್ ಜನರನ್ನು ದಂಡಿಸಿ ಪಟ್ಣ ಊರು ಗ್ರಾಮಗಳನ್ನು ಸುಟ್ಟುಬಿಟ್ಟರು ಯೀಪ್ರಕಾರ ಆ ಯುದ್ಧವನ್ನು ತೀರಿಸಿದರು ಆ ಮೇಲೆ ಸರ್ ಚಾರ್ಲ್ಸ್ ನೇಪಿಯರ್ ಯೆಂಬ ಘನವುಳ್ಳ ಸೈನ್ಯಾಧಿಪತಿಯನ್ನು ವೊಂದು ಸೈನ್ಯದ ಸಂಗಡ ಸಿಂಧುದೇಶಕ್ಕೆ ಕಳುಹಿಸಿ ಆ ದೇಶವನ್ನು ಆಳಿಕೊಳ್ಳುತ್ತಾ ಬಂದ ಅಮೀರರಿಗೆ ಯುದ್ಧಮಾಡಿ ಅವರ ದಂಡನ್ನು ಚದರಿಸಿ ಆವರ ದೇಶವನ್ನು ತೆಗದುಕೊಂಡು ಅವರನ್ನೇ ಕೈಸೆರೆ ಹಿಡಿದು ಮೊದಲು ಮುಂಬೈಗೆ ಆ ಮೇಲೆ ಬಂಗಾಳ ದೇಶಕ್ಕೆ ಕಳುಹಿಸಿದರು ಯೀಪ್ರಕಾರ ಸಿಂಧುದೇಶದಲ್ಲಿ ಸಮಾಧಾನವನ್ನುಂಟು ಮಾಡಿದ ಮೇಲೆ ಗ್ವಾಲಿಯರ್ ಸಂಸ್ಥಾನದವರು ತಂಮ ದೇಶವನ್ನು ಚೆನ್ನಾಗಿ ಆಳುವದಿಲ್ಲವೆಂದೂ ಇಂಗ್ಲಿಷ್ ಸರಕಾರದವರಿಗೆ ದ್ವೇಷವನ್ನು ಮಾಡುವ ವೊಬ್ಬ ಪ್ರಧಾನಿ ಇಂಗ್ಲಿಷ್ ಸರಕಾರದವರ ಪಕ್ಷದವನಾದ ಪ್ರಧಾನಿಯನ್ನು ತನ್ನ ಉದ್ಯೋಗದಿಂದ ಹೊರಡಿಸಿದನೆಂದೂ ಯಿದಕ್ಕೋಸ್ಕರ ಗ್ವಾಲಿಯರಿನಲ್ಲಿ ಜಗಳಹುಟ್ಟಿತೆಂದು ಹೇಳಿ ಸಮಾಧಾನವನ್ನುಂಟು ಮಾಡುವದಕ್ಕಾಗಿ ದೊಡ್ಡ ಸೈನ್ಯವನ್ನು ಕೂಡಿಸಿ ಗ್ವಾಲಿಯರಿಗೆ ಹೋಗಿ ಮಹಾಯುದ್ಧದಲ್ಲಿ ಆ ಸಂಸ್ಥಾನದ ದಂಡನ್ನು ಜೈಸಿ ತಂಮ ಚಿತ್ತದ ಪ್ರಕಾರ ಯೆಲ್ಲಾ ನಡಿಸಿ ದೇಶವನ್ನು ತೆಗದುಕೊಳ್ಳದೆ ಹುಡುಗನಾದ ರಾಜನನ್ನು ಸಿಂಹಾಸನದಲ್ಲಿ ಕೂಡ್ರಿಸಿ ವೊಬ್ಬ ಇಂಗ್ಲಿಷ್ ಧೊರೆಯನ್ನು ಕಮೀಶನರಾಗಿ ಗ್ವಾಲಿಯರಿನಲ್ಲಿ ಯಿಟ್ಟು ಮುಂಚೆ ಯಿದ್ದ ಸೈನ್ಯವನ್ನು ಮಿನಾಹಿ ಮಾಡಿ ಇಂಗ್ಲಿಷ್ ಸರಕಾರಕ್ಕೆ ಕೆಳಗಿರುವ ಹೊಸಪಟಾಲಮುಗಳನ್ನು ಅರಸನಿಗೆ ಕೊಟ್ಟು ಹೊಸ ವೊಡಂಬಡಿಕೆ ಕಟ್ಟಿಕೊಂಡು ಬಂಗಾಳದೇಶಕ್ಕೆ ತಿರಿಗಿಬಂದರು ಯೀಪ್ರಕಾರವಾಗಿ ಗ್ವಾಲಿಯರಿನಲ್ಲಿ ಸಮಾಧಾನವಾಯಿತು ಹೀಗಾದ ಮೇಲೆ ಪಂಜಾಬ್ ದೇಶದಲ್ಲಿ ಮಹಾರಾಜನಾದ ರಣಜಿತ್ ಸಿಂಗನು ಸತ್ತುಹೋದಂದಿನಿಂದ ಆ ಸಂಸ್ಥಾನವು ಕೆಟ್ಟುಹೋಗಿ ಆ ದೇಶದಲ್ಲಿ ಯೆಲ್ಲಾ ಗಲಿಬಿಲಿ ಯಾಗುತ್ತಾ ಬರುತ್ತದೆಯೆಂದು ನೋಡಿ ಅಲ್ಲಿನ ಸಮಾಧಾನವನ್ನು ಸ್ಥಾಪಿಸಲಿಕ್ಕಾಗಿ ಪಂಜಾಬ್ ದೇಶದ ಪ್ರಾಂತ್ಯಗಳ ಹತ್ತಿರುವ ಫಿರೋಜ್ ಪೂರ ಮೊದಲಾದ ಸ್ಥಳಗಳಲ್ಲಿಯೊ ದೊಡ್ಡ ಸೈನ್ಯವನ್ನು ಸಿದ್ಧಮಾಡಿ ಯುದ್ಧಕ್ಕೆ ಯೋಗ್ಯವಾದ ಕಾರಣವೂ ಸಮಯವೂ ಬರಲಿಯೆಂದು ನಿರೀಕ್ಷಿಸುತ್ತಾ ಯಿದ್ದರು ಯಿಷ್ಟರೊಳಗೆ ಯೀ ವರ್ತಮಾನಗಳನ್ನೆಲ್ಲಾ ಆಯಾ ವೇಳೆಯಲ್ಲಿ ಕೇಳಿ ಆಶ್ಚರ್ಯಪಟ್ಟ ಕುಂಪಣೀ ಹಿರೇ ಸಖೆಯವರು ಯೀ ಲೊರ್ಡ್ ಅಲ್ಲೆನ್ಬೊರೊ ಧೊರೆ ತಂಮ ಅಪ್ಪಣೆ ಪ್ರಕಾರ ಹಿಂದುದೇಶವನ್ನಾಳದೆ ಮನಸ್ಸು ಬಂದಹಾಗೆ ಕಾರ್ಯಗಳನ್ನೆಲ್ಲಾ ನಡಿಸುತ್ತಾರೆಂದು ನೋಡಿ ಹೀಗಾಗದೆಂದು ತಂಮಲ್ಲಿ ಆಲೋಚನೆ ಮಾಡಿ ಮುಖ್ಯಪ್ರಧಾನಿಯಾದ ಸರ್ ರೊಬರ್ಟ್ ಪೀಲವರಿಗೆ ನಾವು ನಿಂಮ ಸಂಗಡ ವೊಪ್ಪಿತರಾಗಿ ಯೆರಡು ವರ್ಷದ ಹಿಂದೆ ಹಿಂದುದೇಶಕ್ಕೆ ಕಳುಹಿಸಿದ ಗವರ್ನರ್ ಜನರಲವರಿಗೆ ಬರ್ತರಫ್ ಮಾಡುತ್ತೇವೆಂದು ಬರದು ತಿಳಿಸಿದರು ಸರ್ ರೊಬರ್ಟ್ ಪೀಲವರೂ ಅವರ ಸ್ನೇಹಿತರಾದ ದ್ಯೂಕ್ ಆಫ್ ವೆಲ್ಲಿಙ್ಟನವರೂ ಕುಂಪಣೀ ಹಿರೇ ಸಖೆಯವರ ಮನಸ್ಸನ್ನು ತಿಳಿದುಕೊಂಡು ನೀವು ಹೀಗೆ ಮಾಡಬೇಡಿಯೆಂದು ಬಹಳವಾಗಿ ಹೇಳಿದರು ಆದರೂ ಕುಂಪಣೀ ಯಜಮಾನರು ಅವರ ಮಾತನ್ನು ಕೇಳದೆ ಗವರ್ನರ್ ಜನರಲವರಿಗೆ ಬರ್ತರಫ್ ಮಾಡಲಿಕ್ಕೆ ಅಧಿಕಾರವು ನಮಗೆ ವುಂಟೆಂದೂ ಯೀ ವಿಷಯದಲ್ಲಿ ನಿಮಗೆ ಕಿವಿಕೊಡದೆ ರಾಜನೀತಿಯ ಪ್ರಕಾರ ಲೊರ್ಡ್ ಅಲ್ಲೆನ್ಬೊರೊ ಧೊರೆಗಳಿಗೆ ಬರ್ತರಫ್ ಮಾಡುತ್ತೇವೆಂದೂ ನಿಶ್ಚಯವಾಗಿ ಹೇಳಿದರು ಆ ಮೇಲೆ ಮುಖ್ಯಪ್ರಧಾನಿಯ ಸಂಗಡ ಆಲೋಚನೆ ಮಾಡಿ ಅವರ ಸ್ನೇಹಿತರಾದ ಬೇರೆ ಧೊರೆಗಳಲ್ಲಿ ಮತ್ತೊಬ್ಬರನ್ನು ಆರಿಸಿ ತೆಗದುಕೊಂಡು ಸರ್ ಹೆನ್ರಿ ಹೂರ್ದಿಂಗ್ ನವರಿಗೆ ಗವರ್ನರ್ ಜನರಲ್ ಉದ್ಯೋಗವನ್ನು ಕೊಟ್ಟರು.

ದ್ಯೂಕ್ ಆಫ್ ವೆಲ್ಲಿಙ್ಟನ್ ದೊರೆಗಳು ಯೀ ವಿಷಯವಾಗಿ ರಾಜಸಭೆಯಲ್ಲಿ ಪ್ರಸಂಗಮಾಡಿ ಕುಂಪಣೀ ಹಿರೇಸಭೆಯವರು ಯೀ ಕೆಲಸದಲ್ಲಿ ಪ್ರೌಢಬುದ್ಧಿಯಂನು ತೋರಿಸಲಿಲ್ಲವೆಂದೂ ಲೊರ್ಡ್ ಅಲ್ಲೆನ್ ಬೊರೊ ಸಕಲಕೆಲಸಗಳಂನು ರಾಣಿಯ ಪ್ರಧಾನಿಗಳು ಆವರಿಗೆ ಕೊಟ್ಟ ಅಪ್ಪಣೆಯ ಪ್ರಕಾರ ನಡಿಸಿದರೆಂದೂ ಅವರು ಬಹಳ ನಂಬಿಗೆಯುಳ್ಳ ಉತ್ತಮ ಉದ್ಯೋಗಸ್ಥರೆಂದೂ ಹೇಳಿಬಿಟ್ಟರು ಯೀ ಪ್ರಸಂಗವಂನು ಲೊರ್ಡ್ ಬಹದೂರರ ಸಭೆಯಲ್ಲಿ ಮಾಡಿದರು ಸರ್ ರೊಬರ್ಟ್ ಪೀಲ್ ಯೆಂಬ ಮುಖ್ಯಪ್ರಧಾನಿಯು ಗೃಹಸ್ಥರಸಭೆಯಲ್ಲಿ ಸಾರಿಹೇಳಿದ್ದೇನೆಂದರೆ ಕುಂಪಣೀ ಹಿರೇಸಭೆಯವರು ನಂಮ ಮಾತಿಗೆ ಕಿವಿ ಕೊಡದೆ ನಂಮ ಸ್ನೇಹಿತರಾದ ಲೋರ್ಡ್ ಅಲ್ಲೆನ್ ಬೊರೊ ದೊರೆಗಳಿಗೆ ಬರ್ತರಫ್ ಮಾಡಿದ್ದಾರೆ ಯಿದರಿಂದ ನಮಗೆ ಉಪದ್ರವಾಯಿತು ಆದರೆ ಯಿಂಥಾ ಅಧಿಕಾರವು ಕುಂಪಣಿಯವರಿಗೆ ಉಂಟೆಂಬುವದು ಸರಿ ಅವರು ಮಾಡಿದದರಲ್ಲಿ ಅನ್ಯಾಯವಿಲ್ಲ ಅದು ಕಾರಣ ನಾವು ಯೇನೂಮಾಡಕೂಡದು ಹೊಸಗವರ್ನರ್ ಜನರಲ್ ಆರಿಸಿ ತೆಗದುಕೊಂಡು ಹಿಂದುದೇಶಕ್ಕೆ ಕಳುಹಿಸಬೇಕಾದ್ದದಾಯಿತು ಸರ್ ಜನರಲ್ ಗವರ್ನರಾದ ಸರ್ ಹೆನ್ರಿ ಹಾರ್ಡಿಂಗ್ ಉತ್ತಮ ಸೈನ್ಯಾಧಿಪತಿಯೂ ರಾಜಕೆಲಸಗಳಂನು ಚನ್ನಾಗಿ ತಿಳಿದುಕೊಳ್ಳುವ ಬುದ್ಧಿಯುಳ್ಳವರೂ ಆಗಿದ್ದಾರೆಂದು ಎಲ್ಲರಿಗೆ ತಿಳಿಯುವದು ಆದುಕಾರಣ ಕುಂಪಣೀ ಹಿರೇಸಭೆಯವರು ಕೊಟ್ಟ ಅಪ್ಪಣೆಯಿಂದ ಹಿಂದುದೇಶಸ್ಥರಿಗೆ ನಷ್ಟವಿಲ್ಲ ಕ್ಷೇಮವಾಗುವದೆಂದು ಕಾಣುವದು.

Receipts and Expenditure in 1843—1844 to the English Government.

ಇಂಗ್ಲಿಷ್ ಸರ್ಕಾರದವರಿಗೆ ೧೮೪೩ನೆ ಯಿಸವಿಗೆ ಆದ ಆದಾಯ ವೆಚ್ಚ.

ಆದಾಯವು.	ರೂಪಾಯಿ.
ಸುಂಕ ಕಾರಕ - - - -	೨೧,೪೨,೬೦,೦೧೦
ಸಾರಾಯಿ ಇತ್ಯಾದಿ ಗುತ್ತಿಗೆಗಳಿಂದ - -	೧೨,೯೬,೦೦,೦೦೦
ರಶ್ಮೆಕ್ರಯ - - - -	೭,೦೧,೧೦,೦೦೦
ಬೇರೀಜು - - - -	೪,೧೯,೨೦,೦೦೦
ಟಪ್ಪಾಲುಗಳಿಂದ - - - -	೬೨,೮೦,೦೦೦
ಸರ್ಕಾರಭೂಮಿಗಳಿಂದ - - -	೧೪,೭೦,೦೦೦
ಚುಂಗಡಿಆದಾಯ - - - -	೨೬,೮೦,೦೦೦
ಚೀನಾದೇಶದಿಂದಬಂದ ಹಣ - - -	೮೦,೩೦,೦೦೦
*ಆದಾಯದಕಂದಾಯ - - - -	೫,೩೨,೬೧,೦೦೦
	ರು. ೫೨,೭೩,೫೧,೨೪೦

ವೆಚ್ಚ.	ರುಪ್ಪಾಯಿ.
	೫೧,೩೩,೫೧,೨೪೦

---

* ಹದಿನ್ನೈದು ಸಾವಿರಕ್ಕೆಂತ ಹೆಚ್ಚು ರೂಪಾಯಿ ವರ್ಷ ವರ್ಷಕ್ಕೆ ಆದಾಯವುಳ್ಳವರುಮಾತ್ರ ಆದಾಯದ ಕಂದಾಯ ಕೊಡಬೇಕು.

೪೪ನೆ ಯಿಸವಿಗೆ ಆಗುವ ಸುಮಾರು ಆದಾಯ ವೆಚ್ಚ.

ಆದಾಯವು.	ರೂಪಾಯಿ.
ಸುಂಕ ಕಾರಕ - - - -	೨೧.೫೦,೦೦,೦೦೦
ಸಾರಾಯಿ ಇತ್ಯಾದಿ ಗುತ್ತಿಗೆಗಳಿಂದ - -	೧೩,೦೦,೦೦,೦೦೦
ರಶ್ಮೆಕ್ರಯ - - - -	೭,೦೦,೦೦,೦೦೦
ಬೇರೀಜು - - - -	೪,೨೧,೦೦,೦೦೦
ಆದಾಯದ ಕಂದಾಯ - - - -	೩,೧೦,೦೦,೦೦೦
ಟಪ್ಪಾಲದಸ್ತೂರಿ - - - -	೬೦,೦೦,೦೦೦
ಸರ್ಕಾರ ಭೂಮಿಗಳಿಂದ - - -	೧೩,೦೦,೦೦೦
ವಿಶೇಷ ಆದಾಯ - - - -	೨೫,೦೦,೦೦೦
ಸುಮಾರು	ರು. ೫೦,೦೦,೦೦,೦೦೦

ವೆಚ್ಚ.	ರೂಪಾಯಿ.
ಸರ್ಕಾರ ಸಾಲದಬಡ್ಡಿ - - - -	೩೦,೦೯,೭೦,೦೦೦
ದಂಡಿಗೆ - - - -	೬,೬೦,೬೦,೦೦೦
ಯುದ್ಧದ ಹಡಗಗಳಿಗೆ - - - -	೬,೨೫,೦೦,೦೦೦
ಬಾರೂಜು ಇತ್ಯಾದಿ ಯುದ್ಧಸಾಹಿತ್ಯಕ್ಕೆ -	೧,೮೪,೦೦,೦೦೦
ಚುಂಗಡಿ ಖರ್ಚು - - - -	೩,೦೦,೦೦,೦೦೦
ವಿಶೇಷ ಖರ್ಚು - - - -	೪೧,೦೦,೦೦೦
ಸುಮಾರು	ರು. ೪೮,೦೦,೦೦,೦೦೦

ಯಿಪ್ಪತ್ತೆಂಟನೆ ಪುಟದಲ್ಲಿ ತೀರದೆಯಿದ್ದ ಭೂಗೋಳದ ಸಾಗವು.

Geography.——Continued.

ಹತ್ತನೆ ಸಂಧಿ.

ಭೂಮಿಯ ಖಂಡಗಳೊಳಗಿರುವ ನೀರು

ಜೀವರಾಶಿಗಳಿಗೂ ಕೃಣಗಿಡಮೊದಲಾದವುಗಳಿಗೂ ಬೇಕಾದ ನೀರುಯೆಲ್ಲಾ ಸಮುದ್ರದಿಂದಲೇ ಬರುತ್ತದೆ ಸೂರ್ಯನ ಬಿಸಿಲಿನಿಂದ ದಿನಾಗಲು ಬಹಳ ನೀರು ಆವಿಯಾಗಿ ಆಕಾಶಕ್ಕೆ ಯೇರುತ್ತದೆ ಯೀ ನೀರಿನ ಆವಿ ಗಾಳಿಯಿಂದ ಬಡಿದು ಕೊಂಡು ಹೋಗಿ ಮಳೆಆಗಿಯೂ ಮಂಜಾಗಿಯೂ ಹಿಮವಾಗಿಯೂ ತಿರಿಗಿ ಭೂಮಿಗೆ ಯಿಳಿಯುತ್ತದೆ ಮಳೆಬೀಳೆ ದೊಡ್ಡರು ಪರ್ವತಗಳು ಆಕಾಶದಲ್ಲಿ ಹರಿದಾಡುವ ಆವಿಯನ್ನು ಹಿಡಿಯುತ್ತವೆ ಯೀ ಆವಿಯೂ ಪರ್ವತಗಳಲ್ಲಿ ಸೇರಿ ಸಾರಾಯಿಬಟ್ಟಿಯಲ್ಲಿಳಿಯುವ ಪ್ರಕಾರ ಪರ್ವತಗಳ ಗರ್ಭದಲ್ಲಿ ಶುದ್ಧವಾದ ಒಳ್ಳೆನೀರಾಗಿ ಕೂಡಿಬಂದು ಬುಗ್ಗೆಗಳಿಂದಲೂ ಬಾವಿಗಳಿಂದಲೂ ಹೊರಗೆಬಂದು ಸಕಲಜೀವಜಂತುಗಳಿಗೆ ಪ್ರಯೋಜನವಾಗುತ್ತದೆ ಬುಗ್ಗೆಗಳು ಬೇರೆಬೇರೆ ಪ್ರಕಾರವಾಗಿವೆ ಕೆಲವು ಯಾವಾಗಲೂ ಹರಿಯುತ್ತವೆ ಕೆಲವು ಬಿಸಲು ಕಾಲದಲ್ಲಿ ಆರಿಹೋಗುತ್ತವೆ ಕೆಲವು ನಾಲ್ಕು ದಿವಸ ಹರಿದು ನಾಲ್ಕು ದಿವಸ ಆರಿ ಯೀ ಪ್ರಕಾರ ಪರ್ವತಗಳೊಳಗಿರುವ ಗುಹೆಗಳು

ನೀರು ತುಂಬಾದ ಸಮಯದಲ್ಲಿ ಅವು ಖಾಲಿಯಾಗುವ ಪರಿಯಂತ್ರ ಹರಿದು ಆ ಭೂಮಿಯೊಳಗಿನ ಜಲಪಾತ್ರೆಗಳು ತಿರಿಗಿ ತುಂಬಾಗುವ ಪರಿಯಂತ್ರಕ್ಕೂ ಬಿಡುತ್ತವೆ ಕೆಲವು ಬುಗ್ಗೆಗಳು ಭೂಗರ್ಭದಲ್ಲಿರುವ ಬೆಂಕಿಯ ಸಮೀಪದಲ್ಲಿ ಆರಂಭವಾಗಿರುವದರಿಂದ ಬಿಸಿಯಾಗಿರುತ್ತವೆ ಅಂಥಾ ಬುಗ್ಗೆಗಳು ವಿಲಾಯಿತಿಯಲ್ಲಿ ಬಹಳವಿರುತ್ತವೆ ರೋಗಿಷ್ಟರು ಅವುಗಳಲ್ಲಿ ಮಿಂದು ವೊಂದೊಂದುವೇಳೆ ಸ್ವಸ್ಥವಾಗುತ್ತಾರೆ ಹಿಮಾಲಯದಲ್ಲಿಸಹ ಜ್ವಾಲಾಮುಖಿ ಮೊದಲಾದ ಸ್ಥಳಗಳಲ್ಲಿ ಅಂಥಾ ಬುಗ್ಗೆಗಳಿರುತ್ತವೆ ಬೇರೆಬುಗ್ಗೆಗಳು ಭೂಮಿಯೊಳಗಿರುವ ಲೋಹಗಳ ಸಮೀಪದಲ್ಲಿ ಉಂಟಾಗಿರುವದರಿಂದ ಆ ಲೋಹಗಳ ರಸವು ಅವುಗಳ ನೀರಿಗೆ ಕೂಡಿರುತ್ತವೆ ಯೀಪ್ರಕಾರ ಕಬ್ಬಿಣ ನೀರಿನ ಬುಗ್ಗೆಗಳೂ ಹಿತ್ತಾಳಿ ನೀರಿನ ಬುಗ್ಗೆಗಳೂ ಗಂಧಕ ನೀರಿನ ಬುಗ್ಗೆಗಳೂ ಅನೇಕ ಸ್ಥಳಗಳಲ್ಲಿರುತ್ತವೆ ವಿಷವುಳ್ಳ ಲೋಹಗಳ ಸಮೀಪದಲ್ಲಿ ಹುಟ್ಟಿದ ಕೆಲವು ಬುಗ್ಗೆಗಳಲ್ಲಿ ವಿಷ ನೀರು ಸಹಾ ವುಂಟು ವುಪ್ಪುಪಟ್ಟು ವುಪ್ಪು ಯಿತ್ಯಾದಿ ಲವಣಗಳಿಂದ ಕಲಸಿದ ನೀರಿನ ಬುಗ್ಗೆಗಳು ಅನೇಕವಿರುತ್ತವೆ ಯೀಮೆಲ್ಲಾ ಬುಗ್ಗೆಗಳು ನಾನಾವಿಧದ ರೋಗಗಳಿಗೆ ವುಪಯೋಗವಾಗಿರುತ್ತವೆ.

ಮೊದಲನೆ ಪುಸ್ತಕ ಮುವ್ವತ್ತೊಂದನೆ ಪುಟದಲ್ಲಿ ತೀರದೆಯಿದ್ದ

An Account of Hindostan.—Chapter Fourth.

೬ನೆ ಮುಸಲ್ ಮಾನರು ಹಿಂದುದೇಶದಲ್ಲಿ ಪ್ರವೇಶಿಸಿದ ಕಥೆ.

ಯೇಸು ಕ್ರೀಸ್ತನ ಮೇಲೆ ಸುಮಾರು ೫೦೦ನೆ ವರ್ಷದಲ್ಲಿ ಚತುರಂಗವೆಂಬ ಆಟವೂ ಪಂಚತಂತ್ರವೆಂಬ ಪುಸ್ತಕವೂ ಮೊದಲು ಫಾರ್ಸಿದೇಶಕ್ಕೆ ಅಲ್ಲಿಂದ ನಮ್ಮ ವಿಲಾಯಿತಿಗೆ ಸಹಬಂತು ಅದೇ ಪ್ರಕಾರ ಲೆಖ್ಖಗಣಿತ ವೈದ್ಯಾದಿ ಹಿಂದುವಿದ್ಯೆಗಳು ಫಾರ್ಸಿಸ್ಥಾನ ಅರಾಬಿಯಾಯೆಂಬ ದೇಶಗಳಿಗೆ ಬಂದವು ಯೇಸುಕ್ರೀಸ್ತನು ಹುಟ್ಟಿದ ೬೨೨ನೆ ವರ್ಷದಲ್ಲಿ ಮುಸಲ್ ಮಾನಮತವು ಸ್ಥಾಪಿಸಿದಮೇಲೆ ಯೀ ಮುಸಲ್ ಮಾನರು ಬಹುಬೇಗ ತಮ್ಮ ರಾಜ್ಯವನ್ನು ಹೆಚ್ಚಿಸಿಕೊಂಡರು ೬೬೪ನೆ ವರ್ಷದಲ್ಲಿ ಅರಾಬಿಯನಾದ ವೊಬ್ಬ ಅಮೀರನು ಖೊರಾಸಾನ್ ಪಟ್ಟಣದಿಂದ ಹೊರಟು ಕಬೂಲ್ ಪಟ್ಟಣಕ್ಕೆ ಬಂದು ೧೨ ಸಾವಿರ ಮಂದಿ ಹಿಂದುಜನಗಳನ್ನು ಖಡ್ಗದಿಂದ ಮುಸಲ್ ಮಾನರಾಗಮಾಡಿದನು ಅವನ ಮೇಲೆ ಮೊಹಾಳೆಬ್ಬೈನ್ ಅಬೀಸಪ್ರಾ ಕುದುರೆ ಸವಾರರ ಸಂಗಡ ಮೊದಲನೆಯವನಾಗಿ ಮುಲತಾನ್ ದೇಶಕ್ಕೆ ಸೇರಿ ಆ ದೇಶವನ್ನು ಲೂಟೀಮಾಡಿ ಬಹಳ ಮಂದಿ ದಾಸರನ್ನು ಖೊರಾಸಾನ್ ಪಟ್ಟಣಕ್ಕೆ ವೈದು ಅವರಿಗೆ ಬಲಾತ್ಕಾರವಾಗಿ ಸುನ್ನತಿಮಾಡಿದರು ೬೮೩ನೆ ವರ್ಷದಲ್ಲಿ ಕಬೂಲಿನಲ್ಲಿ ವೊಂದು ಪ್ರತ್ಯೇಕ ರಾಜ್ಯವನ್ನು ಸ್ಥಾಪಿಸಿದರು ೭೧೧ನೆ ವರ್ಷದಲ್ಲಿ ಮೊಹಮ್ಮದ್ ಕಾಶೀಂಯೆಂಬವನು ಸಿಂಧುನದಿಗೆ ಹತ್ರವಾದ ಹಿಂದುರಾಜ್ಯಗಳನ್ನೂ ಅವುಗಳ ಪ್ರಜೆಗಳನ್ನೂ ಯೀ ದಿವಸ ಪರಿಯಂತ್ರ ಮರತುಹೋಗದ ಭಯಂಕರವಾದ ಕ್ರೂರತ್ವದಿಂದ ಕೆಡಿಸಿದನು ಕಬೂಲ್ ರಾಯರಲ್ಲಿ ವೊಬ್ಬನಾದ ಖಾಲಿದ್ ಬಿನ ಅಬ್ದುಲಾ ಮುಲತಾನ್ ಮತ್ತು ಪೇಶಾವರ ಪಟ್ಟಣಗಳ ಮಧ್ಯದಲ್ಲಿರುವ ಸೊಲಿಮಾನ್ ಪರ್ವತಗಳಲ್ಲಿ ಹೋಗಿ ಆಫ್ ಗಾನ್ ಅಧಿಪತಿಗಳ ಸಂಗಡ ವೊಡಂಬಡಿಕೆಮಾಡಿ ಲಾಹೂರ್ ಮತ್ತು ಅಜಮೀಢ ಅರಸುಗಳ ಸಂಗಡ ೬೮೨ನೆ ವರ್ಷದ ೫ ತಿಂಗಳೊಳಗೆ ೭೦ ಯುದ್ಧ ಮಾಡಿದನು ಆಮೇಲೆ ಗಸ್ನಾಪಟ್ಟದ ಕಿಲ್ಲೆದಾರನಾದ ಸೊಬೊಖ್ ಥೆನಿನ ಲಾಹೂರ್ ರಾಜ್ಯದ ಅರಸನಾದ ಬ್ರಾಹ್ಮಣನಾಗಿರುವ ಜಯಪಾಲನ ಸಂಗಡ ಕೆಲವು ಯುದ್ಧಮಾಡಿ ೯೭೭ನೆ ವರ್ಷದಲ್ಲಿ ಅಮೀರ್ ನಜಿರೆದ್ದೀನ್ ಯೆಂಬ ಹೆಸರುಹೊಂದಿ ಗಸ್ನಾ ರಾಜ್ಯದ ರಾಯನಾದನು ಅವನು ಅಂದಿನಿಂದ ಸ್ವತಂತ್ರಗಾರನಾಗಿ ತನ್ನ ಅರಸ್ತನದ ಮೊದಲನೆ ವರ್ಷದಲ್ಲಿ ಜಯಪಾಲನಿಗೆ ವಿರೋಧವಾಗಿ ತಿರುಗಿ ಹೋಗಿ ಯಿವನು ಕಪ್ಪಕೊಡುವದರಲ್ಲಿ ಮೋಸಮಾಡಿದಮೇಲೆ ಅವನನ್ನು ಪೂರ್ಣವಾಗಿ ಅಪಜಯಮಾಡಿದನು ಅವನು ಸತ್ತಮೇಲೆ ೯೯೭ನೆ ವರ್ಷದಲ್ಲಿ ಅವನ ಹೊಚ್ಚಲುಮಗನಾದ ಮಹಮ್ಮದನು ಮೊದಲೇ ತನಗೆ ತಾನೇ ಸುಲ್ತಾನನೆಂದು ಹೇಳಿಕೊಂಡು ಮತ್ತೆ ಮಹಂಮದ್ ಘಾಜಿ ಜಮೀನದ್ದೌಲಾ ಅಮೀನ್ ಲೆಮ್ಮಿಲ್ಲಾ ಯೆಂದು ಕೀರ್ತಿಯ ಹೆಸರುಗಳನ್ನು ಹೊಂದಿ ರಾಜ್ಯವನ್ನು ತಕ್ಕೊಂಡನು ಯಿವನು ೩೦ ವರ್ಷದೊಳಗೆ ಹಿಂದುದೇಶಕ್ಕೆ ವಿರೋಧವಾಗಿ ೧೨ ಯುದ್ಧಪ್ರಯಾಣಗಳನ್ನು ಮಾಡಿ ಅನೇಕಸಾರಿ ಸಂಣ ಲೂಟಿಯುದ್ಧಗಳನ್ನು ನಡಿಸಿ ಕೀರ್ತಿಯುಳ್ಳ ಪಟ್ಟಣಗಳನ್ನು ಸುಟ್ಟು ಹಾಳುಮಾಡಿ ದೇವಾಲಯಗಳನ್ನೂ ಅರಮನೆಗಳನ್ನೂ ಕೆಡಿಸಿ ಬ್ರಾಹ್ಮಣರಿಗೆ ಹೇಳಲಾರದ ವುಪದ್ರವನ್ನು ಕೊಟ್ಟು ಹಿಂದುದೇಶದಲ್ಲಿ ಮುಸಲ್ ಮಾನರ ರಾಜ್ಯದ ಆರಂಭ ಮಾಡಿದನು ಅವನು ಮಾಡಿದ ೧೨ ಯುದ್ಧಪ್ರಯಾಣಗಳ ಕಥೆ ಹ್ಯಾಗೆಂದರೆ. ೧ನೆ ೧೦೦೧ನೆ ವರ್ಷದಲ್ಲಿ ಮಹಮ್ಮದನು ೧೦ ಸಾವಿರ ಸವಾರರ ಸಂಗಡ ಪೇಶಾವರಕ್ಕೆ ಹೋಗಿ ೩೦ ಸಾವಿರ ಪಾಯಿದಳ ೧೨ ಸಾವಿರ ಸವಾರರು ೩೦೦ ಆನೆಗಳು ಕೊಂಡುಬಂದು ಜಯಪಾಲನಿಗೆ ಯುದ್ಧಮಾಡಿ ಅರಸನನ್ನೂ ೧೫ ಅಧಿಪತಿಗಳನ್ನೂ ಅರಸನ ತಂಮಂದಿರನ್ನೂ ಮಕ್ಕಳನ್ನೂ ಹಿಡಿದು ೫ ಸಾವಿರ ಪಾಯಿಯರನ್ನು ಕೊಂದುಹಾಕಿ ದೊಡ್ಡಲೂಟೀಮಾಡಿ ಕಡೇಲಿ ಬಹಳ ಹಣ ಕಪ್ಪ ಕೊಡಬೇಕುಯೆಂದು ಹೇಳಿ ಅರಸನನ್ನು ಬಿಟ್ಟು ಗಸ್ನಕ್ಕೆ ತಿರುಗಿ ಹೋದನು. ೨ನೆ ಯೆರಡನೆಸಾರಿ ಪರದೇಶಸ್ಥರಿಂದ ಅಪಜಯ ಹೊಂದಿದ ಅರಸು ರಾಜ್ಯವನ್ನಾಳಕೂಡದೆಂದು ಬ್ರಾಹ್ಮಣರಲ್ಲಿ ಮರ್ಯಾದೆಯಿರುವದರಿಂದ ಜಯಪಾಲನು ತನ್ನ ಮಗನಾದ ಆನಂದಪಾಲನನ್ನು ಅರಸನಾಗಿರಿಸಿ ತನ್ನನ್ನು ಸುಟ್ಟುಕೊಂಡನು ಆನಂದಪಾಲನು ೧೦೦೪ನೆ ವರ್ಷದಲ್ಲಿ ಕಪ್ಪ ಕೊಡದೆ ಯಿರುವದರಿಂದ ಮಹಮ್ಮದನು ಮುಲ್ತಾನ ದೇಶವನ್ನು ದಾಟಿ ಅರಸನನ್ನು ವೋಡಿಸಿ ಬಹತ್ತಿಯಾಯೆಂಬ ಕೋಟೆಯನ್ನು ತೆಗದು ಬಹಳ ಮಂದಿ ದಾಸರನ್ನು ೨೮೦ ಆನೆ ಸಹ ತೆಗದುಕೊಂಡು ಗಸ್ನಕ್ಕೆ ಹೋದನು ಮುಲತಾನ್ ಅರಸನೂ ಅವನ ಸಂಗಡಲಿರುವ ಅನೇಕರೂ ತಮಗೆ ತಾವೇ ಕೊಂದುಕೊಂಡರು ೩ನೆ ೧೦೦೫ನೆ ವರ್ಷದಲ್ಲಿ ಹೊಸ ಮುಲತಾನ್ ಅರಸನಾದ ದಾಊದನು ಕಪ್ಪ ಕೊಡದೆ ಆನಂದಪಾಲನ ಸಂಗಡ ವೊಡಂಬಡಿಕೆ ಮಾಡಿದಮೇಲೆ ಮಹಮ್ಮದನು ಬಂದು ಯಿವನಿಗೆ ಅಪಜಯಮಾಡಿ ಚಂದ್ರಭಾಗನದೀಪರಿಯಂತ್ರ ಅವನನ್ನು ವೋಡಿಸಿದನು ಅಲ್ಲಿಂದ ಆನಂದಪಾಲನು ಕಾಶ್ಮೀರಕ್ಕೆ ವೋಡಿಹೋದನು ಅಲ್ಲಿಂದ ಮಹಮ್ಮದನು ಮುಲ್ತಾನಿಗೆ ಹೋಗುವಾಗ್ಯೆ ಮುಲ್ತಾನ್ ಅರಸನು ತನ್ನ ದ್ರವ್ಯಗಳನ್ನು ತೆಗದುಕೊಂಡು ಲಂಕಾದ್ವೀಪಕ್ಕೆ ವೋಡಿಹೋದನು ಮಹಮ್ಮದನು ಬೇರೆ ಅರಸನನ್ನು ಯಿರಿಸಿ ಗಸ್ನಕ್ಕೆ ಹೋದನು. ೪ನೆ ೧೦೦೮ನೆ ವರ್ಷದಲ್ಲಿ ಮಹಮ್ಮದನು ಆನಂದಪಾಲನಿಗೆ ಮುಲ್ತಾನ್ ಯುದ್ಧದಲ್ಲಿ ಸಹಾಯ ಮಾಡಿದಕ್ಕೋಸ್ಕರ ಶಿಕ್ಷೆಕೊಡಲಿಕ್ಕೆ ಹೋದನು ಆನಂದಪಾಲನು ಉಜ್ಜಯಿನಿ ಗ್ವಾಲಿಯರ್ ಕಲಿಂಜರ್ ಕನ್ಯಾಕುಬ್ಜಾ ಡಿಲ್ಲಿ ಅಜಮೀಢ ಯೆಂಬ ಯೇಳು ಅರಸುಗಳನ್ನು ಸಹಾಯಕ್ಕೆ ಕರಕೊಂಡು ಪೇಶಾವರಹತ್ರ ದಂಡು ಕಟ್ಟಿ ಅಪಜಯವಾದನು ಮುಸಲ್ ಮಾನರು ೨೦ ಸಾವಿರ ಹಿಂದುಜನರನ್ನು ಕೊಂದು ಹಾಕಿ ಪೂರ್ವಕ್ಕೆ ಹೋಗಿ ಮೂರ್ತಿಗಳನ್ನು ಕೆಡಿಸಿ ದೇವಾಲಯಗಳನ್ನು

ಹಾಳು ಮಾಡಿ ಉತ್ತಮವಾದ ಬೊಕ್ಕಸವೂ ದೇವಸ್ಥಾನವೂ ಯಿದ್ದ ಭೀಮಕೋಟೆಯಂನು ಪ್ರವೇಶಿಸಿ ೩೧ ಲಕ್ಷ ರೂಪಾಯಿಯೂ ೧೪೦೦ ಶೇರು ಬೆಳ್ಳಿಯೂ ೪೦೦ ಶೇರು ಭಂಗಾರವೂ ೪೦೦೦ ಬೆಳ್ಳಿ ಕುಳುಗಳಂನೂ ೪೦ ಶೇರು ರತ್ನಮುತ್ತುಗಳಂನೂ ಲೆಕ್ಕಯಿಲ್ಲದ ಆಭರಣಗಳಂನೂ ಮೂವತ್ತು ಮೊಳ ವುದ್ದವಾಗಿಯೂ ೧೫ ಮೊಳ ಅಗಲವಾಗಿಯೂ ಯಿರುವ ೧ ಬೆಳ್ಳಿಮನೆ ಸಹಾ ವೈದು ಗಸ್ನಕ್ಕೆ ಹೋದನು ಯೀ ಭೀಮಕೋಟೆಗೆ ನಗರಕೋಟೆ ಅಥವಾ ಖಂಕರಕೋಟೆಯೆಂದು ಹೆಸರುಗಳು ಸಹಾಯಿರುತ್ತವೆ ಅದರ ಹತ್ರ ನಾಗಪಟ್ಟಣವು ಮಹಾ ಮಾಯಾಪಟ್ಟಣವು ಯೀಗ ಸಹಾ ಅಲ್ಲಿ ೧ ಕಾಳೀದೇವಸ್ಥಾನವೂ ಜಾತ್ರೆಯೂ ವುಂಟು ೫ ನೆ ೧೦೦೯ ನೆ ವರ್ಷದಲ್ಲಿ ಮಹಮ್ಮದನು ತಿರುಗಿ ಹೋಗಿ ಡಿಲ್ಲಿ ಮಹಾರಾಜನಿಗೂ ಬೇರೆ ಅನೇಕ ಅರಸುಗಳಿಗೂ ಕಪ್ಪವಂನಿಟ್ಟನು. ೬ ನೆ ೧೦೧೧ ನೆ ವರ್ಷದಲ್ಲಿ ಮಹ್ಮದನು ಕುರುಕ್ಷೇತ್ರದಲ್ಲಿರುವ ತಾಣೇಶ್ವರವೆಂಬ ದೇವಸ್ಥಾನದ ಐಶ್ವರ್ಯಗಳನ್ನ ಕುರಿತುಕೇಳಿ ಯುದ್ಧಪ್ರಯಾಣದಲ್ಲಿ ಅಲ್ಲಿಹೋಗಿ ಯೀ ದೇವಸ್ಥಾನವಂನು ಹಾಳು ಮಾಡಿ ಅದರ ಮುಖ್ಯ ಮೂರ್ತಿಯಾದ ಕಲ್ಲಿನ ಯುಗ ಸೋಮಮೂರ್ತಿಯಂನು ಫೊಡಿದು ತುಂಡುಮಾಡಿ ಆ ತುಂಡುಗಳಂನು ಮಾರ್ಗದಮೇಲೆ ಬಿಸಾಡ ಬೇಕೆಂದು ಅಪ್ಪಣೆಕೊಟ್ಟು ೪೫೦ ರೂಪಾಯಿತೂಕದ ವಜ್ರವಂನೂ ಅನೇಕ ಆನೆಗಳಂನೂ ೨ ಲಕ್ಷ ಕೈಸೆರೆಯವರಂನೂ ತೆಗದುಕೊಂಡು ಗಸ್ನ ಪಟ್ಟಣಕ್ಕೆ ವೈದನು. ೭ ನೆ ೧೦೧೩ ನೆ ವರ್ಷದಲ್ಲಿ ಮಹಮ್ಮದನು ಉತ್ತರ ಲಾಹೂರದೇಶದಲ್ಲಿ ಬಾಲನಾಥಪರ್ವತದಮೇಲೆಯಿರುವ ನಂದನಕೋಟೆಗೆ ಮುತ್ತಿಗೆಹಾಕಿ ಅದನ್ನ ತೆಗದು ಲಾಹೂರ ಅರಸನಾದ ಯೆರಡನೆಜಯಪಾಲ ಕಾಶ್ಮೀರದೇಶಕ್ಕೆ ವೋಡಿಹೋದದರಿಂದ ತಾನುಸಹಾ ಅಲ್ಲಿ ಪ್ರವೇಶಿಸಿ ಕಾಶ್ಮೀರದೇಶವಂನು ಲೂಟೀಮಾಡಿ ನಿವಾಸಿಗಳಂನು ಬಲಾತ್ಕಾರವಾಗಿ ತಂನ ಮತಕ್ಕೆ ಸೇರಿಸಿ ಗಸ್ನಕ್ಕೆ ಹೋದನು. ೮ ನೆ ೧೦೧೬ ನೆ ೧೦೧೭ ನೆ ವರ್ಷಗಳಲ್ಲಿ ಮಹಮ್ಮದನು ಪಂಜಾನದವನ್ನ ದಾಟಿ ಕಾಶ್ಮೀರ ದೇಶದಿಂದ ಕಂನಿಕೆಗಳಂನೂ ಮಾರ್ಗ ತೋರಿಸುವ ಮನುಷ್ಯರಂನೂ ಹೊಂದಿ ಕನ್ಯಾಕುಬ್ಜಕ್ಕೆ ಮುಟ್ಟಿದನು ಆಪಟ್ಟಣದ ಅರಸು ತಂನಂನು ತಾನೇ ಮಹಮ್ಮದನಿಗೆ ವೊಪ್ಪಿಸಿದರಿಂದ ಯಿವನು ಕನ್ಯಾಕುಬ್ಜದ ಹತ್ರ ೩ ದಿವಸಮಾತ್ರ ನಿಂತು ಮಿರುಹುತಕ್ಕೆ ಹೋದನು ಮಿರುಹುತಕೋಟೆಯಿಂದ ಅರಸನಾದ ಹರಿದತ್ತನು ತಂನ ಸೈನ್ಯದ ಸಂಗಡ ಅಡವಿಗೆ ಹೋದ ಕಾರಣ ಮಹಮ್ಮದನು ಯೀ ಕೋಟೆ ತೆಗದುಕೊಂಡು ಶಿಪಾಯಿಯರಂನು ಅಡವಿಗೆ ಕಳುಹಿಸಿ ೫೦ ಸಾವಿರ ಹಿಂದುಜನರಂನು ಕೊಂದುಹಾಕಿಸಿದನು ಅರಸನು ಸಹ ಮೊದಲು ತಂನ ಹೆಂಡತಿಯಂನು ಆಮೇಲೆ ತಂನಂನು ತಾನೇ ಕಠಾರಿಯಿಂದ ಯಿರಿದು ಕೊಂಡನು ಅಲ್ಲಿಂದ ಮಹಮ್ಮದನು ಮಥುರೆಗೆ ಹೋಗಿ ಅದಂನು ಹಾಳುಮಾಡಿ ೨೦ ದಿವಸಪರಿಯಂತ್ರ ಬೆಂಕಿಯಿಂದ ಸುಟ್ಟು ಯಿಂನ ಬೇರೆ ೭ ದೊಡ್ಡ ಕೋಟೆಗಳಂನು ತೆಗದು ಕಡೆಯಲ್ಲಿ ರಾಜಪುತ್ರರಿಂದ ತುಂಬಾದ ಮಂಜವೆಂಬ ಕೋಟೆಯಂನು ೨೫ ದಿವಸಪರಿಯಂತ್ರ ಮುತ್ತಿಗೆಹಾಕಿ ತೆಗದುಕೊಂಡನು ಅದರ ನಿವಾಸಿಗಳು ತಮಗೆ ತಾವೇ ಯಿರಿದುಕೊಂಡು ಬೆಂಕಿಯಿಂದ ಸುಟ್ಟುಕೊಂಡಮೇಲೆ ಮಹಮ್ಮದನು ಚಂದ್ರಪಾಲೀಶ ಕೋಟೆಯಂನು ಸಹಾ ತೆಗದು ಚಂದ್ರರಾಜನಂನು ೩ ಹಗಲು ರಾತ್ರಿಪರಿಯಂತ್ರ ವೋಡಿಸಿ ಕಡೆಯಲ್ಲಿ ತಂನ ಸಮಸ್ತ ಸೈನ್ಯ ಆನೆಗಳ ಸಂಗಡ ಹಿಡಿದನು ಆಮೇಲೆ ೨ ಕೋಟಿ ರೂಪಾಯಿಗಳಂನೂ ೫೩ ಸಾವಿರ ಕೈಸೆರೆಯವರಂನೂ ೩೫೦ ಆನೆಗಳಂನೂ ಗಸ್ನಕ್ಕೆ ವೈದನು ಅಂದಿನಿಂದ ಗಸ್ನವು ಸಮಸ್ತ ಹಿಂದುದೇಶದ ದ್ರವ್ಯವುಕೂಡಿ ದೊಡ್ಡ ಭಾಗ್ಯದಿಂದ ತುಂಬಿತು ಅದರಲ್ಲಿ ಆಶ್ಚರ್ಯವಾದ ಮಸೂದಿಯಂನೂ ಅನೇಕ ವಿದ್ಯಾಶಾಲೆಗಳಂನೂ ಕಟ್ಟಿಸಿ ನಾನಾ ಭಾಷೆಗಳ ಪುಸ್ತಕಗಳಂನು ಕೂಡಿಸಿ ಫಿರ್ದುಸಿಲಾದಿ ಕವೀಶ್ವರರಂನೂ ಮುಲ್ಲಾಗಳಂನೂ ಮಹಮ್ಮದನು ಕರೆದನು ದೊಡ್ಡವರು ಅರಸನು ಮಾಡಿದ್ದಂನು ನೋಡಿ ತಾವೇ ಮಸೂದಿಗಳಂನೂ ಭಾವಿ ಕೆರೆ ಕೋದುಗಳಂನೂ ಸ್ತಂಭ ಮನೆಗಳಂನೂ ಕಟ್ಟಿಸಿದರು ಆದರೆ ಯಿಂಥಾ ಅನ್ಯಾಯದಿಂದ ಸಂಪಾದಿಸಿದ ದ್ರವ್ಯಗಳು ಯೀಗಿನ ಸಮಯದಲ್ಲಿ ಕಾಣದೆ ಹೋಗಿರುತ್ತವೆ ೧೦ ನೆ ೧೦೨೧ ನೆ ವರುಷದಲ್ಲಿ ಮಹಮ್ಮದನು ತನಗೆ ವಶವಾದ ಕನ್ಯಾಕುಬ್ಜ ರಾಯನಿಗೆ ಉಪದ್ರಕೊಟ್ಟ ಕಲಿಂಜಿರ ರಾಯನಿಗೆ ವಿರೋಧವಾಗಿ ಚಂಬಲ ನದಿ ಹತ್ರ ಬಂದು ಅದಂನು ದಾಟಲಿಕ್ಕೆ ತನಗೆ ಅಡ್ಡಮಾಡುವ ಪಂಚನದ ರಾಯನಾದ ತಿರುಜಯಪಾಲನಂನು ವೋಡಿಸಿ ಕಲಿಂಜರ ರಾಯನ ೫೮೦ ಆನೆ ಹಿಡಿದು ಆಮೇಲ್ಲಾದೇಶವಂನು ನಾಶಮಾಡಿ ಗಸ್ನಕ್ಕೆ ತಿರುಗಿದನು ೧೧ ನೆ ೧೦೨೩ ನೆ ವರ್ಷದಲ್ಲಿ ಮಹಮ್ಮದನು ಕಲಿಂಜರಕ್ಕೆ ಹೋಗುವ ಅಪೇಕ್ಷೆಯಲ್ಲಿ ಗ್ವಾಲಿಯರ್ ಕೋಟೆ ಹತ್ರ ಬಂದು ಅದರ ರಾಯನಿಂದ ೩೫ ಆನೆ ಮತ್ತು ದೊಡ್ಡ ಕಾಣಿಕೆ ಹೊಂದಿದ ಕಾರಣ ಅದಕ್ಕೆ ಉಪದ್ರಕೊಡದೆ ಗಸ್ನಕ್ಕೆ ಹೋದನು ೧೨ ನೆ ೧೦೨೫ ನೆ ವರ್ಷದಲ್ಲಿ ಮಹಮ್ಮದನು ಗುರ್ಜಾರದೇಶದ ಸಮುದ್ರ ತೀರದಲ್ಲಿರುವ ಸೋಮನಾಥ ದೇವಸ್ಥಾನವಂನು ೩ ದಿನಪರಿಯಂತ್ರ ಯುದ್ಧಮಾಡಿ ದೇವಸ್ಥಾನದೊಳಗೆ ೫ ಸಾವಿರ ಜನರನ್ನ ಕೊಂದುಹಾಕಿ ವೋಡಿಹೋಗುವವರ ಹಡಗಗಳು ಸಹಾ ನಾಶನಮಾಡಿ ಸೋಮನಾಥ ಮೂರ್ತಿಯಂನು ತಾನೇ ಸುತ್ತಿಗೆಯಿಂದ ಮುರಿದು ಅದರ ತುಂಡುಗಳಲ್ಲಿ ೨ ಗಸ್ನಕ್ಕೆ ೧ ಮಕ್ಕಕ್ಕೆ ಮತ್ತೊಂದು ಮದೀನಕ್ಕೆ ಕಳುಹಿಸಿದನು ಯೀ ಮೂರ್ತಿಯಂನು ಆ ಪರಿಯಂತ್ರ ದಿವಸಕ್ಕೆ ೨ ಸರ್ತಿ ಗಂಗಾಜಲದಿಂದ ತೊಳಿಯುತ್ತಿದ್ದರು ಅದರ ಕಾಣಿಕೆ ಹಣ ೨ ಸಾವಿರ ಗ್ರಾಮಗಳ ಗುತ್ತಿಗೆ ಯಾಗಿತ್ತು ದೇವಾಲಯದ ಘಂಟೆಗೆ ೪೦೦ ರತಲ್ ಭಾರವಾದ ಭಂಗಾರದ ಸಂಕೋಲೆಯಿತ್ತು ದೇವಸ್ಥಾನದಲ್ಲಿ ಪೂಜಾರಿಗಳು ೨ ಸಾವಿರಮಂದಿ ವೇಶ್ಯಾಸ್ತ್ರೀಯರು ೫೦೦ ವಾದ್ಯದವರು ೨೦೦ ನಾಪಿಕರು ೩೦೦ ಸೂಳೆಯರಲ್ಲಿ ಅರಸುಗಳ ಹುಡುಗಿಯರು ಸಹಾಯಿದ್ದರು ಆ ದೇವಸ್ಥಾನದಲ್ಲಿ ವಜ್ರಮುಂತಾದ ಅನೇಕ ರತ್ನ ಕೆತ್ತಿಗೆ ಯಿರುವದರಿಂದ ೧ ದೀಪಯಿಟ್ಟರೆ ಸಹಸ್ರ ಕಡೆಯಲ್ಲಿ ಭಳ ಭಳದ ಪ್ರಕಾಶವಾದ ಪ್ರತಿಬಿಂಬಗಳು ಕಾಣುತ್ತಿದ್ದವು ಅರಸ ಭಂಡಾರಕ್ಕಿಂತ ದೊಡ್ಡ ದ್ರವ್ಯವನ್ನ ಮಹಮ್ಮದನು ಅಲ್ಲಿಂದವೈದನು ಅಲ್ಲಿಂದ ಬ್ರಹ್ಮದ್ವೀಪವೆಂಬ ಸರ್ವಾ ಅರಸನ ರಾಜಪಟ್ಟಣಕ್ಕೆ ವಿರೋಧವಾಗಿ ಹೋಗಿ ಅವನ ಕೋಟೆಯಂನೂ ಭಂಡಾರವಂನೂ ತೆಗದು ನರ್ವಾಲೆಂಬ ಅರಸಪಟ್ಟಕ್ಕೆ ಬಂದು ಅಲ್ಲಿ ತಾನೇ ಸೂಡ್ರಲಿಕ್ಕೆ ಸ್ವಲ್ಪ ಪರಿಯಂತ್ರ ಆಪೇಕ್ಷಿಮಾಡಿ ಸಿಂಧುನದಿಯ ಪಶ್ಚಿಮದಲ್ಲಿರುವ ಯುತ್ತರು ಅವನಿಗೆ ತಿರುಗಿಬಿದ್ದದರಿಂದ ಅವರಿಗೆ ಯುದ್ಧಮಾಡಿ ಸತ್ತುಹೋದನು.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡ ಸಮಾಚಾರವು.

೧೮೪೪.

೧ನೆ ಪುಸ್ತಕ. ೧೦ನೆ ಅಂಕೆ] ಬಳ್ಳಾರಿ ೧೫ನೆ ಜೂಲಾಯಿ [ಟಪಾಲ ದಸ್ತೂರಿಕೂಡಿ ಕ್ರಯ ೨ ದುಡ್ಡು.

The Government.
ರಾಜ ವರ್ತಮಾನ.

ಲೊರ್ಡ್ ಎಲ್ಲೆನ್ ಬೊರೊ ಬಹದೂರರು ಕೋರ್ಟ್ ಆಫ್ ದಿರೆಕ್ತರ್ಸ್ ಎಂಬ ಕುಂಪಣೀಯ ಯಜಮಾನರು ತನಗೆ ಪ್ರತಿಯಾಗಿ ಮತ್ತೊಬ್ಬ ಗವರ್ನರ್ ಜನರಲ್ ಆರಿಸಿ ತೆಗದುಕೊಂಡರೆಂದು ಹೋದ ತಿಂಗಳಿನ ಆವಿರುಡ ಗದಲ್ಲಿ ಬಂದ ಕಾಗದಗಳಿಂದ ತಿಳಿದುಕೊಂಡಾಗಲೇ ತನ್ನ ಅಧಿಕಾರವನ್ನು ಹೊಸ ಗವರ್ನರ್ ಜನರಲ್ ಬರುವಪರಿಯಂತರ ಹೊನರೆಬಲ್ ಮಿಸ್ತರ್ ಬರ್ಡ್ ದೊರೆಗೆ ಒಪ್ಪಿಸಿ ಕೊಟ್ಟರು ಯಿವರು ಕೆಲವು ವರ್ಷಗಳ ಹಿಂದೆ ಮಂಗಳೂರಿನಲ್ಲಿ ಜಡ್ಜ್ ಆಗಿದ್ದು ಯೀಗ ಕೊಯಿಂಬತ್ತೂರಿನಲ್ಲಿ ಅದೇ ಉದ್ಯೋಗದಲ್ಲಿರುವ ಜಾರ್ಜ್ ಬರ್ಡ್ ದೊರೆಗೆ ಅಣ್ಣಂದಿರಾಗಿದ್ದಾರೆ ಬಹಳ ವರ್ಷಗಳ ಹಿಂದೆ ಬಂಗಾಳ ದೇಶಕ್ಕೆ ಬಂದು ಬಹಳ ಬುದ್ಧಿಯಿಂದ ಬೇರೆ ಬೇರೆ ಉದ್ಯೋಗಗಳನ್ನು ನಡಿಸಿ ಕಡೇಲಿ ಕೌನ್ಸಿಲಿನಲ್ಲಿ ಸೇರಿ ಲೊರ್ಡ್ ಎಲ್ಲೆನ್ ಬೊರೊವರಿಂದ ಬಂಗಾಳ ದೇಶದ ಡಿಪ್ಯುಟಿ ಗವರ್ನರ್ ಅಧಿಕಾರವನ್ನು ಹೊಂದಿರುತ್ತಿದ್ದರು ಯಿವರು ಸರ್ ಹೆನ್ರಿ ಹಾರ್ಡಿಂಜ್ ಹೆಸರುಳ್ಳ ಹೊಸ ಗವರ್ನರ್ ಜನರಲ್ ದೊರೆ ವಿಲಾಯತಿಯಿಂದ ಬರುವಪರಿಯಂತರ ಹಿಂದು ರಾಜ್ಯವನ್ನು ಆಳುವರು.

ಯೀದೇಶಸ್ಥರಲ್ಲಿ ಯಾವನಾದರು ಯೀವರ್ತಮಾನವನ್ನು ಕೇಳಿ ತನ್ನ ಮನಸ್ಸಿನಲ್ಲಿ ಆಲೋಚಿಸಿದರೆ ಆಶ್ಚರ್ಯಪಡುವನು ಯಾಕೆಂದರೆ ಸಾಧಾರಣ ಮನುಷ್ಯನ ಮಗನು ಒಂದು ಅನ್ಯಾಯವಾದರೂ ಮೋಸವಾದರೂ ಮಾಡದೆಯೂ ಲಂಚವನ್ನು ಕೊಡದೆಯೂ ತೆಗದುಕೊಳ್ಳದೆಯೂ ಯಿಂಥಾ ಮಹಾ ರಾಜ್ಯವನ್ನಾಳುವ ಅಧಿಕಾರವನ್ನು ಸಂಪಾದಿಸಿದ್ದದ್ದು ಬಹು ಅಪರೂಪವಾಗಿದೆ ಪೂರ್ವದಲ್ಲಿ ಸಹಜವಾಗಿ ಹುಟ್ಟಿದ ಮನುಷ್ಯರು ತಮ್ಮ ಯುಕ್ತಿಯಿಂದಲಾಗಲಿ ಶೂರತ್ವದಿಂದಲಾಗಲಿ ಅರಸುಗಳ ದಯವನ್ನು ಹೊಂದಿ ಶ್ರೇಷ್ಠ ಉದ್ಯೋಗಗಳಲ್ಲಿ ಸೇರಿ ಕಡೇಲಿ ಮೋಸದಿಂದ ಅಥವಾ ಬಲಾತ್ಕಾರದಿಂದ ಪಟ್ಟವನ್ನು ತೆಗದುಕೊಂಡರೆಂದು ಹಿಂದುದೇಶದ ಚರಿತ್ರೆಯನ್ನು ವಿಚಾರಿಸಿದವರಿಗೆ ತಿಳಿಯುವದು ಯೀಪ್ರಕಾರವಾಗಿ ಟಿಪ್ಪುಸುಲ್ತಾನನ ತಂದೆಯಾದ ಹೈದರಲ್ಲಿಯು ಪೂರ್ವ ಮೈಸೂರ ರಾಜರಿಗೆ ಸೇವಕನಾಗಿದ್ದು ಸಾಕಾದ ಬಲವನ್ನು ಹೊಂದಿದ ಮೇಲೆ ಯಜಮಾನರಿಗೆ ದ್ರೋಹಮಾಡಿ ಮೈಸೂರಿನ ಪಟ್ಟವನ್ನು ಹೊಂದಿಕೊಂಡು ಶ್ರೀರಂಗಪಟ್ಟಣದಲ್ಲಿ ಹೊಸ ಸಂಸ್ಥಾನವನ್ನು ಸ್ಥಾಪಿಸಿದನು ಯಿದೇಪ್ರಕಾರವಾಗಿ ಮರಾಟಾ ದೇಶದಲ್ಲಿ ಪೇಶ್ವಾ ಎಂಬ ಮುಖ್ಯ ಪ್ರಧಾನಿಗಳು ಪೂರ್ವ ಮಹಾರಾಷ್ಟ್ರ ದೇಶದ ಅರಸುಗಳ ವಂಶದವರಿಂದ ರಾಜ್ಯಾಧಿಕಾರವನ್ನೆಲ್ಲಾ ಅನ್ಯಾಯದಿಂದಲೂ ಮೋಸದಿಂದಲೂ ತೆಗದುಕೊಂಡು ತಾವೇ ಅಧಿಕಾರಿಗಳಾಗಿ ಆ ರಾಜ್ಯವನ್ನಾಳಿಕೊಳ್ಳುತ್ತಿದ್ದರು ಒಬ್ಬನ ಸತ್ಯವಂತಿಕೆ ಮೋಸ ಬಲಾತ್ಕಾರ ಇತ್ಯಾದಿ ಯೆಂದಿಗೂ ಮಾಡದೆ ಹದಿನಾಲ್ಕು ಕೋಟಿ ಜನರಿರುವ ಮಹಾರಾಜ್ಯದ ಮುಖ್ಯಾಧಿಕಾರವನ್ನು ನಡಿಸುವದನ್ನು ಕುಂಪಣೀ ಸರ್ಕಾರದವರು ಹಿಂದುದೇಶವನ್ನು ತಮ್ಮ ವಶಮಾಡಿಕೊಳ್ಳುವ ಮೊದಲು ಯೀದೇಶಸ್ಥರು ನೋಡಲಿಲ್ಲ.

Dharwar.
ಧಾರ್ವಾಡ್.

ಕೆಲವು ದಿವಸಗಳ ಹಿಂದೆ ಧಾರ್ವಾಡದಲ್ಲಿರುವ ದೊರೆಗಳು ಬಹಳ ಜನರು ಅವಾಯಿ ಮಾಡುವದಕ್ಕಾಗಿ ಸಮೀಪವಾದ ಸೀಮೆಯಲ್ಲಿ ಕೂಡಿಕೊಳ್ಳುತ್ತಾರೆಂದು ಸುದ್ದಿ ಕೇಳಿ ಆ ಕಾಟಕಾಯಿಯವರು ಯುದ್ಧಕ್ಕೆ ಬಂದರೆ ಅವರನ್ನು ದಂಡಿಸುವದಕ್ಕಾಗಿ ಧಾರ್ವಾಡದಲ್ಲಿರುವ ಪಟಾಲಾಮನ್ನು ಸಿದ್ಧಮಾಡಿರುತ್ತಿದ್ದರು ಯೀ ವರ್ತಮಾನವು ಇಂಗ್ಲೀಷ್ ನ್ಯೂಸ್ ಪೇಪರ್‌ಗಳಲ್ಲಿ ಬರೆದಿರುತ್ತಿತ್ತು ಆದರೆ ಯೀವರೆಗೆ ಯೇನೂ ಆಗಲಿಲ್ಲ ಒಬ್ಬೆ ಮೇದೊಡ್ಡದಾಯಿ ತೆಂದು ತೋರುತ್ತದೆ ಮುಸಲ್ಮಾನರು ಸಹ ಮುಂಚಿನ ಮೈಸೂರ ರಾಜ್ಯವನ್ನು ಪುನಃಸ್ಥಾಪಿಸಬೇಕೆಂದು ತಮ್ಮೊಳಗೆ ಪಡಂಬಡಿಕೆ ಕಟ್ಟಿಕೊಂಡು ಕಾಟಕಾಯಿ ಮಾಡುವರೆಂದು ಸುದ್ದಿ ಹುಟ್ಟಿತು ಯಿದು ಬರೇ ಸುಳ್ಳೆಂದು ಕಾಣುತ್ತದೆ ಯಾಕೆಂದರೆ ಬಡವರಿಗೆ ಧೈರ್ಯವೂ ತ್ರಾಣವೂ ಸಾಲದು ದೊಡ್ಡವರಿಗೆ ಕುಂಪಣೀ ಸರ್ಕಾರದವರಿಗೆ ವಿರೋಧವಾಗಿ ಯೀದೇಶಸ್ಥರಲ್ಲಿ ಯಾರೂ ನಿಲ್ಲಕೂಡದೆಂದೂ ತಮ್ಮ ಮತಸ್ಥರು ಕಾಟಕಾಯಿ ಮಾಡಿದರೆ ಒಳ್ಳೆ ದಂಡನೆಯೂ ನಾಶನವೂ ಹೊರ್ತು ಯೇನೂ ಪ್ರಾಪ್ತಿಯಾಗುವದಿಲ್ಲವೆಂದೂ ತಿಳಿದಿದ್ದಾರೆ ಕುಂಪಣೀ ಸರ್ಕಾರದವರಿಗೆ ನಾಲ್ವತ್ತು ಐವತ್ತು ವರ್ಷಗಳ ಹಿಂದೆ ಯೀಗಿನಷ್ಟು ಬಲ ಯಿರಲಿಲ್ಲ ಆದಾಗ್ಯೂ ಆಗ ಹೈದರಲ್ಲಿ ಮತ್ತು ಟಿಪ್ಪುಸುಲ್ತಾನ್ ಉಂಟುಮಾಡಿದ ಬಲವಾದ ಮುಸಲ್ಮಾನರ ರಾಜ್ಯವನ್ನು ಭಂಗಿಸಿ ಪೂರ್ವ ಮೈಸೂರ ರಾಜರ ವಂಶಸ್ಥನಾದ ಒಬ್ಬನನ್ನು ಕಂಡು ತಮ್ಮ ಹಿರಿಯರ ಸಿಂಹಾಸನದಲ್ಲಿ ಕೂಡ್ರಿಸಿದರು ಉತ್ತರ ದೇಶದ ಆಫ್ಗಾನರೂ ಸಿಂಧುದೇಶದವರೂ ಬೇರೆ ಹಿಂದುದೇಶದವರಿಗಿಂತ ತ್ರಾಣವುಳ್ಳವರೂ ಶೂರರೂ ಆಗಿದ್ದಾರೆ ಆಫ್ಗಾನರು ಮುಸಲ್ಮಾನರಾಗಿದ್ದಾರೆ ಸಿಂಧುದೇಶದಲ್ಲಿ ಹಿಂದುಜನರು ವಾಸಿಸಿದರೂ ಅಧಿಕಾರಿಗಳು ಸ್ವೈ

ನ್ಯದವರೂ ಮೊಹಮ್ಮದಿಯವರಾಗಿರುತ್ತಾರೆ ಕುಂಪಣೀಸರ್ಕಾರದವರು ಕಳೆದ ನಾಲ್ಕು ಐದು ವರ್ಷಗಳವೊಳಗೆ ಅಫಗಾನರಿಗೂ ಸಿಂಧುದೇಶದವರಿಗೂ ಯುದ್ಧಮಾಡಿ ಅವರಿಗೆ ಬಹಳ ದಂಡಿಸಿ ಯಿವರ ದೇಶವಂನು ತೆಗದುಕೊಂಡು ಕುಂಪಣಿಯವರ ರಾಜ್ಯಕ್ಕೆ ಸೇರಿಸಿದ್ದಾರೆ ಹೀಗಾದಮೇಲೆ ಯೀ ದಕ್ಷಿಣದೇಶದಲ್ಲಿರುವ ಮುಸಲ್ಮಾನರು ಕುಂಪಣಿಯವರಿಗೆ ವಿರೋಧವಾಗಿ ಕೂಡಿಕೊಂಡರೆ ಯಿವರಿಗೆ ಯೇನುಸಿಕ್ಕುವದು ದೊಡ್ಡಶಿಕ್ಷೆಯೇ ಕಾಟಕಾಯಿಯ ಫಲವು ಯಿದೇ ಯೆಂದು ಬುದ್ಧಿವಂತರಿಗೆ ತಿಳಿಯುವದು ಯೇನೂಯಿಲ್ಲದ ಬುದ್ಧಿಹೀನರಿಗೆ ಗೌಜಿಮಾಡುವ ಮನಸ್ಸು ಒಂದುವೇಳೆ ಹುಟ್ಟುವದು ಅಂಥವರು ಗುಂಪುಕೂಡಿದರೆ ಒಂದು ದಿವಸ ಪರಿಯಂತರ ದೊಡ್ಡವರಾಗಿ ನಾಲ್ಕು ಮನೆಸುಡುವದು ನಾಲ್ಕು ಅಂಗಡಿ ಲೂಟಿ ಮಾಡುವದು ಇತ್ಯಾದಿ ಪರಾಕ್ರಮಗಳಂನು ನಡಿಸಲಿಕ್ಕಾದೀತು ಮರುದಿವಸದಲ್ಲಿ ಪಟಾಲಾಮು ಬರುವದು ಮೂರನೇ ದಿವಸದಲ್ಲಿ ಜಡ್ಜರು ಕೂಡ್ರುವದು ನಾಲ್ಕನೆ ದಿವಸದಲ್ಲಿ ಕಾಟಕಾಯಿಯವರು ಫಾಶೀಕಂಬದಲ್ಲಿ ಜೋಲಾಡುವದು ಯಿಲ್ಲವೆ ಸಿಂಗಲಾದ್ವೀಪದ ಜಾತ್ರೆಗೆ ಹೊರ ಪ್ರಯಾಣ ತೆಗಿಯುವದು ೧೮೩೭ನೆ ಯಿಸುವಿಯಲ್ಲಿ ಮಂಗಳೂರಿನಲ್ಲಿ ಕೊಡಗರ ಕಾಟಕಾಯಿಯಂನೂ ಬಿಕರನ್ನಾಕನಕಟ್ಟೆಯ ಹತ್ರ ಯಿದ್ದ ಫಾಶೀಕಂಬಗಳಂನೂ ಕಣ್ಣಾರೆ ನೋಡಿದವರಿಗೆ ದೃಷ್ಟಾಂತ ಸಿಕ್ಕೀತು.

The Wonderful Life.

ಆಶ್ಚರ್ಯವಾದ ಪ್ರಾಯವು.

೧ನೆ. ಹೋದ ಎಪ್ರಿಲ್ ತಿಂಗಳಲ್ಲಿ ಇಂಗ್ಲಾಂಡ್ ಸ್ಕಾಟ್ಲಾಂಡ್ ದೇಶಗಳ ಪ್ರಾಂತ್ಯಸೀಮೆಯಲ್ಲಿರುವ ಕ್ವೀದ್‌ಮುಥ್ ಊರಿನಲ್ಲಿ ಜೇಮ್ಸ್ ಸ್ತ್ಯುಅರ್ದ್ ಯೆಂಬ ಒಬ್ಬ ಅಸಾಧಾರಣವಾದ ಮನುಷ್ಯನು ಸತ್ತನು ಅವನಂನು ಹೂಳಿಡುವ ಸಮಯದಲ್ಲಿ ಸಾವಿರಾರು ಮಂದಿ ಅವನ ತೆದಿಗೆಯ ಹಿಂದೆ ಹೋದರು ಅವನು ೧೭೨೮ನೇ ಯಿಸುವಿ ೫ನೆ ದಿಸೆಂಬರಿನಲ್ಲಿ ಅಮೇರಿಕಾದೇಶದ ಚಾರ್ಲ್ಸ್‌ತನ್ ಪಟ್ಟಣದಲ್ಲಿ ಹುಟ್ಟಿದನು ಯೇಳು ವರ್ಷದವನಾಗಿ ತಂದೆ ಹಿರಿಯರ ದೇಶವಾದ ಸ್ಕಾಟ್ಲಾಂದಿಗೆ ಬಂದು ಯವ್ವನಸ್ಥನಾಗಿ ದಂಡಿನಲ್ಲಿ ಸೇರಿ ಅನೇಕ ಯುದ್ಧಗಳಲ್ಲಿದ್ದನು ಪ್ರಾಯದವನಾಗಿ ಸರ್ಕಾರ ಹಡಗಗಳಲ್ಲಿ ಚಾಕರಿಗೆಯಿದ್ದನು ಅರವತ್ತು ವರ್ಷದವನಾಗಿ ಕ್ವೀದ್‌ಮುಥ್ ಊರಿನಲ್ಲಿ ಮನೆಕಟ್ಟಿಕೊಂಡು ಸಾರಂಗಬಾರಿಸುತ್ತಾ ರಾಗಗಳನ್ನು ಹಾಡುತ್ತಾ ಯೀ ಪ್ರಾಂತ್ಯಸೀಮೆಯಲ್ಲಿ ತಿರುಗಾಡಿ ಜನರ ಧರ್ಮಗಳಿಂದ ಬದುಕುತ್ತಿದ್ದನು ಐದುಸಾರಿ ಮದಿವೆಮಾಡಿಕೊಂಡು ಇಪ್ಪತ್ತೇಳು ಮಂದಿ ಮಕ್ಕಳಂನು ಹುಟ್ಟಿಸಿದನು ಯಿವರಲ್ಲಿ ಹತ್ತುಮಂದಿ ಗಂಡಸರು ದಂಡಿಗೆ ಹೋಗಿ ಐದುಮಂದಿ ಹಿಂದುದೇಶದಲ್ಲಿಯೂ ಯಿಬ್ಬರು ತ್ರಫಾಲ್ಗರಿನಲ್ಲಿಯೂ ಯಿಬ್ಬರು ಆಲ್ಜೀರಿನಲ್ಲಿಯೂ ಒಬ್ಬನು ವಾತೆರ್‌ಲೂವಿನಲ್ಲಿಯೂ ಸತ್ತರು ಯೀ ಸ್ತ್ಯುಅರ್ದ್ ಯೆಂಬವನು ಗಿಡ್ಡ ಮನುಷ್ಯನಾದರೂ ಬಹುಶಕ್ತಿಯುಳ್ಳವನಾಗಿದ್ದನು ಸುಮಾರು ಮುವ್ವತ್ತು ವರ್ಷಗಳ ಹಿಂದೆ ಅವನು ಒಂದು ದಿವಸ ಹುಲ್ಲುತುಂಬಿದ ದೊಡ್ಡಗಾಡಿ ನೋಡಿ ಅದರ ಕೆಳಗೆ ನಿಂದ ಬೆಂನುಕೊಟ್ಟು ಅದಂನೆತ್ತಿದನು ಅವನು ಬಹಳ ಮುದುಕನಾದಮೇಲೆ ಆ ಊರಿನಲ್ಲಿರುವ ಕೆಲವು ಧೊರೆಗಳು ಪಾಲಿನಲ್ಲಿ ಹಣ ಕೂಡಿಸಿ ಅವನು ಸಾಯುವ ಪರಿಯಂತರ ಅನಾಯಾಸವಾಗಿ ಬದುಕುವ ಹಾಗೆ ಅವನಿಗೆ ಕೊಟ್ಟರು ಅವನ ಹಿರಿಯರು ಪೂರ್ವಕಾಲದಲ್ಲಿ ಇಂಗ್ಲಾಂಡ್ ಸ್ಕಾಟ್ಲಾಂಡ್ ದೇಶಗಳ ಅರಸುಗಳಾಗಿದ್ದರು ಯಿವನೇ ನೂರಹದಿನಾರು ವರ್ಷ ಪ್ರಾಯದಲ್ಲಿ ಬಡಮನುಷ್ಯನಾಗಿ ತೀರಿಹೋದನು.

೨ನೆ. ಆಯರ್ಲಾಂಡ್ ದೇಶದ ಕ್ರೈಸ್ತಸಭೆಯ ಆರ್ಚಬಿಷಪರಲ್ಲಿ ಒಬ್ಬನಿಗೆ ಮೊಲೆಕೊಟ್ಟ ದಾದಿಯು ಮೊನ್ನೆ ನೂರನಾಲ್ಕು ವರ್ಷದವಳಾಗಿ ಚಂನಾಗಿದ್ದು ದೇವಾಲಯಕ್ಕೆ ನಡಿದುಕೊಂಡು ಹೋದಳೆಂದು ಇಂಗ್ಲಿಷ್ ನ್ಯೂಸ್ ಪೇಪರ್ ಗಳಲ್ಲಿ ಬರೆದದೆ.

ಮೊದಲನೆ ಪುಸ್ತಕ ಮುವ್ವತ್ತೆರಡನೆ ಪುಟದಲ್ಲಿ ತೀರದೆ ಯಿದ್ದ ಯಿಂಗ್ಲಾಂಡ್ ರಾಜ್ಯದ ಪೂರ್ವಚರಿತ್ರೆ.

The History of England.——Continued.

೬ನೆ ಸಂಧಿ.

೨ನೆ ಯಡವರ್ಡನೂ ೩ನೆ ಯಡವರ್ಡನೂ ೧೩೦೭ನೆ ವರುಷ ಮೊದಲುಗೊಂಡು ೧೩೭೭ನೆ ವರುಷ ಪರಿಯಂತ್ರ.

೨ನೆ ಯಡವರ್ಡನು ತಂನ ತಂದೆಯ ಪ್ರಕಾರ ಯುದ್ಧದಲ್ಲಿ ಕುಶಲನಾಗದೆ ಯಿರುವದರಿಂದ ಸ್ಕೋಟ್‌ಲಾಂಡ್ ರಾಜ್ಯವಂನು ಸಂಪಾದಿಸಲಿಕ್ಕೆ ಪ್ರಯತ್ನ ಮಾಡದೆ ಒಬ್ಬ ಕೆಟ್ಟಸ್ನೇಹಿತನ ಸಂಗಡ ದುಷ್ಟವಿಲಾಸಗಳಲ್ಲಿ ಪ್ರಾಯಕಳಕೊಂಡು ಆ ದುಷ್ಟಸ್ನೇಹಿತನಿಗೆ ರಾಜ್ಯಾಧಿಕಾರವನ್ನೆಲ್ಲ ಸಹಾ ಒಪ್ಪಿಸಿದನು ಯಿವನು ಬಹಳ ಗರ್ವಮಾಡಿದದರಿಂದ ದೊಡ್ಡದೊಡ್ಡವರು ಹಗೆಮಾಡಿ ಅವನಿಗೆ ವಿರೋಧವಾಗಿ ಒಡಂಬಟ್ಟು ಅವನಿಗೆ ಕಳುಹಿಸಬೇಕೆಂದು ಅರಸನಿಗೆ ಮೊದಲು ಬೇಡಿಕೊಂಡಾಗ ಅವನು ಹಾಗೆಮಾಡದೆ ಯಿರುವದರಿಂದ ಕಾಟಕಾಯಿಮಾಡಿ ಆ ದುಷ್ಟಸ್ನೇಹಿತನಂನು ಹಿಡಿದು ಕೊಂದುಹಾಕಿದರು ಅರಸನು ಭಯಪಟ್ಟು ಆ ಕೊಂದುಹಾಕಿದವರಿಗೆ ಪೂರ್ಣವಾಗಿ ಕ್ಷಮಿಸಿದನು ಆಮೇಲೆ ಅರಸನು ಸ್ಕೋಟ್‌ಲಾಂಡ್ ದೇಶಕ್ಕೆ ಯುದ್ಧಮಾಡಬೇಕೆಂದು ಸಜ್ಜೈಸಿ ಒಂದು ಲಕ್ಷ ಶಿಪಾಯಿಯರಂನು ಆ ದೇಶಕ್ಕೆ ತಂದನು ಬ್ರೂಸ್ ಯೆಂಬ ಅರಸನಿಗೆ ೩೦ ಸಾವಿರ ಮಂದಿ ಮಾತ್ರ ಯಿದ್ದರು ಯೀ ಯೆರಡು ಸೈನ್ಯಗಳು ೧೩೧೪ನೆ ವರುಷದಲ್ಲಿ ಬಂನೊಕ್ಬರ್ನ ಯೆಂಬ ಗ್ರಾಮದ ಸಮೀಪದಲ್ಲಿ ಕೂಡಬಂದಾಗ ಯಿಂಗ್ಲಿಷ್ ಜನರಿಗೆ ದೊಡ್ಡಕೊಲೆಯೂ ಪೂರ್ಣ ಅಪಜಯವೂ ಆಗಿ ಅರಸನಾದ ಯಡವರ್ಡನು ಓಡಿಹೋಗಿ ತಂನ ಜೀವವಂನು ಉಳಿಸಿಕೊಂಡನು ಯೀ ಯುದ್ಧವಾದಾರಭ್ಯ ಅನೇಕ ನೂರು ವರುಷಗಳ ಪರಿಯಂತರ ಸ್ಕೋಟರು ಸ್ವಾಧೀನ ರಾಜ್ಯವಾಗಿದ್ದರು ಯಡವರ್ಡನು ಸ್ವದೇಶಕ್ಕೆ ಸೇರಿ ಮುಂಚಿನ ಸಂಗತಿಗಳನ್ನು ಮರತುಬಿಟ್ಟು ಬೇರೊಬ್ಬ ಕೆಟ್ಟಸ್ನೇಹಿತನಂನಿಟ್ಟುಕೊಂಡು ದೊಡ್ಡವರಿಗೆ ಮರಳಿ ಕೋಪವಂನೆಬ್ಬಿಸಿದದರಿಂದ ಮತ್ತೊಂದು ಕಾಟಕಾಯಿ ಉಂಟಾಗಿ ಮೊದಲು ಅರಸನಿಗೆ ಸ್ವಲ್ಪ ಅನುಕೂಲವಾಯಿತು ಆದರೆ ಫ್ರಾನ್ಸ್ ಅರಸನ ತಂಗಿಯಾದ ಯಿಂಗ್ಲಾಂಡ್ ದೇಶದ ರಾಣಿಯು ತಿರುಗಿಬಿದ್ದವರಿಗೆ ಸಹಾಯಮಾಡಿ ಅವರಲ್ಲಿ ಒಬ್ಬನ ಸಂಗಡ ವ್ಯಭಿಚಾರವಾದ ಮದುವೆಮಾಡಿ ಗಡಿದಾಟಿಸಿದ ಸಮಸ್ತ ಸರದಾರರಂನು ಕೂಡಿಸಿ ಯಿವರ ಸಂಗಡ ಯಿಂಗ್ಲಾಂಡ್ ದೇಶವಂನು ಪ್ರವೇಶಿಸಿ ಅನೇಕ ಜನರ ಸಹಾಯವಂನು ಹೊಂದಿ ಅರಸನ ಸ್ನೇಹಿತನಂನೂ ಅವನ ತಂದೆಯಾದ ೯೦ ವರ್ಷ ಪ್ರಾಯದ ಮುದುಕನಂನೂ ಹಿಡಿದು ಕೊಂದುಹಾಕಿ ಅರಸನಿಗೆ ನಂಬಿಗೆಯಾದ ಅನೇಕ ಸರದಾರರಂನು ಸಂಹರಿಸಿ ಓಡಿಹೋಗಲಿಕ್ಕಿರುವ ಅರಸನಂನು ಸಹಾ ಹಿಡಿದಳು ಆಮೇಲೆ ರಾಣಿ ಮೊದಲಾದ ಅರಸನ ಶತ್ರುಗಳು ಅವನಂನು ಅತಿದುಷ್ಟರಾದ ಯೆರಡು ನೀಚಜನರ ಸ್ವಾಧೀನಕ್ಕೆ ಕೊಟ್ಟು ಅವನಿಗೆ ಕೊಡಬೇಕಾದ ಉಪದ್ರಗಳಂನು ಯಿವರಿಗೆ

ಬೋಧಿಸಿದರು ಯೀ ಪ್ರಕಾರ ಯಿವರು ಅರಸನಿಗೆ ಪೊಳ್ಳುವಸ್ತ್ರಗಳಂನು ಸಹಾ ಕೊಡದೆ ಒಂದುವೇಳೆ ಹಗಲಿನಲ್ಲಿಯೂ ಒಂದುವೇಳೆ ರಾತ್ರಿಯಲ್ಲಿಯೂ ನಡಸಿ ದಂಡಿಸಿದರು ಆಮೇಲೆ ಅರಸನಿಗೆ ಗಡ್ಡಬೋಳಿಕೆಂದು ಹೇಳಿ ಕೆಸರು ನೀರು ಮುಖಕ್ಕೆ ಹಚ್ಚಿ ಕ್ಷೌರಮಾಡುವದು ಯೀ ಮೊದಲಾದ ಹಾಸ್ಯಗಳಂನು ಮಾಡಿದರು ಯಿಷ್ಟೆಲ್ಲಾ ಉಪದ್ರಪಟ್ಟಾಗ್ಯೂ ಅರಸನು ಸಾಯುವದಿಲ್ಲವೆಂದು ನೋಡಿ ಕಾಸಿದ ಕಬ್ಬಿಣದ ಕೋಲು ಅವನ ಹೊಟ್ಟೆಯಲ್ಲಿ ಸೇರಿಸಿ ಕರುಳು ಸುಡಿಸಿ ಕೊಂದುಹಾಕಿದರು ಯೀ ಪ್ರಕಾರ ದಿಕ್ಕಿಲ್ಲದ ಯೀ ಅರಸನು ೨೦ ವರ್ಷ ಪರಿಯಂತ್ರ ಆಳಿದ ಮೇಲೆ ೧೩೨೭ ನೆ ವರ್ಷದಲ್ಲಿ ಸತ್ತುಹೋದನು.

ಯಿವನ ಮಗನಾದ ೩ ನೆ ಯಡವರ್ಡನು ತಂದೆಯನ್ನು ಕೊಂದುಹಾಕಲ್ಪಟ್ಟಸಮಯದಲ್ಲಿ ೧೫ ವರ್ಷದ ಹುಡುಗನಾಗಿರುವದರಿಂದ ವ್ಯಭಿಚಾರಿಯಾದ ರಾಣಿಗೂ ಅವಳ ಗಂಡನಿಗೂ ವಶವಾಗಿದ್ದು ಅವರ ಚಿತ್ತದ ಪ್ರಕಾರವೆ ನಡದನು ಆದರೆ ಯಿವರು ಸಮಸ್ತ ದೇಶವಂನು ಲೂಟಿಮಾಡಿ ಅನ್ಯಾಯವಂನು ನಡಿಸುವದರಿಂದ ಪ್ರಜೆಗಳೆಲ್ಲರು ಹಗೆಮಾಡಿದರು ಅಷ್ಟರೊಳಗೆ ಬ್ರೂಸ್ಎಂಬ ಸ್ಕೋತರ ಅರಸನು ಯಿಂಗ್ಲಾಂಡ್ ರಾಜ್ಯದಲ್ಲಿ ಎಲ್ಲಾ ಗಲಿಬಿಲಿ ಯಿದ್ದದ್ದಂನು ನೋಡಿ ಉತ್ತರದಲ್ಲಿರುವ ಸೀಮೆಗಳಲ್ಲಿ ಪ್ರವೇಶಿಸಿ ಆ ಸೀಮೆಯನ್ನೆಲ್ಲ ಹಾಳುಮಾಡಿದನು ಯಡವರ್ಡನು ಚಿಕ್ಕಪ್ರಾಯದವನಾದರು ಬಹು ಧೈರ್ಯದಿಂದ ಅವನಿಗೆದುರಾಗಿ ಹೋದನು ಎರಡು ಸೈನ್ಯಗಳು ಕೂಡ ಬಂದ ಮೇಲೆ ಯುದ್ಧವಾಗುವಾಗ ಯಡವರ್ಡನಿಗೆ ಪೂರ್ಣ ಜಯವಾಗುತ್ತಿತ್ತು ಆದರೆ ರಾಣಿಯ ಗಂಡನು ದ್ರೋಹ ಮಾಡಿದದರಿಂದ ಸ್ಕೋತರು ಯಡವರ್ಡನಿಗೆ ತಪ್ಪಿ ಸ್ವದೇಶಕ್ಕೆ ಸೇರಿದರು ಸ್ವಲ್ಪ ಕಾಲದ ಮೇಲೆ ಅವರು ಸಮಾಧಾನ ಮಾಡಿ ಯುದ್ಧವಂನು ತೀರಿಸಿದರು ಆಗ ರಾಣಿಗೂ ಅವಳ ಗಂಡನಿಗೂ ಎಲ್ಲರು ಹೆಚ್ಚಾದ ಹಗೆಮಾಡುವದರಿಂದ ಯಡವರ್ಡನು ಅವರಿಬ್ಬರು ವಾಸಮಾಡುವ ಒಂದು ಕೋಟೆಯಲ್ಲಿ ಯುಕ್ತಿಯಿಂದ ಪ್ರವೇಶಿಸಿ ರಾಣಿಯಂನು ಸೆರೆಯಲ್ಲಿಹಾಕಿ ಅವಳ ಗಂಡನ ಮೇಲೆ ನ್ಯಾಯವಂನು ತೀರಿಸಿ ಮುಂಚಿನ ಅರಸನ ಮರಣಕ್ಕೆ ಯಿವನೆ ಕಾರಣವಾಗಿದ್ದನೆಂದು ಪ್ರಸಿದ್ಧಿಯಾದ ಮೇಲೆ ಅವನಂನು ಫಾಶಿ ಹಾಕಿಸಿದನು ಅದರ ತರುವಾಯ ಯಡವರ್ಡನು ತಂನ ತಾಯಿಯು ಫ್ರಾನ್ಸ್ ಅರಸನ ಮಗಳಾಗಿದ್ದದರಿಂದ ಆ ರಾಜ್ಯವು ತಂನದಾಗಬೇಕು ಫ್ರಾನ್ಸ್ ಅರಸನು ಸ್ಕೋತರಿಗೆ ಸಹಾಯಮಾಡಿದದರಿಂದ ಅವನಿಗೆ ಶಿಕ್ಷೆ ತೀರಿಸಬೇಕು ಎಂಬ ಸಹ ನೆವನುಗಳಂನು ಹೇಳಿ ಫ್ರಾನ್ಸ್ ದೇಶಕ್ಕೆ ಯುದ್ಧಮಾಡಲಾರಂಭಿಸಿದನು ಹಾಗೆ ಉಭಯಪಾರ್ಶ್ವದವರ ಹಡಗಗಳು ಕೂಡಬಂದ ಮೇಲೆ ಒಂದು ಯುದ್ಧವುಂಟಾಗಿ ಫ್ರಾನ್ಸ್ ದೇಶದವರ ೨೦ ಸಾವಿರ ನಾವಿಕರು ಕೊಂದುಹಾಕಲ್ಪಟ್ಟು ೨೩೦ ಹಡಗಗಳು ಸಹಾ ನಷ್ಟವಾದವು ಆದರೆ ಯಡವರ್ಡನಿಗೆ ಸಹಾ ದೊಡ್ಡ ನಷ್ಟವುಂಟಾದದರಿಂದಲೂ ಯುದ್ಧವಂನು ನಡಸುವ ಬಗ್ಯೆ ರಾಜನಿಧಿಯಿಂದ ಹೊಂದಿದ ಹಣವೆಲ್ಲ ಖರ್ಚಾದದರಿಂದಲೂ ಉಭಯತ್ರರು ಯುದ್ಧವಂನು ನಿಲ್ಲಿಸಲಿಕ್ಕೆ ಒಪ್ಪಿಕೊಂಡರು ೬ ವರ್ಷ ಗತಿಸಿದ ತರುವಾಯ ಯಡವರ್ಡನು ಮರಳಿ ಫ್ರಾನ್ಸ್ ದೇಶಕ್ಕೆ ೩೦ ಸಾವಿರ ಮಂದಿ ಸೈನ್ಯವಂನು ತಂದನು ಆಯುಧವಸ್ತ್ರಗಳ ವರ್ಣಕ್ಕೋಸ್ಕರ ಕರೆಸರದಾರನೆಂದು ಹೆಸರುಹೊಂದಿದ ಅವನ ಮಗನಾಗಿರುವ ಯಡವರ್ಡನು ಸಹಾ ಯುದ್ಧಕ್ಕೆ ಬಂದನು ಫ್ರಾನ್ಸ್ ಅರಸನಾದ ಫಿಲೀಪನು ೧೨೦೦೦೦ ಮಂದಿ ಸೈನ್ಯವಂನು ಕೂಡಿಸಿ ೧೩೪೬ ನೆ ವರ್ಷದ ಅಗೋಸ್ತು ತಿಂಗಳ ೨೬ ನೆ ತಾರೀಖಿನಲ್ಲಿ ಕ್ರೇಸಿಎಂಬ ಗ್ರಾಮದ ಸಮೀಪದಲ್ಲಿ ಯಿಂಗಲೀಷ್ ಜನರಿಗೆ ಎದುರಾದನು ಯಡವರ್ಡನು ತಂನ ಸಂಣ ಸೈನ್ಯವಂನು ಬಹು ಚಂದಾಗಿ ನಿಲ್ಲಿಸಿದನು ಫಿಲಿಪನು ತನಗೆ ಅದರ ನಾಲ್ಕರಷ್ಟು ಶಿಪಾಯರು ಯಿದ್ದಾರೆಂದು ಧೈರ್ಯಮಾಡಿಕೊಂಡು ಸೈನ್ಯಕ್ರಮವಂನು ಚಂನಾಗಿ ಲಕ್ಷಿಸದೆ ಯಿಂಗಲೀಷ್ ಜನರ ಮೇಲೆ ಬಿದ್ದನು ಯಿಂಗ್ಲಾಂಡ್ ಅರಸನ ಚೊಚ್ಚಲಮಗನಾದ ಕಪ್ಪುಸರದಾರನು ನಿಂತುಕೊಂಡಲ್ಲಿ ಫ್ರಾನ್ಸ್ ಜನರ ಮುಖ್ಯಸಮೂಹವು ಯಿದ್ದದರಿಂದ ಮಗನಿಗೆ ಸಹಾಯ ಮಾಡಬೇಕೆಂದು ಕೆಲವರು ಅರಸನಿಗೆ ಬೇಡಿಕೊಂಡರು ಆದರೆ ಅವನು ನಂನ ಮಗನು ತಂನ ಸ್ವಂತ ಧೈರ್ಯದಿಂದ ಜಯವಂನು ಸಂಪಾದಿಸಲಿ ನಾನು ಸಹಾಯಮಾಡುವದಿಲ್ಲವೆಂದು ಹೇಳಿದನು ಹಾಗೆಯೆ ರಾತ್ರಿಯಾಗುವ ಪರಿಯಂತ್ರ ಯುದ್ಧಮಾಡಿದ ಮೇಲೆ ಫ್ರಾನ್ಸ್ ಜನರಿಗೆ ಪೂರ್ಣ ಅಪಜಯವಾಗಿ ಅವರ ಸೈನ್ಯದಲ್ಲಿ ೩೦ ಸಾವಿರ ಶಿಪಾಯರೂ ಅನೇಕ ಸರದಾರರು ಸಹಾ ಸತ್ತರು ಯಿಂಗಲೀಷ್ ಜನರಲ್ಲಿ ನಾಲ್ಕು ಸರದಾರರೂ ಸ್ವಲ್ಪಮಂದಿ ಶಿಪಾಯರೂ ಮೃತವಾದರು ಯೀ ಯುದ್ಧವಾದ ಮೇಲೆ ಯಡವರ್ಡನು ಕಲೇಸ್ ಪಟ್ಣಕ್ಕೆ ಮುತ್ತಿಗೆಹಾಕಿ ಹಂನೊಂದು ತಿಂಗಳು ಪರಿಯಂತ್ರ ಅದೇ ಕೆಲಸದಲ್ಲಿದ್ದನು ಕಡೆಗೆ ಪಟ್ಣದಲ್ಲಿರುವ ಆಹಾರವೆಲ್ಲ ಖರ್ಚಾದ ಮೇಲೆ ನಿವಾಸಿಗಳು ತಂಮ ಜೀವಗಳಂನ ಉಳಿಸಿದರೆ ಪಟ್ಣವಂನು ತೆರಿಯುತ್ತೇವೆಂದು ಹೇಳಿದರು ಅವರು ಸ್ವಲ್ಪ ಕಡಿಮೆ ಒಂದು ವರ್ಷ ಪರಿಯಂತ್ರ ತನಗೆ ಒಳಗಾಗದೆ ಬಹಳ ಕಷ್ಟಪಡಿಸಿದರೆಂದು ಯಡವರ್ಡನು ಕೋಪಿಸಿ ಮುಖ್ಯವಾದ ನಿವಾಸಿಗಳಲ್ಲಿ ಆರುಮಂದಿ ಬರೆಕಾಲಿನಿಂದ ಕುತ್ತಿಗೆಗೆ ಫಾಶಿಯಂನು ಕಟ್ಟಿಕೊಂಡು ಮರಣದ ಶಿಕ್ಷೆಗೆ ಎಲ್ಲಾ ತಾವೆ ಸಿದ್ಧಮಾಡಿಕೊಂಡು ತಂನ ಹತ್ರ ಬಂದರೆ ಉಳಿದವರಿಗೆ ತಾನು ಕ್ಷಮಿಸುತ್ತೇನೆ ಎಂದನು ಯೀ ಕ್ರೂರವಾದ ಅಪ್ಪಣೆಯಂನು ನಿವಾಸಿಗಳು ಕೇಳಿ ಅತಿವಿಸ್ಮಿತರಾದ ಸಮಯದಲ್ಲಿ ದೊಡ್ಡವರಲ್ಲಿ ಒಬ್ಬನು ಮಧ್ಯದಲ್ಲಿ ನಿಂತು ತಾನು ಹೋಗುತ್ತೇನೆಂದು ಹೇಳಿದನು ಹೇಳಿದಕ್ಷಣ ಬೇರೆ ೫ ಮುಖ್ಯಸ್ಥರು ತಂಮಂನ ತಾವೆ ಒಪ್ಪಿಸಿದರು ಅಪ್ಪಣೆ ಆದ ಹಾಗೆ ಅವರು ತಂಮನ್ನು ತಾವೆ ಸಿದ್ಧಮಾಡಿಕೊಂಡು ಪಟ್ಣದ್ವಾರಗಳ ಬೀಗದ ಕೈಗಳಂನು ಅರಸನ ಚರಣಸಮೀಪದಲ್ಲಿಟ್ಟರು.

ಆಗ ಅವನು ಯಿವರಂನು ಕೊಂದುಹಾಕಬೇಕೆಂಬ ಅಪ್ಪಣೆಯಂನು ಕೊಡುವಾಗ ರಾಣಿಯು ಅರಸನಿಗೆ ಬಹಳ ಬಿಂನಹಮಾಡಿ ಕಂಣೀರು ತಂದು ಅವರಂನು ಸಂರಕ್ಷಿಸಿದಳು.

ಯಡವರ್ಡ ಅರಸನು ಯೀ ಪ್ರಕಾರ ಫ್ರಾನ್ಸ್ ದೇಶದಲ್ಲಿ ಯುದ್ಧಮಾಡುವಾಗ ಸ್ಕೋಟ್ಲಾಂಡ ಅರಸನು ಯಿಂಗಲೀಷ್ ರಾಜ್ಯವು ಪರಿಪಾಲನೆ ಯಿಲ್ಲದ್ದಾಗಿದೆ ಅದರಲ್ಲಿ ಪ್ರವೇಶಿಸಲಿಕ್ಕೆ ತನಗೆ ಸಮಯ ಬಂತೆಂದು ನೆನಸಿಕೊಂಡು ಯುದ್ಧಪ್ರವೇಶವಂನು ಮಾಡಿದನು ಆದರೆ ಯಿಂಗಲೀಷ್ ರಾಣಿಯು ಸೈನ್ಯವಂನು ಕೂಡಿಸಿ ಯುದ್ಧಕ್ಕೆ ತಂದು ಸ್ಕೋತರಿಗೆ ಅಪಜಯಮಾಡಿ ಅವರ ಅರಸನಂನು ಹಿಡಿದು ಲಂಡನ್ ಪಟ್ಣದಲ್ಲಿ ೧೧ ವರ್ಷ ಪರಿಯಂತ್ರ ಸೆರೆಯಾಗಿ ಯಿಟ್ಟಳು ೧೩೪೯ ನೆ ವರ್ಷದಲ್ಲಿ ಸಮಸ್ತ ವಿಲಾಯತಿಯಲ್ಲಿ ಲೆಖ್ಖವಿಲ್ಲದ ನಿವಾಸಿಗಳಂನು ಸಂಹರಿಸಿದ ಒಂದು ವ್ಯಾಧಿರೋಗವು ಯಿಂಗ್ಲೀಷ್ ದೇಶಕ್ಕೆ ಬಂತು ಯೀ ರೋಗದಿಂದ ಆ ಸಮಯದಲ್ಲಿ ಬದುಕಿರುವ ಮನುಷ್ಯರಲ್ಲಿ ೩ ನೆ ಪಾಲಷ್ಟು ಸತ್ತುಹೋದರೆಂದು ಹೇಳುತ್ತಾರೆ ಲಂಡನ್ ಪಟ್ಣದಲ್ಲಿ ಮಾತ್ರ ೫೦ ಸಾವಿರ ಮಂದಿ ತೀರಿಹೋದರು ಆ ಸಮಯದಲ್ಲಿ ಫ್ರಾನ್ಸ್ ಅರಸನಾದ ಫಿಲೀಪನು ಸತ್ತುಹೋಗಿ ಅವನ ಮಗನಾದ ಜೋಹಾನನು ಅರಸನಾದನು ಯಡವರ್ಡನು ಫ್ರಾನ್ಸ್ ದೇಶಕ್ಕೆ ಯಿನ್ನೊಂದು ಯುದ್ಧಪ್ರಯಾಣ ಮಾಡಿ ತಂನ ಮಗನಾದ ಕರೆಸರದಾರನಂನು ಸಮುದ್ರ ಮಾರ್ಗವಾಗಿ ಫ್ರಾನ್ಸ್ ದೇಶದ ಪಶ್ಚಿಮತೀರಕ್ಕೆ ಕಳುಹಿಸಿದನು ಆದರೆ ಸ್ಕೋತರು

ಯಿಂಗ್ಲಾಂಡ್ ದೇಶದಲ್ಲಿ ಪ್ರವೇಶಿಸಲಿಕ್ಕೆ ಯಿರುವದರಿಂದ ಯಿಂಗ್ಲಿಷ್ ಅರಸನಿಗೆ ಸ್ವದೇಶಕ್ಕೆ ಹೋಗುವ ಅವಶ್ಯವಾಯಿತು ಯೀ ಪ್ರಕಾರ ಫ್ರಾನ್ಸ ಅರಸನು ೬೦ ಸಾವಿರ ಮಂದಿ ಸೈನ್ಯವಂನು ಕೂಡಿಸಿ ಕರೆಸರದಾರನಿಗೆ ವಿರೋಧವಾಗಿ ಹೋದನು ಯಿವನ ಹತ್ರ ೧೨ ಸಾವಿರ ಮಂದಿ ಮಾತ್ರ ಯಿದ್ದರು ೧೩೫೬ ನೆ ವರ್ಷದ ಸಪಟಂಬರ ತಿಂಗಳ ೧೮ ನೆ ತಾರೀಖಿನಲ್ಲಿ ೨ ಸೈನ್ಯಗಳು ಕೂಡಬಂದಾಗ ಕರೆಸರದಾರನು ಶತ್ರುಗಳು ಹೆಚ್ಚುಮಂದಿ ಯಾಗಿದ್ದಾರೆಂದು ನೋಡಿ ಧೈರ್ಯವಾಗಿ ಯುದ್ಧವಂನು ಮಾಡಬೇಕು ಮತ್ತ್ಯಾವಗತಿಯಿಲ್ಲ ದೇವರು ನಮಗೆ ಸಹಾಯ ಮಾಡಲಿಯೆಂದು ಹೇಳಿದನು ಆಗ್ಯೆ ಫ್ರಾನ್ಸ ಜನರ ಹತ್ರ ಯಿರುವ ಪ್ರಬ್ಬು ಗುರುವು ೬೦ ಸಾವಿರ ಮಂದಿ ೧೨ ಸಾವಿರ ಜನರ ಸಂಗಡ ಯುದ್ಧ ಮಾಡಿದರೆ ಕೊಲೆ ಮಾತ್ರ ಆಗುವದೆಂದು ನೆನಸಿ ಸಮಾಧಾನ ಮಾಡುವ ಅಪೇಕ್ಷೆಯಾಗಿ ಯಿಂಗ್ಲೀಷ್ ಜನರ ಹತ್ರ ಹೋದನು ಕರೆಸರದಾರನು ತಂನ ಮಾನಕ್ಕೆ ತಂನ ಸೈನ್ಯದ ಮಾನಕ್ಕೆ ವಿರೋಧವಾಗದ ಯಾವ ಕಾರ್ಯಕ್ಕಾದರು ತಾನು ಒಪ್ಪಿಕೊಳ್ಳುವೆನೆಂದು ಹೇಳಿದನು ಆದರೆ ಫ್ರಾನ್ಸ ಅರಸನು ಕರೆಸರದಾರನೂ ತಂನ ಅಧಿಪತಿಗಳಲ್ಲಿ ೧೦೦ ಮಂದಿಯೂ ಕೈಸೆರೆ ಯಾಗಬೇಕೆಂದು ಅಪ್ಪಣೆ ಕೊಟ್ಟಾಗ ಸರದಾರನು ತಾನು ಯುದ್ಧದಲ್ಲಿ ಸೆರೆಯಾಗುವದೇ ಹೊರ್ತು ಮತ್ತ್ಯಾವರೀತಿಯಾಗಿ ಸೆರೆಯಾಗಲಾರೆನೆಂದು ಹೇಳಿದಲ್ಲಿ ಸೈನ್ಯಗಳು ಯುದ್ಧಕ್ಕೆ ಸಿದ್ಧಮಾಡಿಕೊಂಡವು ಮರುದಿವಸದ ಬೆಳಿಗ್ಗೆ ಯುದ್ಧ ಪ್ರಾರಂಭಿಸುವಾಗ ಮಹಾ ಕೊಲೆಯಾದ ಫ್ರಾನ್ಸ ಜನರಿಗೆ ಪೂರ್ಣ ನಾಶನ ಬಂತು ಅವರ ಅರಸನು ಬಹು ಧೈರ್ಯವಾಗಿ ಯುದ್ಧ ಮಾಡಿದನು ಅವನ ಸುತ್ತಲಿರುವ ಅನೇಕ ಧೊರೆಗಳು ಸತ್ತ ಮೇಲೆಯೂ ತಂನ ಸಮೀಪದಲ್ಲಿ ಯುದ್ಧಮಾಡುವ ೧೪ ವರ್ಷ ಪ್ರಾಯದವನಾದ ತಂನ ಹುಡುಗನಿಗೆ ಘಾಯ ತಾಗಿದ ಮೇಲೆಯೂ ಸಂನದಾಯಾದಿಯಾದ ಕರೆಸರದಾರನು ಮೆಲ್ಲಿಯೆಂದು ಕೂಗಲಾರಂಭಿಸಿದನು ಅವನು ಬಂದನೆಂದು ವರ್ತಮಾನವಾಗುವಾಗ ಅರಸನು ತಂನ ಖಡ್ಗವಂನು ಅವನಿಗೆ ಒಪ್ಪಿಸಿ ಅವನಿಗೆ ಕೈಸೆರೆಯಾದನು ಯೀ ಸರದಾರನು ಅರಸನಿಗೆ ಬಹಳ ಸಂಮಾನ ಮಾಡಿದದರಿಂದ ಅರಸನು ಅತ್ತು ತನಗೆ ಬಹಳ ದುಃಖವಾಯಿತು ಆದರೆ ಯಿಂಥಾ ಉದಾರ ಶತ್ರುವಿನ ಕೈಯಲ್ಲಿ ಬಿದ್ದದ್ದು ಸುಖವೇ ಯೆಂದು ಹೇಳಿದನು ಯೀ ಪ್ರಕಾರ ಆ ಅರಸನಂನು ಯಿಂಗ್ಲಾಂಡ್ ದೇಶಕ್ಕೆ ಒಯ್ದು ಅಲ್ಲಿ ಸಹ ಬಹಳ ಚಂದಾಗಿ ಯಿಟ್ಟನು ಕಡೆಯಲ್ಲಿ ಒಂದುವರೆ ಕೋಟಿ ರುಪಾಯಿ ಸಲ್ಲಿಸಿದರೆ ಬಿಡುಗಡೆಯಾಗೀತು ಸಲ್ಲಿಸ ಕೂಡದಿದ್ದರೆ ತಿರಿಗಿ ಬರಬೇಕೆಂದು ಪ್ರಮಾಣ ಮಾಡಿಸಿ ಆ ಹಣ ಕೂಡಿಸುವದಕ್ಕೋಸ್ಕರ ಅವನಂನು ಸ್ವದೇಶಕ್ಕೆ ಕಳುಹಿಸಿದನು ಅದು ಸಿಕ್ಕದೆ ಯಿದ್ದದರಿಂದ ಅವನು ತಂನ ಸ್ಟಕ್ಕೆ ತಿರುಗಿ ಬಂದು ಸಾಯುವ ಪರಿಯಂತ್ರ ಕ್ಕೂ ಸೆರೆಯಲ್ಲಿದ್ದನು.

೧೩೭೭ ನೆ ವರುಷದಲ್ಲಿ ಯೀ ಧೈರ್ಯವೂ ಬುದ್ಧಿಯೂ ವುಳ್ಳ ಕರೆಸರದಾರನಿಗೆ ರೋಗ ಬಂದು ಅವನು ೪೭ ವರ್ಷ ಪ್ರಾಯದವನಾಗಿ ಸತ್ತನು ಅದಕ್ಕೋಸ್ಕರ ತಂದೆಯು ಬಹಳ ದುಃಖಪಟ್ಟು ಒಂದು ವರ್ಷದಲ್ಲಿ ತಾನೂ ಸತ್ತು ಹೋದನು ಅವನು ಆಳಿದ ವರ್ಷಗಳೆಲ್ಲಾ ೫೧ ಯೀ ಅರಸನು ಆಳುವ ಸಮಯದಲ್ಲಿ ರಾಜಸಭೆಗೆ ಹೆಚ್ಚಾದ ಅಧಿಕಾರ ಬಂತು ಆಗ ರಾಜಮಾರ್ಗ ಮಾಡಲಿಕ್ಕೆ ಗುತ್ತಿಗೆ ಹಣ ಕೊಡುವವರೆ ಪ್ರಾರಂಭ ಮಾಡಿದರು ಮತ್ತು ಕೈಯುದ್ಧದಲ್ಲಿ ತೋವಿ ಮದ್ದಿನಿಂದ ಗುಂಡು ಹೊಡೆಯುವದಕ್ಕೆ ಆರಂಭವಾಯಿತು.

ಗಾದೆಗಳು.

ಹಿತೋಪದೇಶ ಗ್ರಂಥದಲ್ಲಿ ಬರೆದ ಶ್ಲೋಕವೇನಂದರೆ.

ಅರಾವಪ್ಯುಚಿತಂಕಾರ್ಯಂ ಆತಿಥ್ಯಂಗೃಹಮಾಗತೇ॥
ಛೇತ್ತುಃಪಾರ್ಶ್ವಗತಾಂಛಾಯಾಂ ನೋಪಸಂಹರತೇದ್ರುಮಃ॥೧॥
ನಿರ್ಗುಣೇಷ್ವಪಿಸತ್ತ್ವೇಷು ದಯಾಂಕುರ್ವಂತಿಸಾಧವಃ॥
ನಹಿಸಂಹರತೇಜ್ಯೋತ್ಸ್ನಾಂಚಂದ್ರಶ್ಚಾಂಡಾಲವೇಶ್ಮನಿ॥೨॥

ಯಿದಕ್ಕೆ ಟೀಕು.

ಮರವು ತಂನಂನು ಕಡಿಯಲಿಕ್ಕೆ ಬಂದವನ ಮೇಲೆ ಆದರೂ ಬಿದ್ದ ನೆರಳು ಹ್ಯಾಗೆ ವುಪಸಂಹರಿಸುವದಿಲ್ಲವೋ ಹಾಗೆಯೇ ಶತ್ರು ಆದರೂ ಆತಿಥ್ಯಕ್ಕಾಗಿ ಮನೆಗೆ ಬಂದರೆ ಅವನಂನು ಆದರಿಸಬೇಕು.

ಚಂದ್ರನು ತಂನ ಕಿರಣವಂನು ಚಾಂಡಾಲನ ನಿವಾಸದ ಮೇಲೆ ಬಿದ್ದಾಗ್ಯೂ ಹ್ಯಾಗೆ ತೆಗಿಯುವದಿಲ್ಲವೋ ಹಾಗೆಯೇ ಗುಣರಹಿತರಲ್ಲಿಯೂ ಸಾದು ಬುದ್ಧಿ ವುಳ್ಳವರು ದಯೆಯಂನು ಮಾಡುತ್ತಾರೆ.

ಯಿದಕ್ಕೆ ಸಮವಾಗುವ ಯೇಸು ಕ್ರೀಸ್ತನ ಮಾತು.

ನೆರೆಯವನಂನು ಸ್ನೇಹಿಸಿ ಶತ್ರುವಿಗೆ ಹಗೆ ಮಾಡುಯೆಂಬ ಮಾತಂನು ನೀವು ಕೇಳಿದ್ದೀರಿ ಯಿದ್ದಾಗ್ಯೂ ನಾನು ನಿಮಗೆ ಹೇಳುವದೇನಂದರೆ ಶತ್ರುಗಳಿಗೆ ಪ್ರೀತಿಮಾಡಿರಿ ನಿಮಗೆ ಶಪಿಸುವವರಂನು ಆಶೀರ್ವದಿಸಿರಿ ನಿಮಗೆ ಹಗೆ ಮಾಡುವವರಿಗೆ ಉಪಕಾರ ಮಾಡಿರಿ ನಿಮಗೆ ಹಿಂಸೆಯೂ ನಿಂದೆಯೂ ಮಾಡುವವರಿಗೋಸ್ಕರ ಪ್ರಾರ್ಥಿಸಿರಿ ಆಗ ಪರಲೋಕದಲ್ಲಿರುವ ನಿಂಮ ತಂದೆಯ ಮಕ್ಕಳಾಗಿರುವಿರಿ ಯೇನಂದರೆ ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ಸೂರ್ಯನು ಉದಯಿಸುತ್ತಾನೆ ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಯಂನು ಸುರಿಸುತ್ತಾನೆ.

ಕುರುಡನು ಕುರುಡನಂನು ನಡಿಸುವದುಂಟೇ ಯಿಬ್ಬರು ಕುಣಿಯಲ್ಲಿ ಬೀಳುವದಿಲ್ಲವೇಯಂತ ಯೇಸು ಕ್ರೀಸ್ತನು ಹೇಳಿದ ಮಾತು ವುಂಟು ಯಿದಕ್ಕೆ ಯೀ ದೇಶದಲ್ಲಿ ನಡಿಯುವಂತಾ ಮೆರಡು ಗಾದೆಗಳು ಸಮವಾಗುತ್ತಾವೆ ಕುರುಡನು ಕುರುಡನಿಗೆ ಮಾರ್ಗ ತೋರಿಸಿದ ಹಾಗೆ ಮತ್ತು ಮೆರಡು ದಾಸರಿಗೆ ನಂಬಿ ಕುರುಡ ದಾಸ ಕೆಟ್ಟಾ.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡಸಮಾಚಾರವು.

೧೮೪೪.

೧ನೆ ಪುಸ್ತಕ. ೧೧ ನೆ ಅಂಕೆ] ಬಳ್ಳಾರಿ ೧ ನೆ ಆಗೋಸ್ತು [ಟಪಾಲ ದಸ್ತೂರಿಕೂಡಿ ಕ್ರಯ ೨ದುಡ್ಡು.

Arrival of the New Governor General.

ಹೊಸಗವರ್ನರ್ ಜನೆರಲ್.

ಸರ್ ಹೆನ್ರಿಹಾರ್ಡಿಂಜ್ ಜೂನ್ ತಿಂಗಳ ಪ್ರಾರಂಭದಲ್ಲಿ ಕುಂಪಣೀಸಭೆಯವರಾದ ಧೊರೆಗಳಿಂದಲೂ ಇಂಗ್ಲಾಂಡ್ ದೇಶದ ರಾಣಿಯ ಪ್ರಧಾನಿಗಳಿಂದಲೂ ಅಪ್ಪಣೆ ತೆಗದುಕೊಂಡು ಆವೀಹಡಗವಂನೇರಿ ಯಿಾಕಡೆಗೆ ಬಂದರು. ಸ್ವಲ್ಪದಿವಸದಮೇಲೆ ಅವರು ಕಲ್ಕತ್ತಾಪಟ್ಣದಲ್ಲಿ ಸೇರಿ ಗವರ್ನರ್ ಜನೆರೆಲ್ ಅಧಿಕಾರವಂನು ಆರಂಭಿಸುವರು ಯಿವರು ಯಿಾದೇಶವಂನು ಕುಂಪಣೀ ಹಿರೇಸಭೆಯವರ ಚಿತ್ತದ ಪ್ರಕಾರವಾಗಿಯೂ ರಾಣಿಯಪ್ರಧಾನಿಗಳಚಿತ್ತದ ಪ್ರಕಾರವಾಗಿಯೂ ಆಳಿಕೊಂಡು ಹಿಂದೂಜನರಿಗೆ ಕ್ಷೇಮವಂನುಂಟುಮಾಡುವರು.

Remedy against Cholera.

ಮಾರಿರೋಗಕ್ಕೆ ತಕ್ಕ ಔಷಧ.

ಯರ್ಡು ತಂಡುಲಭಾರ ಹಿಂಗು ಯರ್ಡು ತಂಡುಲಭಾರ ಅಫೀಮು ಯರ್ಡು ತಂಡುಲಭಾರ ಕರೆಮೆಣಸು ಯಿಷ್ಟು ತೆಗದು ಒಂದುಗುಳಿಗೆ ಅಥವಾಮಾತ್ರೆಮಾಡಿ ರೋಗಿಷ್ಠರಿಗೆ ತಡಮಾಡದೆ ಕೊಡಬೇಕು ಅವನುಚಾಂನಾಗಿಅದಂನು ಬಾಯಿಯಲ್ಲಿ ಜಿಗದುನುಂಗಬೇಕು ಯಿಲ್ಲವೆ ಒಂದು ಸಂಣ ಸೌಟಿನಲ್ಲಿ ಬ್ರಾಂಡಿ ಮತ್ತು ನೀರುಕೂಡಿಸಿ ಅದರಲ್ಲಿ ಯಿಾಗುಳಿಗೆಯಂನು ಕರಗಿಸಬೇಕು ತ್ವರೆಯಾಗಿ ಗುಣವಾಗದೆಯಿದ್ದರೆ ಅರ್ಧ ತಾಸಿನಮೇಲೆ ತಿರಿಗೀ ಹೀಗೆಯೇ ಕೊಡಬೇಕು ಯಿದೇ ಪ್ರಕಾರ ಗುಣವಾಗುವಪರಿಯಂತರ ಅರ್ಧ ತಾಸಿಗೆ ಒಂದುಸಾರಿ ಮಾಡುತ್ತಾ ಯಿರಬೇಕು ಯಿದಲ್ಲದೆ ಆರೋಗಿಷ್ಠರ ಮೆಲ್ಲಾದೇಹವಂನು ಮುಖ್ಯವಾಗಿ ಕಾಲುಕೈಗಳಂನು ಚಾಂನಾಗಿ ಬಿಸಿಯಾಗುವಹಾಗೆ ತಿಕ್ಕಬೇಕು ಬಹಳ ಬಾಯಾರಿಕೆಯಾದರೆ ಆಗ್ಯಾಗ್ಯೆ ಒಂದು ಸಂಣಸೌಟುತುಂಬ ಬ್ರಾಂಡಿಮತ್ತು ನೀರುಕೊಡಬಹುದು ಯಿದುಸಹಾ ಬಹಳ ಕೊಡದೆ ಬೇರೆಯೇನು ಕುಡಿಯಕೊಡಬಾರದು ಮತ್ತು ಪೈತ್ಯ ಉದ್ರೇಕವಾಗಿ ರೋಗ ಬಹಳಮಿಾರಿದರೆ ಯಿಾಗುಳಿಗೆಗಳಕೂಡ ಯೆಂಟುತಂಡುಲಭಾರ ಸತ್ತಪಾದ್ರಸ ಸಹಾ ಕೊಡಬೇಕು ಯಿಾಗಿರುವ ಜನೆರಲ್ ಧೊರೆಗಳಲ್ಲಿ ಒಬ್ಬನು ತಂನ ಪಟಾಲಾಮಿನಲ್ಲಿರುವ ಅನೇಕ ಶಿಪಾಯಿಜನರಿಗೆ ಯಿಾ ಔಷಧದಿಂದಲೇ ಮಾರಿರೋಗವಂನು ಪರಿಹರಿಸಿದನು.

The Rains.

ಮಳೆ.

ಮಂಗಳೂರಿನಲ್ಲಿ ಮಳೆಗಾಲದ ಆರಂಭದಿಂದ ಜೂನ್ ತಾರೀಖು ೯ ನೆ ವರೆಗೆ ನಾಲ್ವತ್ತೈದು ಇಂಚ್ ಅಥವಾ ಅಂಗುಲ ಮಳೆಬಿತ್ತು ಅಲ್ಲಿರುವ ಪಾದ್ರಿಯವರ ಹತ್ರ ಯಿದಂನು ಯೆಣಿಸುವ ಪೆಟ್ಟಿಗೆಯಿರುವದರಿಂದ ಯಿವರು ಲೆಖ್ಖ ಮಾಡಿರುತ್ತಾರೆ.

Execution at Cannanore.

ಕಂಣಾನೂರಿನಲ್ಲಿ ಕೊಟ್ಟ ಮರಣಶಿಕ್ಷೆ.

ಮಳೆಕಾಲದ ಮುಂಚೆ ಸರ್ಕಾರದವರು ೪೭ ನೆ ಮದ್ರಾಸ್ ನೆಟಿವ್ ಇನ್‌ಫೆಂಟ್ರೀ ಪಟಾಲಾಮು ಮದ್ರಾಸ್ ಬಂದ್ರದಲ್ಲಿ ಜಾನ್‌ಲ್ಯಾನ್ ಯೆಂಬ ಹಡಗದಲ್ಲಿಯೇರಿಸಿ ಮುಂಬೈಗೆ ಕಳುಹಿಸಿದರು ಯಿಾ ಹಡಗವು ಸಮುದ್ರದಲ್ಲಿರುವಾಗ ಶಿಪಾಯಿಜನರಲ್ಲಿ ಕೆಲವರು ತಂಮೊಳಗೆ ಗುಲುಗುಟ್ಟಿ ತಂಮಸರ್ದಾರರ ಆಜ್ಞೆಗಳಂನು ಅಲಕ್ಷಿಸಿ ದ್ರೋಹಮಾಡಿದರು ಯಿದಂನು ಹುಟ್ಟಿಸಿದವನಾದ ವೀರಸ್ವಾಮಿ ಯೆಂಬವನಿಗೆ ಸರ್ದಾರರು ನ್ಯಾಯತೀರಿಸಿ ಅವನ ಅಪರಾಧವಂನು ಕಂಡು ಅವನಂನು ಹದಿನೇಳನೆ ಜೂನಿನಲ್ಲಿ ಕಂಣಾನೂರಿನ ಕೋಟೆಯಲ್ಲಿ ಶಿಪಾಯರ ಕೈಯಿಂದ ಬಂದೂಕಿನ ಗೋಳಿಗಳಿಂದ ಕೊಂದುಹಾಕಿದರು.

Bombay Bank affairs.

ಮುಂಬೈಯಲ್ಲಿರುವ ಬ್ಯಾಂಕ್ ಸಮಾಚಾರ.

ಮುವ್ವತ್ತನೆ ಜೂನಿನಲ್ಲಿ ಬ್ಯಾಂಕ್ ಅಧಿಕಾರಿಗಳು ಲೆಖ್ಖಪುಸ್ತಕಗಳಂನುವಿಚಾರಿಸಿ ಆರುತಿಂಗಳೊಳಗೆ ಬಂದ ಲಾಭವಂನು ನೋಡಿ ಹದಿನೈದುಸಾವಿರ ರೂಪಾಯಿ ಬ್ಯಾಂಕ್ ಖಜಾನೆಯಲ್ಲಿ ಯಿಟ್ಟುಕೊಂಡು ಹದಿನಾರುಸಾವಿರ ರೂಪಾಯಿ ಪಾಲುಗಾರರಿಗೆ ಹಂಚಿಕೊಂಡು ಒಬ್ಬೊಬ್ಬನಿಗೆ ಕಳೆದ ಆರುತಿಂಗಳಿಗಾಗಿ ನೂರಕ್ಕೆ ಮೂರುವರೆಯ ಪ್ರಕಾರ ಕೊಟ್ಟರು ಹೀಗಿರಲಾಗಿ ಆ ಬ್ಯಾಂಕಿನ ಪಾಲುಗಾರರಿಗೆ ಲಾಭವಾಗಿಬಂದ ಹಣದ ಒಂದು ಭಾಗವಂನು ಬ್ಯಾಂಕ್ ಖಜಾನೆಯಲ್ಲಿ ಯಿಟ್ಟುಕೊಳದೆ ಯಿದ್ದರೆ ಒಬ್ಬೊಬ್ಬನಿಗೆ ಹಂನೆರಡು ತಿಂಗಳೊಳಗೆ ನೂರಕ್ಕೆ ಹದಿನಾಲ್ಕರ ಪ್ರಕಾರ ಆದಾಯವಾಗೀತು.

ಮೊದಲನೆಪುಸ್ತಕ ಯಿಪ್ಪತ್ತುನಾಲ್ಕನೆ ಪುಟದಲ್ಲಿ ತೀರಚೆಯಿದ್ದ

The Life of Mohammad.——Continued.

ಮೊಹಂಮದನ ಚರಿತ್ರೆಯು.

ಮೊಹಮ್ಮದನನೆಂಟರು ಅವನು ಮಾಡುವ ಪ್ರಸಂಗವಂನು ಯೀಪ್ರಕಾರ ಅಲಕ್ಷ್ಯ ಮಾಡಿದರೂ ಅವನು ಹಿಂಮೆಟ್ಟದೇ ಮುಂಕೊಂಡು ಬೀದಿಗಳಲ್ಲಿನಿಂತು ಜನರಿಗೆ ಪ್ರಸಂಗಿಸಿದನು ಆದರೆ ಅವನು ಜನರು ಮಾಡುವ ವಿಗ್ರಹಾರಾಧನೆ ಪಾಪವೆಂದೂ ನಿಂಮ ಹಿರಿಯರೂ ಅವರ ಮಕ್ಕಳಾದ ನೀವೂ ಸರ್ವತ್ರಾಣಿಯಾದದೇವರಿಗೆದ್ರೋಹಮಾಡುವ ವಂಶದವರೇಮೆಂದೂ ಸಾರಿಹೇಳಲಾರಂಭಿಸಲುಜನರು ಕೋಪೋದ್ರೇಕರಾಗಿ ಅವನಂನು ನಾಶನಮಾಡಬೇಕೆಂದು ನಿಶ್ಚೈಸಿಕೊಂಡು ಅಬುತಾಲ್ಲೆಬನಿಗೆ ಯೀಮೊಹಮ್ಮದನಿಗೆ ಆಶ್ರಯ ಕೊಡಬಾರದೆಂದು ಹೇಳಿದರು ಕೋರೆಶ್ ಗೋತ್ರದ ಮುಖ್ಯಸ್ಥರು ಸಹಾ ಅಬುತಾಲ್ಲೆಬನಿಗೆ ಮೊಹಮ್ಮದನಂನು ಬಿಟ್ಟುಬಿಡಬೇಕೆಂದು ಬಹಳವಾಗಿ ಹೇಳಿದರು ಆದದರಿಂದ ಅಬುತಾಲ್ಲೆಬನು ತಂನ ಅಳಿಯನಾದ ಮೊಹಮ್ಮದನಸಂಗಡ ಸಮಾಧಾನವಾಗಿ ಮಾತಾಡಿಯೀಕಾರ್ಯವಂನುಬಿಟ್ಟು ನೀನೂ ನಿಂನಸ್ನೇಹಿತರೂಕೂಡಿ ನಾಶನಾಗದಹಾಗೆ ನಂಮ ಹಿರಿಯರಕಾಲದಾರಭ್ಯ ನಂಮಗೋತ್ರದಲ್ಲಿ ನಡವಡಿಕೆಯಾದ ಪೂಜಾಮಾರ್ಗಕ್ಕೆ ವಿರೋಧವಾಗಿಪ್ರಸಂಗ ಮಾಡಬಾರದೆಂದುಬುದ್ಧಿ ಹೇಳಿದನು ಮೊಹಮ್ಮದನು ಯೀಮಾತುಕೇಳಿ ಧೈರ್ಯದಿಂದಹೇಳಿದ್ದೇನಂದರೆ ಅವರು ಬಲಕಡೆಯಲ್ಲಿಸೂರ್ಯವನ್ನೂಮೆಡಕಡೆಯಲ್ಲಿಚಂದ್ರವಂನೂ ನನಗೆವಿರೋಧವಾಗಿ ತಂದರೂ ನಂನ ಕಾರ್ಯವಂನು ಬಿಡಲೊಲ್ಲೆನೆಂದನು ಆಗಲು ಅಬುತಾಲ್ಲೆಬನು ಅವನದೃಢತ್ವವಂನು ನೋಡಿ ಅವನಮೇಲೆ ಪ್ರೀತಿಯಿಟ್ಟು ಮೆಲ್ಲಾವೈರಿಗಳಿಗೆವಿರೋಧವಾಗಿ ನಿನಗೆಸಹಾಯಮಾಡುತ್ತೇನೆಂದು ವಾಕ್ಯಕೊಟ್ಟನು ಅಂದಿನಿಂದ ಮೊಹಮ್ಮದನ ವಿರೋಧಿಯರು ಅವನಶಿಷ್ಯರಿಗೆ ನಾನಾವಿಧದ ಉಪದ್ರಗಳಂನು ಕೊಡುತ್ತಿದ್ದರು ಅದುಕಾರಣ ಮೊಹಮ್ಮದನು ಆಶ್ರಯವಿಲ್ಲದವರಿಗೆ ಮಕ್ಕಾಪಟ್ಟಣವಂನುಬಿಟ್ಟು ಬೇರೆಊರುಗಳಿಗೆ ಹೋಗಲಿಕ್ಕೆ ಅಪ್ಪಣೆ ಕೊಟ್ಟನು ಆಗಲು ಹಂನೆರಡುಮಂದಿ ಗಂಡಸರೂ ನಾಲ್ಕುಮಂದಿ ಹೆಂಗಸರೂ ಮೊಹಮ್ಮದನು ಪ್ರವಾದಿಯಾಗಿ ಪ್ರಸಿದ್ಧಿಯಾದ ಅಯಿದನೆವರ್ಷದಲ್ಲಿ ಮಕ್ಕಾ ಪಟ್ಟಣವಂನು ಬಿಟ್ಟು ಹಾಬೆಶ್ ದೇಶಕ್ಕೆ ಓಡಿ ಹೋದರು ಓಥ್ಮಾನ್ ಐಬ್ನ ಆಫೂನನೂ ರಾಕೀಯಾ ಮೆಂಬ ಮೊಹಮ್ಮದನ ಮಗಳಾದ ಅವನ ಹೆಂಡತಿಯೂ ಹಾಬೆಶ್ ದೇಶಕ್ಕೆ ಹೋದವರಸಂಗಡಲೇ ಯಿದ್ದರು ಯೀದೇಶದ ಅರಸನಾದ ನಾಯಾಶಿಯಿವರಂನೂ ಯಿವರಹಿಂದೆ ಓಡಿಬಂದಮೆಂಭತ್ತುಮೂರು ಗಂಡಸರಂನೂ ಹದಿನೆಂಟುಹೆಂಗಸರಂನೂ ಅವರಮಕ್ಕಳಂನೂ ಅಂಗೀಕರಿಸಿ ಅವರಿಗೆ ಆಶ್ರಯವಂನು ಕೊಟ್ಟು ಅವರಂನು ತಮಗೆ ಒಪ್ಪಿಸಿ ಕೊಡಬೇಕೆಂದು ದೂತರಂನು ಕಳುಹಿಸಿ ಅವನಿಗೆ ಬೇಡಿದ ಕೋರೆಶ್ ಗೋತ್ರದವರಿಗೆ ಒಪ್ಪಿಕೊಳದೆ ತದನಂತರ ತಾನೇ ಮೊಹಮ್ಮದನ ಮತದಲ್ಲಿ ಸೇರಿದನು ಆರನೆ ವರ್ಷದಲ್ಲಿ ಮೊಹಮ್ಮದನ ತಂದೆಯ ಸಹೋದರನಾದ ಹಮ್ಜಾಮೆಂಬ ಘನವುಳ್ಳವನೂ ಮುಂಚೆ ಮೊಹಮ್ಮದನಿಗೆ ಬಹಳ ದ್ವೇಷಮಾಡಿದ ಶ್ರೇಷ್ಠ ಮನುಷ್ಯನಾದ ಓಮ್ಮರ್ ಐಬ್ನಆಲ್ ಖತ್ತಾಬನೂ ಯೀ ಯಿಬ್ಬರು ಅವನಶಿಷ್ಯರಾದರು. ಏಳನೆವರ್ಷದಲ್ಲಿ ಕೋರೆಶ್ ಗೋತ್ರದವರು ಬೇರೆಬೇರೆ ಗೋತ್ರದವರಲ್ಲಿ ಅನೇಕರು ಮೊಹಮ್ಮದನಿಗೆ ವಶವಾದದ್ದಂನು ನೋಡಿ ತಂಮಿಂದಾದರೆ ಯೀ ಹೊಸಮತವಂನು ನಾಶನ ಮಾಡುವದಕ್ಕಾಗಿ ಹಶೆಮೀಯರಿಗೂ ಅಬ್ದಲ್ ಮೊತಾಲ್ಲೆಬನ ಮನೆಯವರಿಗೂವಿರೋಧವಾಗಿ ಒಡಂಬಡಿಕೆ ಕಟ್ಟಿಕೊಂಡು ಮೊಹಮ್ಮದನ ಸ್ನೇಹಿತರಿಗೆ ಹೆಂಣುಕೊಡುವದೂ ಅವರಿಂದ ತೆಗದುಕೊಳ್ಳುವದೂ ಅವರಸಂಗಡ ಊಟಮಾಡುವದೂ ಬಾರದೆಂದು ಆಜ್ಞೆಕೊಟ್ಟು ಆಪ್ರಕಾರವಾಗಿ ಬರೆದು ಯೀ ಬರಹವಂನು ಕಾಬದಲ್ಲಿ ಯಿಟ್ಟುಕೊಂಡರು. ಯೀಪ್ರಕಾರ ಕೋರೆಶ್ ಗೋತ್ರವು ವಿಭಾಗವಾಗಿ ಹಾಶೆಮೀಯರೆಲ್ಲರು ಅಬುತಾಲ್ಲೆಬನಿಗೆ ಮುಖ್ಯಸ್ಥನೆಂದು ಒಳಗಾದರು. ಅಬುಲಾತಾಲ್ಲೆಬನುಮಾತ್ರ ತಂನ ಅಳಿಯನಿಗೆ ಅತಿದ್ವೇಷಿಯಾಗಿ ಬೇರೆಪಕ್ಷಕ್ಕೆ ಕೂಡಿಕೊಂಡನು. ಅವರಿಗೆ ಓಮ್ಮಯ್ಯವಂಶದವನಾದ ಅಬುಸೋಫೀಯಾನ್ ಐಬ್ನಹರ್ಬನು ಮುಖ್ಯಸ್ಥನಾಗಿದ್ದನು. ಯೀದ್ವೇಷವು ಹುಟ್ಟಿ ಮೂರುವರ್ಷದ ಮೇಲೆ ಮೊಹಮ್ಮದನು ಅಬುತಾಲ್ಲೆಬನಿಗೆ ದೇವರು ಕೋರೆಶ್ ಗೋತ್ರದವರು ಮಾಡಿದ ಒಡಂಬಡಿಕೆತನಗೆ ಅಹಿತವೆಂದು ತೋರಿಸಲಿಕ್ಕಾಗಿ ಅವರು ಕಾಬದಲ್ಲಿ ಯಿಟ್ಟುಕೊಂಡ ಬರಹವಂನು ದೇವರನಾಮದ ಹೊರ್ತು ಮೆಲ್ಲಾ ತಿಂದುಬಿಡಲಿಕ್ಕೆ ಒಂದು ಹುಳವಂನು ಕಳುಹಿಸಿದ್ದಾನೆಂದು ಪ್ರಕಟಮಾಡಿದನು. ಅಬುತಾಲ್ಲೆಬನು ಯಿದಂನು ತಿಳಿದುಕೊಂಡಾಗಲೇ ಕೋರೆಶಿಯರಹತ್ರಹೋಗಿ ಯೀಮಾತು ಅವರಿಗೆ ತಿಳಿಸಿ ಅದುಅಸತ್ಯವಾದರೆ ನಂನ ಅಳಿಯನಂನು ನಿಮಗೆ ಒಪ್ಪಿಸಿಕೊಡುತ್ತೇನೆಂದು ವಾಕ್ಯಕೊಟ್ಟನು. ಕೋರೆಶಿಯರು ಪ್ರತಿಯಾಗಿ ಅಬುತಾಲ್ಲೆಬನ ಮಾತು ಸತ್ಯವೆಂದು ಕಂಡರೆ ನಂಮದ್ವೇಷವಂನುಬಿಟ್ಟು ನಂಮ ಒಡಂಬಡಿಕೆಯಂನುಸಹ ಬಿಟ್ಟುಬಿಡುತ್ತೇವೆಂದು ವಾಕ್ಯಕೊಟ್ಟರು. ಆಮೇಲೆ ಮೆಲ್ಲರು ಕಾಬಕ್ಕೆ ಹೋಗಿ ಆಬರಹವಂನು ಹುಡುಕಿ ಅಬುತಾಲ್ಲೆಬನು ಹೇಳಿದ ಪ್ರಕಾರ ಒಂದು ಹುಳುವು ಮೆಲ್ಲಾತಿಂದುಬಿಟ್ಟಿತೆಂದುನೋಡಿ ತಂಮದ್ವೇಷವಂನು ಬಿಟ್ಟರು. ಅದೇ ವರ್ಷದಲ್ಲಿ ಅಬುತಾಲ್ಲೆಬನು ಎಂಭತ್ತುವರ್ಷದವನಾಗಿ ಸತ್ತನು. ಅನೇಕರು ಅವನುಅವಿಶ್ವಾಸಿಯಾಗಿ ಸತ್ತನೆಂದು ನೆನಸುತ್ತಾರೆ ಕೆಲವರು ಅವನು ಸಾಯುವದಕ್ಕಿಂತ ಮೊದಲನೆ ಮೊಹಮ್ಮದನ ಶಿಷ್ಯನಾದನೆಂದು ಹೇಳುತ್ತಾರೆ. ಅವನುತೀರಿಹೋದ ಮೂರನೆದಿವಸದಲ್ಲಿ ಮೊಹಮ್ಮದನಹೆಂಡತಿಯಾದ ಖಾದೀಜಾ ಸಹಾ ಸತ್ತಳು ಅದುಕಾರಣ ಯೀವರ್ಷಕ್ಕೆ ದುಃಖವರ್ಷವೆಂಬ ಹೆಸರಾಯಿತು.

ಯೀ ಯಿಬ್ಬರು ಸತ್ತುಹೋದ ತರುವಾಯ ಮೊಹಮ್ಮದನು ತಂನ ಗೋತ್ರದವರ ದ್ವೇಷವು ಹೆಚ್ಚಾಗುವದಂನು ನೋಡಿ ತಂನ ಚಾಕ್ರನಾದ ಜೈದನಸಂಗಡ ಮಕ್ಕಾಪಟ್ಟಣವಂನು ಬಿಟ್ಟು ಯಿಪ್ಪತ್ತುಹರದಾರಿ ದೂರದಲ್ಲಿರುವ ಮೂಡಣದಿಕ್ಕಿನ ತಾಯೆಫ್ ಊರಿಗೆಹೋಗಿ ಥಾಕಿಫ್ ಗೋತ್ರದ ಶ್ರೇಷ್ಠರಲ್ಲಿ ಯಿಬ್ಬರ ಆಶ್ರಯವಂನು ಹೊಂದಿ ಒಂದುತಿಂಗಳು ಅಲ್ಲಿವಸ್ತಿಯಾಗಿದ್ದನು. ಬುದ್ಧಿಯುಳ್ಳವರು ಅವನಿಗೆ ಸ್ವಲ್ಪ ಮಾನಕೊಟ್ಟರು ಆದರೆ ಗುಂಪುಜನರೂ ಗುಲಾಮರೂ ಅವನಿಗೆ ಬೈದು ಅವನು ಬೀದಿಗಳಲ್ಲಿ ಪ್ರಸಂಗಮಾಡುವ ಸಮಯದಲ್ಲಿ ಅವನಿಗೆ ಉಪದ್ರಕೊಟ್ಟು ಕಡೇಲಿ ಅವನಂನು ಹಿಡಿದು ಊರಿನಹೊರಗೆ ತೆಗದುಕೊಂಡುಹೋಗಿ ಪಾರಮಾಡಿದರು. ಆಗಲವನು ಮಕ್ಕಕ್ಕೆ ತಿರಿಗಿಬಂದು ಅಲ್ ಮೊತಾಮ್ ಐಬ್ನಅದಿಮೆಂಬವನ ಆಶ್ರಯವಂನು ಹೊಂದಿದನು. ಯಿದನ್ನುನೋಡಿದ ಅವನಶಿಷ್ಯರಿಗೆ ಧೈರ್ಯವು ಕಡಿಮೆಯಾಗುತ್ತಾಬಂತು.

ಶಾಸ್ತ್ರಪರಿಚೆ.

ಭೂಮಿಯನಾಲ್ಕುದಿಕ್ಕುಗಳಲ್ಲಿ ವಾಸಿಸಿರುವ ಜನಾಂಗಗಳಲ್ಲಿ ಉಂಟಾದ ಮತಗಳಿಗೆ ಬೇರೆಬೇರೆ ಶಾಸ್ತ್ರಗಳು ಉಂಟಾದವು. ಆ ಯಾ ಶಾಸ್ತ್ರಗಳಂನು

ಬುದ್ಧಿಯಿಂದ ವಿಚಾರಿಸುವವರಿಗೆ ಅವುಗಳಲ್ಲಿರುವ ಭೇದಾಭೇದಗಳನ್ನು ನೋಡುವದರಿಂದ ಶಾಸ್ತ್ರಜ್ಞಾನ ಹುಟ್ಟುತ್ತದೆ. ಬೇರೆಬೇರೆದೇಶಗಳಲ್ಲಿದ್ದು ಬೇರೆಬೇರೆ ಭಾಷೆಗಳನ್ನು ಆಡುವ ಮನುಷ್ಯರಲ್ಲಿ ನಡವಡಿಕೆಯಾಗಿರುವ ಶಾಸ್ತ್ರಗಳಲ್ಲಿ ಭೇದ ವುಂಟೆಂಬುವದು ಸರಿ. ಯಿಷ್ಟು ಸರ್ವರಿಗೂ ತಿಳಿದದೆ ನಾನಾ ಶಾಸ್ತ್ರಗಳಲ್ಲಿರುವ ಅಭೇದವನ್ನು ಗ್ರಹಿಸಿಕೊಳ್ಳುವದು ಬುದ್ಧಿವಂತರಿಗೆ ಯೋಗ್ಯವಾದದ್ದು. ಮನುಷ್ಯರೆಲ್ಲರಿಗೆ ವೊಂದೇ ಸ್ವಭಾವವೂ ವೊಂದೇ ವುತ್ಪತ್ತಿಯೂ ಉಂಟಾಗಿರುವದರಿಂದ ಬೇರೆಬೇರೆ ಶಾಸ್ತ್ರಗಳಲ್ಲಿರುವ ಮೂಲವಾದ ಬೋಧನೆಗಳಿಗೂ ಚರಿತ್ರೆಗಳಿಗೂ ಪೂರ್ವೈಕ್ಯತ್ವವು ಯಿರಬೇಕಾಗಿದೆ. ಬುದ್ಧಿವಂತರು ಯಿದನ್ನು ಚನ್ನಾಗಿತಿಳಿದುಕೊಳುವಹಾಗೆ ಯೀಸಮಾಚಾರಕಾಗದಗಳಲ್ಲಿ ಮನುವಿನಧರ್ಮಶಾಸ್ತ್ರ ಮೊದಲಾದ ಹಿಂದುಗ್ರಂಥಗಳಲ್ಲಿರುವ ಕೆಲವು ಸಂಧಿಗಳನ್ನೂ ಯಿವುಗಳಿಗೆ ಸರಿಯಾದ ಕ್ರೈಸ್ತಮತಸ್ಥರಿಗೆಯಿರುವದೇವರವಾಕ್ಯದಲ್ಲಿಬರೆದಅಧ್ಯಾಯಗಳನ್ನೂ ವಿವರಿಸುತ್ತೇವೆ.

೧ ಜಗದುತ್ಪತ್ತಿಯೂ ನರೋತ್ಪತ್ತಿಯೂ.

ಯಿವುಗಳ ವಿಷಯವಾಗಿ ಮನುಧರ್ಮಶಾಸ್ತ್ರದ ಆರಂಭದಲ್ಲಿ ಬರೆದದ್ದೇನಂದರೆ

ಆಸೀದಿದಂತಮೋಭೂತಂ ಅಪ್ರಜ್ಞಾತ ಮಲಕ್ಷಣಂ। ಅಪ್ರತರ್ಕ್ಯಮವಿಜ್ಞೇಯಂ ಪ್ರಸುಪ್ತಮಿವಸರ್ವತಃ॥೫

ಜಗತೆಂಬುವ ಯಾವತ್ತು ಅಂಧಕಾರವಾಗಿಯೂ ತಿಳಿಯಲಾರದ್ದಾಗಿಯೂ ಲಕ್ಷಣವಿಲ್ಲದ್ದಾಗಿಯೂ ತರ್ಕಿಸಕೂಡದ್ದಾಗಿಯೂ ತಿಳಿಸಲ್ಪಡದ್ದಾಗಿಯೂ ಯೆಲ್ಲಾಕಡೆಯಲ್ಲು ನಿದ್ರೆಯಲ್ಲಿ ಬಿದ್ದ ಪ್ರಕಾರವಾಗಿತ್ತು.

ತತಸ್ಸ್ವಯಂಭೂರ್ಭಗವಾನವ್ಯಕ್ತೋವ್ಯಂಜಯನ್ನಿದಂ। ಮಹಾಭೂತಾದಿವೃತ್ತೌಜಾಃಪ್ರಾದುರಾಸೀತ್ತಮೋನುದಃ॥೬

ಆಮೇಲೆ ತನ್ನಿಂದುಂಟಾದ ಭಗವಂತನು ತಾನುಕಾಣದೆ ಯಿದನ್ನು ಕಾಣಮಾಡಿ ಪಂಚಮಹಾಭೂತ ಮೊದಲಾದ ಘನವನ್ನು ಧರಿಸಿಕೊಂಡು ತಮಸ್ಸನ್ನುಬಿಡಿಸುವವನಾಗಿ ಪ್ರಸಿದ್ಧಿಯಾದನು.

ಯೋಸಾವತೀಂದ್ರಿಯಗ್ರಾಹ್ಯಃ ಸೂಕ್ಷ್ಮೋವ್ಯಕ್ತಸ್ಸನಾತನಃ। ಸರ್ವಭೂತಮಯೋಚಿಂತ್ಯಸ್ಸಏವಸ್ವಯಮುದ್ಬಭೌ॥೭

ಯಿಂದ್ರಿಯಗಳಿಗೆ ಗ್ರಹಿಸಲಶಕ್ಯನಾದವನೂ ಸೂಕ್ಷ್ಮನಾದವನೂ ಅವಯವಗಳಿಲ್ಲದವನೂ ನಿತ್ಯನೂ ಸರ್ವಭೂತಗಳೈಕ್ಯನೂ ಯೋಚನೆಗೆ ಅಶಕ್ಯನಾದವನೂ ಯಾವನೋ ಅವನೇ ತನ್ನಷ್ಟಕ್ಕೆ ವುಂಟಾದನು.

ಸೋಭಿಧ್ಯಾಯಶರೀರಾತ್ಸ್ವಾತ್ಸಿಸೃಕ್ಷುರ್ವಿವಿಧಾಃಪ್ರಜಾಃ। ಅಪಏವಸಸರ್ಜಾದೌ ತಾಸುಬೀಜಮವಾಸೃಜತ್ ॥೮

ಆತನು ಧ್ಯಾನಿಸಿ ತನ್ನ ಶರೀರದಿಂದ ಬೇರೆಬೇರೆವಿಧವಾದ ಪ್ರಜೆಗಳನ್ನು ಹುಟ್ಟಿಸಲಿಕ್ಕೆ ಮನಸ್ಸುಳ್ಳವನಾಗಿ ಜಲಗಳನ್ನೇ ಮೊದಲು ಸೃಷ್ಟಿಸಿದನು. ಅವುಗಳಲ್ಲಿಬೀಜವನ್ನುಬಿಟ್ಟನು.

ತದಂಡಮಭವದ್ಧೈಮಂಸಹಸ್ರಾಂಶು ಸಮಪ್ರಭಂ। ತಸ್ಮಿಂಜಜ್ಞೇಸ್ವಯಂಬ್ರಹ್ಮಾಸರ್ವಲೋಕಪಿತಾಮಹಃ॥೯॥

ಯಿದು ಸಾವಿರ ಕಿರಣಗಳುಳ್ಳ ಸೂರ್ಯನೋಪಾದಿಯಲ್ಲಿ ಪ್ರಕಾಶಿಸುವಂಥಾ ಭಂಗಾರದ್ದಾಗಿರುವ ಮೊಟ್ಟೆ ಯಾಯಿತು. ಯಿದರಲ್ಲಿ ಲೋಕದ ಮೂಲತಂದೆಯಾದ ಬ್ರಂಹ್ಮನು ತಾನೇಹುಟ್ಟಿದನು.

ಆಪೋನಾರಾಇತಿಪ್ರೋಕ್ತಾಆಪೋವೈನರಸೂನವಃ। ತಾಯದಸ್ಯಾಯನಂ ಪೂರ್ವಂತೇನ ನಾರಾಯಣಸ್ಮೃತಃ॥೧೦

ಜಲಗಳು ನರನೆಂಬ ಯಿವನಿಂದ ಹುಟ್ಟಿದಕಾರಣ ಅವುಗಳಿಗೆ ನಾರಾ ಯೆಂಬ ಹೆಸರುಂಟು ಆಜಲಗಳು ಆತನಿಗೆ ಪೂರ್ವದಲ್ಲಿ ಪ್ರವರ್ತಿಸುವ ಸ್ಥಳವಿದ್ದದರಿಂದ ಆತನಿಗೆ ನಾರಾಯಣ ಅದೇನೆಂದರೆ ನೀರಿನಲ್ಲಿ ಪ್ರವರ್ತಿಸುವವನೆಂಬ ಹೆಸರುಂಟು.

ಯತ್ತತ್ಕಾರಣಮವ್ಯಕ್ತಂನಿತ್ಯಂಸದಸದಾತ್ಮಕಂ। ತದ್ವಿಸೃಷ್ಟಸ್ಸಪುರುಷೋಲೋಕೇಬ್ರಹ್ಮೇತಿಕೀರ್ತ್ಯತೇ॥೧೧

ಗುಪ್ತವಾಗಿಯೂ ನಿತ್ಯವಾಗಿಯೂ ವುಂಟಾಗಿಯೂ ಯಿಲ್ಲದ್ದಾಗಿಯೂ ಯಿರುವ ಕಾರಣ ಯಾವದುಂಟೋ ಅದರಿಂದಹುಟ್ಟಿದ್ದಂಥಾಪುರುಷನುಲೋಕದಲ್ಲಿ ಪುರುಷನೆಂದು ಕರೆಯಪಡುತ್ತಾನೆ.

ತಸ್ಮಿನ್ನಂಡೇಸಭಗವಾನುಷಿತ್ವಾಪರಿವತ್ಸರಂ। ಸ್ವಯಮೇವಾತ್ಮನೋಧ್ಯಾನಾತ್ತದಂಡಮಕರೋದ್ದ್ವಿಧಾ॥೧೨

ಆಮೊಟ್ಟೆಯಲ್ಲಿ ಯೀಭಗವಂತನು ಯಿಡೀಸಂವತ್ಸರವನ್ನು ವಾಸಮಾಡಿ ತಾನೇ ಆತ್ಮದಧ್ಯಾನದಿಂದ ಆಮೊಟ್ಟೆಯನ್ನು ಯೆರಡಾಗಿ ಮಾಡಿದನು.

ತಾಭ್ಯಾಂಸಶಕಲಾಭ್ಯಾಂಚ।ದಿವಂಭೂಮಿಂಚನಿರ್ಮಮೇ। ಮಧ್ಯೇವ್ಯೋಮದಿಶಾಷ್ಟಾವಪಾಂಸ್ಥಾನಂಚಶಾಶ್ವತಂ॥೧೩

ಆ ಯೆರಡು ತುಂಡುಗಳಿಂದ ದಿವವನ್ನೂ ಭೂಮಿಯನ್ನೂ ಮಧ್ಯದಲ್ಲಿರುವ ಆಕಾಶವನ್ನೂ ಯೆಂಟು ದಿಕ್ಕುಗಳನ್ನೂ ಜಲಗಳಿಗೆ ನಿತ್ಯವಾದ ಸ್ಥಳವನ್ನೂ ನಿರ್ಮಿಸಿದನು.

ಉದ್ವವರ್ಹಾತ್ಮನಶ್ಚೈವಮನಸ್ಸದಸದಾತ್ಮಕಂ। ಮನಸಶ್ಚಾಪ್ಯಹಂಕಾರಂಅಭಿಮಂತಾರಮೀಶ್ವರಂ॥೧೪

ಮಹಾಂತಮೇವಚಾತ್ಮಾನಂಸರ್ವಾಣಿತ್ರಿಗುಣಾನಿಚ। ವಿಷಯಾಣಾಂಗ್ರಹೀತ್ರೀಣಿಶನೈಃ ಪಂಚೇಂದ್ರಿಯಾಣಿಚ॥೧೫

ವುಂಟಾಗಿಯೂ ಯಿಲ್ಲದ್ದಾಗಿಯೂ ಯಿರುವ ಮನಸ್ಸನ್ನು ಆತ್ಮನಿಂದಲೂ ಅಪೇಕ್ಷಿಸುವಂಥಾದ್ದಾಗಿಯೂಯಜಮಾನವಾದಂಥಾದ್ದಾಗಿಯೂಯಿರುವ ಅಹಂಕಾರವನ್ನು ಮನಸ್ಸಿನಿಂದಲೂ ಯಿನ್ನು ಆ ದೊಡ್ಡ ಆತ್ಮವನ್ನೂಮೂರು ಗುಣಗಳುಳ್ಳ ಸಕಲವಾದವುಗಳನ್ನೂ ಅದರ ಮೇಲೆ ವಿಷಯಗಳನ್ನುಗ್ರಹಿಸುವಂಥಾ ಐದು ಇಂದ್ರಿಯಗಳನ್ನೂ ವಹಿಸಿದನು.

ತೇಷಾಂತ್ವವಯವಾಂಸ್ಸೂಕ್ಷ್ಮಾಂಷಣ್ಣಾಮಪ್ಯಮಿತೌಜಸಾಂ। ಸನ್ನಿವೇಶ್ಯಾತ್ಮಮಾತ್ರಾಸು ಸರ್ವಭೂತಾನಿ ನಿರ್ಮಮೇ॥೧೬॥

ಮಿತಿಯಿಲ್ಲದ ತ್ರಾಣವುಳ್ಳ ಯೀ ಆರರ ಸೂಕ್ಷ್ಮವಾದ ಅವಯವಗಳಂನು ತನ್ನ ಸೂಕ್ಷ್ಮಭಾಗಗಳಿಂದ ದಾಟಿಸಿ ಸಮಸ್ತ ಭೂತಗಳಂನು ನಿರ್ಮಿಸಿದನು.

Circular Order of the Sudr Udaulut—8th. Dec. 1840

ಸದರ ಅದಾಲತ್ ಕೋರ್ಟಿನವರ ಪ್ರಕಟವಾದ ನಿಬಂಧನೆ.

೧೮೪೦ ನೇ ಸಂವತ್ಸರದ ಡೀಸಿಂಬರು ತಿಂಗಳು ೮ ತಾರೀಖ್

೧. ಹಿಂದೂ ಧರ್ಮಶಾಸ್ತ್ರದಲ್ಲಿ ವಿದ್ವಾಂಸರಾದವರು ತಿಳಿಯಮಾಡುವ ಪ್ರಕಾರವು ಮಗನು ತಂದೆಯ ಆಸ್ತಿಯಂನು ಹೊಂದಿದರೂ ಹೊಂದದೆಯಿದ್ದರೂ ತಂದೆಯು ಮಾಡಿದ ಸಾಲಗಳಂನು ತೀರಿಸಬೇಕಾದ ಬಾಧ್ಯತೆಯು ಅವನಿಗೆ ವುಂಟಾಗಿತೆಯೆಂದು ವಿಧಿಸಲ್ಪಟ್ಟಿತಷ್ಟೆ.

ಆದರೆ ೧೮೩೭ ನೇ ಸಂವತ್ಸರದ ಫೆಬ್ರುವರಿ ತಿಂಗಳು ೨೭ ನೇ ತಾರೀಖಿನಲ್ಲಿ ಸದರು ಅದಾಲತ್ ಕೋರ್ಟಿನವರ ನಿರ್ಣಯಗಳಲ್ಲಿ ಕೋರ್ಟಿನವರು ೧೮೦೨ ನೇ ಸಂವತ್ಸರದ ೩ ರಿಗ್ಯುಲೇಶನ್ ೧೬ ಶೆಕ್ಸನ್ ೧ ಕ್ಲಾಜು ದೃಷ್ಟಾಂತಪಡಿಸಿ ಪಿತ್ರಾರ್ಜಿತವು ಯಿಲ್ಲದ ಪಕ್ಷದಲ್ಲಿ ಅಂಥಾ ಬಾಧ್ಯತೆಯೆಂಬುವ ಸಂಗತಿಯಂನು ಹಿಂದೂ ಧರ್ಮಶಾಸ್ತ್ರದ ಪ್ರಕಾರವು ಪರಿಷ್ಕಾರ ಮಾಡುವದು ಅವಶ್ಯಕವಿಲ್ಲವೆಂದು ನಿರ್ಣಯಿಸಿಯಿದ್ದಾರೆ.

೨. ಪಿತ್ರಾರ್ಜಿತವಂನು ಕುರಿತ ವ್ಯಾಜ್ಯಗಳು ಹಿಂದೂ ಧರ್ಮಶಾಸ್ತ್ರ ನಿಬಂಧನೆಗಳ ಪ್ರಕಾರವು ಪರಿಷ್ಕಾರ ಮಾಡಲ್ಪಡಬೇಕೆಂದು ೧೮೦೨ ನೇ ಸಂವತ್ಸರದ ೩ ರಿಗ್ಯುಲೇಶನ್ ೧೬ ಶಕ್ಸನ್ ೧ ಕ್ಲಾಜಿನಲ್ಲಿ ಹೇಳಲ್ಪಟ್ಟದೆ. ಆದರೆ ಪಿತ್ರಿಯವಾದ ಆಸ್ತಿಯಿಲ್ಲದ ವಿಷಯಗಳಲ್ಲಿ ಪಿತ್ರಾರ್ಜಿತವಂನು ಕುರಿತ ಹಿಂದೂನ್ಯಾಯಪ್ರಕಾರವು ಕೋರ್ಟಿನವರು ತೀರ್ಪು ಮಾಡುವದಕ್ಕೆ ಯೆಷ್ಟುಮಾತ್ರವು ಬಾಧ್ಯತೆ ವುಂಟಾಗಿ ಯಿದ್ದವರಲ್ಲವು. ಯಿದಲ್ಲದೆ ಪಿತ್ರಾರ್ಜಿತವಂನು ಕುರಿತ ವಿಚಾರಣೆಯಂನು ವಿನಾಹಿಸಿ ಸಾಲಾ ತೀರಿಸಬೇಕಾದ ಬಾಧ್ಯತೆಯೆಂಬುವ ಸಂಗತಿಯು ಒಪ್ಪಿಕೊಳ್ಳುವದಂನು ಕುರಿತ ನ್ಯಾಯವಂನು ಸಂಬಂಧಿಸುತ್ತಿರುವದು.

೩. ಸದರು ಅದಾಲತು ಕೋರ್ಟಿನವರು ೧೮೩೭ ನೇ ಸಂವತ್ಸರದ ಫೆಬ್ರುವರಿ ತಿಂಗಳು ೨೭ ತಾರೀಖಿನಲ್ಲಿ ಮಾಡಿದ ತಮ್ಮ ನಿರ್ಣಯಗಳಲ್ಲಿ ಮಕ್ನಾಟನ್ಸ್ ಯೆಂಬುವ ದೊರೆಯು ಮಾಡಿದ ಹಿಂದೂ ನ್ಯಾಯದ ಮೂಲಗಳೂ ಪೂರ್ವದ ಪದ್ಧತಿಗಳೂ ಯೆಂಬುವ ಗ್ರಂಥದಲ್ಲಿ ಮೊದಲನೇ ಕಾಂಡದಲ್ಲಿ ೧೨೭ ನೇ ಪಾರ್ಶ್ವದಲ್ಲಿ ಹೀಗೆ ಹೇಳಲ್ಪಟ್ಟ ಹಿಂದೂ ನ್ಯಾಯವು ವಿದ್ವಾಂಸರಿಂದ ತಿಳಿಯಮಾಡಲ್ಪಟ್ಟ ಪ್ರಕಾರವು ಒಡಂಬಡಿಕೆಗಳ ನ್ಯಾಯದಲ್ಲಿ ಒಂದುಭಾಗವು ಆಗಿದೆಯೆಂದೂ ಆ ಒಡಂಬಡಿಕೆಗಳ ನ್ಯಾಯವು ಪೀಠಿಕೆಯಲ್ಲಿ ೧೮ ನೇ ಪುಟದಲ್ಲಿ ಹೇಳಲ್ಪಟ್ಟ ಪ್ರಕಾರವೂ ರಿಗ್ಯುಲೇಶನುಗಳ ಪ್ರಕಾರವೂ ಹಿಂದೂ ಧರ್ಮಶಾಸ್ತ್ರದ ಪದ್ಧತಿಗಳ ಅನುಸರಣೆಯಾಗಿ ಅರ್ಥಮಾಡಲ್ಪಡುವದು ನಿಮಿತ್ತವಿಲ್ಲವೆಂದೂ ಹೇಳಲ್ಪಟ್ಟದೆಯೆಂದು ಹೇಳಿದರು. ಸದರು ಅದಾಲತು ಕೋರ್ಟಿನವರು ಯೀ ಅಭಿಪ್ರಾಯದಿಂದಲೇ ಯಿದ್ದದರಿಂದ ಧರ್ಮದ ಪ್ರಕೃತಿ ಮೂಲಗಳಿಗೆ ವಿರೋಧವಾದ ಯಿಂಥಾ ನ್ಯಾಯಗಳ ಪ್ರಕಾರ ಕೋರ್ಟಿನವರು ತೀರ್ವಿಕೆಮಾಡುವದಕ್ಕೆ ಬಹಳಾ ಅಗತ್ಯವಾಗಿದ್ದರೇ ಹೊರ್ತು ಅದು ಅಂಗೀಕರಿಸಲ್ಪಡಕೂಡದೆಂದು ಆಟಂಕವಿಲ್ಲದೇ ನಿರ್ಣಯಿಸಿದರು.

೪. ತನ ತಂದೆಯಿಂದ ಆಸ್ತಿಯಂನು ಹೊಂದದ ಮಗನು ತಂದೆಯ ಸಾಲವಂನು ತೀರಿಸಬೇಕಾದ ಬಾಧ್ಯತೆಯೆಂಬುವ ಸಂಗತಿಯು ಕೋಲ್‌ಬ್ರುಕ್ ಯೆಂಬುವ ದೊರೆಯು ಬಾಧ್ಯತೆಗಳಂನೂ ಒಡಂಬಡಿಕೆಗಳಂನೂ ಕುರಿತು ಮಾಡಿದ ಗ್ರಂಥದಲ್ಲಿ ೨೪ ನೇ ಪುಟದಲ್ಲಿ ಹೇಳಲ್ಪಟ್ಟ ಪ್ರಕಾರ ಪರಿಷ್ಕಾರ ಮಾಡಬೇಕೆಂದು ಸದರು ಅದಾಲತು ಕೋರ್ಟಿನವರು ಹೇಳಿ ಯಿದ್ದಾರೆ. ಆ ಗ್ರಂಥಕರ್ತನು ಹೇಳಿದ್ದೇನಂದರೆ ಪಿತ್ರಿಯದ ಆಸ್ತಿಗಿಂತ ಹೆಚ್ಚಾದ ಸಾಲಕ್ಕೆ ವಾರಸದಾರನು ಬಾಧ್ಯಸ್ಥನಾಗಕೂಡದೆಂಬುವದು ಸಾಧಾರಣ ಧರ್ಮಕ್ಕೆ ಅನುಸರಣೆಯಾಗಿದೆ. ಹಿಂದೂ ಧರ್ಮಶಾಸ್ತ್ರದ ಪ್ರಕಾರವು ವಾರಸದಾರರು ಆಸ್ತಿಯು ಸಾಕಾಗುವದೇ ಸೋ ಯೆಂಬುವ ವಿಚಾರಣೆ ಯಿಲ್ಲದೇ ತಂಮ ತಂದೆಗಳ ಸಾಲಗಳಿಗೆ ಬಾಧ್ಯತೆ ಯುಂಟಾದವರಾಗಿರುವರು. ಆದರೆ ತಂದೆಗಳ ಆಸ್ತಿಯೂ ಸಾಲವೂ ತಮಗೆ ಯೆಷ್ಟುಮಾತ್ರವು ಅವಶ್ಯಕ ವಿಲ್ಲವೆಂದು ಹೇಳುವದಕ್ಕೆ ವಾರಸದಾರರಿಗೆ ಕರ್ತವ್ಯ ವಾಗುವದೆಂದು ಒಪ್ಪಿ ಕೊಳ್ಳಲ್ಪಡಬೇಕು.

Printed at the Bellary Mission Press.

R. Sampson, Printer,—H. Moegling, Editor.

CANARESE NEWSPAPER.

ಕಂನಡ ಸಮಾಚಾರವು.

೧೮೪೪.

೧ ನೆ ಪುಸ್ತಕ. ೧೨ ನೆ ಅಂಕೆ] ಬಳ್ಳಾರಿ ೧೫ ನೆ ಆಗಸ್ಟ್ [ಟಪಾಲ ದಸ್ತೂರಿಕೂಡಿ ಕ್ರಯ ೨ ದುಡ್ಡು.

Madras Female School.

ಮದ್ರಾಸ್ ಹುಡುಗಿಯರ ಸಾಲೆ.

ಜುಲ್ಯಾ ತಾರೀಖು ೩೧ ನೆಯಲ್ಲಿ ಗೋಪಾಲಕ್ರಿಷ್ಟಮನಾಯಡು ಸುಬ್ರಾಯಲು ನಾಯಡು ಮೊದಲಾದ ಹಿಂದು ಹಿರಿಗಳು ಬ್ಲೆಕ್ ಟೌನಿನಲ್ಲಿ ಹಿಂದೂ ಸ್ತ್ರೀ ಪಾಠ ಸಾಲೆಯೆಂಬ ವೊಂದು ಸಾಲೆಯಂನು ಹುಡುಗಿಯರ ಗೋಸ್ಕರ ಮಾಡಿದರು ಅದರಲ್ಲಿ ಸೇರುವ ಹುಡುಗಿಯರು ಬರಹ ಇತ್ಯಾದಿ ವಿದ್ಯಾಭ್ಯಾಸಗಳಂನು ಮಾಡುವರು ಹಿಂದೂಜನರಲ್ಲಿ ಶ್ರೇಷ್ಠರಾದ ಕೆಲವರು ಸಾಲೆಗೆ ಬೇಕಾದ ಹಣ ಕೊಡಲಿಕ್ಕೆ ವಾಗ್ದತ್ತಮಾಡಿದ್ದಾರೆ ಆ ಸಾಲೆಯಲ್ಲಿ ಯಿರುವ ಬೋಧಕರು ಹಿಂದೂ ಪಂಡಿತರು ಯಿವರು ವೋದಿಸುವ ಪುಸ್ತಕಗಳು ಹಿಂದೂ ಗ್ರಂಥಗಳು ಆದಾಗ್ಯು ಮದ್ರಾಸಿನಲ್ಲಿರುವ ಹಿಂದೂ ಜನರಲ್ಲಿ ಅನೇಕರು ಹುಡುಗಿಯರಿಗೆ ವಿದ್ಯೆಗಳಂನು ಕಲಿಸಿ ಕೊಡುವದು ಕೆಟ್ಟದೆಂದು ಯೀ ಮೊದಲನೆ ಹುಡುಗಿಯರ ಸಾಲೆಯಂನು ಸ್ಥಾಪಿಸಿದವರಿಗೆ ವಿರೋಧವಾಗಿ ಮಾತಾಡುತ್ತಾರೆ ಯಿದು ಸಮವಲ್ಲ ಯಾಕೆಂದರೆ ವಿದ್ಯೆ ಬುದ್ಧಿ ಜ್ಞಾನಗಳು ಗಂಡಸರಿಗೆ ಉಪಯೋಗವಾದರೆ ಹೆಂಗಸರಿಗೆ ಸಹಾ ಉಪಯೋಗವಾಗಿರುವದು ತಾಯಿಯು ವಿದ್ಯೆಯಿಲ್ಲದವಳಾಗಿ ಮೂರ್ಖಳಾಗಿದ್ದರೆ ತಂನ ಮಕ್ಕಳಿಗೆ ಬುದ್ಧಿ ಹೇಳುವದು ಹ್ಯಾಗೆ ಮನುಧರ್ಮಶಾಸ್ತ್ರದಲ್ಲಿ ವಿಧವೆಗಳು ಶಾಸ್ತ್ರಗಳನ್ನು ವೋದಿ ವಿದ್ಯಾಭ್ಯಾಸಮಾಡಬೇಕೆಂದು ನೇಮಿಸಲ್ಪಟ್ಟದೆ ಆದರೆ ಯೀಗಿನ ಹಿಂದೂಜನರು ಪೂರ್ವಿಕರ ಬುದ್ಧಿಯಂನು ಕಳದುಕೊಂಡು ಅನೇಕ ಕಾರ್ಯಗಳಲ್ಲಿ ಹಿರೇರ ಮಾರ್ಗವಂನು ಕೈಕೊಳ್ಳಬೇಕೆಂದು ಸುಮ್ಮನೆ ಹೇಳುತ್ತಾ ಅದಂನು ಬಿಟ್ಟುಬಿಡುತ್ತಾರೆ ವಿಲ್ಯಾತಿಯಲ್ಲಿ ಸ್ತ್ರೀಯರಿಗೆ ಬರಹವಿಲ್ಲದೇ ಯಿರುವದು ಅಪಮಾನವು ಅದು ಕಾರಣ ವಿಲ್ಯಾತಿ ಸ್ತ್ರೀಯರು ಗಂಡಸರಹಾಗೆ ಬುದ್ಧಿಯುಳ್ಳವರಾಗಿ ತಂಮ ಪತಿಗಳಿಗೆ ಅವರ ಕೆಲಸಗಳಲ್ಲಿ ಸಹಾಯಮಾಡಿ ಆಲೋಚನೆ ಕೊಟ್ಟು ತಂಮ ಮಕ್ಕಳಿಗೆ ಬಾಲ್ಯಾರಭ್ಯ ಬುದ್ಧಿಮಾರ್ಗವಂನು ತೋರಿಸುತ್ತಾರೆ ಹಿಂದೂ ಸ್ತ್ರೀಯರು ವಿಲ್ಯಾತಿ ಸ್ತ್ರೀಯರ ಹಾಗೆಯೆ ವಿದ್ಯೆಜ್ಞಾನಗಳಂನು ಕಲಿತರೆ ಅವರ ಗಂಡಂದಿರಿಗೂ ಮಕ್ಕಳಿಗೂ ಬೇರೆ ಸಂಬಂಧಿಕರಿಗೂ ಬಹು ಉಪಯೋಗವಾಗುವದು.

Lahore News.

ಲಾಹೂರ್.

ಹೋದ ತಿಂಗಳಲ್ಲಿ ಹೀರಾಸಿಂಗ ರಾಜಾಸಾಹೇಬರಾದ ಮುಖ್ಯ ಪ್ರಧಾನಿಯವರು ದೊಡ್ಡ ದರ್ಬಾರು ಮಾಡಿ ಮಹಾರಾಜನ ಚಾಕ್ರಿಯಲ್ಲಿರುವ ಸಕಲ ಫ್ರೆಂಚ್ ಮತ್ತು ಇಂಗ್ಲಿಷ್ ಘೊರೆಗಳಂನು ಮಹಾರಾಜನ ಮುಂದೆ ಕರೆದು ಯೆಲ್ಲರಿಗೆ ಬರ್ತರ್ಫ ಮಾಡಿದನು ಯೀ ವಿಲ್ಯಾತಿಯವರೆಲ್ಲರು ನಂಮ ರಾಜ್ಯದ ಮೇಲೆ ಕಷ್ಟವು ಬಂದರೆ ನಂಮಂನು ಬಿಟ್ಟುಹೋಗುವರು ಯಿಲ್ಲವೆ ಇಂಗ್ಲಿಷ್ ಜನರ ಸಂಗಡ ಯುದ್ಧವುಂಟಾದರೆ ನಮಗೆ ದ್ರೋಹಮಾಡಿ ಅವರಲ್ಲಿ ಸೇರುವರು ಆದದರಿಂದ ವಿಲ್ಯಾತಿ ಚಾಕ್ರಿಯವರು ನಂಮ ರಾಜ್ಯಕ್ಕೆ ಬೇಡೆಂದು ಹೇಳಿದನು ಯಿದಂನು ಹೇಳಿ ವಿಲ್ಯಾತಿಯವರಿಗೆ ಬರ್ತರ್ಫ ಮಾಡಿದ ಮೇಲೆ ಹೀರಾಸಿಂಗನು ಮಹಾರಾಜನ ಸಂಗಡ ದರ್ಬಾರಿನಿಂದ ಯೆದ್ದುಹೋದರು.

Crowned Heads of Europe.

ಯೂರೋಪಿ ಅರಸರುಗಳು.

ವಿಲ್ಯಾತಿ ಅರಸರುಗಳು ಇಂಗ್ಲಿಷ್ ದೇಶದ ರಾಣಿಯ ಸಂಗಡ ಬಹಳ ಸ್ನೇಹದಿಂದಿದ್ದಾರೆಂದು ಕಾಣುತ್ತದೆ ಹೋದ ವರ್ಷದಲ್ಲಿ ವಿಕ್ತೋರಿಯ ರಾಣಿ ಫ್ರಾನ್ಸ ದೇಶಕ್ಕೆ ಹೋಗಿ ಆ ದೇಶದ ಅರಸನ ಸಂಗಡಲೂ ರಾಣಿಯ ಸಂಗಡಲೂ ಅವರ ಅರಮನೆಗಳ ವೊಂದರಲ್ಲಿ ಕೆಲವು ದಿವಸ ವಾಸ ಮಾಡಿದಳು ಯೀ ವರ್ಷದಲ್ಲಿ ಫ್ರಾನ್ಸ ದೇಶದ ಅರಸನು ವಿಕ್ತೋರಿಯ ರಾಣಿಯ ದರ್ಶನಕ್ಕಾಗಿ ಇಂಗ್ಲಾಂಡ ದೇಶಕ್ಕೆ ಬರುವನು ವೊಂದು ವರ್ಷದ ಹಿಂದೆ ಪ್ರಶ್ಯ ದೇಶದ ಅರಸನು ಲೊಂದೊನ್ ಪಟ್ಟಕ್ಕೆ ಬಂದು ವಿಕ್ತೋರಿಯ ರಾಣಿಗೆ ಆಗಲು ಹುಟ್ಟಿದ ಗಂಡುಶಿಸುವಿಗೆ ಕ್ರೈಸ್ತಸ್ನಾನ ಆಗುವ ಸಮಯದಲ್ಲಿ ಸ್ನಾಪಿತನಾಗಿ ನಿಂತನು ಕಳದ ಜೂನ್ ತಿಂಗಳಲ್ಲಿ ಸಾಕ್ಸನ್ ದೇಶದ ಅರಸನು ವಿಕ್ತೋರಿಯ ರಾಣಿಯ ದರ್ಶನಕ್ಕೆ ಬಂದು ಕೆಲವು ವಾರಪರಿಯಂತರ ಲೊಂದೊನ್ ಪಟ್ಣದ ಅರಮನೆಯಲ್ಲಿ ವಾಸಮಾಡಿದನು ಯಿವನು ಅಲ್ಲಿ ಬಂದ ಕೆಲವು ದಿವಸದ ತರುವಾಯ ರೂಸರ ದೇಶದ ಮಹಾರಾಜನಾದ ನಿಕೊಲಾಸ್ ನಹ ರಾಣಿಯ ಭೇಟಿಗೆ ಆವೆಹಡಗದಲ್ಲಿ ಬಂದನು ಯೀ ಮಹಾರಾಜನಿಗೂ ಇಂಗ್ಲಿಷ್ ಜನರಿಗೂ ಬಹಳ ಹಗೆಯುಂಟೆಂದು ಜನರು ಹೇಳುತ್ತಿದ್ದರು ಯೀ ಮಾತಿಗೆ ಆಧಾರವಿಲ್ಲವೆಂದು ಯೀಗ ಕಾಣುವದು ಯಾಕೆಂದರೆ ರಾಣಿಯ ಸಂ

ಗಡ ಅವನಿಗೆ ಸ್ನೇಹ ಉಂಟೆಂದು ಪ್ರತ್ಯಕ್ಷವಾಗಿದೆ ಮತ್ತು ಇಂಗ್ಲಿಷ್ ಜನರು ಘನವುಳ್ಳ ಧೊರೆಗಳು ಮೊದಲಾದವರು ಮಹಾರಾಜನು ಮೆಗ್ಗೆಲ್ಲಿ ಹೋದಹೋ ಅಲ್ಲೆಗುಂಪುಕೂಡಿ ಅವನ ಪ್ರಜೆಗಳಹಾಗೆ ಉಲ್ಲಾಸದಿಂದ ಗೌಜಿಮಾಡಿದರು ವಿಲ್ಯಾತಿ ಅರಸರುಗಳಲ್ಲಿ ಅನ್ಯೋನ್ಯ ಇಷ್ಟವು ಯಿರುವದರಿಂದ ವಿಲ್ಯಾತಿಯಲ್ಲಿ ಮೂವತ್ತುವರ್ಷ ಆರಭ್ಯ ದೊಡ್ಡಯುದ್ಧ ಯಿಲ್ಲದೆ ಸಮಾಧಾನ ಯಿದ್ದ ಪ್ರಕಾರ ಯಿನ್ನುಮುಂದೆಸಹಾ ಸಮಾಧಾನವು ಸ್ಥಿರವಾಗಿರುವದೆಂದು ಕಾಣುತ್ತದೆ.

Mysore.

ಮಹಿಸೂರು.

ಫೋರ್ಟ್ ಸೇಂಟ್ ಜಾರ್ಜ್ ೨೭ನೆ ಜೂನ್ ೧೮೪೪ ಬಹು ಘನವುಳ್ಳ ಗವರ್ನರ ಇನ್ ಕೌನ್ಸಿಲ್ ಬಹದೂರ್ ರಾಣಿಯಪ್ರಧಾನಿಗಳು ಬಹುಮಾನಪಟ್ಟ ಕೋರ್ಟ್ ಆಫ್ ದಿರೆಕ್ಟರ್ಸ್ಎಂಬ ಕುಂಪಣೀ ಸಭೆಯವರಿಗೆ ಕಳಿಸಿದ ಅಪ್ಪಣೆಯ ಪ್ರಕಾರ ಆಜ್ಞಾಪಿಸುವದೇನೆಂದರೆ ಮಹಿಸೂರ್ ದೇಶದಲ್ಲಿ ಮಾಡುವ ಸಕ್ಕರೆ ಇಂಗ್ಲಾಂಡ್ ದೇಶದಲ್ಲಿ ಇಂಗ್ಲಿಷ್ ಶೀಮೆಯ ಸಕ್ಕರೆಯಹಾಗೆಯೇ ಮಣಿಸಲ್ಪಡುವದರಿಂದ ಹಿಂದುದೇಶದಲ್ಲಿ ಸಹ ಮಹಿಸೂರ್ ಶೀಮೆಯ ಸಕ್ಕರೆ ಮದ್ರಾಸ್ ಕೋಸ್ತಿನ ಜಿಲ್ಲೆಗಳಲ್ಲಿ ಶೇರುವದಕ್ಕೆ ಯಿನ್ನು ಮುಂದೆ ಯೇನು ಅಡ್ಡಿಯಿಲ್ಲ.

ಯಿದು ಬಹು ಘನವುಳ್ಳ ಗವರ್ನರ್ ಇನ್ ಕೌನ್ಸಿಲ್ ಬಹದೂರವರ ಅಪ್ಪಣೆಯಿಂದ ಪ್ರಕಟಮಾಡಿದ್ದು.

ಜ. ದ. ದ್ರೂರಿ. ಚೀಫ್ ಸಕ್ರಿಟೆರಿ.

Lotteries Abolished.

ಲಾತ್ತರಿ.

ನ್ಯೂಸ್ ಪೇಪರಿಗಳಲ್ಲಿ ಮದ್ರಾಸಿನಲ್ಲಿ ಸೋಡ್ತಿ ತೆಗಿಯುವರುಯೆಂದು ಬರೆದದೆ ಆದರೆ ಗವರ್ನಮೆಂಟ್ ಲಾತ್ತರಿಗಳು ಮನ್ನಾಮಾಡಬೇಕೆಂಬ ಆಜ್ಞೆಯು ಸುಪ್ರೀಮ್ ಗವರ್ನಮೆಂಟವರಿಂದ ಪ್ರಕಟವಾದಕಾರಣ ಯೀಲಾತ್ತರಿ ಮದ್ರಾಸಿನಲ್ಲಿ ಸಹ ಕಡೇಲಾತ್ತರಿಯೆಂದು ಕಾಣುತ್ತದೆ ಯೀಲಾತ್ತರಿಗಳಿಂದ ಮದ್ರಾಸ್ ಗವರ್ನಮೆಂಟಿನವರಿಗೆವರ್ಷಕ್ಕೆ ಒಂದುಲಕ್ಷರುಪಾಯಿ ಲಾಭ ಬರುತಿತ್ತು ಆದರೆ ಯೀಸೋಡ್ತಿಯಿಂದ ಜನರು ಬಹಳನಷ್ಟಹೊಂದುತ್ತಾರೆಂದು ತಿಳಿದುಕೊಂಡು ಯಿಂಥಾ ಕೆಲಸ ಹಿಂದುದೇಶದಲ್ಲಿ ಮನ್ನಾಮಾಡಬೇಕೆಂದು ನಿಶ್ಚೈಸಿದ್ಧಾರೆ ಯೀಗವರ್ನಮೆಂಟ್ ಲಾತ್ತರಿಗಳನ್ನು ಹೊರ್ತು ಬೇರೆಜನರು ಸುಳ್ಳು ಲಾತ್ತರಿಗಳನ್ನು ಮಾಡಿ ಚೀಟುಗಳನ್ನುಮಾರಿ ಕೂಡಿಸಿದಹಣವನ್ನು ತಿಂದುಬಿಡುತ್ತಿದ್ದರು ಯೀಪ್ರಕಾರ ಚಾರ್ಲ್ಸ್ ಮಿಥೋಲ್ದ್ ಕಲ್ಕತ್ತಾ ಪಟ್ಟಣದಲ್ಲಿ ೧೮೪೨ನೇ ವರ್ಷಾರಭ್ಯ ಹಂನೆರಡು ಲಾತ್ತರಿಗಳನ್ನು ಮಾಡಿದನು ಮೂರುವರ್ಷಗಳೊಳಗೆ ಯಿವನು ಬಹಳ ಮೋಸಗಳನ್ನು ನಡಿಸಿತನ್ನ ಮೋಸತಿಳಿಯದಹಾಗೆಕೆಲವರಿಗೆ ಸೋಡ್ತಿಬಂತೆಂದು ಮಾಡಿ ಅವರಿಗೆ ಹಣ ಸಲ್ಲಿಸಿ ಮಿಕ್ಕಾದ್ದೆಲ್ಲಾ ತಾನೇ ತಿನ್ನುತ್ತಿದ್ದನು ಹೀಗೆ ಮೋಯಿಲ್ಲದ ಜನರಹೆಸರುಗಳನ್ನು ನ್ಯೂಸ್ ಪೇಪರಿಗಳಲ್ಲಿಬರೆದು ಅವನಿಗೆಹಣಬಂತೆಂದು ಹೇಳುತ್ತಾಯಿದ್ದನು ಕಡೇಲಿ ಜೀವಂತೆರಾಗಿದ್ದವ್ರೊಬ್ಬ ಜನರೆಲ್ ಫಾಸ್ತ್ರೆಂಬ ಧೊರೆಗೆ ಯಿಪ್ಪತ್ತುಸಾವಿರರೂಪಾಯಿ ಬಂತೆಂದು ನ್ಯೂಸಪೇಪರಿಗಳಲ್ಲಿಹಾಕಿದಮೇಲೆ ಅವರು ಹಣವನ್ನುಕೇಳುವಾಗ್ಯೆ ತನ್ನಹತ್ರ ಯಿಲ್ಲವೆಂದು ಅರಿಕೆಮಾಡಿದಕಾರಣ ಅವನನ್ನುಕೋರ್ಟಿಗೆ ತಂದರು ಜಡ್ಜರು ವಿಚಾರಣೆಮಾಡುವಾಗ್ಯೆ ಅವನು ದೊಡ್ಡ ಮೋಸಗಾರನೆಂದು ಸಕಲ ಜನರಿಗೆ ಪ್ರಕಟವಾಯಿತು ಸುಪ್ರೀಮ್ ಗವರ್ನಮೆಂಟಿನವರು ಲಾತ್ತರಿಗಳನ್ನು ಮನ್ನಾಮಾಡಿದದರಿಂದ ಯಿನ್ನುಮುಂದೆಯಿಂಥಾ ಮೋಸಗಳನ್ನು ನಡಿಸಲಿಕ್ಕೆ ಉಪಾಯವಿಲ್ಲ.

ಮೊದಲನೆ ಪುಸ್ತಕ ನಾಲ್ವತ್ತುನಾಲ್ಕನೆ ಪುಟದಲ್ಲಿ ತೀರದೆಯಿದ್ದ

ಜಗದುತ್ಪತ್ತಿಯೂ ನರೋತ್ಪತ್ತಿಯೂ.

ಯನ್ಮೂರ್ತ್ಯವಯವಾಸ್ಸೂಕ್ಷ್ಮಾಸ್ತಸ್ಯೇಮಾನ್ಯಾಶ್ರಯಂತಿಷಟ್ । ತಸ್ಮಾಚ್ಛರೀರಮಿತ್ಯಾಹುಸ್ತಸ್ಯಮೂರ್ತಿಂಮನೀಷಿಣಃ ॥೧೭॥

ಯಿವನ ಮೂರ್ತಿಯಲ್ಲಿರುವ ಸೂಕ್ಷ್ಮವಾದ ಅವಯವಗಳು ಯೀ ಆರುಗಳನ್ನು ಆಶ್ರೈಸುವಕಾರಣ ವಿದ್ವಾಂಸರು ಆತನಮೂರ್ತಿಯನ್ನು ಶರೀರವೆಂದು ಹೇಳುತ್ತಾರೆ.

ತದಾವಿಶಂತಿಭೂತಾನಿಮಹಾಂತಿಸಹಕರ್ಮಭಿಃ । ಮನಶ್ಚಾವಯವೈಸ್ಸೂಕ್ಷ್ಮೈಸ್ಸರ್ವಭೂತಕೃದವ್ಯಯಂ ॥೧೮॥

ಅದರಿಂದ ಅವು ಅವುಗಳ ಕರ್ಮಗಳಿಂದ ಸಹಿತವಾದ ಮಹಾ ಭೂತಗಳು ಹೊರಡುತ್ತವೆ ನಾಶರಹಿತವಾಗಿಯೂ ಸಕಲ ಭೂತಗಳಿಗೆ ಕಾರಣವಾಗಿಯೂ ಸೂಕ್ಷ್ಮವಾದ ಅವಯವಗಳಿಂದ ಅವ್ಯಕ್ತವಾಗಿಯೂ ಯಿರುವ ಮನಸ್ಸುಸಹ ಹೊರಡುತ್ತದೆ.

ತೇಷಾಮಿದಂತುಸಪ್ತಾನಾಂಪುರುಷಾಣಾಂಮಹೌಜಸಾಂ । ಸೂಕ್ಷ್ಮಾಭ್ಯೋಮೂರ್ತಿಮಾತ್ರಾಭ್ಯಸ್ಸಂಭವತ್ಯವ್ಯಯಾದ್ವ್ಯಯಂ ॥೧೯॥

ಹಾಗಾದರೆ ನಿತ್ರಿಗ್ಯೆಯುವವರಾದ ಯೀ ಮಹಾತ್ರಾಣವುಳ್ಳ ಪುರುಷರ ಸೂಕ್ಷ್ಮವಾದ ಮೂರ್ತಿಮಾತ್ರಗಳಾದ ನಾಶವಿಲ್ಲದವುಗಳಿಂದ ನಾಶವಾಗುವಂಥಾದ್ದು ಉಂಟಾಯಿತು.

ಆದ್ಯಾದ್ಯಸ್ಯಗುಣಂತ್ವೇಷಾಮವಾಪ್ನೋತಿಪರಃಪರಃ । ಯೋಯೋಯಾವತಿಥಶ್ಚೈಷಾಂಸಸತಾವದ್ಗುಣಸ್ಸ್ಮೃತಃ ॥೨೦॥

ಯೀ ಪುರುಷರಲ್ಲಿಮೊದಲು ಯಿರುವವನ ಗುಣವನ್ನು ಮುಂದೆಮುಂದೆಬರುವವನು ಹೊಂದುತ್ತಾನೆ ಯಾವಯಾವನು ಯೆಷ್ಟನೆಯವನಾಗಿದ್ಧಾನೊ ಅಷ್ಟು ಗುಣವುಳ್ಳವನೆಂದುಮಣಿಸಲ್ಪಡುತ್ತಾನೆ.

ಸರ್ವೇಷಾಂತುಸನಾಮಾನಿಕರ್ಮಾಣಿಚಪೃಥಕ್ಪೃಥಕ್ । ವೇದಶಬ್ದೇಭ್ಯಏವಾದೌಪೃಥಕ್ಸಂಸ್ಥಾಶ್ಚನಿರ್ಮಮೆ ॥೨೧॥

ಅವನು ಯೆಲ್ಲವುಗಳಿಗೆ ಹೆಸರುಗಳನ್ನೂ ಕೆಲಸಗಳನ್ನೂ ಸ್ಥಿತಿಗಳನ್ನೂಆದಿಯಲ್ಲಿ ಬೇರೆಬೇರೆಯಾಗಿ ವೇದವಾಕ್ಯಗಳಿಂದ ನಿರ್ಮಿಸಿದನು.

ಕರ್ಮಾತ್ಮನಾಂಚದೇವಾನಾಂಸೋಸೃಜತ್ಪ್ರಾಣಿನಾಂಪ್ರಭುಃ । ಸಾಧ್ಯಾನಾಂಚಗಣಂಸೂಕ್ಷ್ಮಂಯಜ್ಞಂಚೈವಸನಾತನಂ ॥೨೨॥

ಕೆಲಸದಲ್ಲಿ ಮನಸ್ಸುಳ್ಳ ದೇವತೆಗಳು ಸಾಧ್ಯರು ಯಿವರ ಸೂಕ್ಷ್ಮವಾದ ಗುಣವನ್ನೂ ನಿತ್ಯವಾದ ಯಜ್ಞವನ್ನೂ ಪ್ರಾಣಿಗಳಪ್ರಭುವು ಸೃಷ್ಟಿಸಿದನು.

ಅಗ್ನಿವಾಯುರವಿಭ್ಯಸ್ತುತ್ರಯಂಬ್ರಹ್ಮಸನಾತನಂ। ದುದೋಹಯಜ್ಞಸಿದ್ಧ್ಯರ್ಥಂರುಗ್ಯಜುಸ್ಸಾಮಲಕ್ಷಣಂ॥೨೩॥

ಆಮೇಲೆ ಬ್ರಹ್ಮನು ಬೆಂಕಿ ಘಾಳಿ ಸೂರ್ಯರುಗಳಿಂದ ಯಜ್ಞವಂನು ತಪ್ಪಿಲ್ಲದೆ ಮಾಡುವಬಗ್ಯೆ ರುಗ್ಯಜುಸ್ಸಾಮವೆಂಬ ಲಕ್ಷಣವುಳ್ಳ ಮೂರು ನಿತ್ಯವಾದವುಗಳಂನು ಕರದನು.

ಕಾಲಂಕಾಲವಿಭಕ್ತೀಶ್ಚ ನಕ್ಷತ್ರಾಣಿ ಗ್ರಹಾಂಸ್ತಥಾ। ಸರಿತಸ್ಸಾಗರಾಂಛೈಲಾನ್ಸಮಾನಿವಿಷಮಾಣಿಚ॥೨೪॥

ಯಿಂನು ಆತನು ಕಾಲವಂನೂ ಕಾಲಭೇದಗಳಂನೂ ನಕ್ಷತ್ರಗಳಂನೂ ಗ್ರಹಭೇದಗಳಂನೂ ನದಿಗಳಂನೂ ಸಮುದ್ರಗಳಂನೂ ಪರ್ವತಗಳಂನೂ ಬೈಲುಗಳಂನೂ ಕಣವೆಗಳಂನೂ ವುಂಟುಮಾಡಿದನು.

ತಪೋವಾಚಂ ರತಿಂಚೈವ ಕಾಮಂಚ ಕ್ರೋಧಮೇವಚ। ಸೃಷ್ಟಿಂಸಸರ್ಜಚೈವೇಮಾಂಸ್ರಷ್ಟುಮಿಛನ್ನಿಮಾಃ ಪ್ರಜಾಃ॥೨೫॥

ತಪಸ್ಸಂನೂ ವಾಕ್ಯವಂನೂ ಕ್ರೀಡೆಯಂನೂ ಕಾಮವಂನೂ ಕ್ರೋಧವಂನೂ ಯೀ ಸೃಷ್ಟಿಯಂನೇ ಯೀ ಪ್ರಜೆಗಳಂನು ಸೃಷ್ಟಿಸುವ ಆಪೇಕ್ಷೆಯುಳ್ಳವನಾಗಿ ಸೃಷ್ಟಿಸಿದನು.

ಕರ್ಮಣಾಂಚ ವಿವೇಕಾರ್ಥಂಧರ್ಮಾಧರ್ಮೌವ್ಯವೇಚಯತ್। ದ್ವಂದ್ವೈರಯೋಜಯಚ್ಚೇಮಾಃಸುಖದುಃಖಾದಿಭಿಃ ಪ್ರಜಾಃ॥೨೬॥

ಕರ್ಮಗಳಂನು ವಿವೇಕಿಸುವದಕ್ಕೋಸ್ಕರ ಧರ್ಮ ಅಧರ್ಮಗಳಂನು ವಿವೇಕಿಸಿ ಸುಖ ದುಃಖ ಮೊದಲಾದ ಜೋಡು ಸ್ಥಿತಿಗಳಿಂದ ಯೀ ಪ್ರಜೆಗಳಂನು ಕೂಡಿಸಿದನು.

ಅಣ್ವ್ಯೋಮಾತ್ರಾವಿನಾಶಿನ್ಯೋದಶಾರ್ಧಾನಾಂತುಯಾಃ ಸ್ಮೃತಾಃ। ತಾಭಿಸ್ಸಾರ್ಧಮಿದಂ ಸರ್ವಂ ಸಂಭವತ್ಯನುಪೂರ್ವಶಃ॥೨೭॥

ಪಂಚಭೂತಗಳ ನಾಶರಹಿತವಾಗಿಯೂ ಸೂಕ್ಷ್ಮವಾಗಿಯೂ ಯಿರುವ ಮಾತ್ರಗಳು ಯಾವಯಾವವು ಹೇಳಿಸಲ್ಪಡುತ್ತವೊ ಅವುಗಳೊಡನೆ ಯೀ ಯಲ್ಲಾ ಜಗತ್ತು ಪೂರ್ವ ಆರಭ್ಯ ವುಂಟಾಗುತ್ತದೆ.

ಯಂತು ಕರ್ಮಣಿಯಸ್ಮಿನ್ಸನ್ಯಯುಙ್ತ್ರಪ್ರಥಮಂ ಪ್ರಭುಃ। ಸತದೇವಸ್ವಯಂಭೇಜೆಸೃಜ್ಯಮಾನಃಪುನಃಪುನಃ॥೨೮॥

ಪ್ರಭುವು ಯಾವನಂನು ಮೊದಲು ಯಾವಯಾವ ಕೆಲಸದಲ್ಲಿ ನಿಬಂಧಿಸಿದನೋ ಅವನು ತಿರಿಗಿತಿರಿಗಿ ಹುಟ್ಟುವಾಗ ಅದಂನೇ ತಂನಷ್ಟಕ್ಕೆ ಆರಿಸಿ ತೆಗದುಕೊಳ್ಳುತ್ತಾನೆ.

ಹಿಂಸ್ರಾಹಿಂಸ್ರೇಮೃದುಕ್ರೂರೇಧರ್ಮಾಧರ್ಮಾವೃತಾನೃತೇ। ಯದ್ಯಸ್ಯಸೋದಧಾತ್ಸರ್ಗೇ ತತ್ತಸ್ಯ ಸ್ವಯಮಾವಿಶತ್॥೨೯॥

ಹಿಂಸೆ ಅಹಿಂಸೆ ಮೃದುಕ್ರೂರ ಧರ್ಮ ಅಧರ್ಮ ಸತ್ಯ ಅಸತ್ಯಯಿವುಗಳಲ್ಲಿ ಯಾವದಂನು ಅವನು ಸೃಷ್ಟಿಯಲ್ಲಿ ಯಾವನಲ್ಲಿ ಯಿಟ್ಟನೋ ಅದೇ ಅವನಲ್ಲಿ ತಿರಿಗಿತಿರಿಗಿ ಸೇರುತ್ತದೆ.

ಯಥರ್ತುಲಿಂಗಾನ್ಯೃತವಃ ಸ್ವಯಮೇವರ್ತುಪರ್ಯಯೇ। ಸ್ವಾನಿಸ್ವಾನ್ಯಭಿಪದ್ಯಂತೆತಥಾಕರ್ಮಾಣಿದೇಹಿನಃ ॥೩೦॥

ಋತುಗಳ ಕ್ರಮದಲ್ಲಿ ಋತುಗಳಿಗೆ ತಮ್ಮತಮ್ಮ ಗುಣಗಳು ಹ್ಯಾಗೆ ತಿರಿಗಿತಿರಿಗಿ ಬರುತ್ತವೋ ಹಾಗೆಯೇ ಶರೀರವುಳ್ಳವುಗಳಿಗೆ ಸ್ವಕರ್ಮಗಳು ತಿರಿಗಿ ತಿರಿಗಿ ಬರುತ್ತವೆ.

ಮೊದಲನೆ ಪುಸ್ತಕ ಯಿಪ್ಪತ್ತಾರನೆ ಪುಟದಲ್ಲಿ ಹೇಳಿದ

History of Confutse.— Continued.

ಕೊನ್ ಫೂಜೆಯನ ಚರಿತ್ರೆ.

ಅರಸುಗಳು ಕೊನ್ ಫೂಜೆಯವನ ಬೋಧನೆಯಂನು ತಿರಸ್ಕರಿಸಿದ ಮೇಲೆ ಅವನು ಸಮಸ್ತದೇಶವಂನು ಸಂಚರಿಸಿ ಜನರಿಗೆ ಯೆಲ್ಲೆಲ್ಲಿ ಬೋಧಿಸಿ ಅನೇಕರಂನು ಶಿಷ್ಯರಾಗ ಮಾಡಿದನು ಅವನ ಶಿಷ್ಯರು ಮೂರುಸಾವಿರಕ್ಕಿಂತ ಹೆಚ್ಚು ಯಿದ್ದರು ಅವರಲ್ಲಿ ಯೆಪ್ಪತ್ತೆರಡುಮಂದಿ ವಿಶೇಷಜ್ಞಾನವಂನು ಗ್ರಹಿಸಿಕೊಂಡು ಶ್ರೇಷ್ಠರಾಗಿದ್ದರು ಯಿವರಲ್ಲಿ ಹತ್ತುಮಂದಿ ಅವನ ಜ್ಞಾನಬೋಧನೆಗಳಂನೆಲ್ಲಾ ಪೂರ್ಣವಾಗಿ ತಿಳಿದುಕೊಂಡು ಯಿಂನು ಮುಖ್ಯಸ್ಥರಾಗಿದ್ದರು ಅವನು ತಂನ ಶಿಷ್ಯರಲ್ಲಿ ಆರುನೂರುಜನರಂನು ಚೀನಾರಾಜ್ಯದ ಬೇರೆಬೇರೆಸೀಮೆಗಳಿಗೆ ಕಳುಹಿಸಿ ಸಕಲ ಜನರಿಗೆ ಜ್ಞಾನಮಾರ್ಗವಂನುತೋರಿಸಬೇಕೆಂದು ಆಜ್ಞಾಪಿಸಿದನು. ಮತ್ತು ತಾನು ಅನೇಕಾವರ್ತಿ ಸಮುದ್ರವಂನುದಾಟಿ ಬೇರೆದೇಶಗಳಿಗೆಹೋಗಿ ಬೇರೆ ಜನಾಂಗಗಳಿಗೆಸಹಾ ಜ್ಞಾನಉಪದೇಶವಂನು ಮಾಡಬೇಕೆಂದು ಆಲೋಚನೆಯಲ್ಲಿ ಯಿದ್ದನು ಯೀ ಲೋಕದಲ್ಲಿ ಹುಟ್ಟಿದಜ್ಞಾನಿಗಳಲ್ಲಿ ಅವನ ಹಾಗೆ ಯಿದ್ದವರು ಬಹುಸ್ವಲ್ಪಮಂದಿ ಅವನು ಸತ್ಯ ಸನ್ಯಾಸಿಯಾಗಿ ಐಶ್ವರ್ಯವಂನೂ ಅಧಿಕಾರವಂನೂ ಮಾನವಂನೂ ತಿರಸ್ಕರಿಸಿ ಗರ್ವವಿಲ್ಲದೆ ಬಹು ಶಾಂತಿಯುಳ್ಳಮನುಷ್ಯನಾಗಿದ್ದನು ಜೀವದಅಂತ್ಯದಲ್ಲಿ ಬಹಳ ದುಃಖದಿಂದಿದ್ದು ಮೂರುವರ್ಷಪರಿಯಂತರ ಮೌನವಾಗಿದ್ದನೆಂದುಹೇಳುತ್ತಾರೆ ಸಾಯುವ ಮೊದಲು ತಂನ ಶಿಷ್ಯರಿಗೆ ಕರೆದು ಕಣ್ಣೀರಿಟ್ಟು ನಂಮ ರಾಜ್ಯದಲ್ಲಿ ನಡೆಯುವ ದುರ್ಗುಣಗಳಂನು ನೋಡಿ ಬಹಳ ದುಃಖಪಡುತ್ತೇನೆ ಜ್ಞಾನಪರ್ವತವು ಬಿತ್ತು ಜ್ಞಾನಿಗಳು ಕಾಣದೆಹೋದರು ಯೆಂದನು ಅಂದಿನಿಂದ ಕ್ಷೀಣನಾಗಲಾರಂಭಿಸಿದನು ಮರಣದಮುಂಚೆ ಯೇಳನೆದಿವಸದಲ್ಲಿ ಅವನುಹೇಳಿದ್ದು ಅರಸುಗಳು ನಂನಬೋಧನೆಗಳಂನುತಿರಸ್ಕರಿಸುತ್ತಾರೆ ನಾನು ಯೀಲೋಕದಲ್ಲಿ ಯಿರುವದರಲ್ಲಿ ಪ್ರಯೋಜನವೇನುಯಿಲ್ಲ ದೇಹವಂನು ಬಿಟ್ಟುಹೋದರೆ ವೊಳ್ಳೆದು. ಆಮೇಲೆ ಮಾನಹಿಡಿದು ನಿದ್ರೆಮಾಡುವವನಂತೆ ಮಲಗಿಕೊಂಡೇ ಯೇಳುದಿವಸದತರುವಾಯ ಯೆಪ್ಪತ್ತುಮೂರುವರ್ಷದವನಾಗಿ ಶಿಷ್ಯರ ಮಧ್ಯದಲ್ಲಿ ತೀರಿಹೋದನು ಆಸಮಯದಲ್ಲಿ ಆದೇಶವಂನು ಆಳಿಕೊಳ್ಳುವ ಅರಸನುಕೊನ್ ಫೂಜೆಯನು ಸತ್ತನೆಂಬ ವರ್ತಮಾನವಂನು ಕೇಳಲು ಅತ್ತು ದೈವವು ನಂನಮೇಲೆ ಕೋಪಮಾಡಿ ನಂನ ಕೊನ್ ಫೂಜೆಯನಂನು ಕರಕೊಂಡುಹೋಯಿತೆಂದು ಕೂಗಿದನು ಯಿದಲ್ಲದೆ ಸಮಸ್ತರಾಜ್ಯದಲ್ಲಿದ್ದಜನರು ಬಹಳ ಗೋಳಾಡಿ ಅವನಿಗೆ ಸಿದ್ಧನೆಂದು ಆರಾಧನೆಮಾಡಲಾರಂಭಿಸಿದರು ಅರಸುಗಳು ಅವನ ಹೆಸರಿಗೆ ಸಕಲಸೀಮೆಗಳಲ್ಲಿ ಸ್ಥಾನಗಳಂನು ಕಟ್ಟಿಸಿದರು ಆ ಸ್ಥಳಗಳಿಗೆ ವಿದ್ವಾಂಸರು ಯಿಂದಿನ ಪರಿಯಂತರ ನೇಮಿಸಿದ ಕಾಲಗಳಲ್ಲಿ ಅವನಿಗೆ ವಂದನೆ ಮಾಡುತ್ತಾರೆ ಅವನ ಹೆಸರಿಗೆ ಕಟ್ಟಿಸಿದಮನೆಗಳಮುಂಭಾಗಗಳಲ್ಲಿ ಬರೆದಮಾತುಗಳ್ಯಾವವೆಂದರೆ ದೊಡ್ಡ ಬೋಧಕನಿಗೆ ಯಿಲ್ಲವೆ ಮುಖ್ಯ ಗುರುವಿಗೆ ಯಿಲ್ಲವೆ ಸಿದ್ಧನಿಗೆ ಯಿಲ್ಲವೆ

ರಾಜರು ಮಹಾರಾಜರು ಯಿವರ ಬೋಧಕನಿಗೆ ತಿಮೊಥೂಪಟ್ಟಣದ ಹತ್ತಿರ ಸೂನದಿಯತೀರದಲ್ಲಿ ಕೊನ್ ಫೂಚೆಯನು ತಂನ ಶಿಷ್ಯರಂನು ಬಹಳವಾಗಿ ಕೂಡಿಸಿ ತಂನ ಸ್ಥಳದಲ್ಲಿ ಚೀನಾದೇಶಸ್ಥರು ಅವನ ಸಮಾಧಿಯಂನುಮಾಡಿ ಅದರ ಸುತ್ತಲು ದೊಡ್ಡ ಗೋಡೆಗಳಂನು ಪಟ್ಟಣದ ವೋಪಾದಿಯಾಗಿ ಕಟ್ಟಿಸಿದರು ಆ ಸಮಾಧಿಯು ಯೀಪರಿಯಂತರವು ಇದದೆ.

On the Trade of Hindostan.

ಹಿಂದುಸ್ಥಾನ್ ದೇಶದ ವರ್ತಕವಂನು ಕುರಿತದ್ದು.

ಹಿಂದುಸ್ಥಾನ್ ದೇಶದಲ್ಲಿ ವುತ್ಪತ್ತಿಯಾಗುವ ವಸ್ತುಗಳು ಯಿತರ ದೇಶಸ್ಥರಿಗೆ ಬಹಳಾ ವುಪಯೋಗವಾಗಿ ಯಿದ್ದದರಿಂದ ಅದು ಅದರ ವೈಭವಕ್ಕೆ ಮುಖ್ಯ ಕಾರಣವಾಗಿದೆ. ಯೀ ದೇಶಸ್ಥರಿಗೆ ಯಿತರ ದೇಶಗಳಲ್ಲಿ ವುತ್ಪತ್ತಿಯಾಗುವ ವಸ್ತುಗಳಂನು ಕುರಿತು ಅವಶ್ಯಕ ವಿಲ್ಲವು. ಯಿತರ ದೇಶಸ್ಥರಿಗೆ ಯೀದೇಶದೊಳಗೆ ವುತ್ಪತ್ತಿಯಾಗುವ ವಸ್ತುಗಳು ಅತ್ಯಾವಶ್ಯಕವಾಗಿ ಯಿದ್ದದರಿಂದ ಅವುಗಳಂನು ಕುರಿತು ಪ್ರತಿಸಂವತ್ಸರವು ವಿಸ್ತಾರವಾದ ಧನವಂನು ಯೀದೇಶಕ್ಕೆ ಬರುವಹಾಗೆ ಮಾಡುವರು. ಹಿಂದುಸ್ಥಾನ್ ದೇಶವು ಸ್ವದೇಶಸ್ಥರ ಧೊರೆತನದಲ್ಲಿ ಯಿದ್ದಾಗ ಕಳ್ಳರಿಂದಲೂ ಹಿಂಸಕರಿಂದಲೂ ಅಯಿಶ್ವರ್ಯವು ಕ್ಷೀಣಿಸುತ್ತಾಯಿತ್ತು. ಯಾವದೇಶದಲ್ಲಿ ಧನವಂನು ಕುರಿತು ಜಾಗ್ರತೆಯೂ ನ್ಯಾಯವಿಚಾರಣೆಯೂ ಯಿಲ್ಲದೇ ಯಿರುವದೋ ಅಂಥಾ ಸ್ಥಳಗಳಲ್ಲಿ ಯಿತರದೇಶಸ್ಥರು ಫಲಿತವಾದ ವಸ್ತುಸಂಗ್ರಹವಂನು ಕುರಿತು ತಂಮ ದ್ರವ್ಯವನ್ನು ವ್ಯಯಮಾಡರು. ಹಿಂದುಸ್ಥಾನ್ ದೇಶವು ಇಂಗ್ಲಿಷ್ ಯವರ ನ್ಯಾಯವಾದ ಪರಿಪಾಲನೆಯಲ್ಲಿ ಹೊಂದಿದಂದಿನಿಂದ ಬಹಳ ಅಯಿಶ್ವರ್ಯವುಳ್ಳದ್ದಾಗಿ ಯಿಂನು ಅಭಿವೃದ್ಧಿ ಆಗುತ್ತದೆ.

ಹಿಂದುಸ್ಥಾನ್ ದೇಶದಿಂದ ಯಿತರ ದೇಶಸ್ಥರಿಗೆ ಕಳುಹಿಸಲ್ಪಡುವ ವಸ್ತುಗಳು ಯಾವವೆಂದರೆ ಮೊದಲನೇದು. ನೀಲಿಮದ್ದು. ಯೂರೋಪ್ ದೇಶಸ್ಥರು 30 ಸಂವತ್ಸರಗಳೊಳಗೆ ನೀಲಿಮದ್ದಿನ ಅಡಿಗೆಯಂನು ಕುರಿತು ಸಂತೋಷಿಸಲ್ಪಟ್ಟು ಅನೇಕಸ್ಥಳಗಳಲ್ಲಿ ನೀಲಿಮದ್ದಿನ ವುಗ್ರಾಣಗಳಂನು ಸ್ಥಾಪಿಸಿದರು. ಬಟ್ಟೆಗಳಂನು ವರ್ಣ ಹಾಕುವದಕ್ಕೆ ಯಿದು ಬಹಳಾ ವುಪಯೋಗವಾಗಿರುವದು. ಯೀದೇಶದಲ್ಲಿ ಆಗುವ ನೀಲಿಮದ್ದು ಪ್ರತಿಸಂವತ್ಸರವು ಯೆಂಭತ್ತುಸಾವಿರ ಮಣಗಳೆಂದು ಲೆಖ್ಖಿಸಲ್ಪಟ್ಟು ವೂಹಿಸಲಾಗಿ ಮಣ ೧ ಕ್ಕೆ. ನೂರಾ ಅಯಿವತ್ತು ರೂಪಾಯಿಗಳ ಪ್ರಕಾರ ಯಿಪ್ಪತ್ತುಲಕ್ಷ ರೂಪಾಯಿಗಳ ಕಿಂಮತು ವುಂಟಾಗಿರುವದು. ಯೀನೀಲಿಮದ್ದು ಇಂಗ್ಲನ್ ದೇಶಕ್ಕೆ ಮುಖ್ಯವಾಗಿ ತೆಗದುಕೊಂಡು ಹೋಗಲ್ಪಟ್ಟು ಅಲ್ಲಿಂದ ಅನ್ಯದೇಶಗಳಲ್ಲಿ ವ್ಯಾಪಿಸುವದು.

ಯೆರಡನೇದು ಹತ್ತಿ. ಅದು ಪೂರ್ವದಲ್ಲಿ ಬಂಗಾಳಾ ದೇಶದೊಳಗೆ ವಿಸ್ತಾರವಾಗಿ ಫಲಿಸುತ್ತಾಯಿತ್ತು ಯೀಗಲು ದುಯಾಬ್ (Dooab) ಯೆಂಬ ಗಂಗಾ ಯಮುನಾ ನದಿಗಳ ಮಧ್ಯದೇಶವು ಅದರ ಅಭಿವೃದ್ಧಿಗೆ ಮುಖ್ಯಸ್ಥಾನವಾಗಿದೆ. ಅದು ಕಲ್ಕತ್ತಾಕ್ಕೆ ಬಂದಾಗ ಹಡಗದೊಳಗೆ ಸ್ವಲ್ಪ ಸ್ಥಳದಲ್ಲಿ ಅಣಗುವಹಾಗೆ ವಿಸ್ತಾರವಾದ ಹತ್ತಿಯು ವ್ರೊಂದು ಸೂತ್ರದಿಂದ ಬಹಳಾ ಕ್ಲಿಷ್ಟವಾಗುವಹಾಗೆ ಬಿಗಿಸಲ್ಪಟ್ಟು ಪ್ರತಿಸಂವತ್ಸರವು ಚೀನಾದೇಶಕ್ಕೂ ಮೂರು ನಾಲ್ಕು ಸಂವತ್ಸರಗಳಿಂದ ಇಂಗ್ಲಂಡ್ ದೇಶಕ್ಕೂ ವಿಸ್ತಾರವಾಗಿ ಕಳುಹಿಸಲ್ಪಟ್ಟು ಅದು ಬಟ್ಟೆಗಳಂನು ನೇಯುವದಕ್ಕೆ ವುಪಯೋಗವಾಗಿ ಯಿದ್ದ ಕಾರಣ ಅದರಿಂದ ಅನೇಕರಿಗೆ ಜೀವನೋಪಾಯ ವುಂಟಾಯಿತು.

ಮೂರನೇದು. ಅಫೀಮು. ಯಿದು ಮಗಡ್ ಕಾಶೀ (Mugud Benares) ಖಂಡಗಳಲ್ಲಿ ಪ್ರತಿಸಂವತ್ಸರವು ವಿಸ್ತಾರವಾಗಿ ಮಾಡುವರು. ಅದರ ಕ್ರಯವಿಕ್ರಯಗಳಿಗೂ ವೃದ್ಧಿಹೊಂದಿಸುವದಕ್ಕೂ ಕುಂಪಣೀಯವರಂನು ವಿನಾಯಿಸಿ ಅವರ ಅನುಜ್ಞೆಯಿಲ್ಲದೇ ಯಿತರರಿಗೆ ಅಶಕ್ಯವಾಗಿರುವದು. ಅದು ಕಸಕಸಿಯ ಗಿಡದಿಂದ ವುತ್ಪತ್ತಿಯಾಗುವದು. ಹ್ಯಾಗೆಂದರೆ ಸಾಯಂಕಾಲದಲ್ಲಿ ಆ ಗಿಡದ ಕಾಯಿಗಳಿಗೆ ಸಣ್ಣರಂಧ್ರಗಳಂನು ಮಾಡುವರು ಅವುಗಳಿಂದ ಹಾಲು ಬಂದು ವುದಯವಾಗುವಾಗ್ಯೆ ಘಟ್ಟಿಯಾಗುವದು ಅದಂನು ತೆಗದು ಮೇಣವಾಗುವಹಾಗೆ ಮುದ್ದೆಮಾಡುವರು. ಯೀವಿಧವಾಗಿಮಾಡಿದ ಅಫೀಮು ಕಲ್ಕತ್ತೆಕ್ಕೆ ತೆಗದುಕೊಂಡು ಹೋಗಲ್ಪಟ್ಟು ಅಲ್ಲಿರುವ ವರ್ತಕರಿಂದ ಕೊಂಡುಕೊಳ್ಳಲ್ಪಟ್ಟು ಚೀನಾದೇಶಕ್ಕೂ ಮಲಾಯಿತೀರಕ್ಕೂ ಕಳುಹಿಸಲ್ಪಡುವದು ಅವರು ಅದಂನು ಕೊಂಡುಕೊಂಡು ಕೆಲಬರು ತಿಂನುವರು. ಕೆಲಬರು ಹೊಗೆಯಂನು ಸೇದುವರು. ಯೂರೋಪ್ ಖಂಡದಲ್ಲಿರುವ ಟರ್ಕೀ (Turkey) ಯಲ್ಲಿಯೂ ಮಾಡಲ್ಪಟ್ಟು ಯಿದು ಮುಸಲ್ಮಾನರಿಂದ ಕೊಂಡುಕೊಳ್ಳಲ್ಪಡುವದು. ಮೂಡಲಕಡೆಯಲ್ಲಿರುವ ಸಮಸ್ತ ದೇಶಗಳಲ್ಲಿ ಹಿಂದುಸ್ಥಾನ್ ದೇಶದಿಂದ ಮಾತ್ರವು ಅಫೀಮು ಖರ್ಚುಮಾಡಲ್ಪಡುವದು.

ನಾಲ್ಕನೇದು. ಹಿಂದುಸ್ಥಾನ್ ದೇಶದಲ್ಲಿ ಪ್ರತಿಸಂವತ್ಸರವು ಶಲ್ಲೆಗಳು ಮೊದಲಾದ ಬಟ್ಟೆಗಳನ್ನು ವಿಸ್ತಾರವಾಗಿ ನೇಯುವರು. ಢಕ್ಕಾ ಪಟ್ಟಣಕ್ಕೆ ಸುತ್ತಲಿರುವ ಗ್ರಾಮಗಳೊಳಗೆ ಬಹಳ ನಯವಾದ ವಸ್ತ್ರಗಳಂನು ನೇಯುವರು ಗಂಗೆಯ ವುತ್ತರದ ಕಡೆಯಲ್ಲಿ ಕಾಸಾ ಯೆಂಬವುಗಳೂ ಬಂಗಾಳಕ್ಕೆ ಯೀಶಾನ್ಯ ದಿಗ್ಭಾಗದಲ್ಲಿರುವ ಲಕ್ಕೀಪೂರ್ (Luckipore) ಯೆಂಬ ಪಟ್ಟಣದ ಬಳಿಯಲ್ಲಿ ಬಾಫ್ಟಾ ಯೆಂಬವುಗಳೂ ಓಢ್ರ ದೇಶದಲ್ಲಿರುವ ಮಿದ್ನಪೂರ್ (Midnapore) ಯೆಂಬ ಪಟ್ಟಣದಲ್ಲಿಯೂ ಅದಕ್ಕೆ ಸಮೀಪವಾಗಿರುವ ಮಹಾರಾಷ್ಟ್ರ ದೇಶದಲ್ಲಿಯೂ ಶಾಲುಗಳೆಂಬವುಗಳೂ ಬೀರ್ಭೂಂ (Beerbhoom) ನಲ್ಲಿ ಗೋರಾ ಯೆಂಬವುಗಳೂ ಯೀ ವಿಧವಾದ ಬಟ್ಟೆಗಳಂನು ನೇಯುವರು ಅಮೆರಿಕಾದಲ್ಲಿ ಅನೇಕರು ವ್ಯವಸಾಯದ ಕೆಲಸ ಮಾಡುವದರಿಂದ ಕೆಲವು ಮಂದಿಮಾತ್ರವು ಯಿತರ ಪ್ರಯೋಜನಗಳಂನು ಮಾಡುವರು. ಅದರ ನಿಮಿತ್ತವು ಅಲ್ಲಿಯ ವರ್ತಕರು ಪ್ರತಿಸಂವತ್ಸರವು ಕಲ್ಕತ್ತಾಕ್ಕೆ ಬಂದು ಅಲ್ಲಿ ವಿಸ್ತಾರವಾದ ಬಟ್ಟೆಗಳಂನು ಕೊಂಡುಕೊಂಡು ಅವುಗಳ ಕ್ರಯದ ನಿಮಿತ್ತವು ಡಾಲರ್ ಯೆಂಬವುಗಳಂನು ಕೊಡುವರು. ಯೂರೋಪ್ ಅಮೆರಿಕಾ ದೇಶಸ್ಥರೂ ವ್ರೊಳಗಡೆ ವಿಸ್ತಾರವಾದ ಬಟ್ಟೆಗಳಂನು ತಂಮತಂಮ ಸ್ವದೇಶಗಳಲ್ಲಿ ನೇಯುವದಂನು ಕುರಿತು ಪ್ರೋತ್ಸಾಹ ಮಾಡಲ್ಪಟ್ಟರು.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡ ಸಮಾಚಾರವು.

೧೮೪೪.

೧ ನೆ ಪುಸ್ತಕ. ೧೩ ನೆ ಅಂಕೆ]　　ಬಳ್ಳಾರಿ ೧ ನೆ ಶಪ್ಟಂಬರ್　　[ಟಪಾಲ ದಸ್ತೂರಿಕೂಡಿ ಕ್ರಯ ೨ದುಡ್ಡು.

The Governor General.

ಹೊಸ ಗವರ್ನರ್ ಜನರಲ್.

ಸರ್ ಹೆನ್ರಿ ಹಾರ್ಡಿಂಜ್ ಜೂಲೈ ತಾರೀಖು ೨೩ ನೆಯಲ್ಲಿ ಹಿಂದುಸ್ಥಾನ್ ಮೆಂಬ ಆವೀಹಡಗದಲ್ಲಿ ಕಲ್ಕತ್ತಾಪಟ್ಣಕ್ಕೆ ಬಂದರು. ಯೀಹಡಗವು ಅಲ್ಲಿ ಬಂದು ಮುಟ್ಟಿದಕೂಡಲೆ ಗವರ್ನಮೆಂಟಿನ ಸೆಕ್ರೆಟೆರಿಯವರು ಮಿಲಿಟೆರಿಯ ಶ್ರೇಷ್ಠ ಉದ್ಯೋಗಸ್ಥರಸಂಗಡ ಯೀ ಗವರ್ನರವರಂನು ಎದುರುಗೊಂಡು ಬಹುಮಾನದೊಡನೆ ಸಲ್ಲಾಮುಮಾಡಿದರು. ಆಮೇಲೆ ಗವರ್ನರವರು ಯಿಳಿದು ಧಡಕ್ಕೆ ಬಂದು ಗವರ್ನಮೆಂಟಿನ ಮನೆಗೆಹೋಗಿ ಪ್ರಮಾಣಮಾಡಿ ಕೌನ್ಸಿಲವರ ಸಭೆಯಲ್ಲಿ ತಂಮ ಸ್ಥಾನವಂನು ತೆಗದುಕೊಂಡರು.

Parsee Murderers.

ಪಾರ್ಶೀಖೂನಿಯವರು.

ಕೆಲವು ತಿಂಗಳುಗಳ ಹಿಂದೆ ಮುಂಬೈಯಲ್ಲಿ ಪಾರ್ಶೀಜನರು ಗುಂಪುಕೂಡಿಕೊಂಡು ವರ್ತಮಾನಕಾಗದವಂನು ಬರೆಯುವವನಾದ ಮನ್ಸರ್ಜೀಹೊಮಸ್ಜಿ ಮೆಂಬ ಪ್ರಬ್ಬನಂನು ಬೀದಿಯಲ್ಲಿಹೊಡೆದು ಕತ್ತಿಗಳಿಂದತಿವಿದು ಕೊಂದುಹಾಕಿದರೆಂದು ಹೇಳಿದೆವು ಆಖೂನಿಮಾಡಿದವರಂನು ಸರಕಾರದವರುಹಿಡಿದು ಪಂಚಾಯತೆಗಂನುಕರಸಿ ಬಹು ಜಾಗ್ರತೆಯಿಂದ ವಿಚಾರಣೆಮಾಡಿ ಜೂಲೈ ತಾರೀಖು ೨೬ ನೆಯಲ್ಲಿ ನ್ಯಾಯತೀರಿಸಿದರು. ಹತ್ತುಮಂದಿ ಅಪರಾಧಸ್ಥರಾದರು. ಯಿವರಲ್ಲಿ ನಾಲ್ಕು ಜನರಿಗೆ ಸಾಯುವ ಶಿಕ್ಷೆಯಂನು ನೇಮಿಸಿದರು. ಆರುಜನರಿಗೆ ದ್ವೀಪಾಂತರ ಶಿಕ್ಷೆಯಂನು ನಿಶ್ಚೈಸಿದರು

Madras.

ಮದ್ರಾಸ್.

೧೮೪೨ ನೆವರ್ಷದ ಜೂಲೈ ೧೦ ನೆಯಲ್ಲಿ ಮದ್ರಾಸಿನಲ್ಲಿರುವ ಸ್ಕಾಚ್ ಮಿಶನೆರಿಯವನಾದ ಜಾನ್ ಅಂದರ್ಸನ್ ಧೊರೆಯು ರಾಮಾನುಜಲುನಾಯಿಡು ಮೆಂಬ ಪ್ರಬ್ಬ ಯವ್ವನಸ್ಥನಿಗೆ ಕ್ರೈಸ್ತಸ್ನಾನಕೊಟ್ಟರು. ಮೆರ್ದದಿವಸದ ಮೇಲೆ ಅವನ ತಾಯಿ ಮಿಶನ್ ಮನೆಗೆಬಂದು ಬಹಳವಾಗಿ ಅತ್ತು ಮಗನಿಗೆ ಯಿಂನು ಒಂದುಸಾರಿ ಮನೆಗೆಬರಬೇಕೆಂದು ಬೇಡಿಕೊಂಡಳು ಮಗನು ತಾಯಿಯಮೇಲೆ ಕರುಣಪಟ್ಟು ಅವಳಮಾತಿಗೆ ಒಪ್ಪಿಕೊಂಡು ಅವಳಸಂಗಡ ಹೋದನು. ಅಂದಿನಿಂದ ಲವನು ಮಿಶನ್ ಮನೆಗೆ ತಿರಿಗಿಬಾರದೆ ತಂನ ಸಂಬಂಧಿಕರ ಉಪದ್ರವಂನುನೋಡಿ ತಾನು ಕ್ರೈಸ್ತನಾಗಲಿಲ್ಲವೆಂದುಹೇಳಿ ತಿರಿಗಿ ತಂನಜಾತಿಯಲ್ಲಿ ಸೇರಿದನು. ಆಮೇಲೆ ಅವನು ದೇವಸ್ಥಾನಕ್ಕೆಸಹ ಹೋಗಿ ಅದರಲ್ಲಿರುವ ವಿಗ್ರಹದ ಮುಂದೆಬಿದ್ದು ಪೂಜೆ ಮಾಡಿದನು. ಯೀಪ್ರಕಾರ ಅವನು ಮೆರಡು ವರ್ಷ ಪರಿಯಂತರ ತಂನಮನೆಯಲ್ಲಿದ್ದನು. ಆದರೆ ಯಾವಾಗಲು ಸಮಾಧಾನವಿಲ್ಲದೆ ಮನಸ್ಸಿನಲ್ಲಿ ವೆಥೆಪಡುತ್ತಿದ್ದನು. ಕಡೇಲಿ ಯೀವೆಥೆಯಂನು ತಾಳಲಾರದೆ ಬಹಳವಾಗಿ ಪಶ್ಚಾತ್ತಾಪಪಟ್ಟು ಹೋದ ಜೂಲೈ ತಿಂಗಳಿನ ೧೨ ನೆಯಲ್ಲಿ ತಂನ ಹೆಂಡತಿಯ ಸಂಗಡ ಮಿಶನ್ ಮನೆಗೆ ತಿರಿಗಿ ಬಂದು ತಂನ ಅಪರಾಧವಂನು ಕ್ರೈಸ್ತಸಭೆಯಮುಂದೆ ಅರಿಕೆಮಾಡಿ ಮಿಶನೆರಿಯವರ ಸಂಗಡ ಊಟಮಾಡಿ ತಿರಿಗಿ ಸಭೆಯಲ್ಲಿ ಸೇರಿದನು.

Salt Duties.

ಫೋರ್ಟ್ ಸೆಂಟ್ ಜಾರ್ಜ್ ೧೬ ನೆ ಆಗಸ್ತ ೧೮೪೪.

ಘನವುಳ್ಳ ಕೋರ್ಟ ಆಫ್ ದಿರೆಕ್ತರ್ಸ್ ಕೊಟ್ಟ ಅಪ್ಪಣೆಪ್ರಕಾರ ಮದ್ರಾಸ್ ಕೋಸ್ತಿನಲ್ಲಿ ಮಾಡಿದ ಉಪ್ಪು ಯಿಂನುಮುಂದೆ ಮಣಕ್ಕೆ ಒಂದು ರೂಪಾಯಿ ಪ್ರಕಾರ ಮಾರಲ್ಪಡಬೇಕೆಂದು ಮೆಲ್ಲರಿಗೆ ಪ್ರಕಟವಾಗತಕ್ಕದ್ದು.

ಬಹುಮಾನಪಟ್ಟ ಗವರ್ನರ್ ಇನ್ ಕೌನ್ಸಿಲವರ ಹುಕುಂ ಪ್ರಕಾರ

ಜಿ. ದಿ. ಡ್ರೂರಿ. ಚೇಫ್ ಸೆಕ್ರೆಟೆರಿ.

ಸರ್ಕಾರದವರು ಯೀಕೋಸ್ತಿನಲ್ಲಿ ನಡವಡಿಕೆಯಾಗಿದ್ದ ಒಳಸುಂಕಗಳಂನು ಮನ್ನಾಮಾಡುತಲೆ ಉಪ್ಪಿನಿಂದ ಶರ್ತಿಮಾಡಬೇಕೆಂದು ಗಾರಸ ೧ ಕ್ಕೆ ೧೮೦ ರೂಪಾಯಿ ಕ್ರಯವಂನು ನಿಶ್ಚೈಸಿದರು. ಮೇಲೆಬರದ ಆಜ್ಞೆಪ್ರಕಾರ ಯಿಂನುಮುಂದೆ ಗಾರಸ ೧ ಕ್ಕೆ ೧೨೦ ರೂಪಾಯಿ ಕ್ರಯ ನೇಮಿಸಲ್ಪಟ್ಟಿರುವದರಿಂದ ಬಡವರಿಗೆ ಬಹಳ ಉಪಕಾರ ಉಂಟಾಗಿದೆ.

Steamboats.

ಆವೀಹಡಗಗಳು.

ಹೋದ ತಿಂಗಳಿನಲ್ಲಿ ವಿಲಾಯಿತಿಯಿಂದಬಂದ ಆವೀಹಡಗಗಳು ಇಂಗ್ಲಾಂಡ್ ದೇಶವಂನುಬಿಟ್ಟ ಇಪ್ಪತ್ತೆಂಟುದಿವಸಗಳೊಳಗೆ ಪ್ರಯಾಣಸ್ಥರಂನೂ ಕಾಗದಗಳಂನೂ ಮುಂಬೈಯಲ್ಲಿ ಯಿಳಿಸಿದರು. ಬರುವ ವರ್ಷದಲ್ಲಿ ಅವೀ ಟಪ್ಪಾಲು ಹದಿನೈದು ದಿವಸಕ್ಕೆ ಒಂದುಸಾರಿ ವಿಲಾಯಿತಿಯಿಂದ ಯೀದೇಶಕ್ಕೆ ಬರುವಹಾಗೆ ಕುಂಪಣಿಯವರು ಹೆಚ್ಚು ಆವೀಹಡಗಗಳಂನ ಸಿದ್ಧಮಾಡುತ್ತಾರೆ.

Scinde.

ಸಿಂಧುದೇಶ.

ಬಂಗಾಳದೇಶದಿಂದ ಸಿಂಧುದೇಶಕ್ಕೆ ಬಂದ ಪಟಾಲಾಮುಗಳಲ್ಲಿ ಒಂದು ಪಟಾಲಾಮು ಭತ್ತೆ ಸಾಲದೆಂದು ಸರ್ಕಾರದಿಂದ ಹಣ ತೆಗದುಕೊಳ್ಳದೆ ಗುಣುಗುಟ್ಟಿದದರಿಂದ ಸರ್ಕಾರದವರು ಅವರ ಧ್ವಜೆಗಳನ್ನು ತೆಗದು ಆಪಟಾಲಾಮಿಗೆ ಬರ್ತರ್ಫ ಮಾಡಿ ಜನರೆಲ್ಲರನ್ನು ಬಂಗಾಳದೇಶಕ್ಕೆ ಕಳುಹಿಸಿ ಅಪರಾಧಸ್ಥರಿಗೆ ಶಿಕ್ಷೆ ಕೊಡಬೇಕೆಂದು ನೇಮಿಸಿದ್ದಾರೆ.

New way of recovering Debts.

ಕೊಟ್ಟಸಾಲವನ್ನು ತೆಗದುಕೊಳ್ಳುವ ಹೊಸ ಉಪಾಯ.

ಅಮೇರಿಕದೇಶದಲ್ಲಿ ಸಿಂಹ ಹುಲಿ ಮೊದಲಾದ ಕಾಡುಮೃಗಗಳನ್ನು ಸಾಧಿಸಿ ಅವುಗಳನ್ನು ನೋಡಬೇಕೆಂದಿರುವವರಿಂದ ಹಣ ತೆಗದುಕೊಂಡು ಅವರಿಗೆ ತೋರಿಸುವ ಒಬ್ಬ ಮನುಷ್ಯನಿಗೆ ಒಬ್ಬ ಧೊರೆಯು ತಾನು ತೆಗದುಕೊಂಡ ಸಾಲವನ್ನು ಸಲ್ಲಿಸಲಿಕ್ಕೆ ಮನಸ್ಸಿಲ್ಲದವನಾಗಿದ್ದನು. ಆದದರಿಂದ ಸಾಲವನ್ನು ಕೊಟ್ಟ ಆಮೃಗಗಳ ಮನುಷ್ಯನು ಬಹಳಸಾರಿ ಸಾಲವನ್ನು ಕೇಳಿ ಹೀಗೆಯೆ ಕೇಳುವದು ವ್ಯರ್ಥವೆಂದು ನೋಡಿ ಒಂದುದಿವಸ ಸಾಕಿದ ಹುಲಿಗಳಲ್ಲಿ ಒಂದನ್ನು ಕರೆದು ಆಧೊರೆಯ ಮನೆಗೆ ಹೋಗಿ ಬಾಗಲು ತೆರೆದು ಆಹುಲಿಯ ತಲೆಯನ್ನು ಒಳಗೆ ಹಾಕಿ ಧೊರೆಯೇ ಯೀಗ ನನ್ನ ಹಣವನ್ನು ಕೊಡಿರಿ ಯಿಲ್ಲದಿದ್ದರೆ ನನ್ನ ಹುಲಿಯನ್ನು ಒಳಗೆ ಸೇರಿಸಿ ಹೋಗುತ್ತೇನೆಂದು ಹೇಳಿದನು. ಆಧೊರೆ ಹುಲಿಯ ತಲೆಯನ್ನು ನೋಡಿ ಬಹಳ ಹೆದರಿಕೊಂಡು ಆಕ್ಷಣದಲ್ಲಿ ಹಣವನ್ನು ಕೊಟ್ಟುಬಿಟ್ಟನು.

Geography.—— Continued.

ಮುಪ್ಪತ್ತೈದನೆಪುಟದಲ್ಲಿ ತೀರದೆಯಿದ್ದ ಭೂಗೋಳಸಾರವು.

ಹತ್ತನೆಸಂಧಿ.

ಭೂಮಿಯ ಖಂಡಗಳೊಳಗಿರುವ ನೀರು.

ಮಳೆ ಮಂಜು ಹಿಮ ಯಿವುಗಳ ನೀರಿನಿಂದಲೂ ಬುಗ್ಗೆನೀರಿನಿಂದಲೂ ಹಳ್ಳಗಳುಂಟಾಗುತ್ತವೆ ಕೆಲವುಹಳ್ಳಗಳು ಕೂಡಿಬಂದು ನದಿಯಾಗುತ್ತವೆ ಒಂದೊಂದುವೇಳೆ ಬಹಳನದಿಗಳು ಕೂಡಿಕೊಂಡರೆ ಮಹಾನದಿ ಉಂಟಾಗುತ್ತದೆ ನದಿಗಳು ಸಮುದ್ರಕ್ಕೆ ಸೇರುವದರಿಂದ ಭೂಮಿಯಮೇಲಿರುವ ನೀರು ಸಮುದ್ರಕ್ಕೆ ಕೂಡುತ್ತದೆ ಅನೇಕಸ್ಥಳಗಳಲ್ಲಿ ಬಹುತಗ್ಗಾದ ದೇಶದಲ್ಲಿರುವ ಬುಗ್ಗೆಗಳ ನೀರು ಕೂಡಿಕೊಂಡು ಕೆರೆಯೂ ಸರೋವರವೂ ಆಗುತ್ತದೆ ಬುಗ್ಗೆ ಕೆರೆ ನದಿ ಯಿವುಗಳನೀರಿನಿಂದ ವ್ಯವಸಾಯಕ್ಕೆ ಬಹಳಸಹಾಯ ಉಂಟಾಗುತ್ತದೆ ದೊಡ್ಡನದಿಗಳಲ್ಲಿ ದೋಣಿ ನಾವೆ ಹಡಗ ಮುಂತಾದವುಗಳ ಸಂಚಾರದಿಂದ ವ್ಯಾಪಾರಕ್ಕೆ ಬಹಳ ಉಪಕೃತಿಯಾಗುತ್ತದೆ ವ್ಯಾಪಾರಕ್ಕೋಸ್ಕರ ಮನುಷ್ಯರು ಅನೇಕಸ್ಥಳಗಳಲ್ಲಿ ನದಿಪ್ರವಾಹವನ್ನು ಮಾರ್ಪಡಿಸಿ ಒಂದುನದಿಯಿಂದ ಮತ್ತೊಂದುನದಿಗೂ ಒಂದುಸಮುದ್ರದಿಂದ ಮತ್ತೊಂದು ಸಮುದ್ರಕ್ಕೂ ಮಾರ್ಗವನ್ನಗಿದಿದ್ದಾರೆ.

ಹನ್ನೊಂದನೆಸಂಧಿ.

ಆಕಾಶವು.

ಆಕಾಶವೆಂದರೆ ಭೂಗೋಳವನ್ನು ಸುತ್ತಿಕೊಂಡಿರುವ ಗಾಳಿಮಂಡಲವು ಗಾಳಿಯು ನೀರಿನಪ್ರೋಪಾದಿಯಲ್ಲಿ ದ್ರವಿಸುವಂತಾದ್ದಾಗಿದೆ ಅದಕ್ಕೆ ಭಾರತ್ವವುಂಟು ಯಾಕೆಂದರೆ ಟೊಳ್ಳಾದಗುಂಡಿನಿಂದ ಗಾಳಿಯನ್ನು ತೆಗದರೆ ಆಗುಂಡಿಗೆ ಮುಂಚಿನಕಿಂತ ಭಾರ ಕಡಿಮೆಯಾಗುತ್ತದೆ ಗಾಳಿಯನ್ನು ಯಿರಿಕಿಸಲೂ ವಿಸ್ತರಿಸಲೂ ಬಹುದು ಹೀಗಿರುವದರಿಂದ ವಿಲಾಯಿತಿಯಲ್ಲಿ ಗಾಳಿಯಿಂದ ಗುಂಡುಹಾರುವ ತೋವಿಯನ್ನು ಮಾಡಿದ್ದಾರೆ ಅದುಹ್ಯಾಗಂದರೆ ತೋವಿಕುಂಡಿಯ ಬುಡವೇ ಬುರ್ಡೆಮಾಡಿ ಅದರಲ್ಲಿ ಪಿಚಕಾರಿಯಿಂದ ತ್ರಾಣವಾಗಿ ಗಾಳಿಯನ್ನು ತುಂಬಿಸಿ ಕುಂಡಿಯನ್ನು ಮುಚ್ಚಿ ನಳಿಗೆಯನ್ನು ಹಚ್ಚುತ್ತಾರೆ ಆಮೇಲೆ ಯಂತ್ರದಚಾಪುಬೆರಳಿನಿಂದ ಮುಟ್ಟುತ್ತಲೆ ಗಾಳಿ ಸ್ವಲ್ಪ ವಿಸ್ತರಿಸಿ ನಳಿಗೆ ಒಳಗಿನಗುಂಡು ತ್ರಾಣದಿಂದಹಾರಿಸುತ್ತದೆ ಹೀಗೆ ಒಂದಾವರ್ತಿ ಗಾಳಿಸೇರಿಸಿದರೆ ಯೆಂಟುಹತ್ತುಸಾರಿ ಗುಂಡು ಹಾರಿಸಬಹುದು ಆಗುಂಡುಗಳಿಗೆ ಮದ್ದು ಬೆಂಕಿಯಿಂದ ಹಾರಿಸಿದ ಗುಂಡಿನಕಿಂತ ಹೆಚ್ಚುವೇಗವುಂಟು ಬಿಸಿಲಿನಿಂದ ಗಾಳಿಯು ಸ್ವಲ್ಪ ವಿಸ್ತರಿಸಲ್ಪಡುತ್ತದೆ ಛಳಿಯಿಂದ ಗಾಳಿ ಯಿರಿಕುತ್ತದೆ ಭೂಮಿಯನ್ನು ಸುತ್ತಿಕೊಳ್ಳುವ ಗಾಳಿಮಂಡಲವು ಯೆಷ್ಟುಯೆತ್ತರವಿದ್ದೀತೊ ಯೆಂದು ನಿಶ್ಚೈಸಲಿಲ್ಲ ಕೆಲವರು ನೂರುಹರದಾರಿ ಕೆಲವರು ೩೦ ಹರದಾರಿ ಯೆಂದನ್ನುತ್ತಾರೆ ಆದರು ಹಿಮಾಲಯ ಮುಂತಾದ ದೊಡ್ಡ ಪರ್ವತಗಳಮೇಲೆ ಯೇರಿದರೆ ಮನುಷ್ಯರು ಶ್ವಾಸ ತೆಗದುಕೊಳ್ಳುವದಕ್ಕೆ ಗಾಳಿಸಾಲದೆ ಯಿರುತ್ತದೆ ಅಲ್ಲಿಯೇರಿದ ಮನುಷ್ಯರ ಮೂಗು ಕಿವಿ ಕಣ್ಣುಗಳಿಂದ ರಕ್ತವು ಸೋರಿ ಬಹಳ ಅಸ್ವಸ್ಥರಾಗುತ್ತಾರೆ ಹೀಗಿರುವದರಿಂದ ಭೂಮಿಯಿಂದ ಸ್ವಲ್ಪಯೆತ್ತರ ಹೋಗಬಹುದಾದರೆ ಶ್ವಾಸಕ್ಕೆ ಗಾಳಿ ಪೂರ್ಣವಾಗಿಸಾಲದೆ ಸೂಕ್ಷ್ಮ ಆಕಾಶಮಾತ್ರ ಯಿದ್ದೀತೆಂದು ನೆನಸಬಹುದು.

ಹನ್ನೆರಡನೇಸಂಧಿ.

ಗಾಳಿಯ ಚಲನೆಗಳು.

ಗಾಳಿಯು ನೀರಿನಪ್ರಕಾರ ದ್ರವಿಸುವಂಥಾದ್ದಾದರಿಂದ ಅದು ಯೆಂದಿಗೂ ತನ್ನ ಸ್ಥಳವನ್ನು ಸಮನಾಗಿ ತುಂಬಿಸಲಿಕ್ಕೆ ಪ್ರಯತ್ನ ಮಾಡುತ್ತದೆ ಅದು ಹ್ಯಾಗಂದರೆ ಸಮುದ್ರದಿಂದ ಒಂದುಕೊಡನೀರು ತೆಗದರೆ ಕ್ಷಣದಲ್ಲಿ ಆಸ್ಥಳಕ್ಕೆ ಸಮುದ್ರದ ಬೇರೆನೀರುಬಂದು ಆಗುಣಿ ಮುಚ್ಚುತ್ತದೆ ಹೀಗೆಯೇ ಒಂದು ಸ್ಥಳದಲ್ಲಿ ಗಾಳಿ ಕಡಿಮೆಯಾದರೆ ಅಥವಾ ಸೂಕ್ಷ್ಮವಾದರೆ ಸಮೀಪದಲ್ಲಿರುವ ಬೇರೆಗಾಳಿ ಆಸ್ಥಳವನ್ನು ತುಂಬಿಸುತ್ತದೆ ಸೂಕ್ಷ್ಮವಾದಗಾಳಿ ಯಿರುವ ಸ್ಥಳವನ್ನು ತುಂಬಿಸಲಿಕ್ಕೆ ಹರಿಯುವ ಗಾಳಿಯಿಂದ ವಾಯುವುಂಟಾಗುತ್ತದೆ ವಾಯುವು ಒಂದೊಂದುವೇಳೆ ಶಾಂತವಾಗಿಯೂ ಮೆಲ್ಲವಾಗಿಯೂ ಒಂದೊಂದುವೇಳೆ ತೀವ್ರವಾಗಿಯೂ ಕಠಿಣವಾಗಿಯೂ ಯಿರುತ್ತದೆ.

ಶಾಂತಗಾಳಿಯು ೧ ತಾಸಿಗೆ ಹೆಚ್ಚುಕಡಿಮೆ ೨ ಹರದಾರಿ ದ್ರವಿಸುತ್ತದೆ.

ಸುಮಾರಿನ	೧೨
ಬೀಸುವ	೩೦
ಅಧಿಕವಾಗಿಬೀಸುವ	೭೦
ಬಿರುಗಾಳಿ	೧೨೦
ಕಠೋರಬಿರುಗಾಳಿ	೨೦೦

ಅಯನಚಕ್ರಗಳೊಳಗಿರುವ ದೇಶಗಳ ಶಖೆಗೋಸ್ಕರ ಯೀದೇಶಗಳಲ್ಲಿರುವಗಾಳಿ ವಿಸ್ತರಿಸಲ್ಪಟ್ಟು ಅತಿಸೂಕ್ಷ್ಮವಾಗುವದರಿಂದ ತಂಪಾಗಿಯೂ ಯಿರುಕಾಗಿಯೂ ಯಿರುವ ಉತ್ತರದೇಶಗಳ ಗಾಳಿಯು ಭೂಮಧ್ಯದ ಸಮೀಪಕ್ಕೆ ಸೇರಲಿಕ್ಕೆ ಯತ್ನೈಸಲಾಗಿ ಅತ್ಯುತ್ತರವೂ ಅತಿದಕ್ಷಿಣವೂ ಯಿರು

ಪದೇಶಗಳಿಂದ ಭೂಮಧ್ಯದಕಡೆಗೆ ಬೀಸುವಂಥಾದ್ದು ವೊಂದು ಪ್ರಮುಖ್ಯವಾದ ವಾಯುವುಂಟಾಗುತ್ತದೆ. ಯೀಘಾಳಿಯು ಮಹಾಸಮುದ್ರದಲ್ಲಿ ಯಿಶಾನ್ಯದಿಂದ ದಕ್ಷಿಣಕ್ಕೂ ಆಗ್ನೇಯಯಿಂದ ವುತ್ತರಕ್ಕೂ ಯೆಂದಿಗೂ ಬೀಸುತ್ತದೆ.

ಅಯನ ಚಕ್ರಗಳೊಳಗಿರುವ ದೇಶಗಳಲ್ಲಿ ವರ್ಷಕ್ಕೆ ಯೆರಡು ಪ್ರಮುಖ್ಯವಾದ ಘಾಳಿಗಳು ಬೀಸುತ್ತವೆ ಹೀಗೆ ಯೀಹಿಂದುಸ್ಥಾನ ದೇಶದ ಪಶ್ಚಿಮತೀರದಲ್ಲಿ ಜ್ಯೇಷ್ಠ ಆಷಾಢ ಶ್ರಾವಣ ಭಾದ್ರಪದ ಯೀ ೪ ತಿಂಗಳುಗಳಲ್ಲಿ ದಕ್ಷಿಣ ನೈರುತ್ಯ ಪಶ್ಚಿಮ ವಾಯುವ್ಯ ದಿಕ್ಕುಗಳಿಂದಮಾತ್ರ ಘಾಳಿ ಬರುತ್ತದೆ. ವುಳಿದ ತಿಂಗಳುಗಳಲ್ಲಿ ವುತ್ತರ ಯೀಶಾನ್ಯ ಪೂರ್ವ ಆಗ್ನೇಯ ಯೀದಿಕ್ಕುಗಳಿಂದ ಘಾಳಿಬರುತ್ತದೆ. ಆದರೆ ಬಿಸಿಲು ಕಾಲದಲ್ಲಿ ಭೂಮಿಯ ಶಖೆಯು ಹಗಲಿನಲ್ಲಿ ಬಹಳವಾಗಿರುವದರಿಂದ ಆಶೆಖೆಯಮೂಲವಾಗಿ ಘಾಳಿ ವಿಸ್ತರಿಸಲ್ಪಟ್ಟಸಮಯದಲ್ಲಿ ಸುಮಾರು ೧೦ ಹನ್ನೊಂದುಘಂಟೆಗೆ ತಂಪಾದ ಸಮುದ್ರಘಾಳಿಯು ಬರುತ್ತದೆ. ಯೀಪ್ರಕಾರ ಬೇರೆ ಬೇರೆ ದೇಶಗಳಲ್ಲಿ ಬೀಸುವ ಘಾಳಿಗಳಿಗೆ ಆಯಾದೇಶದಸ್ಥಿತಿಯಿಂದಲೂ ಸಮುದ್ರಗಳ ಸಮೀಪದಿಂದಲೂ ಪರ್ವತಗಳ ಗುಣಗಳಿಂದಲೂ ಕಾರಣಗಳನ್ನುಸೂಚಿಸಬಹುದು. ಹೀಗೆ ದೇಶಸ್ವಭಾವ ಮೊದಲಾದವುಗಳನ್ನು ಚನ್ನಾಗಿ ಆಲೋಚಿಸುವವರು ಆಯಾ ಕಾಲದಲ್ಲಿ ಅಂಥಾಘಾಳಿ ಬಂದೀತೆಂದು ವೊಂದೊಂದುವೇಳೆ ಮುಂತಿಳಿಸಬಹುದು ಯೀಕೆಲಸಕ್ಕೆ ಜ್ಯೋತಿಷವೂ ಮಂತ್ರವೂ ಅವಶ್ಯ ಯಿರುವದಿಲ್ಲ.

ದೊಡ್ಡ ವುಸುಬಿನ ಅರಣ್ಯಗಳ ಸಮೀಪದಲ್ಲಿರುವ ಅರಬಸ್ಥಾನ ಮೊದಲಾದ ದೇಶಗಳಲ್ಲಿ ವರ್ಷಕ್ಕೆ ಕೆಲವುಸಾರಿ ಅರಣ್ಯದ ಶಖೆಯಿಂದ ಕೆಟ್ಟುಹೋದ ವಿಷಘಾಳಿಯು ಬೀಸುತ್ತದೆ ಅಂಥಾಘಾಳಿ ಬೀಸುವಾಗ ಶ್ವಾಸಬಿಡುವದು ಅತಿಕಷ್ಟವಾಗಿರುವದರಿಂದ ಅನೇಕಮನುಷ್ಯರೂ ಮೃಗಗಳೂ ಅಣಗಿ ಸಾಯುತ್ತಾರೆ ಹುಲ್ಲು ಮೊದಲಾದ ಗಿಡಗಳು ಸಹ ಹಳದಿವರ್ಣವಾಗಿ ಬಾಡಿ ಹೋಗುತ್ತಾವೆ. ಬಸ್ಸೂರಾಯೆಂಬ ಅರ್ಬಸ್ಥಾನದೇಶದ ಪಟ್ಣದಲ್ಲಿ ೧೬೬೫ ನೆ ವರ್ಷದೊಳು ಅಂಥಾಘಾಳಿ ಬೀಸುವಾಗ ೪ ಸಾವಿರ ಮನುಷ್ಯರು ಸತ್ತುಹೋಗಿದ್ದಾರೆಂಬ ವರ್ತಮಾನವುಂಟು.

An Account of Hindostan.

ಮೊದಲನೆಪುಸ್ತಕ ೩೬ ನೆ ಪುಟದಲ್ಲಿತೀರದೆಯಿದ್ದ

ಹಿಂದುದೇಶದ ವರ್ಣನೆ.

೨ ನೆ ಮಹಮ್ಮದನು ಸತ್ತಮೇಲೆ ಸುಲತಾನಬಾಬರಪರಿಯಂತರ ಮುಸಲ್ಮಾನರಕೈಯಿಂದ ಹಿಂದುದೇಶದಲ್ಲಿ ವುಂಟಾದದ್ದು. ಮಹಮ್ಮದನ ಮಕ್ಕಳು ಗಸ್ನಿವಿಯರ ಸಂತತಿಯೆಂದು ಹೆಸರು ಹೊಂದಿ ೧೧೬೮ ನೆ ವರ್ಷಪರಿಯಂತರ ತಮ್ಮ ಹಿರಿಯರು ಸಂಪಾದಿಸಿದದೇಶವನ್ನುಹಿಡಿದರು. ಅವರಲ್ಲಿ ಕಡೇಯವನಾದ ಖೋಸ್ರುಮಾಲೀಕನೆಂಬವನು ಕಬೂಲ್ ದೇಶವನ್ನು ಕಳಕೊಂಡು ಲಾಹೂರ್ ಪಟ್ಟಣದಲ್ಲಿ ರಾಜ್ಯವನ್ನಾಳಿ ೧೧೬೮ ನೆ ವರ್ಷದಲ್ಲಿ ಸತ್ತುಹೋದನು. ಅದರ ಮೇಲೆ ೫೦೦ ವರ್ಷದೊಳಗೆ ೫ ಮುಸಲ್ಮಾನರ ವಂಶಗಳು ಪಶ್ಚಿಮದಿಂದ ಬಂದು ಹಿಂದುದೇಶವನ್ನು ಹೆಚ್ಚುಹೆಚ್ಚಾಗಿ ಕೆಡಿಸಿದರು ಅವರಲ್ಲಿ ಮೊದಲನೆಯವರು ಘೋರಿಯರು ೧೧೮೬ ನೆ ವರ್ಷವಾರಭ್ಯ ೧೨೮೮ ನೆ ವರ್ಷಪರಿಯಂತರ ೧೦೨ ವರ್ಷ ರಾಜ್ಯವನ್ನುಆಳಿದರು. ಅವರಮೇಲೆ ಖಿಲ್ಜಿಯರು ೧೨೮೮ ನೆ ಆರಭ್ಯ ೧೩೨೧ ನೆವರ್ಷಪರಿಯಂತರ ೩ ನೆಯವರು ಘೊಘ್ಲುಕ್ ೧೩೨೧ ನೆ ಆರಭ್ಯ ೧೩೯೮ ನೆ ಪರಿಯಂತರ ೪ ನೆಯವರು ೧೪೧೪ ನೆ ಆರಭ್ಯ ೧೪೪೮ ನೆ ಪರಿಯಂತರ ೫ ನೆಯವರು ಲೋಡಿಲಾಫ್ಕಾನರು ೧೪೪೮ ನೆ ಆರಭ್ಯ ೧೫೨೬ ನೆ ಪರಿಯಂತರ.

೧ ನೆ ಘೋರಿಯರ ಸಂತಾನವಾದ ಮೊಗಲ್ ಜನರು ಹಿಂದುದೇಶಕ್ಕೆ ಬಂದದ್ದು.

ಗಸ್ನಿವಿಯರಕೈಯಿಂದ ರಾಜ್ಯವನ್ನು ತೆಗದ ಮಹಮ್ಮದಗೋರಿ. ೯ನರತಿ ಹಿಂದುದೇಶಕ್ಕೆ ಹೋಗಿ ಆರಂಭದಲ್ಲಿ ಡಿಲ್ಲಿ ಅರಸನಾದ ಜಾಪೊಂದಯೆಂಬವನಿಂದ ಅಪಜಯಪಟ್ಟು ಆಮೇಲೆ ಯಿವನನ್ನು ೩ ಲಕ್ಷ ಶಿಪಾಯರಸಂಗಡಲೂ ೩ ಸಾವಿರಆನೆಗಳಸಂಗಡಲೂ ವೋಡಿಸಿ ಜಾಪೊಂದನಮಾವನಾಗಿಯೂ ಅಜಮೀಢದ ಅರಸನಾಗಿಯೂ ಯಿರುವ ಪೃಥ್ವಿರಾಜನನ್ನು ಕೊಂದುಹಾಕಿ ತನ ದಾಸನೂ ಅಧಿಪತಿಯೂ ಆದ ಕತ್ಬಿದ್ದೀನಯ್ಬೆಖ್ ಯೆಂಬವನಿಗೆ ಸೈನ್ಯವನ್ನುವೊಪ್ಪಿಸಿ ಸ್ವದೇಶಕ್ಕೆ ಹೋದನು. ಯೀಕತ್ಬಿದ್ದೀನನು ೧೧೯೩ ನೆ ವರ್ಷದಲ್ಲಿ ಯಿಂದ್ರಪ್ರಸ್ಥಪಟ್ಟಣವನ್ನು ತೆಗದು ಮೊದಲು ಮೊಹಮ್ಮದನ ಪ್ರಧಾನಿಯಾಗಿ ಅವನುಸತ್ತಮೇಲೆ ತಾನೇ ಅರಸನಾಗಿದ್ದು ಕನ್ಯಾಕುಬ್ಜ ಪಟ್ಟಣವನ್ನು ತೆಗದು ಕಾಸಿಯನ್ನುಸಹಾಹಾಳುಮಾಡಿದನು. ಅದರಬೀದಿಗಳಲ್ಲಿ ರಕ್ತವು ಹೊಳೆಯಾಗಿ ಹರಿದು ೧೦೦೦ ದೇವಸ್ಥಾನಗಳೂ ಲೆಖ್ಖವಿಲ್ಲದಮೂರ್ತಿಗಳೂ ಆವಾಗ ಕೆಟ್ಟುಹೋದವು ದೇವಸ್ಥಾನಗಳಲ್ಲಿ ಕೆಲವು ಕತ್ಬಿದ್ದೀನನು ಶುದ್ಧಮಾಡಿಸಿ ಮಸೂದಿಯಾಗಿಟ್ಟನು ಮೊಹಮ್ಮದಕುಲಿ ಸತ್ತುಹೋಗುವಾಗ್ಯೆ ವುಳಿದದ್ದೆಲ್ಲಾ ಹೊರ್ತು ವಜ್ರಗಳೇ ೫೦೦ ಮಣವುಯಿತ್ತು. ಕತ್ಬಿದ್ದೀನನಸಾಕುಮಗನಾದ ಶಂಸದ್ದೀನ್ ಅಲ್ತಮಿಷ ೧೨೧೦ ನೆ ವರ್ಷದಲ್ಲಿ ರಾಜ್ಯವನ್ನುಹೊಂದಿ ಆಪರಿಯಂತರ ಮುಸಲ್ಮಾನರಿಗೆ ಕಾಣದ ದೇಶಗಳನ್ನು ಪ್ರವೇಶಿಸಿದನು. ಯಿವನುಮುಂಚೆಮೊಹಮ್ಮದ ಪಖತಿಯಾರ ಯೆಂಬವನು ಸಂಪಾದಿಸಿದ ಬಂಗಾಲ ದೇಶವನ್ನು ಯೀತನ ಕೈಯಿಂದ ತೆಗದು ಲಕ್ಷ್ಮಣಾವತಿಪಟ್ಟಣವನ್ನು ಹಾಳುಮಾಡಿ ತನ ಮಗನಾದ ನಜರೆದ್ದೀನನನ್ನು ವಿಹಾರದೇಶದ ಪ್ರಧಾನಿಮಾಡಿಟ್ಟು ಸಿಂಧುದೇಶಕ್ಕೆ ಸಹಾ ಹೋಗಿ ಊಚಪಟ್ಟಣವನ್ನುತೆಗದು ಮಲ್ವಾಸೀಮೆಯನ್ನು ಅದರ ಪ್ರಮುಖ್ಯಸ್ಥಳಗಳಾದ ಗ್ವಾಲಿಯಾರ ಮತ್ತು ವುಜ್ಜಯಿನೀ ಪಟ್ಟಣಗಳನ್ನುಕೆಡಿಸಿದನು. ೧೩ ನೆ ವರ್ಷಶತದಮಧ್ಯದಲ್ಲಿ ಮೊಗಲ್ ಜನರು ಹಿಂದುದೇಶಕ್ಕೆ ಬರಲಿಕ್ಕೆ ಆರಂಭಿಸಿದರು ಅವರು ಮೊದಲು ೧೨೨೧ ನೆ ವರ್ಷದಲ್ಲಿ ಜಲಾಲೆದ್ದೀನಯೆಂಬವನಸಂಗಡ ಸಿಂಧುನದಿಹತ್ರ ಬಂದಮೇಲೆ ಅಲಮೀಶನು ಅವರನ್ನು ವೋಡಿಸಿ ತಂಮದೇಶಗಳಿಗೆ ಕಳುಹಿಸಿದನು ೧೨೪೧ ನೆ ವರ್ಷದಲ್ಲಿ ಅವರು ತಿರುಗಿಬಂದು ಲಾಹೂರಪಟ್ಟಣವನ್ನು ಲೂಟಿಮಾಡಿ ವಿಪಾಶಾ ನದಿಪರಿಯಂತರಬಂದು ಅಲ್ಲಿಂದ ತಂಮ ದೇಶಕ್ಕೆ ವೋಡಿಸಲ್ಪಟ್ಟರು. ೧೨೪೪ ನೆ ವರ್ಷದಲ್ಲಿ ಅವರು ತಿಬೇತ ದೇಶದಿಂದ ಬಂಗಾಲದೇಶವನ್ನು ಪ್ರವೇಶಿಸುವಾಗ್ಯೆ ತಿರುಗಿ ಅಪಜಯಪಟ್ಟರು ೧೨೪೫ ನೆ ವರ್ಷದಲ್ಲಿ ಅವರು ಕಂದಾಹಾರಪಟ್ಟಣದಿಂದ ಹೊರಟು ವಿಪಾಶಾ ನದಿಯ ಸಮೀಪಕ್ಕೂ ಊಚಪಟ್ಟಣ ಪರಿಯಂತರಕ್ಕೂ ಬಂದರು. ಅವರಿಗೆವಿರೋಧವಾಗಿ ನಜಿರೆದ್ದೀನಮಹಮ್ಮದನು ಕೋಟೆಗಳನ್ನುಕಟ್ಟಿ ಪ್ರಾಂತ್ಯಗಳಲ್ಲಿರುವ ಜನಾಂಗಗಳನ್ನು ತನಗೆ ವಶವಾಗಿಮಾಡಿದನು. ಗೂರ್ಯದಲ್ಲಿ ೯ ನೆ ಯವನಾದ ಗ್ಯೆಸಿದ್ದೀನಬುಲ್ಬನನು ತನ ಸಮಸ್ತ ರಾಜ್ಯದಲ್ಲಿ ಯಾವಹಿಂದುಸ್ಥಾನದವನಿಗಾದರು ಚಾಕರಿ ಶಿಕ್ಕದಹಾಗೆ ಮಾಡಿ ಸಮಸ್ತ ಆಶೀಯಾದೇಶದಿಂದ ದಿಕ್ಕಿಲ್ಲದವರಾದ ಅರಸುಗಳನ್ನು ಅರಸಪುತ್ರರನ್ನು ಕೂಡಕರದು ಡಿಲ್ಲಿಯೆಂಬ ರಾಜಧಾನಿಯನ್ನು ಸಮಸ್ತ ಲೋಕದಲ್ಲಿ ಹೆಚ್ಚಾಗಿಮಹಿಮೆಯುಳ್ಳ ಸ್ಥಳವಾಗಮಾಡಿದನು.

ಸಂ ೨ನೆ ೧೨೮೮ನೆ ವರ್ಷದಲ್ಲಿ ರಾಜ್ಯವಂನು ಹೊಂದಿದ ಜಲಾಲೆದ್ದೀನ ಖಿಲಜಿಯೆಂಬವನು ಡಿಲ್ಲಿಪಟ್ಟಣವಂನುಬಿಟ್ಟು ಯಮುನಾತೀರದಲ್ಲಿ ಕಿಲುಕೆರಿಯೆಂಬ ಹೊಸ ಅರಮನೆಕಟ್ಟಿದನು. ಅವನಸಮಯದಲ್ಲಿ ಸೀದಿಮುಲ್ಲಾಯೆಂಬವನು ೧೨ ಸಾವಿರಶಿಷ್ಯರಿಗೆ ಸಾಕಾಗುವ ವಿದ್ಯಾಶಾಲೆ ಕಟ್ಟಿಸಿದನು. ಜಲಾಲೆದ್ದೀನನ ಅಳಿಯನಾದ ಅಲಲ್ಲಾಹುದ್ದೀನನು ತಂನಮಾವನಿಗೆ ತೀಳದೆ ಬೇಟೆಗೆಹೋಗುತ್ತೇನೆಂದುಹೇಳಿ ಮೊದಲನೆ ಮುಸಲ್ಮಾನನಾಗಿ ವಿಂಧ್ಯ ಪರ್ವತವಂನು ದಾಟಿ ಮಹಾರಾಷ್ಟ್ರದೇಶಕ್ಕೆ ವಿರೋಧವಾಗಿ ಹೋಗಿ ಉಜ್ಜಯಿನಿ ಪಟ್ಟಣದಿಂದ ೧೨೦ ಹರದಾರಿ ದಕ್ಷಿಣಮಾರ್ಗಕ್ಕೆ ಯಿರುವ ಯೆಲಿಚ್ಪೂರ ಪಟ್ಟಣವಂನು ಲೂಟಿಮಾಡಿ ದೇವಗಿರಿ ಕೋಟೆಹತ್ರಬಂದು ಅದರಸಮೀಪವಾದ ಅರಸಪಟ್ಟಣದಲ್ಲಿಯಿರುವ ಬ್ರಾಹ್ಮರಿಂದಲೂ ವಾಣಿಜ್ಯರಿಂದಲೂ ಮೊದಲು ನಾನಾಪ್ರಕಾರ ಜಿಪಳಿಹಾಕಿ ದಂಡಕಟ್ಟಿ ಹಣತೆಕೊಂಡು ಆಮೇಲೆ ಪಟ್ಟಣವಂನು ಲೂಟಿಮಾಡಿ ದೇವಾಲಯಗಳಂನು ನಾಶನಮಾಡಿ ಕೋಟೆ ಬಿಟ್ಟು ಬಿಡುವದಕ್ಕೋಸ್ಕರ ಅರಸನಿಂದ ೫೦ ಮಣ ಭಂಗಾರ ತೆಗದುಕೊಂಡು ಬಂಗಾಲಕ್ಕೆ ಹೋಗಿ ಅಲ್ಲಿ ತಂನಅನುತಾನೇ ಅರಸನೆಂದುಹೇಳಿ ಮಾವನಂನು ಕೊಂದುಹಾಕಿ ಸೈನ್ಯಗಳಿಗೆಹಣಕೊಟ್ಟು ಡಿಲ್ಲಿಗೆ ಅರಸನಾದನು ೧೨೯೬ನೆ ವರ್ಷದಲ್ಲಿ ೨ ಲಕ್ಷ ಕುದರೆಸವಾರರಾದ ಮೊಗಲ್ ಜನರು ಡಿಲ್ಲಿಪಟ್ಟಣದ ಬಾಗಿಲಪರಿಯಂತರ ಬಂದಾಗ್ಯೆ ಅಲ್ಲಾಹುದ್ದೀನ ೩ ಲಕ್ಷ ಸವಾರರಂನೂ ೨ ಸಾವಿರದ ೭ ನೂರ ಆನೆಗಳಂನೂ ಸಹಾ ಕೂಡಿಸಿ ಡಿಲ್ಲಿಬೈಲಿನಲ್ಲಿ ಅವರಂನು ಓಡಿಸಿದನು ಆಮೇಲೆ ದಕ್ಷಿಣಕ್ಕೆ ಹೋಗಿ ಗುರ್ಜರ ದೇಶವಂನೂ ಕಂಬಾಯಿ ದೇಶವಂನೂ ಮಲ್ವಾ ರಾಜ್ಯವಂನೂ ಹಾಳುಮಾಡಿ ಆಮೇಲೆ ಗೋವೆ ಆತ್ತಲಾಗೆ ಮಲಬಾರ ದೇಶಕ್ಕೆ ಬಂದು ದ್ವಾರಸಮುದ್ರಕ್ಕೆ ಹೋಗಿ ಸೇತುಬಂಧ ರಾಮೇಶ್ವರದಲ್ಲಿ ಒಂದುಮಸೂದಿಕಟ್ಟಿಸಿ ಪ್ರಾರ್ಥನೆಮಾಡಿದನು. ಅಲ್ಲಿಂದ ಹೊಂಭತ್ತಾರುಸಾವಿರಮಣ ಭಂಗಾರ ರತ್ನ ಮುತ್ತುಗಳಂನೂ ೧೬೮ ರತಲ್ ಭಾರವಾದ ಒಂದೇ ವಜ್ರವಂನೂ ಯಿದು ಮೊದಲಾದ ಅತಿಶಯ ದ್ರವ್ಯಗಳಂನು ಡಿಲ್ಲಿಗೆ ವೈದನು ಯೀದ್ರವ್ಯಗಳು ಮುಸಲ್ಮಾನರ ರಾಜ್ಯಕ್ಕೆ ಸೌಖ್ಯವಂನುಕೊಡದೆ ಸೈನ್ಯಗಳಲ್ಲಿ ದ್ರೋಹಗಳಂನೂ ಸಮಸ್ತರಾಜ್ಯದಲ್ಲಿ ಕಾಟಕಾಯಿಗಳಂನೂ ಹುಟ್ಟಿಸಿದವು. ಕಡೆಖಿಲಜಿ ಅರಸನಾದ ಮುಬಾರೇಕನಿಗೆ ೮ ಲಕ್ಷ ೭೫ ಸಾವಿರ ಸವಾರರು ಯಿದ್ದಾಗ್ಯೂ ಅಂಥಾ ಅಧಿಕಾರದಿಂದ ರಾಜ್ಯದ ಐಶ್ವರ್ಯವು ಹೆಚ್ಚಾಗಲಿಲ್ಲ ಮುಂಚೆಬರಗಾಲದ ವರ್ತಮಾನವಂನು ಸಹಾ ತೀಳದೆಯಿದ್ದ ಹಿಂದುಸ್ಥಾನದೇಶದಲ್ಲಿ ದುರ್ಭಿಕ್ಷವುಂಟಾಯಿತು. ಯೀಮುಬಾರೇಕನು ದೇವಗಿರಿಯಲ್ಲಿ ದೊಡ್ಡಮಸೂದಿಕಟ್ಟಿ ಡಿಲ್ಲಿ ಆರಭ್ಯ ದ್ವಾರ ಸಮುದ್ರ ಪರಿಯಂತರ ಟಪ್ಪಾಲು ಜನರಂನು ಯಿರಿಸಿದನು. ಅವನಮೇಲೆ ಅರಸನಾದ ಅಲ್ಲಾಹುದ್ದೀನನ ಅಧಿಕಾರವು ತೀರಿದಮೇಲೆ ವುಂಟಾದ ಸಂಸ್ಥಾನಗಳವರು ಆಪರಿಯಂತರ ಯಾವರಾಜ್ಯಗಳಲ್ಲಿಯು ವುಂಟಾಗದ ಅನಹ್ಯಕ್ರಿಯೆಗಳಂನು ನಡಸಿದರು.

ಸಂ ೩ನೆ ೧೩೨೫ನೆ ವರ್ಷದಲ್ಲಿ ಮೊಹಮೇದ ತೊಘ್ಲಕ ರಾಜ್ಯವಂನು ಹೊಂದಿ ಸಿಂಧುನದಿ ಆರಭ್ಯ ಗಂಗಾಪರಿಯಂತರ ಸಮಸ್ತ ಭೂಮಿಯಂನು ವಶಮಾಡಿಕೊಂಡನು. ಅದು ಸಾಲದೆಂದೆಣಿಸಿ ೩ ಲಕ್ಷ ೭೦ ಸಾವಿರ ಸವಾರರಂನು ಪಶ್ಚಿಮಕ್ಕೆ ಖೊರಾಸಾನ ಆದಿದೇಶಗಳಂನು ತೆಗಿಯುವದಕ್ಕೂ ೧ ಲಕ್ಷ ಪೂರ್ವಕ್ಕೆ ಚೀನಾದೇಶವಂನು ತೆಗಿಯುವದಕ್ಕೂ ಕಳುಹಿಸಿದನು. ಆಮೇಲೆ ಡಿಲ್ಲಿಯು ಅರಸಪಟ್ಟಣಕ್ಕೆ ಯೋಗ್ಯವಲ್ಲವೆಂದುಹೇಳಿ ದೇವಗಿರಿಯೆಂಬ ಕೋಟೆಯಲ್ಲಿ ವಾಸಮಾಡಲಿಕ್ಕೆ ಅಪೇಕ್ಷಿಸಿ ಡಿಲ್ಲಿಯಿಂದ ದೇವಗಿರಿ ಪರಿಯಂತರ ೪೦ ದಿವಸಗಳ ಮಾರ್ಗಮಾಡಿ ಅದಕ್ಕೆ ನೆರಳಾಗುವಹಾಗೆ ಡಿಲ್ಲಿ ಸಮೀಪದಲ್ಲಿರುವ ದೊಡ್ಡಮರಗಳಂನು ನಿರ್ಮೂಲಮಾಡಿಸಿ ಸಮಸ್ತಮಾರ್ಗದ ಯಿಕ್ಕಟ್ಟಲ್ಲಿಯು ನಡೆಯಲಿಕ್ಕೆ ಅಪ್ಪಣೆಕೊಟ್ಟನು ಅಂದಿನಿಂದ ದೇವಗಿರಿಗೆ ದೌಲತಬಾದವೆಂದು ಹೆಸರಿಟ್ಟು ಸುತ್ತಲು ಶಿಲಾಪರ್ವತದಲ್ಲಿ ಖಂದಕಮಾಡಿ ತಿರುಗಿಬಿದ್ದ ಡಿಲ್ಲಿಯವರಿಗೆ ಶಿಕ್ಷೆಯಕೊಟ್ಟು ಬಹಳ ಜನರಂನು ಬಲಾತ್ಕಾರದಿಂದ ಅಲ್ಲಿಂದವೈದು ಸಮಸ್ತ ಹಳ್ಳಿಗಳಂನು ಗೂಬೆಗಳಿಗೂ ಕೆಟ್ಟಮೃಗಗಳಿಗೂ ಒಪ್ಪಿಸಿದನು.

On the Trade of Hindostan.——Continued.

ಮೊದಲನೆಪುಸ್ತಕ ನಾಲ್ವತ್ತೆಂಟನೆಪುಟದಲ್ಲಿ ತೀರದೆಯಿದ್ದ
ಹಿಂದುಸ್ಥಾನ್ ದೇಶದ ವರ್ತಕವನ್ನು ಕುರಿತದ್ದು.

ಅಯಿದನೇದು. ರೇಶಿಮೆ ಯಿದಿರಾಂಪೂರ್ ಬಾಲಿಯ (**Rampore Bauleah**) ಕೊಮರ್ಕಾಲಿ (**Comercolly**) ಜಂಜಿಪೂರ್ (**Jungypoor**) ಮಾಲ್ಡ (**Malda**) ಕಾಶಿಂ ಬಾಜಾರ್ (**Cossin Bazaar**) ಯಿವನೂ ಯಿತರಸ್ಥಳಗಳಲ್ಲಿಯೂ ರೇಶಿಮೆಯಂನು ಮಾಡುವ ಕುಂಫಣಿಯವರ ವುಗ್ರಾಣಗಳು ವುಂಟಾಗಿರುವವು. ಆರೇಶಿಮೆ ಯಿತರಸ್ಥಳಗಳಿಗೆ ತರಲ್ಪಟ್ಟಾಗ ಅನೇಕವಿಧವಾಗಿ ಬಣ್ಣಗಳಂನು ಹಾಕಿ ಬಟ್ಟೆಗಳು ಮಾಡಲ್ಪಡುವವು ರೇಶಿಮೆಯಂನು ಮಾಡುವ ವಿಧವೇನಂದರೆ ರೇಶಿಮೆಯ ಹುಳವು ಹಿಪ್ಪೇಗಿಡದ ಯೆಲೆಯಂನು ತಿಂದತರುವಾಯ ಬಹಳಾ ವುಬ್ಬಿದಾಗ ಅದರ ಹೊಟ್ಟೆಯೊಳಗಿಂದ ನಯವಾದ ನೂಲಿನಹಾಗೆ ಮೇಲಕ್ಕೆ ತಂದು ಅದರಸುತ್ತಾ ಸುತ್ತಿಕೊಳ್ಳುವದು. ಆಗಲು ಅದರಹದವಂನು ಅರಿತು ಬಿಸಿನೀರಿನಲ್ಲಿಹಾಕಿ ಹುಳವು ಸತ್ತತರುವಾಯ ಆರೇಶಿಮೆಯನ್ನೆಲ್ಲಾ ಒಂದು ಚಕ್ರದಮೇಲೆ ಸುತ್ತುವರು. ಹದವಂನು ಅರಿತು ಕೆಲಸಾಮಾಡದೇ ಹೋದರೇ ಆಹುಳವೇ ಚದಲಿನರೂಪವಾಗಿ ರೇಶಿಮೆಯನ್ನೆಲ್ಲಾ ಕೆಲಸಕ್ಕೆ ಬಾರದಹಾಗೆ ಹೊಡೆದು ಬಿಡುವದು. ಯೂರೋಫ್ ಖಂಡದಲ್ಲಿಯೂ ಇಟಲೀ ದೇಶದಲ್ಲಿಯೂ ರೇಶಿಮೆ ಮಾಡಲ್ಪಡುವದು. ೧೨೦೦ ಸಂವತ್ಸರಗಳ ಕೆಳಗೆ ರೋಮಾದೇಶವು ಸಂಪತ್ಸಮೃದ್ಧಿ ಯಾಗಿದ್ದಾಗ ಅಲ್ಲಿರುವ ಘನವಾದ ವುದ್ಯೋಗಸ್ಥರು ರೇಶಿಮೆಯವಸ್ತ್ರಗಳಲ್ಲಿ ಬಹಳಾ ಅಪೇಕ್ಷೆಯುಳ್ಳವರಾಗಿ ವಿಸ್ತಾರವಾದ ದ್ರವ್ಯವಂನು ಖರ್ಚುಮಾಡಿ ಏಷ್ಯಾ ಖಂಡದಿಂದ ರೇಶಿಮೆಯ ವಸ್ತ್ರಗಳಂನು ತರಿಸಿಕೊಳ್ಳುತ್ತಾ ಯಿದ್ದರು. ರೋಮಾದೇಶದ ಚಕ್ರವರ್ತಿಗಳಲ್ಲಿ ಒಬ್ಬನು ಯೀರೇಶಿಮೆಯ ವರ್ತಕದಿಂದ ಬರುವಲಾಭವಂನು ತಿಳಿದುಕೊಂಡು ನೂರುಸಾವಿರ ಕೋಸುಗಳ ದೂರವಾಗಿರುವ ಚೀನಾದೇಶಕ್ಕೆ ಯಿಬ್ಬರುಸೇವಕರಂನ ಕಳುಹಿಸಿದದರಿಂದ ಅವರು ಹೊರಟು ಬಿದುರಿನ ಕೊಳವಿಗಳಲ್ಲಿ ರೇಶಿಮೆ ಹುಳಗಳಂನು ಹಾಕಿ ಯಿಟಲೀದೇಶಕ್ಕೆ ತೆಗದುಕೊಂಡುಬಂದದರಿಂದ ಅಲ್ಲಿ ಬಹಳಾ ವೃದ್ಧಿ ಹೊಂದಿ ಆದೇಶದಲ್ಲೆಲ್ಲಾ ವ್ಯಾಪಿಸಿದವು.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡ ಸಮಾಚಾರವು.

೧೮೪೪.

೧ನೆ ಪುಸ್ತಕ. ೧೪ನೆ ಅಂಕೆ] ಬಳ್ಳಾರಿ ೧೫ನೆ ಶಪ್ಟಂಬರ್ [ಟಪಾಲ ದಸ್ತೂರಿಕೂಡಿ ಕ್ರಯ ೨ದುಡ್ಡು.

On the Cultivation of Cotton.

ಹತ್ತಿಯಂನುಹಸನಮಾಡುವದರವಿಷಯವಾಗಿ.

ಒಂದುನೂರತ್ತೈವತ್ತುವರುಷಗಳಹಿಂದಕ್ಕೆ ಹಿಂದೂದೇಶಸ್ಥರು ವಿಲಾಯಿತಿದೇಶಕ್ಕೆ ಬಹಳಉತ್ತಮವಾದಂಥ ಜವಳಿಕಳುಹಿಸಿದರು. ಆದರೆ ಆಸಮಯದಿಂದ ಯಿಂದಿನತನಕ ವಿಶೇಷವಾಗಿ ನಯವಾದ ವಸ್ತ್ರಗಳು ವಿಲಾಯಿತಿ ದೇಶದಿಂದಯಿಲ್ಲಿಗೆಬರುತ್ತವೆಯಿದರ ಕಾರಣವೇನಂದರೆ. ವಿಲಾಯಿತಿದೇಶಸ್ಥರುಅಷ್ಟರೊಳಗೆ ಯೀ ಕೆಲಸದಲ್ಲಿ ಬಹಳ ಸಾಧನಮಾಡಿದರು. ಪರಂತು ಹಿಂದೂದೇಶಸ್ಥರು ಆಕೆಲಸದಲ್ಲಿ ಪ್ರಯಾಸಮಾಡ ಮನಸ್ಸಿಲ್ಲದೆಯಿದ್ದರು. ಮತ್ತು ಯೀಗ ಹಿಂದುಸ್ಥಾನದಲ್ಲಿ ಬೆಳೆದ ಹತ್ತಿಯಂನು ವಿಲಾಯಿತಿ ದೇಶಕ್ಕೆ ವೈದು ಅಲ್ಲಿ ಯಿದರಿಂದ ಜವಳಿ ಮಾಡಿದಂಥಾದ್ದು ಯೀದೇಶಕ್ಕೆ ಪುನಃತರುತ್ತಾರೆ. ಮತ್ತು ಯಿದೇ ವಸ್ತ್ರ ಹತ್ತಿಬೆಳೆಯುವಹಿಂದುಸ್ಥಾನದಜವಳಿಗಿಂತ ಅಗ್ಗವಾಗಿಯು ಚಲೋದಾಗಿಯು ಅದೆ.

ಯೀಗ ಬೇರೆದೇಶಸ್ಥರು ಹತ್ತಿಬೆಳಿಸಿದ್ದು ಹಸನಮಾಡಿ ಯಿಂಗ್ರೇಜಿ ದೇಶಕ್ಕೆ ಕಳುಹಿಸುತ್ತಾರೆ. ಮತ್ತು ಯೀಪ್ರಕಾರ ಯೆಷ್ಟು ಅರಳಿ ಯಿಸವಿ ಸಂನ ೧೮೩೪ ನೇ ವರುಷದಲ್ಲಿ ಯಿಂಗ್ರೇಜಿದೇಶಕ್ಕೆ ಬಂದಿತ್ತೆಂದು ಮುಂದಿಬರದ ಯಾದಿಯಿಂದ ನೋಡಬಹುದು.

	ಬಂಡಿಗಳು.
೧ ಅಮೇರಿಕಾಖಂಡದಿಂದ — — — — —	೮೨೧೫೦೦
೨ ಬ್ರಸ್ಸಿಲ್ಲೆಂಬದೇಶದಿಂದ — — — — —	೫೩೫೭೦
೩ ಪಶ್ಚಿಮಹಿಂದುಸ್ಥಾನದಿಂದ — — — — —	೧೪೨೯೦
೪ ಏಗಿಪ್ತದೇಶದಿಂದ — — — — — —	೪೪೬೪೦
೫ ಆಫ್ರಿಕಾಖಂಡದಿಂದ — — — — — —	೬೦೭೧೦
೬ ಮೇಕ್ಸಿಕೊವೆಂಬದೇಶದಿಂದ — — — —	೬೨೫೦೦
೭ ಹಿಂದುಸ್ಥಾನದಿಂದ — — — — — — —	೩೩೦೩೪೦
೮ ಯಿನ್ನೂಬೇರೆಬೇರೆದೇಶಗಳಿಂದಕೂಡಿ — — —	೨೨೦೦೦೦
	೧೬೦೭೫೫೦

ಯೀಲೆಖ್ಖದಪ್ರಕಾರ ೧೮೩೪ ನೆ ಯಿಸವಿಯಲ್ಲಿ ಬೇರೆಬೇರೆ ದೇಶಗಳಿಂದ ಯಿಂಗ್ರೇಜಿ ದೇಶಕ್ಕೆ ತಂದು ಅಲ್ಲಿ ಜವಳಿ ಮಾಡಿದಂಥ ಅರಳಿ ಕೂಡಿ ೧೬೦೭೫೫೦ ಬಂಡಿಗಳಾದವು. ಮತ್ತು ಯೀ ಸಕಲದರಿಂದ ಹಿಂದೂ ದೇಶದಿಂದ ತಂದಅರಳಿಆಗದಿ ೩೩೦೩೪೦ ಬಂಡಿಗಳಾದವು.

ಆಸದರಿದೇಶಸ್ಥರು ಯಿಸವಿ ಸಂನ ೧೮೦೧ ನೆ ವರುಷದಲ್ಲಿ ಯೆಷ್ಟುಅರಳಿ ಯಿಂಗ್ರೇಜಿದೇಶಕ್ಕೆ ಕಳುಹಿಸಿದರೊ ಅದು ಯೀಕೆಳಗೆ ಬರದಯಾದಿಯಿಂದ ಕಾಣಿಸುವದು.

	ಬಂಡಿಗಳು.
೧ ಅಮೇರಿಕಾಖಂಡದಿಂದ — — — — —	೮೫೭೧೫
೨ ಬ್ರಸ್ಸಿಲ್ಲೆಂಬದೇಶದಿಂದ — — — — —	೬೪೨೮೫
೩ ಪಶ್ಚಿಮಹಿಂದೂದೇಶದಿಂದ — — — — —	೧೬೮೫೭
೪ ಏಗಿಪ್ತದೇಶದಿಂದ — — — — — —	೧
೫ ಆಫ್ರಿಕಾಖಂಡದಿಂದ — — — — — —	೮೦೩೬೦
೬ ಮೇಕ್ಸಿಕೊವೆಂಬದೇಶದಿಂದ — — — —	೧೦೦೦೦೦
೭ ಹಿಂದುಸಾನದಿಂದ — — — — — —	೨೮೫೦೦೦
೮ ಯಿನ್ನೂಬೇರೆಬೇರೆದೇಶಗಳಿಂದಕೂಡಿ — — — —	೨೫೮೯೩೦
	೮೯೨೧೪೭

ಯೀಸದರಿ ಯಾದಿಗಳ ಪ್ರಕಾರ ಯಿಂಗ್ರೇಜಿದೇಶಕ್ಕೆ ತಂದ ಅರಳಿಯ ವೃದ್ಧಿ ಮೂವತ್ತುನಾಲ್ಕು ವರುಷಗಳೊಳಗೆ ೭೧೫೪೦೩ ಬಂಡಿಗಳಾದವು. ಯಿದರಿಂದ ಹಿಂದುಸ್ಥಾನದಿಂದ ಆದೇಶಕ್ಕೆ ತಂದ ಅರಳಿ ವೃದ್ಧಿ ಕೇವಲ ೪೫೩೪೦ ಬಂಡಿಗಳಾದವು.

ಹಿಂದೂದೇಶದ ಸಾವಕಾರರು ಬಹಳ ಅರಳೆ ಚೀನಾದೇಶಕ್ಕೆ ಕಳುಹಿಸುತ್ತಾರೆ. ಅಲ್ಲಿಗೆ ಬೇರೆದೇಶಸ್ಥರು ಅವರಹಾಗೆಯೆ ಹಿಂದಕ್ಕೆ ಕಳುಹಿಸಲಿಲ್ಲ. ಪರಂತು ಹೋದವರುಷದಲ್ಲಿ ಅಮೇರಿಕಾ ಖಂಡದಿಂದ ಅರಳೆಯಿಂದತುಂಬಿದ ಕೆಲವುಹಡಗಗಳು ಚೀನಾದೇಶಕ್ಕೆ ಬಂದವು. ಯಿದರಸಲ್ಲುವಾಗಿ ಯೀದೇಶದ ಸಾವಕಾರರು ಯೀಕೆಲಸಕ್ಕೆ ಬಹಳ ಜೋಪಾನ ಮಾಡಬೇಕು. ಯಾತಕ್ಕೆಂದರೆ ಅವರವ್ಯಾಪಾರ ಚೀನಾದೇಶದಲ್ಲಿ ಕಡಿಮೆಯಾದರೆ ಯಿವರಿಗು ಮತ್ತು ಹತ್ತಿಬೆಳೆಯುವರೈತರಿಗು ಬಹಳ ನಾಶಬಂದೀತು. ಅದಕ್ಕೆ ಕೆಲವರು ನಾವೇನು ಮಾಡುವವೆಂದು ಕೇಳುವರು ಯಿದರ ಉತ್ತರ ಸುಲಭವಾಗಿ ಯದೆ. ಹಿಂದೂದೇಶಸ್ಥರು ಉತ್ತಮವಾದ ಹತ್ತಿಯಂನು ಬೆಳೆಸಬೇಕು. ಬೆಳೆದಮೇಲೆಕಸಾಕಡ್ಡಿ ಬೀಜ ಯಿಲ್ಲದಹಾಗೆ ಬಹಳನಿರ್ಮಲಮಾಡಬೇಕು. ಹೀಗೆಯಿವರು ಮಾ

ಡದಿದ್ದರೆ ಮತ್ತೊಬ್ಬ ದೇಶಸ್ಥರು ಯೀ ಕೆಲಸದ ಸಲುವಾಗಿ ಬಹಳ ಚಿಂತೆ ಮಾಡೋಣದರಿಂದ ಹಿಂದೂದೇಶಸ್ಥರ ಸಾವಕಾರರ ಕೈಯಿಂದ ಚೀನಾದೇಶದ ವ್ಯವಹಾರ ತೆಗದುಕೊಳ್ಳುವರು. ಅವರು ಹ್ಯಾಗೆ ಜವಳಿವ್ಯಾಪಾರ ಕಳಕೊಂಡರೊ ಅದರಂತ್ತೆ ಅರಳಿವ್ಯಾಪಾರ ಕಳಕೊಳ್ಳುವರು.

ಧಾರವಾಡದಲ್ಲಿ ಬೆಳೆದ ಆದರೆ ನೆಟ್ಟಗೆ ಹಸನಮಾಡದ ಅರಳಿಯನ್ನೂ ಮುಂಬೈಗೆ ತರುವಾಗ ಅಲ್ಲಿ ವೊಂದುಬಂಡಿಗೆ ಸುಮಾರು ೭೦ ರೂಪಾಯಿಗಳನ್ನು ಕೊಡುವರು. ಮತ್ತು ಅದೇಹತ್ತಿ ಚನ್ನಾಗಿ ಹಸನಮಾಡಿ ಸಕಲಸ್ವೈಲಿಗೆಯಿಂದ ನಿರ್ಮಲಮಾಡಿದರೆ ವೊಂದುಬಂಡಿಗೆ ೧೧೦ ನೂರಾಹತ್ತು ರುಪಾಯಿಗಳು ಸಿಕ್ಕಾವು. ಧಾರವಾಡ ದಮಾಮಲೇದಾರನು ತಿಳಿಯುವಹಾಗೆ ಕಲೇಕಟರ ಸಾಹೇಬರು ಯೀವರುಷದಲ್ಲಿ ಯೀದೊಡ್ಡ ಹತ್ತಿರಾಟಿವೊಳಗೆ ಕೆಲವು ಹತ್ತಿ ಬಹಳ ಚಲೋದಾಗಿ ಹಸನಮಾಡಿಸಿ ಮುಂಬೈಗೆ ಕಳುಹಿಸಿದರು. ಯೀ ಅರಳಿಗೆ ಮುಂಬೈಯಲ್ಲಿರುವ ಸಾವಕಾರರು ವೊಂದುಬಂಡಿಗೆ ೧೨೨ ರುಪಾಯಗಳನ್ನು ಕೊಡಲಿಕ್ಕೆ ವೊಪ್ಪಿಸಿದರು. ಯೀಹೇಳಿದಮಾತಿನಿಂದ ಹತ್ತಿಯನ್ನು ಬೆಳಿಸುವವರು ಅರಳಿಯನ್ನು ಬಹಳ ಚನ್ನಾಗಿ ಹಸನಮಾಡಿದರೆ ತಮಗೆ ಯೆಷ್ಟು ವ್ಯಾಳ್ಯಕ್ಕೆ ಲಾಭ ಸಿಕ್ಕುವದು ಅಂಬುವಂತೆ ತೋರುತ್ತದೆ. ಯಿದರ ನಷ್ಟ ಮಾತ್ರವಲ್ಲ ಲುಕಸಾನಬಾರದಹಾಗೆ ಸಾವಕಾರರು ಬಹಳಚಿಂತೆಮಾಡಬೇಕು. ಯೇನಂದರೆ ಯೀಗ ಬೇರೆದೇಶಸ್ಥರು ಚೀನಾದೇಶಕ್ಕೆ ಅರಳಿಯನ್ನು ಕಳುಹಿಸಲಿಕ್ಕೆ ಆರಂಭಿಸಿದರು. ಮತ್ತು ಹಿಂದೂದೇಶದಲ್ಲಿ ಅರಳಿಯಸಲುವಾಗಿ ಬಹಳ ಚಿಂತೆಮಾಡದ್ದಿದ್ದರೆ ಯೀಬೇರೆ ದೇಶಸ್ಥರು ಯೀದೇಶದ ಅರಳಿಯಗಿಂತ ವುತ್ತಮವಾಗಿಯು ಅಗ್ಗವಾಗಿಯು ಮಾರೋಣದರಿಂದ ಅರಳಿ ವ್ಯಾಪಾರವೆಲ್ಲಾ ಸ್ವಲ್ಪಕಾಲಮುಂದೆ ಅವರಕೈಯ್ಯಲ್ಲಿ ಬೀಳುವದು.

ಯೀಗ ಬೇರೆಬೇರೆಪ್ರಕಾರದಹತ್ತಿ ವುಂಟಾಗುತ್ತದೆ ಅದರೊಳಗೆ ಕೆಲವು ಮತ್ತೊಂದರಕಿಂತ ಹುಟ್ಟಿ ಆಗುತ್ತದೆ ಯೀದೇಶದ ಅರಳಿ ಯಿಂಗ್ರೇಜಿದೇಶದಲ್ಲಿ ಮಾರಿದರೆ ವೊಂದುಶೇರಿಗೆ ಯೈದು ದುಡ್ಡು ಯೆರಡುಕೈ ಅಥವಾ ಆರುದುಡ್ಡು ಸಿಕ್ಕುತ್ತವೆ. ಮತ್ತು ಹೊಸಬರ್ಲಿಯನ್ಸ್‌ವೆಂಬ ಅಥವಾ ಯೀದೇಶಸ್ಥರು ಕರೆಯುವ ಪ್ರಕಾರ ವಿಲಾಯಿತಿ ದೇಶದಹತ್ತಿ ಯಿಂಗ್ರೇಜದಲ್ಲಿ ವೊಂದು ಶೇರಿಗೆ ಯೆಂಟು ಅಥವಾವೊಂಬತ್ತುದುಡ್ಡು ಸಿಕ್ಕುತ್ತವೆ ಯೀಯೆರಡು ಪ್ರಕಾರದಹತ್ತಿ ಯೀದೇಶದ ಮತ್ತುವಿಲಾಯತಿದೇಶದ ಅವರೊಳಗೆ ಯಿನ್ನೂ ಬೇರೆಲಾಭ ಆಗುತ್ತದೆ ಅದೇನಂದರೆ ಧಾರವಾಡದ ಸೀಮೆಯಲ್ಲಿ ಪರೀಕ್ಷೆಮಾಡಿದಹಾಗೆ ವೊಂದು ಯೆಕರೆಭೂಮಿಯಲ್ಲಿ ವಿಲಾಯಿತಿ ದೇಶದಹತ್ತಿ ಸುಮಾರು ಹತ್ತುಮಣ ಪರಂತು ಯೀದೇಶದಹತ್ತಿ ಅಷ್ಟೇಭೂಮಿಯಲ್ಲಿ ಸುಮಾರು ಯೈದು ಮಣಮಾತ್ರ ಬೆಳಿಯುತ್ತದೆ. ವಿಲಾಯಿತಿದೇಶದಹತ್ತಿ ಮೂರುಮಣಕ್ಕೆ ವೊಂದುಮಣ ಅರಳಿ ಸಿಕ್ಕುತ್ತದೆ ಆದರೆ ಯೀದೇಶದಹತ್ತಿ ನಾಲ್ಕುಮಣಕ್ಕೆ ವೊಂದುಮಣ ಅರಳಿ ಆಗುತ್ತದೆ. ಮತ್ತು ಯೀದೇಶದ ಅರಳಿಯಗಿಂತ ವಿಲಾಯಿತಿದೇಶದ ಅರಳಿ ಹೆಚ್ಚಾಗಿ ಕಿಮ್ಮತು ಬಾಳುತದೆ. ಯೀಅರಳಿಯನ್ನು ಯೀದೇಶಸ್ಥರು ತಮ್ಮಮನಿಯಲ್ಲಿ ಕುಡದಿಂದ ಅರಿಯೋಣದರಿಂದ ಅದರಲ್ಲಿ ಸ್ವೈಲಿಗೆ ಯಾದರು ಪಡದ ಕಾಳುಗಳಾದರು ಬಹಳಯಿರುತ್ತವೆ. ಯಿದರ ಶಿವಯಿಂದ ಯೀಮಾತಿದ ಅರಳಿಗೆ ಸಾವಕಾರರು ಬಹಳಕಿಮ್ಮತು ಕೊಡುವದಿಲ್ಲ. ಆದರೆ ಆದೊಡ್ಡ ರಾಟಿಯಿಂದ ಹಸನಮಾಡಿದ್ದೇವುಂಟಾದರೆ ಬೀಜ ಕಸಾ ಕಡ್ಡಿ ನಶುವಾಗಿ ವುಳಿಯದಷ್ಟೆ ಹೋಗುತ್ತದೆ. ಯಿಂಥನಿರ್ಮಲವಾದಅರಳಿಗೆ ಕಿಮ್ಮತು ಹೆಚ್ಚಾದದರಿಂದ ನಿರ್ಮಲಮಾಡೋದುನಕೆ ಕುಡದಿಂದ ಅರಿಯುವದರಕಿಂತಲು ರಾಟಿಯು ವುತ್ತಮವಾಗಿಯದೆ ವೊಂದುದೊಡ್ಡರಾಟಿಯ ಸರಂಜಾಮಸಹಕೂಡಿ ಅಜಮಾಸಕಿಮ್ಮತು ೩೫೦ ರುಪಾಯಗಳವೆ ಯಿಷ್ಟು ಖರ್ಚ ಮಾಡೋಣದರಿಂದ ಲುಕಸಾನವೇನು ಯಿಲ್ಲ. ಯಾತಕ್ಕೆಂದರೆ ವೊಬ್ಬನಿಗೆ ಬಹಳ ಹತ್ತಿಯಾದರೆ ಹಸನಮಾಡುವದಕ್ಕೋಸ್ಕರ ಆರುತಿಂಗಳೊಳಗೆಅಷ್ಟುಖರ್ಚಮಾಡಬೇಕು. ಯಿದಲ್ಲದೆ ಹೀಗೆ ತಕ್ಕದ್ದಾಗಿ ಹಸನಮಾಡಿದಅರಳಿಕಿಮ್ಮತು ಬಹಳಹೆಚ್ಚದೆ ಯೀ ಕೆಲಸದ ಸಲುವಾಗಿ ಸಾವಕಾರರು ರೈತರುಸಹ ಬಹಳ ಚಿಂತೆಮಾಡಬೇಕು ಅವರುಹತ್ತಿ ಅಥವಾ ಬೇರೆ ದೇಶಕ್ಕೆ ತರತಕ್ಕದ್ದಾದಂಥಾ ಸರಕು ಬೆಳಿಸಿದರೆ ತಮ್ಮ ಕೈಯ್ಯಲ್ಲಿ ಯಾವಾಗಲು ರೊಕ್ಕ ಸಿಕ್ಕುವದು ಪರಂತು ರೈತರು ಜೋಳಾ ಗೋಧಿ ತೊಗರಿ ಮೊದಲಾದ ತಿನ್ನುವ ಧಾನ್ಯಗಳನ್ನು ಬೆಳಿಸಿ ಅವುಗಳನ್ನು ಮಾರುವಾಗ ರೊಕ್ಕ ಸಿಕ್ಕದೆ ತಮ್ಮ ಧಾನ್ಯಗಳಿಗೆ ಮತ್ತೊಂದುಜಿನಸುಬದಲಾಗಿ ತೆಗದುಕೊಳ್ಳಬೇಕಾದರೆ ಯಾವಾಗಲು ಲುಕಸಾನವಾಗುತ್ತದೆ. ಯೀಸೀಮೆಯಲ್ಲಿ ರೈತರು ತಿನ್ನುವ ಪದಾರ್ಥಗಳನ್ನು ಬಹಳವಾಗಿ ಬೆಳಿಸಿದರಿಂದ ಧಾನ್ಯವು ಬಹಳ ಅಗ್ಗವಾಗಿಯದೆ ಯಿದರ ಸಲುವಾಗಿ ರೈತರ ಕೆಲಸಕ್ಕೆ ತಕ್ಕ ಆದಾಯ ಸಿಕ್ಕಲಿಕ್ಕಿಲ್ಲ. ಪರಂತು ಅವರು ಹತ್ತಿಚಲೋದಾಗಿಬೆಳಿಸಿಹಸನಮಾಡಿ ಮುಂಬೈಗೆ ಕಳುಹಿಸಿದರೆ ತಮಗೆ ಯಿದರಿಂದ ತಕ್ಕ ರೊಕ್ಕ ಸಿಕ್ಕುತ್ತದೆ. ಕೈಯ್ಯಲ್ಲಿ ರೊಕ್ಕ ಯಿದ್ದಾಗ ಅರಳಿ ವ್ಯಯ್ಯುವ ದನಗಳಿಂದ ತಮಗೆ ಬೇಕಾದಷ್ಟು ತಿನ್ನುವ ಪದಾರ್ಥ ಮತ್ತು ಬೇರೆಬೇರೆಬೇಕಾದ ಜಿನಸುಗಳನ್ನು ತಮ್ಮ ಮನೆಗೆ ತೆಗದುಕೊಂಡು ಬರಬಹುದು.

ಧಾರವಾಡದಲ್ಲಿ ೧೮೪೪ ಯಿಸವಿ.

---

೩೪ ನೆ ಪುಟದಲ್ಲಿ ತೀರದೆಯಿದ್ದ ಭೂಗೋಳದಸಾರವು.

Geography.— Continued.

೧೨ ನೆ ಸಂಧಿ.

ಘಾಳಿಯಚಲನೆಗಳು.

ವಾಯುವಿನ ಪ್ರಯೋಜನ ಬಹಳವಾಗಿದೆ ಯೇನಂದರೆ ಘಾಳಿಯು ವೊಂದು ಸ್ಥಳದಿಂದೊಂದುಸ್ಥಳಕ್ಕೆ ಚಲಿಸುವದರಿಂದ ಯೆಲ್ಲಾಸ್ಥಳಗಳಲ್ಲಿರುವ ಘಾಳಿ ಹೊಸತಾಗಿಯೂ ಶುದ್ಧವಾಗಿಯೂ ಆಗುತ್ತದೆ. ಅತಿಶೆಖೆಯುಳ್ಳಸೀಮೆಗಳಿಗೆ ತಂಪಾದ ಘಾಳಿಬರುವದರಿಂದ ಮನುಷ್ಯ ಮೃಗ ಗಿಡಗಳಿಗೆ ಉಪಕಾರವಾಗುತ್ತದೆ. ಕೆಟ್ಟವಾಸನೆಗಳಿಂದಲೂ ವಿಷವುಳ್ಳ ಆವಿಗಳಿಂದಲೂ ತುಂಬಾದ ಸೀಮೆಗಳಲ್ಲಿ ವೊಂದೊಂದುವೇಳೆ ಬಿರುಘಾಳಿ ಬೀಸದಿದ್ದರೆ ಸ್ವಲ್ಪಕಾಲದವೊಳಗೆ ಮನುಷ್ಯ ಮೃಗಗಳಿಗೆ ಮರಣ ಬಾಧೀತು. ಯಿದಲ್ಲದೆ ಹಡಗಗಳನ್ನು ನಡಿಸುವದಕ್ಕೂ ದೊಡ್ಡದೊಡ್ಡಬೀಸುವ ಕಲ್ಲುಗಳನ್ನು ತಿರಿಗಿಸುವದಕ್ಕೂ ಯೀಮೊದಲಾದ ಅನೇಕ ರೀತಿಯಾಗಿ ಮನುಷ್ಯರು ಬೇರೆ ಬೇರೆ ದೇಶಗಳಲ್ಲಿ ಘಾಳಿಯನ್ನು ಪ್ರಯೋಜಿಸುತ್ತಾರೆ.

೧೩ ನೆ ಸಂಧಿ.

ಆಕಾಶದ ಉತ್ಪಾತಗಳು.

ಆಕಾಶದ ಮೇಘಗಳಲ್ಲಿ ಗಂಧಕ ಮೊದಲಾದ ಅನೇಕ ಲಘುಅಗ್ನಿಜ್ವಾಲನೆಗಳ ಸೂಕ್ಷ್ಮಭಾಗಗಳು ವ್ಯಾಪಿಸಿರುವದರಿಂದ ಅವುಗಳು ತಮತಮಗೆ ವರಿಸಿಕೊಳ್ಳುವಸಮಯದಲ್ಲಿ ಮಿಂಚುಯೆಂಬ ಬೆಂಕಿ ಯುಂಟಾಗುತ್ತದೆ. ಯೀಬೆಂಕಿಯು ವೊಂ

ದೊಂದುವೇಳೆ ಸ್ವಲ್ಪಮಾತ್ರವೂ ವೊಂದೊಂದುವೇಳೆ ಬಹಳ ದೊಡ್ಡದಾಗಿಯೂ ಆಗುತ್ತದೆ. ಅದುಅನೇಕಸಾರಿ ಶಿಲೆಗಳನ್ನು ಛೇಧಿಸಿ ಮರಗಳನ್ನುಶೀಳಿ ಮನೆಗಳನ್ನು ಸುಟ್ಟು ಮನುಷ್ಯ ಮೃಗಾದಿಗಳನ್ನು ಕೊಂದುಹಾಕಿದ ವರ್ತಮಾನಗಳಿರುತ್ತಾವೆ. ಆಬೆಂಕಿಯು ಪಂಚಲೋಹಗಳಮೇಲೆ ಬಿದ್ದರೆ ಅವುಗಳನ್ನು ತತ್ಕ್ಷಣದಲ್ಲಿ ಕರಗಿಸುತ್ತದೆ. ಹೀಗಿರುವದರಿಂದ ಅದುಮನುಷ್ಯರು ವೊಲೆಗಳಲ್ಲಿ ಮಾಡುವ ಬೆಂಕಿಗಿಂತ ಬೇರೆವಿಧವಾದದ್ದು ಯೆಂದು ತಿಳಿದುಕೊಳ್ಳಬಹುದು. ಯೀಮಿಂಚು ಬೆಂಕಿಯನ್ನು ಮಾಡುವದು ವಿಲಾಯಿತಿಯ ವಿದ್ವಾಂಸರಿಗೆ ಸುಮಾರು ೪೦ ವರ್ಷಗಳಮುಂಚೆ ತಿಳಿಯಬಂತು. ಅದನ್ನು ಮಾಡುವ ಬೇರೆಬೇರೆ ವಿಧವಾದ ಯಂತ್ರಗಳು ಯಿರುತ್ತಾವೆ. ಮತ್ತು ಆಕಾಶದಲ್ಲಿ ವುಂಟಾದ ಮಿಂಚು ಬೆಂಕಿಯು ಮನೆಗಳಮೇಲೆ ಬೀಳದಹಾಗೆ ಸಹಾ ಉಪಾಯಗಳನ್ನು ಕಂಡುಕೊಂಡಿದ್ದಾರೆ. ಯೀಗಲು ಮಿಂಚು ಬೆಂಕಿಯ ಸಂಣಸಂಣ ಕಿಡಿಗಳನ್ನು ರೋಗಿಷ್ಟರ ಶರೀರದಲ್ಲಿ ಬಿಟ್ಟು ಕೆಲವು ರೋಗಗಳು ಗುಣಮಾಡುತ್ತಾರೆ. ಆದರೆ ಮನುಷ್ಯರು ಮಾಡುವ ಯೀಮಿಂಚು ಬೆಂಕಿಯ ವಿವರವನ್ನು ಬೇರೊಂದು ಕಾಗದದಲ್ಲಿ ಸ್ಪಷ್ಟವಾಗಿ ಬರಿಯಲಿಕ್ಕೆ ನಿಶ್ಚೈಸಿಅದೆ. ಆಕಾಶದಲ್ಲಿ ಮಿಂಚು ಹುಟ್ಟುವಾಗ ಅದರಬೆಂಕಿಯು ದೂರಕ್ಕೆ ಪ್ರವಹಿಸುವದರಿಂದಲೂ ಮೇಘಗಳು ಛಿನ್ನವಾಗುವದರಿಂದಲೂ ಗುಡುಗುಯೆಂಬ ಶಬ್ದವುಂಟಾಗುತ್ತದೆ. ಗುಡುಗೂ ಮಿಂಚೂ ನಮಗೆ ಬಹಳ ಸಮೀಪವಾದರೆ ನಾವು ವೊಂದೊಂದು ಮಿಂಚನ್ನು ನೋಡುವಾಗಲೆ ಅದರದರ ಗುಡುಗನ್ನು ಕೇಳಬಹುದು. ಗುಡುಗೂ ಮಿಂಚೂ ದೂರವಾದರೆ ಮೊದಲು ಮಿಂಚುಪ್ರತ್ಯಕ್ಷವಾಗಿ ಆಮೇಲೆ ಗುಡುಗು ಕೇಳಬರುತ್ತದೆ. ಅದೇಪ್ರಕಾರ ಮದ್ದು ತುಂಬಿಸಿ ಕೋವಿಯನ್ನು ಅಥವಾ ಫಿರಂಗಿಯನ್ನು ಬಿಟ್ಟರೆಮುಂಚೆ ಬೆಂಕಿಯಪ್ರಕಾಶವು ಕಂಣಿಗೆಬಿದ್ದು ಆಮೇಲೆ ಶಬ್ದ ಕೇಳಬರುತ್ತದೆ. ಯಾಕೆಂದರೆ ಶಬ್ದಕ್ಕಿಂತ ಪ್ರಕಾಶವೂ ಕಿವಿಗಿಂತ ಕಂಣು ಚುರುಕಾಗಿದೆ.

ಗುಡುಗು ಮಿಂಚಿನಿಂದ ಸೃಷ್ಟಿಗೆ ಅನೇಕ ಉಪಕಾರಗಳುಂಟಾಗುತ್ತವೆ. ಗಾಳಿ ಯಿದರಿಂದಲೇ ಮುಖ್ಯವಾಗಿ ನಿರ್ಮಲವಾಗುತ್ತದೆ. ಮಳೆಗಾಲದಾರಂಭದಲ್ಲಿ ಗುಡುಗು ಮಿಂಚು ಆದಮೇಲೆ ಮನುಷ್ಯರ ಶರೀರದಲ್ಲಿ ಹೆಚ್ಚು ಸೌಖ್ಯವಾಗುತ್ತದೆಯೆಂಬುವದು ಸರ್ವರಿಗೆ ಗೊತ್ತು ಅದೆ. ಮತ್ತು ಆಕಾಶದಲ್ಲಿ ಮಿಂಚು ಬೆಂಕಿ ಕಡಿಮೆಯಾದಸಮಯದಲ್ಲಿ ಸನ್ನಿಮೊದಲಾದ ಅನೇಕ ರೋಗಗಳು ಬರುತ್ತಾವೆಂದು ವಿದ್ವಾಂಸರು ಹೇಳುತ್ತಾರೆ.

೨ ಅತಿವುತ್ತರವೂ ಅತಿದಕ್ಷಿಣವೂ ಆಗಿರುವದೇಶಗಳಲ್ಲಿ ಮುಂಚೆ ಹೇಳಿದಪ್ರಕಾರ ಸೂರ್ಯದಪ್ರಕಾಶವು ಬಹು ಕಡಿಮೆ ಯಿರುವದರಿಂದ ಆದೇಶಗಳ ದೀರ್ಘರಾತ್ರಿಸಮಯದಲ್ಲಿ ಅರುಣೋದಯದ ವ್ರೋಪಾದಿಯಲ್ಲಿ ಹೊಳೆಯುವವೊಂದು ಪ್ರಕಾಶವು ವುಂಟಾಗುತ್ತದೆ. ಅದಕ್ಕೆ ವುತ್ತರಪ್ರಕಾಶವೆಂದು ಹೆಸರುವುಂಟು. ಅದು ವುತ್ತರದಿಂದಾರಂಭಿಸಿ ಮಧ್ಯ ಆಕಾಶದ ಪರಿಯಂತರ ಅತಿಸೌಂದರ್ಯವಾದ ಕಿರಣಮಾಲೆ ಕಿರೀಟಗಳ ರೂಪವಾಗಿ ಪ್ರಜ್ವಲಿಸ ಆದೇಶದವರಿಗೆ ಪ್ರಕಾಶವಂನುಂಟುಮಾಡುತ್ತದೆ. ಆಪ್ರಕಾಶವು ನಿರ್ಮಲ ಆಕಾಶದಲ್ಲಿಮಾತ್ರ ಹುಟ್ಟುವದರಿಂದ ಅದರಆಚೆಯಿಂದ ವೊಂಮೊಂದುವೇಳೆ ನಕ್ಷತ್ರಗಳುಸಹಾ ಕಾಣುತ್ತವೆ.

೩ ಆಕಾಶದಮೇಘಗಳಲ್ಲಿರುವ ಸ್ಥೂಲವಸ್ತುಗಳು ವೊಂದೊಂದುವೇಳೆ ಗೋಳದವ್ರೋಪಾದಿಯಲ್ಲಿ ಕೂಡಿಕೊಂಡು ಪ್ರಜ್ವಲಿಸುವಾಗ ವುಲ್ಕಾಪಾತಯೆಂಬುವದು ವುಂಟಾಗುತ್ತದೆ. ಯೀ ಗೋಳಗಳು ಬಹಳ ವೇಗದಿಂದ ಆಕಾಶವನ್ನು ದಾಟಿ ಕಡೆಯಲ್ಲಿ ಫಿರಂಗಿಬಿಟ್ಟಹಾಗೆ ವೊಂದುಶಬ್ದವನ್ನು ಮಾಡಿ ವಡೆದುಹೋಗಿ ನೆಲಕ್ಕೆ ಬೀಳುತ್ತವೆ. ಅವುಗಳುಬಿದ್ದಸ್ಥಳವನ್ನು ಹುಡುಕಿದರೆ ಕೆಲವುಸಾರಿ ಪಂಚಲೋಹಗಳೂ ಕೆಲವುಸಾರಿ ಬಿಳಿಮಿತ್ತಗಾದ ಮೇಣದಹಾಗಿರುವ ವೊಂದು ವಸ್ತು ಸಿಕ್ಕುತ್ತದೆ. ಯಿದೇಜಾತಿಯಲ್ಲಿ ರಾತ್ರಿರಾತ್ರಿಯಲ್ಲಿ ಕಾಣುವ ನಕ್ಷತ್ರಪತನಗಳು ಸೇರ್ದ್ಯಾವೆಂದು ನೆನಸಬಹುದು. ಆದರೆ ವರ್ಷಕ್ಕೆ ವೊಂದೆರಡುಸಾರಿ ವಿಶೇಷವಾಗಿ ಬಹಳ ನಕ್ಷತ್ರ ಪತನಗಳುಂಟಾಗಿರುವದರಿಂದ ಯೀನಕ್ಷತ್ರಪತನಗಳು ಭೂಮಿಯು ಸೂರ್ಯನಸುತ್ತಲು ತಿರುಗುವಮಾರ್ಗದಲ್ಲಿ ಭೂಮಿಗೆದುರಾಗಿ ವೊಂದು ಸ್ಥಳದಲ್ಲಿ ಹೆಚ್ಚಾಗಿಯೂ ವೊಂದುಸ್ಥಳದಲ್ಲಿ ಕಡಿಮೆಯಾಗಿಯೂ ಯಿದ್ದಾವೆಂದು ವಿದ್ವಾಂಸರು ನೆನಸುತ್ತಾರೆ.

೪ ಮಳೆಬಿಲ್ಲು ಸೂರ್ಯನು ಪ್ರಕಾಶಿಸುವಸಮಯದಲ್ಲಿ ಮಳೆಬಿದ್ದರೆ ಮಾತ್ರ ವುಂಟಾಗುತ್ತದೆ. ಹೀಗಿರುವದರಿಂದ ಯಾರಾದರು ವೊಂದು ಪಿಚಕಾರಿಯಿಂದ ಬಿಸಲಿರುವಸಮಯದಲ್ಲಿ ಸೂರ್ಯನಿಗೆದುರಾಗಿ ನೀರನ್ನು ಬಿಟ್ಟರೆ ಸಂಣಮಳೆಬಿಲ್ಲನ್ನು ಕಾಣ ಮಾಡಬಹುದು. ವೊಂದೊಂದುವೇಳೆ ಚಂದ್ರನಿಗೆ ಬಹಳ ಪ್ರಕಾಶವಿದ್ದರೆ ಚಂದ್ರಪ್ರಕಾಶದಲ್ಲಿ ಬಿದ್ದಮಳೆಯಿಂದ ಸಹಾ ಮಳೆಬಿಲ್ಲು ವುಂಟಾಗುತ್ತದೆ. ಯೀಬಿಲ್ಲನ್ನು ಜಲಪ್ರಳೆಯ ಯಿಂನೊಮ್ಮೆ ಬರುವದಿಲ್ಲವೆಂಬ ಗುರ್ತಾಗಿ ದೇವರು ನೇಮಿಸಿದ್ದಾನೆಂದು ಆತನವಾಕ್ಯದಲ್ಲಿ ಬರೆದಿರುತ್ತದೆ.

ಮೊದಲನೆ ಪುಸ್ತಕ ಸಾಲ್ವತ್ತನೆ ಪುಟದಲ್ಲಿ ತೀರದೆ ಯಿದ್ದ ಯಿಂಗ್ಲಾಂಡ್ ರಾಜ್ಯದ ಪೂರ್ವ ಚರಿತ್ರೆ

The History of England.——Continued.

೭ನೆ ಸಂಧಿ.

೨ನೆ ರಿಚರ್ಡ್ ೪ನೆಹೆನ್ರಿ ೫ನೆಹೆನ್ರಿ ೧೩೭೭ನೆ ವರ್ಷದಾರಭ್ಯ ೧೪೨೨ನೆ ವರ್ಷದಪರಿಯಂತರ

೨ನೆ ರಿಚರ್ಡನು ತಂನ ಅಜ್ಜನಸಿಂಹಾಸನವಂನು ಪಡಕೊಳ್ಳುವ ಸಮಯದಲ್ಲಿ ೧೧ವರ್ಷಪ್ರಾಯದವನಾಗಿದ್ದನು. ಹೀಗೆ ಅವನು ಚಿಕ್ಕಪ್ರಾಯದವನಾಗಿರುವದರಿಂದ ಲಂಕಸ್ತರ್ ಯೊರ್ಕ್ ಗ್ಲೊಸ್ತರ್ ಯೆಂಬಅವನಚಿಕ್ಕಪ್ಪಂದಿರು ಅವನಿಗೋಸ್ಕರ ರಾಜ್ಯವಂನು ನಡಿಸುತ್ತಿದ್ದರು. ಆಸಮಯದಲ್ಲಿ ಜಾರ್ಜ್ ಬಾಲ್ ಯೆಂಬವನೊಬ್ಬನು ಪ್ರಜೆಗಳಿಗೆ ಕಾಟಕಾಯಿ ಯೆಬ್ಬಿಸಬೇಕೆಂದು ಬೋಧನೆಕೊಟ್ಟದರಿಂದಲೂ ಸರ್ಕಾರದವರುಯವ್ವನತುಂಬಿದ ಸ್ತ್ರೀ ಪುರುಷರೆಲ್ಲರಿಗೆ ಮಂಡೆಸುಂಕವಂನು ನೇಮಿಸಿದರಿಂದಲೂ ಮಹಾ ಕಾಟಕಾಯಿ ವುಂಟಾಗಿ ವೊಟ್ ಟೈಲರ್ ಯೆಂಬ ವೊಬ್ಬ ಕಂಮಾರನ ಅಪ್ಪಣೆವಳಗಿರುವ ೩ಲಕ್ಷಮಂದಿ ಲೊಂಡೊನ್ ಪಟ್ಟಣದಸಮೀಪದಲ್ಲಿ ಕೂಡಿಕೊಂಡರು. ಅರಸನು ಕೋಟೆಗೆ ವೋಡಿಹೋದಮೇಲೆ ಆಗುಂಪುಜನರು ಪಟ್ಟಣದಲ್ಲಿ ಪ್ರವೇಶಿಸಿ ಸಿಕ್ಕಿದಯೆಲ್ಲಾ ಧೊರೆಗಳಂನೂ ಪರದೇಶಿಯರಂನೂ ಕೊಂದುಹಾಕಿ ಸರ್ದಾರರ ಮನೆಗಳಂನು ಕೆಡಿಸಿಬಿಟ್ಟರು. ಅರಸನು ಅವರ ಹತ್ತರ ಮಾತಾಡಬೇಕೆಂದು ನಿಶ್ಚೈಸಿಕೊಂಡು ತಾನು ಬರುತ್ತೇನೆಂದು ಅವರಬಳಿಗೆ ವರ್ತಮಾನವಂನು ಕಳುಹಿಸಿ ಸ್ವಲ್ಪಮಂದಿ ಸ್ನೇಹಿತರಸಂಗಡ ನಿರಾಯುಧನಾಗಿ ಅವರಂನುನೋಡಲಿಕ್ಕೆ ಹೋಗಿ ಅವರಂನು ಶಾಂತಪಡಿಸಿ ಅವರ ಸಂಕಟಗಳಂನು ತಾನೇ ವಿಚಾರಿಸುತ್ತೇನೆಂದು ವಚನಕೊಟ್ಟು ಹೆಚ್ಚಾದವರು ಸ್ವಮನೆಗಳಿಗೆ ತಿರುಗುವಹಾಗೆಮಾಡಿದನು. ಕಾಟಕಾಯಿಯೆಬ್ಬಿಸಿದವರಲ್ಲಿ ಅಧಿಕವಾಗಿ ಕೆಟ್ಟವರು ವೊಟ್ ಟೈಲರನಸಂಗಡಯಿಂನು

ಮುಂಚಿಲೂಟಿಯಂನೂ ಕಾಟಕಾಯಿಯಂನೂ ನಡಿಸುವದರಿಂದ ಮರುದಿವಸದಲ್ಲಿ ಅರಸನು ಕೆಲವುಮಂದಿ ಸವಾರರ ಸಂಗಡ ಲೊಂದೊನ್ ಪಟ್ಟಣದ ಬಾಜಾರದಲ್ಲಿ ಅವರಂನು ನೋಡಲಿಕ್ಕೆ ಹೋದಾಗ ಆಪ್ರೊಕ್ ಕ್ರೈಲರ್ ಯೆಂಬವನು ೨೦ ಸಾವಿರ ಮಂದಿಯ ಸಂಗಡ ಅರಸನ ಭೇಟಿಗೆ ಬಂದು ಬಹಳ ಅಪಮರ್ಯಾದೆಯಾಗಿ ಮಾತಾಡಿದದರಿಂದ ಲೊಂದೊನ್ ಪಟ್ಟಣದ ಮೊಖ್ತೇಸರನಾದ ವೊಲ್ ವೊರ್ತ್ ಯೆಂಬವನು ಅವನ ಅಪಮರ್ಯಾದೆಯಂನು ತಾಳಕೂಡದೆ ತಂನ ಚಿಂನದ ಗದೆಯಿಂದ ಅವನಿಗೆ ಹೊಡಿದು ಅವನು ಕುದರೆಯಿಂದ ಬೀಳುವ ಹಾಗೆ ಮಾಡಿದನು. ಅವನು ಬಿದ್ದಕ್ಷಣ ಮೊಖ್ತೇಸರನ ಸೇವಕರಲ್ಲಿ ಒಬ್ಬನು ಅವನಂನು ಕೊಂದುಹಾಕಿದನು. ಕಾಟಕಾಯಿ ನಡಿಸಿದ ಮುಖ್ಯಸ್ಥನು ಸತ್ತನೆಂದು ನೋಡಿ ಉಳಿದವರು ಬಹುಭಯಸ್ಥರಾದರು. ಆಗಲು ಅರಸನು ನಿಂಮ ನಾಯಕ ಸತ್ತದಕ್ಕೆ ಭಯಪಡುತ್ತೀರೋ ನನಗೆ ಹಿಂಬಾಲಿಸಿರಿ ನಾನೇ ನಿಂಮ ನಾಯಕನೆಂದು ಹೇಳಿ ಅವರಂನು ಮತ್ತೊಂದು ಸ್ಥಳಕ್ಕೆ ಕರೆದುಕೊಂಡು ಅವರಿಗೆ ಶಾಂತಪಡಿಸಿ ಯೀ ಕಾಟಕಾಯಿಯಂನು ಚಂನಾಗಿ ತೀರಿಸಿದನು. ಯೀಪ್ರಕಾರ ರಾಜ್ಯವಂನು ಆಳಲಿಕ್ಕೆ ಒಳ್ಳೆ ಆರಂಭ ಮಾಡಿದ ಅರಸನು ಆ ಮೇಲೆ ಬೇರೆ ಬೇರೆ ದುರ್ಬುದ್ಧಿಯುಳ್ಳ ಕ್ರಿಯೆಗಳಿಂದಲೂ ಪ್ರಜೆಗಳಿಗೆ ಕೊಡುವ ಉಪದ್ರದಿಂದಲೂ ಯೆಲ್ಲರ ಪ್ರೀತಿಯಂನು ಕಳೆದುಕೊಂಡನು. ಕಡೆಯಲ್ಲಿ ಅರಸನ ಚಿಕ್ಕಪ್ಪನಾದ ಲಂಕಸ್ತರ್ ಯೆಂಬವನ ಮಗ ಹೆನ್ರಿ ಬೊಲಿಙ್ ಬ್ರೋಕ್ ಯೆಂಬವನಿಗೂ ನೊರ್ ಫೊಲ್ಕ್ ಯೆಂಬ ಸರದಾರಗೂ ಝಗಳವುಂಟಾಗುವಾಗ ಅರಸನು ದ್ವಂದ್ವಯುದ್ಧದಿಂದ ಅದಂನು ತೀರಿಸಲಿಕ್ಕೆ ಅಪ್ಪಣೆಕೊಟ್ಟ ಮೇಲೆ ಆ ಯುದ್ಧವು ಆರಂಭಿಸಲಿಕ್ಕಾಗುವಾಗ ಅರಸನು ಯಿಬ್ಬರಂನು ಬೊಲಿಙ್ ಬ್ರೋಕ್ ಯೆಂಬವನಂನು ೧೦ ವರ್ಷಕ್ಕೆ ಮತ್ತೊಬ್ಬನಂನು ಜೀವಾಂತ್ಯದವರೆಗೆ ಗಡಿಪಾರ ಮಾಡಿಸಿದನು. ತರುವಾಯ ಆ ಬೊಲಿಙ್ ಬ್ರೋಕ್ ಯೆಂಬವನ ತಂದೆ ಸಾಯುವಾಗ ಅರಸನು ಅವನ ಆಸ್ಥಿಯಂನು ತೆಗದುಕೊಂಡದರಿಂದ ಯಿವನು ಬಹಳ ಕೋಪಮಾಡಿ ಅರಸನು ಆಯರ್ಲಂಡ್ ದೇಶದಲ್ಲಿರುವ ಸಮಯದಲ್ಲಿ ೬೦ ಮಂದಿಯ ಸಂಗಡ ಯಿಂಗ್ಲಾಂಡ್ ದೇಶದಲ್ಲಿ ಪ್ರವೇಶಿಸಿ ಅನೇಕ ಸರದಾರರಂನು ತಂನ ಸಂಗಡ ಕೂಡಿಸಿಕೊಂಡು ಕಾಟಕಾಯಿ ಯೆಬ್ಬಿಸಿ ಅರಸನಂನು ತಂನ ವಶ ಮಾಡಿಕೊಂಡು ೧ ಕೋಟೆಯಲ್ಲಿ ಮಡಗಿ ಕೊಲೆಯವರಾದ ನರಹಿಂಸಕರಿಂದ ಕೊಲ್ಲಿಸಿದನು. ಕೆಲವರು ಅವನು ಅರಸನಿಗೆ ಆಹಾರವಂನು ಕೊಡದೆಯಿದ್ದದರಿಂದ ಯೀತನು ತಂನ ಹಾಸಿಗೆಯಲ್ಲಿರುವ ಹತ್ತಿ ಮೊದಲಾದವುಗಳು ಭಕ್ಷಿಸಿ ೧೪ ದಿವಸಪರಿಯಂತರ ಬದುಕಿ ಆ ಮೇಲೆ ಸತ್ತನೆಂದು ಹೇಳುತ್ತಾರೆ. ಹೀಗೆಯೆ ೨ ನೆ ರಿಕಾರ್ದನು ೨೩ ವರ್ಷ ಆಳಿದ ಮೇಲೆ ತಂನ ವಯಸ್ಸಿನ ೩೪ ನೆ ವರ್ಷವಾದ ೧೩೯೯ ನೆ ವರ್ಷದಲ್ಲಿ ಸತ್ತುಹೋದನು.

ಮೊದಲನೆ ಪುಸ್ತಕ ಯೈವತ್ತೆರಡನೆ ಪುಟದಲ್ಲಿ ತೀರದೆ ಯಿದ್ದ

An Account of Hindostan.—Continued.

ಹಿಂದುದೇಶದ ವರ್ಣನೆಯು.

ದೇವಗಿರಿ ಅರಸಪಟ್ಟಣವಾದದರಿಂದ ಗೋದಾವರಿ ತೀರದಲ್ಲಿರುವ ಪಕ್ಕಲಿಗರು ಅಧಿಕವಾದ ಗುತ್ತಿಗೆ ಕೊಡಕೂಡದೇ ಗ್ರಾಮಗಳಂನು ಸುಟ್ಟುಬಿಟ್ಟು ಸಂಸಾರಗಳಂನೂ ಮಂತಿಗಳಂನೂ ತೆಗದುಕೊಂಡು ಅಡವಿಗೆ ಹೋದರು. ಅನೇಕ ದೊಡ್ಡ ಪಟ್ಟಣಗಳು ನಿವಾಸ ಯಿಲ್ಲವುಗಳಾಗಿದ್ದವು. ದೌಲತಾಬಾದ್ ಸಹಾ ಅಭಿವೃದ್ಧಿಯಾಗದೆ ಯಿರುವದರಿಂದ ನಿವಾಸಿಗಳಿಗೆ ತಿರುಗಿ ಡಿಲ್ಲಿಗೆ ಬರಬಹುದೆಂದು ಅಪ್ಪಣೆ ಆಯಿತು. ಆಗ್ಯೆ ದಕ್ಷಿಣ ಹಿಂದುರಾಯರು ಮುಸಲ್ಮಾನರ ನೊಗವಂನು ತಾಳಲಾರದೆ ಒಡಂಬಡಿಕೆ ಮಾಡಿಕೊಂಡು ಮುಂಚಿನ ಆನೆಗುಂದಿ ಸ್ಥಳದಲ್ಲಿ ೧೩೩೬ ನೆ ವರ್ಷದಲ್ಲಿ ವಿಜಯನಗರವಂನು ಕಟ್ಟಿ ಮುಸಲ್ಮಾನರ ಕೈಯಿಂದ ದೌಲತಾಬಾದ ಹೊರ್ತಾದ ಪಟ್ಟಣಗಳಂನು ತೆಗದು ಕರ್ನಾಟಕ ಅರಸತನವಂನು ಸ್ಥಾಪಿಸಿದರು. ಅದೇ ಪ್ರಕಾರ ಬಂಗಾಲರಾಜ್ಯವು ಸ್ವವಶವಾದದರಿಂದ ಮಹಮ್ಮದನ ಮೇಲೆ ಬಂದ ಫಿರೊಸ್ ತೊಘ್ಲೂಕ ರಾಜ್ಯವಂನು ಹೆಚ್ಚಾದ ಬುದ್ಧಿಯಿಂದಲೂ ದಯೆಯಿಂದಲೂ ಪರಿಪಾಲಿಸಿ ಡಿಲ್ಲಿಹತ್ರ ಸರಸ್ವತಿ ತೀರದಲ್ಲಿ ಫಿರೋಜಬಾದ್ ಯೆಂಬ ಅರಸಪಟ್ಟಣವಂನು ಬೇರೆ ಬೇರೆ ಪ್ರಯೋಜನವಾದ ಮನೆ ಮಾರ್ಗ ಬಾವಿಯಾದಿಗಳಂನು ಕಟ್ಟಿಸಿದನು ೩೨ ವರ್ಷದೊಳಗೆ ಅವನು ತೀರಿಸಿದ ಕೆಲಸಗಳು ಯಾವ್ಯಾವೆಂದರೆ ೪೦ ಕಟ್ಟೆಗಳು ೩೦ ಕೆರೆಗಳು ೧೦ ಬಾವಿ ೧೫೦ ಸಂಕಗಳು ಲೆಖ್ಖಯಿಲ್ಲದ ತೋಟಗಳು ೨೦ ಅರಮನೆಗಳು ೫ ಗೋರಿಗಳು ೧೦ ಶಾಸನಸ್ತಂಭಗಳು ೪೦ ಮಸೂದಿಗಳು ೩೦ ವಿದ್ಯಾಶಾಲೆಗಳು ೧೦೦ ಛತ್ರಗಳು ೧೦೦ ರೋಗಿಷ್ಟರ ಮನೆಗಳು ೧೦೦ ಬಚ್ಚಲ ಮನೆಗಳು ೨೦೦ ಹೊಸ ಪಟ್ಟಣಗಳು ಯೀ ಫಿರೋಜನು ೧೩೮೫ ನೆ ವರ್ಷದಲ್ಲಿ ಸತ್ತುಹೋದ ಮೇಲೆ ಕೆಲವು ವರ್ಷಪರಿಯಂತರ ರಾಜ್ಯವು ಗಲಿಬಿಲಿಯಾಗಿತ್ತು ಆ ಮೇಲೆ ೧೩೯೮ ನೆ ವರ್ಷದಲ್ಲಿ ತಿಮೊರ್ಲಂಗ ಸಿಂಧುನದಿದಾಟಿ ಡಿಲ್ಲಿ ಅರಸನಾಗಿ ೧೦೦ ವರ್ಷ ಪರಿಯಂತರ ನಾಶಿಯಾಗದ ಘಾಯಗಳಂನು ಹಿಂದುದೇಶಕ್ಕೆ ಹೊಡಿದನು.

ಮೊದಲನೆ ಪುಸ್ತಕ ಯೈವತ್ತೆರಡನೆ ಪುಟದಲ್ಲಿ ತೀರದೆಯಿದ್ದ

On the Trade of Hindostan.—Continued.

ಹಿಂದುಸ್ಥಾನ್ ದೇಶದ ವರ್ತಕನನ್ನುಸರಿತದ್ದು.

ಅರಸೇಡು. ಸೋರುಪ್ಪ. ಅದು ಹಿಂದುಸ್ಥಾನ್ ದೇಶದಲ್ಲಿ ಬಹಳಾ ಪ್ರಸಿದ್ಧವಾಗಿ ಯಿರುವದು. ಅದರಿಂದಲೇ ಫಿರಂಗಿಮದ್ದು ಮಾಡಿಸಲ್ಪಟ್ಟ ಕುಂಪಣೀಯವರ ಫಿರಂಗಿಮದ್ದಿನ ಉಗ್ರಾಣಗಳಲ್ಲಿ ಆ ಸೋರುಪ್ಪ ಬಹಳಾ ಖರ್ಚಾಗುವದು. ಆ ಮದ್ದು ಇಙ್ಗ್ಲಾಣ್ಡ್ ದೇಶಕ್ಕೆ ವಿಸ್ತಾರವಾಗಿ ಕಳುಹಿಸಲ್ಪಡುವದು. ಹಿಂದುಸ್ಥಾನ್ ದೇಶದಲ್ಲಿ ಮಾಡಲ್ಪಡುವ ಮೇಲೆ ಹೇಳಿದ ಯೀ ಫಿರಂಗಿಮದ್ದು ಯಿತರ ದೇಶಗಳಿಗೂ ಕಳುಹಿಸಲ್ಪಡುವದು.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡ ಸಮಾಚಾರವು.

೧೮೪೪.

೧ನೆ ಪುಸ್ತಕ. ೧೫ನೆ ಅಂಕೆ] ಬಳ್ಳಾರಿ ೧ನೆ ಅಕ್ಟೋಬರ್ [ಟಪಾಲ ದಸ್ತೂರಿಕೂಡಿ ಕ್ರಯ ೨ದುಡ್ಡು.

Accouchment of Her Majesty.
Birth of a Prince.

ಇಂಗ್ಲಾಂಡ್ ದೇಶದ ರಾಣಿಯು ೪ನೆ ಮಗುವಂನು ಹೆತ್ತದ್ದು.

೬ನೆ ಆಗಸ್ಟಿನಲ್ಲಿ ಬೆಳಿಗ್ಗೆ ಏಳುಘಂಟೆಯ ಮೇಲೆ ಐವತ್ತು ಮಿನಿಟ್ಟಿನಲ್ಲಿ ವಿಕ್ಟೋರಿಯ ರಾಣಿಯೂ ಒಂದು ಗಂಡುಮಗುವಂನು ಹೆತ್ತು ತಾಯಿಯೂ ಮಗನೂ ಕ್ಷೇಮವಾಗಿದ್ದಾರೆಂದು ೯ನೆ ಆಗಸ್ಟಿನಲ್ಲಿ ಬರೆದ ವರ್ತಮಾನ ಯೀಗ ಮುಂಬೈಯಲ್ಲಿ ಮುಟ್ಟಿದ ಆವೀಹಡಗದಿಂದ ಬಂತು.

Sir Robert and Lady Sale.

ಸರ್ ರೊಬರ್ಟ್ ಸೇಲ್ ಧೊರೆಯೂ ಅವರ ಹೆಂಡತಿಯೂ ಇಂಗ್ಲಾಂಡ್ ದೇಶಕ್ಕೆ ಬಂದದ್ದು.

ಆಫ್ಗಾನ್ ದೇಶದಲ್ಲಿ ಆದ ಯುದ್ಧದ ಸಮಯದಲ್ಲಿ ಸರ್ ರೊಬರ್ಟ್ ಸೇಲ್ ಒಂದು ಪಟಾಲಾಮಿನ ಸಂಗಡ ಜಲಾಲಾಬಾದ್ ಕೋಟೆಯಂನು ಬಹಳ ದಿಂಗಳು ಕಾಪಾಡಿ ಕಡೇಲಿ ಆರುಸಾವಿರ ಆಫ್ಗಾನ್ ಜನರ ಸಂಗಡ ಆ ಕೋಟೆಯಂನು ತೆಗದುಕೊಳ್ಳಲಿಕ್ಕೆ ಬಂದ ಅಕಬರ್ ಖಾನ್ ಯೆಂಬವನಂನು ಒಳ್ಳೇಯುದ್ಧದಲ್ಲಿ ಜೈಸಿ ಬಹಳ ಕೀರ್ತಿಯಂನು ಹೊಂದಿದರು ಅದೇ ಕಾಲದಲ್ಲಿ ಅವರ ಹೆಂಡತಿಯು ಸರದಾರರಾದ ಒಬ್ಬ ಅಳಿಯಂದಿರ ಸಂಗಡ ಕಾಬೂಲಿನಲ್ಲಿ ಯಿದ್ದರು. ಅಲ್ಲಿ ಇಂಗ್ಲಿಷ್ ಜನರು ಅಪಜಯಪಟ್ಟು ಸರದಾರರಲ್ಲಿ ಅನೇಕರು ಶಿಪಾಯರ ಸಂಗಡ ಸತ್ತು ಉಳಿದವರು ತಂಮ ಹೆಂಡರ ಮಕ್ಕಳ ಸಂಗಡ ಆಫ್ಗಾನ್ ದೇಶಸ್ಥರ ಕೈಯಲ್ಲಿ ಬಿದ್ದಾಗ ಯೀಧೊರೆಸಾನಿಯು ಧೊರೆಗಳಿಗಿಂತ ಹೆಚ್ಚು ಧೈರ್ಯವಾಗಿದ್ದು ತಂಮ ಸಂಗಡ ಯಿರುವವರಿಗೆ ಸಮಾಧಾನಿಸಿ ಬುದ್ಧಿ ಹೇಳುತ್ತಾ ಯಿದ್ದಳು ಆಫ್ಗಾನ್ ದೇಶಸ್ಥರು ಜೈಸಲ್ಪಟ್ಟಮೇಲೆ ಸೇಲ್ ಧೊರೆಸಾನಿ ಮೊದಲಾದ ಕೈದಿಯವರು ಬಿಡುಗಡೆಯಾಗಿ ಇಂಗ್ಲಿಷ್ ದಂಡಿಗೆ ತಿರುಗಿಬಂದರು ೨೨ನೆ ಜೂಲಾಯಿನಲ್ಲಿ ಸರ್ ರೊಬರ್ಟ್ ಸೇಲವರೂ ಅವರ ಧೊರೆಸಾನಿಯೂ ಇಂಗ್ಲಾಂಡ್ ದೇಶದ ತೀರಕ್ಕೆ ಬಂದಾಗ ಜನರೆಲ್ಲರು ಅವರಿಗೆ ಬಹಳ ಮಾನಮಾಡಿ ಸರ್ಕಾರದವರು ಸೇಲ್ ಧೊರೆಸಾನಿಗೆ ವರ್ಷಕ್ಕೆ ಐದುಸಾವಿರರೂಪಾಯಿ ಪಿಂಚನ್ ನೇಮಿಸಿದ್ದಾರೆ.

Madras.

ಮದ್ರಾಸ್.

ಘನಉಳ್ಳ ಗವರ್ನರ್ ಮಾರ್ಕ್ವಿಸ್ ಆಫ್ ಟ್ವೀಡ್ಡೇಲ್ ಬಹದೂರ್ ಮದ್ರಾಸಿನಿಂ ಹೊರಟು ಬೆಂಗಳೂರಿಗೂ ನೀಲಗಿರಿಯಲ್ಲಿರುವ ಒತ್ತೈಗೂ ದಕ್ಷಿಣದಲ್ಲಿರುವ ಕೋವೆಮುತ್ತೂರಿಗೂ ಹೋಗಿ ಯೀಮಾರ್ಗವಾಗಿ ತಂಮ ಅಧಿಕಾರದೊಳಗಿರುವ ದೇಶವಂನು ಸಂಚರಿಸಿ ವಿಚಾರಿಸಿ ನೋಡುವರೆಂದು ವರ್ತಮಾನ ಉಂಟು.

ಆದೆನ್.

ಅರ್ಬಸ್ಥಾನ್ ದೇಶದ ದಕ್ಷಿಣಭಾಗದಲ್ಲಿರುವ ಸಮುದ್ರದತೀರದಲ್ಲಿ ಕುಂಪಣೀ ಸರ್ಕಾರದವರು ಕೆಲವುವರ್ಷದ ಹಿಂದೆ ಆ ದೇಶಸ್ಥರ ಮುಖ್ಯಸ್ಥರಲ್ಲಿ ಒಬ್ಬನ ಕೈಯಿಂದ ಒಂದುಸ್ಥಳವಂನು ಕ್ರಯಕ್ಕೆ ತೆಗದುಕೊಂಡು ಅದರಲ್ಲಿ ಒಂದು ಕೋಟೆಯಂನು ಕಟ್ಟಿಸಿ ತಂಮ ಹಡಗಗಳಿಗೋಸ್ಕರ ಠಾವುಮಾಡಿ ಆ ಹಡಗಗಳಿಗೆ ಬೇಕಾದ ಕೋಲ್ಸ್ ಯೆಂಬ ಕಲ್ಲುಮಸಿಗಳ ಗಡಂಗಗಳಂನು ಸ್ಥಾಪಿಸಿ ಯಿದ್ದರು. ಆದರೆ ಆ ಅರ್ಬಸ್ಥಾನದವರು ಇಂಗ್ಲಿಷ್ ಜನರು ತಂಮ ದೇಶದಲ್ಲಿ ಸೇರುವದಂನು ನೋಡಿ ಭಯವೂ ಕೋಪವೂ ಪಟ್ಟು ಅವರಂನು ತಂಮ ದೇಶದಿಂದ ತಿರುಗಿ ಹೊರಡಿಸಬೇಕೆಂದು ಯುದ್ಧವಂನಾರಂಭಿಸಿದರು. ಕುಂಪಣೀ ಸರ್ಕಾರದವರು ತಂಮ ಆಲೋಚನೆ ಬಿಡದೆ ಮುಂಕೊಂಡದ್ದಂನು ತೀರಿಸಿ ಸಾಕಷ್ಟುಪಟಾಲಮುಗಳಂನು ಅಲ್ಲಿಗೆ ಕಳುಹಿಸಿ ಉತ್ತಮಕೋಟೆಯಂನು ಕಟ್ಟಿಸಿ ತಂಮ ಅಧಿಕಾರವಂನು ದೃಢಮಾಡಿದ್ದಾರೆ. ಯೀಗಲು ಅರ್ಬಸ್ಥಾನದವರು ಇಪ್ಪತ್ತುಸಾವಿರಮಂದಿ ಸೈನ್ಯವಂನುಕೂಡಿಸಿ ಆದೆನ್ ಕೋಟೆಯಂನು ಮುತ್ತಿಗೆ ಹಾಕಿ ತೆಗದುಕೊಳಬೇಕೆಂದು ಪ್ರಯತ್ನಮಾಡುತ್ತಾರೆಂದು ಸುದ್ದಿಯಾಯಿತು. ಅವರು ಹೀಗೆಮಾಡಿದರೆ ಮೋಸಆಗುವದು. ಅರಬ್ಬಿಯರು ಇಂಗ್ಲಿಷ್ ಜನರಂನು ಜೈಸಲಾರರು. ಮತ್ತು ಯೀಪ್ರಕಾರ ಅನ್ಯಾಯದಿಂದ ಯುದ್ಧವಂನು ಯೆಬ್ಬಿಸಿದರೆ ಒಂದುವೇಳೆ ಅಪಜಯಪಟ್ಟು ಇಂಗ್ಲಿಷ್ ಅಧಿಕಾರದೊಳಗೆ ಸೇರಬೇಕಾಗುವರು.

History of the World.
By the Rev. B. Rice.
ಲೋಕದ ಚರಿತ್ರೆ.

Introduction.
ಮುಂಭಾಗವು.

೧. ಲೋಕದಚರಿತ್ರೆಯು. ಮನುಷ್ಯರಲ್ಲಿ ಸಂಭವಿಸಿರುವ ಮುಖ್ಯವಾದ ಕಾರ್ಯಗಳನ್ನು ತಿಳಿಯಮಾಡುತ್ತದೆ.

೨. ಲೋಕದ ಚರಿತ್ರೆಯನ್ನು ಯುಕ್ತವಾಗಿ ಓದುವದಕ್ಕೆ

೧.) ದೇವರು ಸಮಸ್ತವನ್ನು ಆಳುತ್ತಾನೆಂದು ಜ್ಞಾಪಕಮಾಡಿಕೊಳ್ಳಬೇಕು.

ಮನುಷ್ಯರಲ್ಲಿ ಯೇನು ವುಂಟಾದಾಗ್ಯೂ ದೇವರ ಅಪ್ಪಣೆಯಿಂದಲಾಗಲಿ ಆತನು ಅದಕ್ಕೆ ಸ್ಥಳಕೊಟ್ಟಿರುವದರಿಂದಲಾಗಲಿ ವುಂಟಾಗುತ್ತದೆ. ಮನುಷ್ಯರು ಸ್ವಯಿಚ್ಛೆಯ ಪ್ರಕಾರ ನಡಿದು ತಮಗೆ ಯುಕ್ತವಾಗಿ ಕಾಣಿಸುವದನ್ನು ಮಾಡುತ್ತಾ ಇರುವಾಗ ದೇವರು ಅದರ ಮುಖಾಂತ್ರವೇ ತನ್ನ ಚಿತ್ತಕ್ಕೆ ಸಮರ್ಪಕವಾದದ್ದನ್ನು ಯಾವಾಗಲು ಈಡೇರಿಸುತ್ತಾ ಬರುತ್ತಾನೆ.

೨.) ಸತ್ಯವೇದದಲ್ಲಿ ಬರದಿರುವ ಕಾರ್ಯಗಳನ್ನು ಜ್ಞಾಪಕಮಾಡಿ ಲೋಕದಚರಿತ್ರೆಯನ್ನು ಓದಬೇಕು.

ಮನುಷ್ಯರು ನಡಿಸುವ ಕಾರ್ಯಗಳು ಯುಕ್ತವಾದವುಗಳೋ ಅಲ್ಲವೋ ಇದನ್ನು ತಿಳಿಯುವದಕ್ಕೆ ದೇವವಾಕ್ಯ ಪ್ರಮಾಣವನ್ನು ನೋಡಿ ಸಮಸ್ತವನ್ನು ಪರಿಕ್ಷೆ ಮಾಡಬೇಕು

೩.) ಯೇಸುಕ್ರೀಸ್ತನ ರಾಜ್ಯವು ಭೂಲೋಕದಲ್ಲೆಲ್ಲಿಯೂ ಸ್ಥಾಪಿಸಲ್ಪಡುವದು ಯೆಲ್ಲಾ ಕಾರ್ಯಗಳಿಗಿಂತ ವಿಶೇಷವಾದದ್ದಾಗಿರುವದರಿಂದ ಇದು ವುಂಟಾಗುವದಕ್ಕಾಗಿ ಆದಿ ಮೊದಲುಗೊಂಡು ದೇವರು ಸಮಸ್ತವನ್ನು ನಡಿಸುತ್ತಾಬಂದಿದ್ಧಾನೆಂದು ತಿಳಿಯಬೇಕು

ದೇವರು ವುಂಟುಮಾಡಿದ ಆದಿ ಸ್ತ್ರೀಪುರುಷರೂ ಅವರ ತರುವಾಯ ಅವರ ವಂಶದವರೆಲ್ಲರೂ ಪಾಪದಲ್ಲಿಬಿದ್ದದರಿಂದ ಆತನು ಅವರನ್ನು ನಾಶನಮಾಡಿದರೂ ನ್ಯಾಯವೇ ಆದರೆ ಆತನು ತನ್ನಮಗನನ್ನು ಅವತಾರ ಯೆತ್ತಮಾಡುವದಕ್ಕೂ ಆತನು ಅರ್ಪಿಸುವ ಬಲಿಯಮುಖಾಂತ್ರ ಲೋಕದವರಿಗೆ ಕೃಪೆತೋರಿಸುವದಕ್ಕೂ ನಿಶ್ಚಯಮಾಡಿಯಿದ್ದ ಕಾರಣ ಪಾಪಿಷ್ಠರಾದ ಮನುಷ್ಯರನ್ನು ವುಳಿಸಿದನು.

ಹೀಗಾದರೆ ದೇವರಮಗನು ಅವತಾರವೆತ್ತುವದೂ ಲೋಕದವರ ಪಾಪವನ್ನು ಪರಿಹರಿಸುವದಕ್ಕೋಸ್ಕರ ತನ್ನನ್ನು ಬಲಿಯಾಗಿ ಅರ್ಪಿಸುವದೂ ಬಹುವಿಶೇಷವಾದ ಕಾರ್ಯವು ಇದರಿಂದಲೇ ಮನುಷ್ಯರಿಗೆ ಜೀವವೂ ರಕ್ಷಣೆಯೂ ವುಂಟು.

ಆದಕಾರಣ ದೇವರಮಗನಾಗಿಯೂ ಜಗದ್ರಕ್ಷಕನಾಗಿಯೂ ಯಿರುವ ಯೇಸುಕ್ರೀಸ್ತನು ನೇಮಿಸಲ್ಪಟ್ಟ ಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ದೇವರು ಲೋಕಸೃಷ್ಟಿಯು ಮೊದಲ್ಗೊಂಡು ಸಮಸ್ತವನ್ನು ಸಿದ್ಧಮಾಡುತ್ತಾ ಬಂದನು.

ಯೇಸುಕ್ರೀಸ್ತನು ಪ್ರತ್ಯಕ್ಷವಾದ ತರುವಾಯ ಸರ್ವಲೋಕದಲ್ಲಿರುವ ಮನುಷ್ಯರು ಆತನ ಮುಖಾಂತ್ರ ರಕ್ಷಿಸಲ್ಪಡುವಹಾಗೆ ದೇವರು ಆತನ ರಾಜ್ಯವು ಯೆಲ್ಲೆಲ್ಲಿಯೂ ಪ್ರಬಲವಾಗುವದಕ್ಕೋಸ್ಕರ ಲೋಕದ ಕಾರ್ಯಗಳನ್ನು ನಡಿಸುತ್ತಾಬಂದಿದ್ಧಾನೆ.

ಯೇಸುವಿನ ರಾಜ್ಯವು ಯೆಲ್ಲೆಲ್ಲಿಯು ಪ್ರಬಲವಾಗಿ ಆತನ ಮುಖಾಂತ್ರ ಯೆಲ್ಲರೂ ಆಶೀರ್ವಾದಿಸಲ್ಪಟ್ಟಮೇಲೆ ಅಂತ್ಯಬರುವದು. ಆಗಲು ಯೇಸು ತಾನೇ ಯೆರಡನೇಸಾರಿ ಮಹಿಮೆಯಲ್ಲಿ ಪ್ರತ್ಯಕ್ಷವಾಗಿ ಯೆಲ್ಲರಿಗೆ ನ್ಯಾಯತೀರಿಸಿ ಈಭೂಮಿಯನ್ನು ಬೆಂಕಿಯಿಂದ ಸುಟ್ಟು ಬಿಡುವನು.

ಆದದರಿಂದ ಭೂಲೋಕದಲ್ಲಿ ವುಂಟಾಗುವ ಕಾರ್ಯಗಳೊಳಗೆ ಯೇಸುಕ್ರೀಸ್ತನ ರಾಜ್ಯವು ಪ್ರಬಲವಾಗುವದು ಮುಖ್ಯ. ಇದು ವುಂಟಾಗುವದಕ್ಕಾಗಿ ಭೂಮಿಯು ನಿಂತಿರುತ್ತದೆ. ಇದು ಆದಮೇಲೆ ಭೂಮಿಯು ನಾಶವಾಗಿ ಹೋಗುವದು. ಆದಕಾರಣ ಲೋಕದಚರಿತ್ರೆಯನ್ನು ಓದುವಾಗ ಯೇಸುಕ್ರೀಸ್ತನಿಗೂ ಆತನ ರಾಜ್ಯಕ್ಕೂ ಸಮ್ಮಂಧವಾಗಿ ಸಮಸ್ತವನ್ನು ನೆನಸಬೇಕು.

೪.) ತಿಳಿವಿಕೆಯನ್ನೂ ಪ್ರಯೋಜನವನ್ನೂ ಹೊಂದುವದಕ್ಕೆ ಲೋಕದ ಚರಿತ್ರೆಯಂನು ಓದಬೇಕು.

೩. ಲೋಕದಚರಿತ್ರೆಯನ್ನು ತಿಳಿಯುವದರಿಂದ

೧.) ಮನಸ್ಸಿಗೆ ಸಂತೋಷವಾಗುವದು.

ಅನೇಕರು ಸಂತೋಷಕ್ಕೋಸ್ಕರ ಪ್ರಯೋಜನವಿಲ್ಲದ ಕಥೆಗಳನ್ನು ಓದುತ್ತಾರೆ. ಲೋಕದಚರಿತ್ರೆಯನ್ನು ತಿಳಿಯುವದರಿಂದ ಬುದ್ಧಿಯೂ ಸಂತೋಷವೂ ಕೂಡಾ ವುಂಟಾಗುತ್ತವೆ.

೨.) ಜ್ಞಾನಹೆಚ್ಚಾಗುವದು.

ಬೇರೆಬೇರೆ ಜನಗಳಲ್ಲಿ ನಡಿದದ್ದನ್ನೂ ಅವರವರ ನಡತೆಗಳಿಂದ ವುಂಟಾದ ಫಲವನ್ನೂ ತಿಳಿಯುವದರಿಂದ ಕೆಟ್ಟದ್ದನ್ನು ಬಿಟ್ಟು ವೊಳ್ಳೇದನ್ನು ಮಾಡುವದಕ್ಕೆ ಜ್ಞಾನಹುಟ್ಟತಕ್ಕದ್ದು.

೩.) ಮನಸ್ಸುವಿಸ್ತಾರವಾಗುವದು.

ವಿಧವಿಧವಾದ ದೇಶಗಳ ವರ್ತಮಾನಗಳನ್ನೂ ವಿಧವಿಧವಾದ ಜನರ ಪದ್ಧತಿಗಳನ್ನೂ ತಿಳಿಯುವದರಿಂದ ನಮ್ಮದೇಶವು ಶ್ರೇಷ್ಠವಾದದ್ದು. ನಮ್ಮ ಪದ್ಧತಿಗಳು ಮಾತ್ರ ವೊಳ್ಳೇವುಯೆಂಬುವ ಗರ್ವ ಪರಿಹಾರವಾಗಿ ಬೇರೆಬೇರೆ ದೇಶಸ್ಥರಲ್ಲಿ ಯೇನೇನು ಪ್ರಯೋಜನವಾಗಿದೆಯೋ ಅದನ್ನು ಕಲಿತುಕೊಂಡು ಹಾಗೆಯೇ ನಡಿಯುವದಕ್ಕೆ ವಿವೇಕಹುಟ್ಟುವದು.

೪.) ಭಕ್ತಿ ಅಧಿಕವಾಗುವದಕ್ಕೆ ಸಹಾಯವಾಗುವದು.

ಹ್ಯಾಗಂದರೆ ಲೋಕಸೃಷ್ಟಿಯು ಮೊದಲುಗೊಂಡು ಈಪರಿಯಂತರ ಮನುಷ್ಯರು ಕ್ರಮಕ್ರಮವಾಗಿ ಹುಟ್ಟುತ್ತಾ ಸ್ವಲ್ಪಕಾಲ ಬದುಕಿ ಆಮೇಲೆ ಸಾಯುತ್ತಾ ಬಂದದ್ದಂನು ನೆನಸುವಾಗ ನಮ್ಮ ಜೀವಿತಕಾಲವು ಯೆಷ್ಟು ಸ್ವಲ್ಪವಾಗಿದೆಯೆಂದೂ ದೇವರಮುಂದೆ ನಾವೆಲ್ಲರು ಯೆಷ್ಟು ಅಲ್ಪರಾಗಿದ್ಧೇವೆಂದೂ ತಿಳಿಯುವದರಿಂದ ದೀನರಾಗಿ ನಡಿಯತಕ್ಕದ್ದೆಂದು ತೋರುವದು.

ಮತ್ತು ದೇವರು ಆದಿಮೊದಲ್ಗೊಂಡು ಸನ್ಮಾರ್ಗವನ್ನು ಕಾಪಾಡುತ್ತಾ ಸತ್ಯವೂ ನೀತಿಯೂ ಪ್ರಬಲವಾಗಮಾಡುತ್ತಾ ಮನುಷ್ಯರು ವೊಪ್ಪಿದರೂ ವೊಪ್ಪದಿದ್ದರೂ ತನ್ನವುತ್ತಮವಾದ ಆಲೋಚನೆಯನ್ನು ನಡಿಸುತ್ತಾ ಬಂದಿದ್ಧಾನೆಂದು ತಿಳಿಯುವದರಿಂದ ನಾವು ಆತನನ್ನು ಸನ್ಮಾನಮಾಡಿ ಆತನಲ್ಲಿ ವಿಶ್ವಾಸವಿಟ್ಟು ಆತನನ್ನು ಮಹಿಮೆಪಡಿಸುತ್ತಾ ಬರಬೇಕೆಂಬುವದು ನಮಗೆ ತೋಚುವದು.

೪. ಲೋಕದಚರಿತ್ರೆಗೂ ಬೇರೆಯೆರಡುವಿದ್ಯೆಗಳಿಗೂ ಸಮ್ಮಂಧವುಂಟು ಅವ್ಯಾವವಿದ್ಯೆಗಳೆಂದರೆ

೧.) ಭೂಗೋಳವಿದ್ಯೆಯು. (Geography)

ಭೂಲೋಕದಲ್ಲಿರುವ ದೇಶಗಳನ್ನು ಮೊದಲಾಗಿ ತಿಳಿಯದಿದ್ದರೆ ಅವುಗಳಲ್ಲಿ ನಡೆದ ಕಾರ್ಯಗಳನ್ನು ಅಷ್ಟುಸ್ಪಷ್ಟವಾಗಿ ತಿಳಿಯಕೂಡದು.

೨.) ಕಾಲಗತಿವಿದ್ಯೆಯು. (Chronology)

ಇಂಥಿಂಥಾಕಾಲಗಳಲ್ಲಿ ಇಂಥಿಂಥಾಕಾರ್ಯಗಳು ಸಂಭವಿಸಿದವೆಂದು ತಿಳಿಯುವದಕ್ಕಾಗಿ ಈ ವಿದ್ಯೆಯು ಗೊತ್ತಾಗಿ ಕಾಲಕ್ರಮವನ್ನುಯೆಣಿಸುವ ಪ್ರಮಾಣವನ್ನುತೋರಿಸುತ್ತದೆ.

ಬೇರೆಬೇರೆಜನಗಳು ಬೇರೆಬೇರೆಶಕಗಳು (Eras) ಮೊದಲುಗೊಂಡು ಕಾಲಕ್ರಮವನ್ನುಯೆಣಿಸಿದ್ದಾರೆ.

ಪೂರ್ವದಗ್ರೀಕರು (Ancient Greeks) ಒಲಿಂಪಿಯ (Olympia) ಪಟ್ಟಣದಲ್ಲಿ ಐದುವರುಷಕ್ಕೆ ಒಂದುಸಾರಿ ನಡೆಸಲ್ಪಟ್ಟಿದ್ದ ಹಬ್ಬವನ್ನು ಗೊತ್ತು ಮಾಡಿ ಅದು ಮೊದಲ್ಗೊಂಡು ಕಾಲಕ್ರಮವನ್ನು ಯೆಣಿಸಿದರು ಇದಕ್ಕೆ ಒಲಿಂಪಿಯಾಡ್‌ಶಕ Era of the Olympiads) ಯೆಂಬುವ ಹೆಸರುಂಟು. ಈಮೇರಿಗೆ ಲೆಖ್ಖಮಾಡುವದಕ್ಕೆ ಕ್ರೀಸ್ತನಮುಂಚೆ ೭೭೬ ನೇ ವರುದಲ್ಲಿ (B. C. 776) ಪ್ರಾರಂಭಿಸಿ ಕ್ರೀಸ್ತನ ತರುವಾಯ ೪೪೦ ನೇ ವರುಷದಲ್ಲಿ (B. C. 440) ಬಿಟ್ಟುಬಿಟ್ಟರು. ಈಗಿನ ಗ್ರೀಕರು (Modern Greeks) ಸಿರಿಯ (Syria) ದೇಶಕ್ಕೆ ಅರಸನಾಗಿದ್ದ ಸಿಲೂಕಸ ಆಳಿದ ಕಾಲವನ್ನು ಗೊತ್ತುಮಾಡಿ ಅದುಮೊದಲುಗೊಂಡು ಕಾಲಕ್ರಮವನ್ನುಯೆಣಿಸುತ್ತಾರೆ. ಇದಕ್ಕೆ ಸಿಲೂಕಸಶಕ (Seleucian Era) ಯೆಂಬ ಹೆಸರು ಯಿದೆ. ಇದರ ಮೊದಲು ಕ್ರೀಸ್ತನಮುಂಚೆ ೩೧೨ ನೇ ವರುಷದಲ್ಲಿ ವುಂಟು. (B. C. 312)

ರೋಮನವರು (Romans) ರೋಮ್‌ಪಟ್ಟಣವು ಕಟ್ಟಲ್ಪಟ್ಟಕಾಲವನ್ನು ಗೊತ್ತುಮಾಡಿ ಅದುಮೊದಲುಗೊಂಡು ಲೆಖ್ಖಮಾಡಿದರು. ಇದಕ್ಕೆ ರೋಮ್‌ಪಟ್ಟಣ ಕಟ್ಟಲ್ಪಟ್ಟಶಕ (Era of the building of Rome) ಯೆಂಬುವ ಹೆಸರದೆ. ಇದರ ಮೊದಲು ಕ್ರೀಸ್ತನಮುಂಚೆ ೭೫೩ ನೇವರುಷದಲ್ಲಿವುಂಟು. (B. C. 753)

ತುರುಕರು (Mohammedans) ತಮ್ಮ ದೀರ್ಘದರ್ಶಿಯಾದ ಮಹಮ್ಮದನುಮಕ್ಕ (Mecca) ಪಟ್ಟಣವನ್ನು ಬಿಟ್ಟು ಮದೀನ (Medina) ಪಟ್ಟಣಕ್ಕೆ ಓಡಿಹೋದ ಕಾಲವನ್ನು ಗೊತ್ತುಮಾಡಿ ಅದುಮೊದಲುಗೊಂಡು ಕಾಲಕ್ರಮವನ್ನು ಯೆಣಿಸುತ್ತಾರೆ ಇದಕ್ಕೆ ಹಿಜರಾ (Hejira) ಯೆಂಬುವಹೆಸರುಂಟು ಕ್ರೀಸ್ತನಮುಂಚೆ ೬೨೨ ನೇ ವರುಷ ಜುಲೈತಿಂಗಳು ೧೬ ನೇ ತೇದಿ (July 16th B. C. 622) ಇದರ ಮೊದಲಾಗಿದೆ.

ಹಿಂದೂಜನರಲ್ಲಿ (Hindoos) ವಿದ್ವಾಂಸರು ಕಲಿಯುಗದ ಶಕವನ್ನು (Era of the Kaliyuga) ಗೊತ್ತು ಮಾಡಿದ್ದಾರೆ. ಅದರ ಪ್ರಾರಂಭವು ಕ್ರೀಸ್ತನಮುಂಚೆ ೩೧೦೨ ನೇ ವರುಷದಲ್ಲಿ (B. C 3102) ಇತ್ತಂತೆ.

ಆದರೆಸಾಧಾರಣವಾದಜನರುಬೇರೆಪ್ರಕಾರಲೆಖ್ಖಮಾಡುವದುಂಟು. ವಿಂಧ್ಯಪರ್ವತಕ್ಕೆ (Vindya Mountains) ವುತ್ತರಕಡೆ ಯಿರುವಜನರು ಉಜ್ಜನೀಪಟ್ಟಣಕ್ಕೆ ಅರಸನಾಗಿದ್ದ ವಿಕ್ರಮಾರ್ಕನ ಕಾಲವು ಮೊದಲು ಗೊಂಡು ಲೆಖ್ಖಮಾಡುತ್ತಾರೆ. ಇದರ ಮೊದಲು ಕ್ರೀಸ್ತನಮುಂಚೆ ೧೯೨೨ ನೇ ವರುಷವಾಗಿತ್ತು. ಇದರ ಹೆಸರು ವಿಕ್ರಮಶಕ (Era of Vikramaditya) ವಿಂಧ್ಯಪರ್ವತಕ್ಕೆ ದಕ್ಷಿಣಕಡೆಯಿರುವವರು ಪ್ರತಿಷ್ಠಾನಪಟ್ಟಣದಲ್ಲಿ ಆಳಿದ ಶಾಲಿವಾಹನ ಕಾಲವನ್ನು ಗೊತ್ತುಮಾಡಿ ಅದು ಮೊದಲು ಗೊಂಡು ಕಾಲಕ್ರಮವನ್ನು ಯೆಣಿಸುತ್ತಾರೆ. ಇದರಹೆಸರು ಶಾಲಿವಾಹನಶಕ (Era of Shalivahana) ಇದರ ಪ್ರಾರಂಭವು ಕ್ರೀಸ್ತನ ತರುವಾಯ ೭೮ ನೇ ವರುಷದಲ್ಲಿ ಇತ್ತು. (A. D. 78)

ಈಶಾಲಿವಾಹನಹೆಸರಿನ ಅರ್ಥವನ್ನು ಕುಮಾರಿಕಾಕಾಂಡದಲ್ಲಿಯೂ ಅಗ್ನಿಪುರಾಣದಲ್ಲಿಯೂ ಇವನನ್ನು ಕುರಿತು ಕವೀಶ್ವರರು ಹೇಳಿರುವ ಕಥೆಗಳನ್ನು ನೋಡಿದರೆ ಆ ಕಾದಲ್ಲಿ ಯೆಹೂದಿಯ ದೇಶದಲ್ಲಿ ಹುಟ್ಟಿದ ಜಗದ್ರಕ್ಷಕನಾದ ಯೇಸುಕ್ರೀಸ್ತನಿಗೂ ಆತನ ಚರಿತ್ರೆಗೂ ಸರಿಯಾಗಿತೋರುತ್ತವೆ. ಹ್ಯಾಗಂದರೆ ಶಾಲಿವಾಹನ ಅಂದರೆ ಇದಕ್ಕೆ ಸಂಸ್ಕೃತಭಾಷೆಯಲ್ಲಿ ಮರದಿಂದಹೊರಲ್ಪಟ್ಟವನು ಯೆಂಬುವ ಅರ್ಥವುಂಟು. ಹೇಗೆಯೇ ಯೇಸುಕ್ರೀಸ್ತನು ಲೋಕದ ಪರಪಾಪಕ್ಕೋಸ್ಕರ ಶಿಲುಬೆಗೆ ಹಾಕಲ್ಪಟ್ಟು ಆಮರದಿಂದ ಹೊರಲ್ಪಟ್ಟವನಾದನು. ಮತ್ತು ಶಾಲಿವಾಹನು ಒಬ್ಬ ತಕ್ಷಕನ ಮಗನಾಗಿದ್ದನೆಂದೂ ಆತನು ಕನ್ನಿಕೆಯಗರ್ಭದಲ್ಲಿ ಹುಟ್ಟಿದನೆಂದೂ ಹುಟ್ಟುವಾಗ ಪರಲೋಕದ ಸೈನ್ಯದವರು ಪ್ರತ್ಯಕ್ಷವಾಗಿ ಸಂಗೀತ ಹಾಡಿದರೆಂದೂ ಇನ್ನೊಬ್ಬ ಅರಸನು ಆತನನ್ನು ಕೊಲ್ಲುವದಕ್ಕೆ ಪ್ರಯತ್ನ ಮಾಡಿದಾಗ್ಯೂ ಅವನಿಂದ ಆಗದೆ ಹೋಯಿತೆಂದೂ ಆತನು ಐದುವರುಷದ ಪ್ರಾಯದವನಾದಾಗ ವಿದ್ವಾಂಸರು ಶ್ರಮಪಡುವಹಾಗೆ ಬಹುಜ್ಞಾನವನ್ನು ತೋರಿಸಿದನೆಂದೂ ಆತನು ಹಾವುಗಳಸಂಗಡಆಡಿ ಅವುಗಳನ್ನು ತುಳಿದಾಗ್ಯೂ ನಷ್ಟಹೊಂದಲಿಲ್ಲವೆಂದೂ ಆತನು ಮಹಾಸಿರಿವಂತನಾಗಿಯೂ ಜ್ಞಾನಿಯಾಗಿಯೂ ದೇವದೂತರಿಗೂ ಪಿಶಾಚಿಗಳಿಗೂ ಸ್ವರ್ಗಮರ್ತ್ಯಪಾತಾಳ ಲೋಕಗಳಿಗೂ ಕರ್ತನಾಗಿಯೂ ಇದ್ದನೆಂದೂ ಕವೀಶ್ವರರು ಹೇಳಿಯಿದ್ದಾರೆ ಈಸಂಗತಿಗಳನ್ನು ನೋಡಿದರೆ ಸತ್ಯವೇದದಲ್ಲಿ ಯೇಸುಕ್ರೀಸ್ತನನ್ನು ಕುರಿತು ಬರಿಯಲ್ಪಟ್ಟಕಾರ್ಯಗಳಹಾಗೆವೆ. ಇದರಿಂದ ಯೇಸುಕ್ರೀಸ್ತನನ್ನು ಕುರಿತು ಪೂರ್ವದಲ್ಲಿ ಈದೇಶಕ್ಕೆ ವರ್ತಮಾನ ಬಂತೆಂದು ತೋರುತ್ತದೆ. ಆ ವರ್ತಮಾನ ಬಹುಆಶ್ಚರ್ಯವುಳ್ಳದ್ದಾಗಿರುವದರಿಂದ ಕವೀಶ್ವರರು ಆಕಾಲದಲ್ಲಿ ಆಳಿದಶಾಲಿವಾಹನನನ್ನು ಹೊಗಳುವದಕ್ಕೋಸ್ಕರ ಆಕಾರ್ಯಗಳನ್ನು ಅವನ ಚರಿತ್ರೆಯಲ್ಲಿ ಸೇರಿಸಿದರೆಂದು ಕಾಣಿಸುತ್ತದೆ.

ಕ್ರೀಸ್ತಿಯರು (Christians) ಜಗದ್ರಕ್ಷಕನಾದ ಯೇಸುಕ್ರೀಸ್ತನು ಹುಟ್ಟಿದ ಕಾಲವು ಮೊದಲುಗೊಂಡು ಕಾಲಕ್ರಮವನ್ನು ಯೆಣಿಸುತ್ತಾರೆ ಅದಕ್ಕೆ ಮುಂಚೆ ವುಂಟಾದ ಕಾರ್ಯಗಳು ಕ್ರೀಸ್ತನಮುಂಚೆ ಇಷ್ಟನೇವರುಷದಲ್ಲಿ ಸಂಭವಿಸಿದವೆಂದು ಗೊತ್ತು ಮಾಡುತ್ತಾರೆ. ಅದರ ತರುವಾಯ ವುಂಟಾದದ್ದು ಕ್ರೀಸ್ತನ ತರುವಾಯ ಇಷ್ಟನೇವರುಷದಲ್ಲಿ ಸಂಭವಿಸಿತೆಂದು ಹೇಳುತ್ತಾರೆ. ಇದಕ್ಕೆ ಕ್ರೀಸ್ತನ ಶಕ (Christian Era) ಯೆಂಬುವ ಹೆಸರುಂಟು ಕೆಲವರು ವಿದ್ವಾಂಸರು ಯೇಸುಕ್ರೀಸ್ತನು ಹುಟ್ಟಿದ ದಿವಸವು ಲೋಕವುಂಟಾಗಿ ೪೦೦೪ ನೇ ವರುಷದಲ್ಲಿ (A. M. 4004) ಇತ್ತಂತೆ ಇನ್ನುಕೆಲವರುಅದು ೫೪೧೧ ನೇ ವರುಷದಲ್ಲಿ (A. M. 5411) ಇತ್ತೆಂದು ಅನ್ನುತ್ತಾರೆ. ಇದನ್ನು ಕುರಿತು ನಿಶ್ಚಯವಿಲ್ಲವು.

ಲೋಕ ವುಂಟಾಗಿ ೪೦೦೪ ನೇವರುಷದಲ್ಲಿ ಯೇಸುಕ್ರೀಸ್ತನು ಹುಟ್ಟಿದನೆಂದು ಗೊತ್ತುಮಾಡಿ ಈಮೇರಿಗೆ ಲೆಖ್ಖಮಾಡುತ್ತೇನೆ.

ಲೋಕದ ಚರಿತ್ರೆಯು ಆರುವಿಭಾಗಗಳಾಗಿ ವಿಂಗಡಿಸ ಬಹುದು.

ಹ್ಯಾಗಂದರೆ.

ಮೊದಲನೇ ವಿಭಾಗವು.	ಲೋಕದ ಸೃಷ್ಟಿಯು ಮೊದಲುಗೊಂಡು ಜಲಪ್ರಳಯದ ಮಟ್ಟಿಗೆ ಉಂಟಾದದ್ದು ಕ್ರೀ. ಪೂ. ೪೦೦೪-೨೩೪೮ (B. C. 4004—2348)
ಎರಡನೇ ವಿಭಾಗವು.	ಜಲಪ್ರಳಯವು ಮೊದಲುಗೊಂಡು ನೆಬುಖದ್ನೆಚ್ಚರನ (Nebuchodnezzar) ಕಾಲದ ಮಟ್ಟಿಗೆ ಉಂಟಾದದ್ದು ಕ್ರೀ. ಪೂ. ೨೩೪೮-೬೦೬ (B. C. 234I—606)
ಮೂರನೇ ವಿಭಾಗವು.	ನೆಬುಖದ್ನೆಚ್ಚರನ ಕಾಲವು ಮೊದಲುಗೊಂಡು ಯೇಸು ಕ್ರೀಸ್ತನು ಹುಟ್ಟಿದ ಮಟ್ಟಿಗೆ ಉಂಟಾದದ್ದು ಕ್ರೀ. ಪೂ. ೬೦೬—೧ (B. C. 606—1)
ನಾಲ್ಕನೇ ವಿಭಾಗವು.	ಯೇಸು ಕ್ರೀಸ್ತನು ಹುಟ್ಟಿದ್ದು ಮೊದಲುಗೊಂಡು ಪಶ್ಚಿಮರೋಮರಾಜ್ಯವು (Westem Roman Empire) ನಾಶವಾಗುವ ಮಟ್ಟಿಗೆ ಉಂಟಾದದ್ದು ಕ್ರೀ. ಶ. ೧—೪೭೬ (A. D. —1476)
ಐದನೇ ವಿಭಾಗವು.	ಪಶ್ಚಿಮರೋಮರಾಜ್ಯವು ನಾಶವಾದದ್ದು ಮೊದಲುಗೊಂಡು (Reformation) ತಿದ್ದುಪಾಟಾಗುವ ಮಟ್ಟಿಗೆ ಉಂಟಾದದ್ದು ಕ್ರೀ. ಶ. ೪೭೬-೧೫೧೭ (A. D. 476—1567)
ಆರನೇ ವಿಭಾಗವು.	ತಿದ್ದುಪಾಟಾದದ್ದು ಮೊದಲುಗೊಂಡು ಈ ಕಾಲದ ಮಟ್ಟಿಗೆ ಉಂಟಾದದ್ದು ಕ್ರೀ. ಶ. ೧೫೧೭—೧೮೪೪ (A. D. 1517—1844)
ಏಳನೇ ವಿಭಾಗದಲ್ಲಿ	ಇವು ಆದ ಮೇಲೆ ಲೋಕದಲ್ಲಿ ಸಂಭವಿಸಿರುವ ವಿಶೇಷವಾದ ಕಾರ್ಯಗಳಿಗೆ ಸಂಬಂಧವಾಗದ ಜನಗಳ ಚರಿತ್ರೆಯನ್ನು ಹೇಳುತ್ತೇನೆ.
ಎಂಟನೇ ವಿಭಾಗದಲ್ಲಿ	ಈಗಿನ ಕಾಲದೊಳಗಿರುವ ವಿಧವಿಧವಾದ ದೇಶಗಳಲ್ಲಿ ಕ್ರೀಸ್ತನ ರಾಜ್ಯವು ಪ್ರಬಲವಾದದ್ದು ಪ್ರಬಲವಾಗದೆ ಇರುವದು ಇವುಗಳನ್ನು ಕುರಿತು ವಿವರಿಸುತ್ತೇನೆ.
ವೊಂಭತ್ತನೇ ವಿಭಾಗದಲ್ಲಿ	ಸತ್ಯವೇದದಲ್ಲಿ ಹೇಳಲ್ಪಟ್ಟಿರುವ ದೀರ್ಘದರ್ಶನಗಳಿಂದ ಇನ್ನು ಮೇಲೆ ಉಂಟಾಗ ಹೋಗುವ ವಿಶೇಷವಾದ ಕಾರ್ಯಗಳನ್ನು ಕುರಿತು ನಮಗೆ ತಿಳಿದಿರುವದನ್ನು ತಿಳಿಸುತ್ತೇನೆ.
ಹತ್ತನೇ ವಿಭಾಗದಲ್ಲಿ	ಲೋಕದ ಚರಿತ್ರೆಯನ್ನು ತಿಳಿಯುವದರಿಂದ ನಾವು ಕಲಿತುಕೊಳ್ಳತಕ್ಕ ಬುದ್ಧಿಗಳನ್ನು ಹೇಳುತ್ತೇನೆ.

ಮೊದಲನೆ ಪುಸ್ತಕ ಐವತ್ತಾರನೆ ಪುಟದಲ್ಲಿ ತೀರದೆಯಿದ್ದ

An Account of Hindostan.—Continned.

ಹಿಂದುದೇಶದ ವರ್ಣನೆಯು.

೪ನೆ ೧೩೯೮ನೆ ವರ್ಷದ ಸೆಪ್ತೆಂಬರ ತಿಂಗಳ ೧೨ನೆ ತಾರೀಖಿನಲ್ಲಿ ತಿಮೊರನು ಸಿಂಧುನದಿ ದಾಟಿ ತ್ಯಾವತೀ ತೀರದಲ್ಲಿರುವ ತುಳುಂಬಾ ಪಟ್ಣಕ್ಕೆ ಬಂದು ನಿವಾಸಿಗಳಿಂದ ಅಧಿಕವಾದ ದಂಡಗಳನ್ನು ತೆಗೆದುಕೊಂಡು ಸಿಕ್ಕಿದ ಮೇಲೆ ಎಲ್ಲರನ್ನು ಕೊಂದು ಹಾಕಿದನು. ಅದೇ ಪ್ರಕಾರ ಪಂಚನದವನ್ನು ದಾಟಿ ಡಿಲ್ಲಿಪರಿಯಂತರ ಬರುವ ಮಾರ್ಗದಲ್ಲಿ ಮಾಡಿದನು. ಘಾರ್ಶೀಯದಿಂದ ಕುಂಬಾದ ಪಕ್ನೀಶ ಕೋಟೆಯೂ ಸರಸ್ವತೀತೀರದಲ್ಲಿರುವ ಲಾಹೂರ ಪಟ್ಟಣವೂ ಹೊಷ್ಲೂಕಪುರವೂ ತಿಮೊರನಿಗೆ ವಶವಾದ ಮೇಲೆ ಅವನು ನಿವಾಸಿಗಳ ಸಮೂಹವನ್ನು ಬೀದಿಗಳಲ್ಲಿ ಕೊಂದುಹಾಕಿದನು. ಡಿಲ್ಲಿಪಟ್ಟಣಕ್ಕೆ ಬಂದ ಮೇಲೆ ಈ ಅರಸಪಟ್ಟಣವನ್ನು ಹ್ಯಾಗೆ ತೆಗೆಯಬೇಕೋ ಎಂದು ಆಲೋಚನೆಮಾಡುವಾಗ್ಯೆ ಈ ಪರಿಯಂತರ ತೆಗೆದ ವೊಂದುಲಕ್ಷ ಕೈಸೆರೆಯವರು ಡಿಲ್ಲಿಯವರಿಗೆ ವೊಂದುವೇಳೆ ಸಹಾಯ ಮಾಡ್ಯಾರು ಎಂದು ಆಲೋಚಿಸಿ ವೊಂದೇ ತಾಸಿನಲ್ಲಿ ಈ ಲಕ್ಷ ಜನರನ್ನು ಕೊಂದುಹಾಕಿದನು. ೧೩೯೮ನೆ ವರ್ಷದ ಜನವರಿ ತಿಂಗಳ ೩ನೆ ತಾರೀಖಿನಲ್ಲಿ ಡಿಲ್ಲಿಹತ್ರ ಯುದ್ಧವುಂಟಾಯಿತು. ತಿಮೊರನ ಶಿಪಾಯಿಜನರು ಹಿಂದುಸ್ಥಾನದವರನ್ನು ವೊಂದುದೊಡ್ಡಕುರಿಮಂದೆಯ ಹಾಗೆ ಕೊಯ್ದರು. ರಾತ್ರಿಯಲ್ಲಿ ಮಾಮೂದ ಹೊಷ್ಲೂಕ್ ವೋಡಿಹೋಗುತ್ತಲೆ ತಿಮೊರನು ರಾಜ್ಯವನ್ನು ತಕೊಂಡನು. ಆವನ ಶಿಪಾಯಿಜನರು ಪಟ್ಟಣದಲ್ಲಿ ಪ್ರವೇಶಿಸಿದ ಮೇಲೆ ಅನೇಕ ತೀಗಿನ ಹೊಡದರ್ಬುಗಳಗಳು ಉಂಟಾದದರಿಂದ ತಿಮೊರನು ಪಟ್ಟಣವನ್ನು ಲೂಟಿ ಮಾಡಿ ನಾಶನಮಾಡಬೇಕೆಂದು ಆಜ್ಞಾಪಿಸಿದನು. ಆಮೇಲೆ ಘಾರ್ಶೀಜನರು ತಮ್ಮನ್ನು ತಮ್ಮ ಮನೆಸಂಸಾರಗಳ ಸಂಗಡ ಸುಟ್ಟುಕೊಂಡರು. ಉಳಿದವರೆಲ್ಲರನ್ನು ಶಿಪಾಯಿಜನರು ಮನೆಗಳಲ್ಲಿ ಕೊಂದುಹಾಕಿ ಅವರ ತಲೆಗಳಿಂದ ಜಯಗೋಪುರಗಳನ್ನು ಕಟ್ಟಿದರು. ಉಳಿದವರನ್ನು ಬಾಗಲಿನ ಹೊರಗೆ ತಕೊಂಡು ಹೋದರು. ಅವರಿಂದ ಅಧಿಪತಿಗಳಲ್ಲಿ ವೊಬ್ಬೊಬ್ಬನು ಯಷ್ಟರನ್ನು ಆಪೇಕ್ಷಿಸುತ್ತಿದ್ದನೋ ಅಷ್ಟರನ್ನು ದಾಸರಾಗಿ ತೆಗೆದುಕೊಂಡನು. ಶಿಪಾಯಿಯರಲ್ಲಿ ಸಹಾ ಅನೇಕರಿಗೆ ೨೦—೫೦—೧೦೦ ಕೆಲವರಿಗೆ ೫೦೦ ದಾಸರು ಸಿಕ್ಕಿದರು. ಪಟ್ಟಣವು ಕೆಲವು ತಿಂಗಳ ಪರಿಯಂತರ ಬರೇ ಶ್ಮರಾಶಿಯಾಗಿ ಬಹಳ ದಿವಸಪರಿಯಂತರ ರೋಗಕ್ಕೂ ದುರ್ಭಿಕ್ಷಕ್ಕೂ ವೊಳಗಾಗಿತ್ತು. ಕಡೇಲಿ ಈಗಿನ ಡಿಲ್ಲಿಪಟ್ಟಣದ ಆರಂಭವು ಆಯಿತು. ತಿಮೊರನು ಅಲ್ಲಿಂದ ಹೋಗಿ ಯಮುನಾನದಿದಾಟಿ ಮೇಲಿನ ಗಂಗಾಹತ್ರ ಹೋಗಿ ಮಿರುತಕೋಟೆಯನ್ನು ದೊಡ್ಡ ಪ್ರಯತ್ನಮಾಡಿ ಕಡೇಲಿ ಸುರಂಗದಿಂದ ಕೋಟೆಯನ್ನು ತೆಗೆದು ಘಾರ್ಶೀಯರನ್ನು ಚರ್ಮಸುಲಿಸಿ ಅವರ ಹೆಂಗಸರನ್ನೂ ಮಕ್ಕಳನ್ನೂ ಶೆರೆಯಾಗಿ ವೈದನು. ವೊಂದು ತಿಂಗಳಲ್ಲಿ ಅವರಿಗೆ ೨೦ ಯುದ್ಧಮಾಡಿ ಅವರು ವೋಡಿಹೋಗುವದಕ್ಕೆ ಆಪೇಕ್ಷಿಸಿಟ್ಟ ೫೮ ಹಡಗಗಳನ್ನು ಕೆಡಿಸಿ ಹೊಷ್ಲೂಕಪುರದ ಹತ್ರ ಮಹಾಯುದ್ಧದಲ್ಲಿ ಸಿಂಹದ ಶಬ್ದಕ್ಕೆ ವೋಡಿಹೋಗುವ ಕೃಷ್ಣಮೃಗಗಳಂತೆ ಅವರನ್ನು ವೋಡಿಸಿ ವೊಬ್ಬನೂ ಉಳಿಯದ ಹಾಗೆ ಕೆಡಿಸಿಬಿಟ್ಟನು.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡ ಸಮಾಚಾರವು.

೧೮೪೪.

೧ನೆ ಪುಸ್ತಕ. ೧೬ನೆ ಅಂಕೆ] ಬಳ್ಳಾರಿ ೧೫ನೆ ಅಕ್ಟೋಬರ್ [ಟಪಾಲ ದಸ್ತೂರಿಕೂಡಿ ಕ್ರಯ ೨ದುಡ್ಡು.

History of the World.—Continued.

೭೦ನೇ ಪುಟದಲ್ಲಿ ತೀರದೆ ಇದ್ದ ಲೋಕದ ಚರಿತ್ರೆ.

FIRST PART.

ಮೊದಲನೇ ವಿಭಾಗವು.

FROM THE CREATION TO THE DELUGE.

ಲೋಕದ ಸೃಷ್ಟಿ ಮೊದಲುಗೊಂಡು ಜಲಪ್ರಳಯದ ಮಟ್ಟಿಗೆ ವುಂಟಾದದ್ದು.

ಕ್ರಿ. ಮ. ೪೦೦೪ ೨೩೪೮. B. C. 4004—2348.

SECTION I.

೧ ಅಧ್ಯಾಯವು.

Of the Earth.

ಭೂಮಿಯನ್ನು ಕುರಿತು.

೧. ಮನುಷ್ಯರಲ್ಲಿ ನಡೆದವುಗಳನ್ನು ವಿವರಿಸುವದಕ್ಕಿಂತ ಮುಂಚೆ ಅವರು ವಾಸಮಾಡುವ ಭೂಮಿಯ ಸ್ವಭಾವವನ್ನು ಕುರಿತು ಕೆಲವು ಕಾರ್ಯಗಳನ್ನು ತಿಳಿಸುತ್ತೇನೆ.

೨. ಭೂಮಿಯ ಸ್ವಭಾವವನ್ನು ತಿಳಿಸುವಂಥ ವಿದ್ಯಕ್ಕೆ ಭೂವಿದ್ಯೆ (Geology) ಎಂಬ ಹೆಸರುಂಟು.

೩. ಭೂಮಿಯೊಳಗಿರುವವುಗಳನ್ನು ಕುರಿತು ನಾವು ಕೊಂಚಾದರೂ ತಿಳಿಯಕೂಡದೆಂದು ಸಾಧಾರಣ ಮನುಷ್ಯರಿಗೆ ತೋರುವದು ಆದರೆ ಹಾಗಲ್ಲವು. ಬೇರೆ ಬೇರೆ ಸ್ಥಳಗಳಲ್ಲಿರುವ ಸುರಂಗಗಳಲ್ಲಿಯೂ ಗುಹೆಗಳಲ್ಲಿಯೂ ಹಳ್ಳ ಮೊದಲಾದವುಗಳಲ್ಲಿಯೂ ಇರುವಂಥ ವಸ್ತುಗಳನ್ನು ವಿದ್ವಾಂಸರು ಬಹಳವಾಗಿ ಪರೀಕ್ಷೆಮಾಡಿರುವದರಿಂದ ಭೂಮಿಯ ಮೇಲ್ಭಾಗದ (Surface of the Earth) ಕೆಳಗಿರುವಂಥವುಗಳ ಸ್ವಭಾವವನ್ನು ಕುರಿತು ಅನೇಕ ಕಾರ್ಯಗಳನ್ನು ತಿಳಿದಿದ್ದಾರೆ.

೪. ಆದರೆ ಭೂಮಿಯ ಮೇಲ್ಭಾಗದ ಕೆಳಗೆ ಸ್ವಲ್ಪದೂರ ಮಾತ್ರ ಪರೀಕ್ಷೆ ಮಾಡಿದ್ದಾರೆ. ಭೂಮಿಯ ಅಡ್ಡಳತೆ (Diameter) ಹೆಚ್ಚುಕಡಿಮೆ ೮೦೦೦ ಮೈಲುಗಳಾಗಿದೆ. ಹೀಗಾದರೆ ಮೇಲ್ಭಾಗದಿಂದ ಮಧ್ಯಭಾಗದಮಟ್ಟಿಗೂ ೪೦೦೦ ಮೈಲುಗಳಾಗಬೇಕು ವಿದ್ವಾಂಸರು ಪರೀಕ್ಷೆಮಾಡಿದ್ದು ಹತ್ತುಮೈಲುಗಳಿಗೆ ಹೆಚ್ಚಾಗಿಲ್ಲ. ಇಷ್ಟುಸ್ವಲ್ಪ ದೂರದಮಟ್ಟಿಗೆ ಅವರು ಪರೀಕ್ಷೆ ಮಾಡಿರುವದರಿಂದ ಭೂಮಿಯ ಚಿಪ್ಪನ್ನು (Crust of the Earth) ಕುರಿತು ಮಾತ್ರವೇ ತಿಳಿದಿದ್ದೇವೆಂದು ಹೇಳುತ್ತಾರೆ.

೫. ಭೂಮಿ ಗಟ್ಟಿಯಾದ ವಸ್ತುವಾಗಿದೆಯೋ ಟೊಳ್ಳಾದ ವಸ್ತುವಾಗಿದೆಯೋ ಇದನ್ನುಕುರಿತು ನಿಶ್ಚಯವಾಗಿ ತಿಳಿಯ ಕೂಡದು. ಆದರೆ ಟೊಳ್ಳಾಗಿದೆಯೆಂದು ಅನೇಕವಿದ್ವಾಂಸರು ಹೇಳುತ್ತಾರೆ.

೬. ಭೂಮಿಯ ಚಿಪ್ಪಿನಲ್ಲಿರುವ ವಸ್ತುಗಳು ಯಾವವೆಂದರೆ ಗುಡ್ಡಗಳು (Rocks) ಲೋಹಗಳು (Metals) ವಿಧವಿಧವಾದ ಮಣ್ಣು ಮೊದಲಾದ ಇಂಥಾವಸ್ತುಗಳುಂಟು ಆದರೆ ಇವುಗಳಲ್ಲಿ ಗುಡ್ಡಗಳು ಮುಖ್ಯ.

೭. ಈ ಗುಡ್ಡಗಳಲ್ಲಿ ಕೆಲವು ಪೊರೆಪೊರೆಯಾಗಿ (In strata) ಇಡಲ್ಪಟ್ಟವೆ. ಕೆಲವು ಗುಡ್ಡಗಳು ಹೀಗಿರದೆ ದಟ್ಟ (In mass) ವಾಗಿವೆ.

೮. ಪೊರೆಪೊರೆಯಾಗಿ ಇಡಲ್ಪಟ್ಟಿರುವ ಗುಡ್ಡಗಳಿಗೆ (Stratified Rocks) ಪೊರೆಯಿರುವ ಗುಡ್ಡಗಳೆಂಬ ಹೆಸರುಂಟು ದಟ್ಟವಾಗಿರುವ ಗುಡ್ಡಗಳಿಗೆ (Unstratified Rocks) ಪೊರೆಯಿಲ್ಲದ ಗುಡ್ಡಗಳೆಂಬ ಹೆಸರುಂಟು.

೯. ಸುರಂಗಗಳಲ್ಲಿಯೂ ಗುಹೆಗಳಲ್ಲಿಯೂ ಇಳಿದರೆ ಸಾಧಾರಣ ಮನುಷ್ಯರಿಗೆ ಅಲ್ಲಿರುವ ವಸ್ತುಗಳು ಗಲಿಬಿಲಿಯಾಗಿ ತೋರುವವು. ಆದರೆ ಅವುಗಳಲ್ಲಿ ಒಂದು ಕ್ರಮವುಂಟೆಂದು ವಿದ್ವಾಂಸರು ತಿಳಿದುಕೊಂಡಿದ್ದಾರೆ ಹ್ಯಾಗಂದರೆ ಪೊರೆಯಿಲ್ಲದ ಗುಡ್ಡಗಳು ಪೊರೆಯಿರುವ ಗುಡ್ಡಗಳ ಕೆಳಗೆ ಇಡಲ್ಪಟ್ಟವೆ. ಮತ್ತು ಪೊರೆಯಿರುವ ಗುಡ್ಡಗಳುಯಾವಾಗಲು ಒಂದರಮೇಲೊಂದು ಒಂದೇ ಕ್ರಮವಾಗಿ ಹೇರಿಕೊಂಡವೆ.

೧೦. ಈ ಗುಡ್ಡಗಳೆಲ್ಲಾ ಕಣ್ಣಿಗೆ ಸಮವಾಗಿ ಕಾಣುವದಿಲ್ಲ. ಕೆಲವುವಾರೆಯಾಗಿಯೂ ಕೆಲವು ಗೋಡೆಯಾಗಿಯೂ ಕೆಲವು ತಲೆ ಕೆಳಗಾಗಿಯೂ ಅವೆ.

೧೧. ಭೂಮಿಯ ಚಿಪ್ಪಿನಲ್ಲಿರುವಂಥ ವಸ್ತುಗಳು ಹೀಗೆ ಗಲಿಬಿಲಿಯಾಗಿ ಕಾಣಿಸುವದಕ್ಕೆ ಯೆರಡು ಕಾರಣಗಳುಂಟು. ಅವು ಯಾವ್ಯಾವಂದರೆ ತಗ್ಗಿಸುವಂಥ ಕಾರಣಗಳೂ (Degrading causes) ಯೆತ್ತರ ಮಾಡುವಂಥ ಕಾರಣಗಳೂ (Elevating causes) ವುಂಟು.

೧) ತಗ್ಗಿಸುವಂಥ ಕಾರಣಗಳು ಮೂರುಂಟು. ಅವು ಯಾವವಂದರೆ

೧] ಭೂಮಿಯ ಸುತ್ತಲಿರುವ ಅಂತರಿಕ್ಷಕ್ಕೆ (Atmosphere) ಸಮ್ಮಂಧವಾದದ್ದು.

ಅಂತರಿಕ್ಷವು ಮೂರು ಸೂಕ್ಷ್ಮವಾಯುಗಳಿಂದ (Gases) ವುಂಟುಮಾಡಲ್ಪಟ್ಟದೆ. ಗುಡ್ಡಗಳು ಅಂತರಿಕ್ಷದಲ್ಲಿರುವ ಯೆರಡು ಸೂಕ್ಷ್ಮ ವಾಯುಗಳನ್ನು ಹೀರುತ್ತದೆ ಆದ್ದರಿಂದ ಅವು ಸವುದುಹೋಗುವದುಂಟು.

೨] ನೀರಿನಸಂಬಂಧವಾದದ್ದು.

[ಮಳೆಯಿಂದ ಗುಡ್ಡಗಳು ಸವೆಯುತ್ತವೆ.

[ಮತ್ತು ಆಗಾಗ್ಯೆ ನೀರು ಗುಡ್ಡಗಳಲ್ಲಿರುವ ಸಂದುಗಳಲ್ಲಿ ಪ್ರವೇಶಿಸಿ ಅಲ್ಲಿರುವ ಮಣ್ಣನ್ನು ಕೊಚ್ಚಿಕೊಂಡು ಹೋಗುವದರಿಂದ ಆ ಗುಡ್ಡಗಳಿಂದ ತುಂಡುಗಳು ಜಾರಿಬೀಳುವ ಹಾಗೆ ಮಾಡುತ್ತದೆ. ಸ್ವಿಟ್ಸರ್ಲಾಂಡ್ (Switzerland) ದೇಶದಲ್ಲಿ ೧೮೦೬ ನೇ ವರುಷದಲ್ಲಿ ಅಂಥಾ ತುಂಡು ವೊಂದು ಜಾರಿಬಿದ್ದದರಿಂದ ಅನೇಕವೂರುಗಳು ನಾಶವಾದವು ೮೦೦ ಜನ ಕೊಲ್ಲಲ್ಪಟ್ಟರು.

[ನದಿಗಳಿಂದ ಗುಡ್ಡಗಳು ಕೊರದು ಹೋಗುತ್ತವೆ. ಹಿಂದುಸ್ತಾನ್ ದೇಶದಲ್ಲಿರುವ ನರ್ಮದಾನದಿಯಲ್ಲಿ ನೂರು ಅಡಿಯ ಆಳವಾಗಿರುವ ಕಾಲುವೆ ಹೀಗೆ ಗುಡ್ಡದಲ್ಲಿ ವುಂಟಾಗಿದೆ. ಗಂಗಾನದಿಯಿಂದ ಕೊಚ್ಚಿಕೊಂಡು ಹೋಗಲ್ಪಡುವ ಮಣ್ಣಿನಿಂದ ಆನದಿಯ ಮುಖದಲ್ಲಿ ಸಮುದ್ರದನೀರು ಅರವತ್ತು ಮೈಲುಗಳ ದೂರದಮಟ್ಟಿಗೆ ಬೇರೆ ಬಣ್ಣವಾಗುತ್ತದೆ. ಇದರಿಂದ ಆ ಗಂಗಾನದಿಯ ಮುಖದಲ್ಲಿ ವೊಂದು ಭೂಮಿ ವುಂಟಾಯಿತು ಅದು ೨೨೦ ಮೈಲುಗಳ ವುದ್ದವೂ ೨೦೦ ಮೈಲುಗಳ ಅಗಲವೂ ಆಗಿದೆ. ಅದೆಲ್ಲಾ ಅರಣ್ಯವಾಗಿದೆ.

೩] ಸಮುದ್ರಕ್ಕೆ ಸಂಬಂಧವಾದದ್ದು. ಸಮುದ್ರದ ತೆರೆಗಳ ಬಲದಿಂದ ದಡಗಳು ಕೊರದುಹೋಗುವದುಂಟು ಇಂಗ್ಲಾಂಡ್ (England) ದೇಶದಲ್ಲಿ ಸಮುದ್ರತೀರದಹತ್ರ ವೊಂದು ಗುಡಿ ವುಂಟು ಮುನ್ನೂರು ವರುಷಗಳ ಮುಂಚೆ ಆ ಗುಡಿಗೂ ಸಮುದ್ರದ ದಡಕ್ಕೂ ವೊಂದುಮೈಲು ದೂರವಾಗಿತ್ತು ಈಗ ಅರವತ್ತು ಗಜ ದೂರ ಮಾತ್ರವದೆ ಈ ಕಾರಣದಿಂದ ಕೆಲವುದ್ವೀಪಗಳು ಸಮೀಪವಾಗಿ ಇಲ್ಲದೇ ಹೋಗವೆ ಡೆನ್ಮಾರ್ಕ್ (Denmark) ದೇಶದಲ್ಲಿ ೧೩ ನೇ ಶತದಲ್ಲಿ (Century) ನೋರ್ಡ್‌ಸ್ಟ್ರಾಂಡ್ (Nordstrand) ಯೆಂಬ ವೊಂದುದ್ವೀಪವಿತ್ತು ಅದು ೫೦ ಮೈಲುಗಳ ವುದ್ದವೂ ೩೫ ಮೈಲುಗಳ ಅಗಲವೂ ಆಗಿತ್ತು ಅದರಲ್ಲಿ ಅನೇಕ ಜನರು ವಾಸಮಾಡುತ್ತಿದ್ದರು ಆದರೆ ಈಗ ಅಲ್ಲಿ ಜನರು ವಾಸಮಾಡಕೂಡದ ಹಾಗೆ ಕೆಲವು ಚಿಕ್ಕ ದ್ವೀಪಗಳು ಮಾತ್ರ ನಿಂತವೆ. ಮತ್ತು ಈಗ ಹಿಂದುಸ್ತಾನದಿಂದ ಹೊರಟು ಲಂಕಾದ್ವೀಪಕ್ಕೆ ಸೇರಬೇಕಾದರೆ ಸಮುದ್ರದಮೇಲೆ ಹೋಗಬೇಕು ಆದರೆ ಪೂರ್ವದಲ್ಲಿ ಹಿಂದುಸ್ತಾನಕ್ಕೂ ಲಂಕಾದ್ವೀಪಕ್ಕೂ ಸಮ್ಮಂಧ ವಿತ್ತೆಂದು ವಿದ್ವಾಂಸರು ನೆನಸುತ್ತಾರೆ.

೨.) ಈ ತಗ್ಗಿಸುವಂಥ ಕಾರಣಗಳಿಂದ ಭೂಮಿಯ ಮೇಲ್ಭಾಗದಲ್ಲಿರುವ ವಸ್ತುಗಳೆಲ್ಲಾ ಯೆಳೆಯಲ್ಪಟ್ಟು ಸಮುದ್ರದ ನೆಲಕ್ಕೆ ಸೇರದಹಾಗೆ ಯೆತ್ತರಮಾಡುವಂಥಾ ಕಾರಣಗಳುಂಟು.

ಈ ಕಾರಣಗಳು ನಾಲ್ಕು.

೧] ಅಗ್ನಿಪರ್ವತಗಳಿಗೆ ಸಂಬಂಧವಾದದ್ದು.

ಅಗ್ನಿಪರ್ವತಗಳೊಳಗಿಂದ ಯಾವಾಗಲು ಹೊಗೆಯೂ ಬೂದಿಯೂ ಕೆಂಡಗಳೂ ಹೊರಡುತ್ತಾ ಬರುವವು. ಮತ್ತು ಆಗಾಗ್ಯೆ ಕರಗಿದ ಗುಡ್ಡಗಳು ಬಹಳವಾಗಿ ಈಚೆಗೆ ಬರುವವು. ಈ ಕಾರಣದಿಂದ ಎಟ್ನ (Etna) ಯೆಂಬ ಅಗ್ನಿಪರ್ವತದ ಸುತ್ತಲಿರುವ ಭೂಮಿ ೧೫೦ ಮೈಲುಗಳಮಟ್ಟಿಗೂ ೧೨ ಅಡಿ ಯೆತ್ತರವಾಯಿತು. ೧ ನೇ ಶತದಲ್ಲಿ ವಿಸೂವಿಯಸ್ (Vesuvius) ಯೆಂಬ ಅಗ್ನಿಪರ್ವತದಿಂದ ಹೊರಟವಸ್ತುಗಳು ಹೆರ್ಕ್ಯುಲೇನಿಯಂ (Herculaneum) ಪೋಂಪಿಯೈ (Pompeii) ಯೆಂಬ ಪಟ್ಟಣಗಳನ್ನು ಮುಚ್ಚಿಬಿಟ್ಟವು. ಈ ಪಟ್ಟಣಗಳು ಇದ್ದ ಸ್ಥಳದಲ್ಲಿ ದೊಡ್ಡಬೈಲು ವುಂಟಾದದರಿಂದ ಅವುಗಳ ಸ್ಥಳ ಅನೇಕ ವರುಷಗಳಮಟ್ಟಿಗೂ ಯಾರ್ಬ್ಬರಿಗೂ ತಿಳಿಯದೆ ಇತ್ತು. ಕೆಲವು ವರುಷಗಳ ಮುಂಚೆ ಆ ಸ್ಥಳ ಸಿಕ್ಕಿದ್ದರಿಂದ ಜನರು ಅಲ್ಲಿ ಅಗಿದು ಆ ಪಟ್ಟಣಗಳ ಬೀದಿಗಳನ್ನೂ ಮನೆಗಳನ್ನೂ ಅಲ್ಲಿದ್ದ ಸಾಮಾನುಗಳನ್ನೂ ಕಂಡುಕೊಂಡಿದ್ದಾರೆ. ೧೭೫೯ ನೇ ವರುಷದಲ್ಲಿ ಮೆಕ್ಸಿಕೋ (Mexico) ದೇಶದಲ್ಲಿ ಹೊಲಗಳಿದ್ದ ಬೈಲಿನಲ್ಲಿ ಭೂಮಿಯೊಳಗಿಂದ ಬೆಂಕಿ ಹೊರಟಿತು. ಕೆಲವು ತಿಂಗಳು ಹಾಗೆ ಹೊರಡುತ್ತಾ ಬಂದು ಅಲ್ಲಿ ಆರುಬೆಟ್ಟಗಳು ವುಂಟಾಗಮಾಡಿ ಶಾಂತವಾಯಿತು. ಅವುಗಳಲ್ಲಿ ವೊಂದುಬೆಟ್ಟವು ೧೬೦೦ ಅಡಿ ಯೆತ್ತರವಾಗಿದೆ.

ಸಮುದ್ರದಲ್ಲಿ ಅಲ್ಲಲ್ಲಿ ದ್ವೀಪಗಳು ಹೀಗೆ ವುಂಟಾಗುವದುಂಟು. ಇವುಗಳಲ್ಲಿ ಕೆಲವು ಸ್ವಲ್ಪಕಾಲ ಕಾಣಿಸಿ ಆಮೇಲೆ ಕಾಣದೆಹೋಗುತ್ತವೆ. ಆದರೆ ಕೆಲವು ಮನುಷ್ಯರು ಅವುಗಳ ಮೇಲೆ ವಾಸಮಾಡುವಹಾಗೆ ನಿಲ್ಲುತ್ತವೆ. ಸೆಂಟಹೆಲೀನಾ (St. Helena) ಅಸೋರ್ಸ್ (Azores) ವೆಸ್ಟ್ಇಂಡಿಸ್ (West Indies) ಓವೈಹೀ (Owhyhee) ಈದ್ವೀಪಗಳು ಹೀಗೆ ವುಂಟಾದವೆಂದು ತೋರುತ್ತದೆ.

೨] ಭೂಕಂಪಗಳಿಗೆ ಸಮ್ಮಂಧವಾದದ್ದು.

ಭೂಕಂಪಗಳಿಗೆ ಕಾರಣವು ವಿದ್ವಾಂಸರಿಗೆ ಗೊತ್ತಾಗಿ ತಿಳಿಯಲಿಲ್ಲ. ಆದರೆ ಭೂಮಿಯೊಳಗೆ ಬಂಧಿಸಲ್ಪಟ್ಟಿರುವ ಸೂಕ್ಷ್ಮವಾಯುಗಳಿಂದ ಆಗುತ್ತವೆಯೆಂದು ನೆನಸುತ್ತಾರೆ. ಈ ಸೂಕ್ಷ್ಮವಾಯುಗಳು ಈಚೆಗೆ ಬರುವದಕ್ಕೆ ದಾರಿಇಲ್ಲದೆ ಇರುವದರಿಂದ ವುಬ್ಬಿಕೊಂಡು ಭೂಮಿಯನ್ನು ಅದರಿಸುತ್ತವೆ ಇದರಿಂದ ಭೂಮಿಯು ಅಲ್ಲಲ್ಲಿ ಯೆತ್ತರವಾಗುತ್ತದೆ.

ಚಿಲಿ (Chili) ದೇಶದಲ್ಲಿ ೧೮೨೨ ನೇ ವರುಷದಲ್ಲಿ ಭೂಕಂಪವುಂಟಾದದರಿಂದ ೧೦೦ ಮೈಲುಗಳಮಟ್ಟಿಗೆ ಭೂಮಿ ೪ ಅಡಿಯೆತ್ತರ ವಾಯಿತು. ಸಿಂಧೂನದಿಯ ಮುಖದಹತ್ರ ೫೦ ಮೈಲುಗಳ ವುದ್ದವಾಗಿಯೂ ೧೬ ಮೈಲುಗಳ ಅಗಲವಾಗಿಯೂ ಇರುವಭೂಮಿ ೧೮೧೯ ನೇ ವರುಷದಲ್ಲಿ ವುಂಟಾದ ಭೂಕಂಪದಿಂದ ೧೦ ಅಡಿ ಯೆತ್ತರವಾಯಿತು.

೩] ಭೂಮಿಯನ್ನು ಬರಬರ ಯೆತ್ತರಮಾಡುವಂಥ ಕಾರಣಗಳು.

೧೦೦ ವರುಷಗಳಿಗಾಗಿ ಬಾಲ್ಟಿಕ್ (Baltic) ಸಮುದ್ರದ ದಡವು ಕೆಲವು ಅಡಿ ಎತ್ತರವಾಯಿತು ಇದಕ್ಕೆ ಕಾರಣವು ಯಾರಿಗೂ ಗೊತ್ತಾಗಿ ತಿಳಿಯಲಿಲ್ಲ.

೪] ಚೆಲ್ಲರೆ ಕಾರಣಗಳು.

ಗಾಳಿಯಿಂದ ಮರಳು ಸಮುದ್ರದ ದಡದಮೇಲೆ ಹೊಡಕೊಂಡು ಹೋಗಲ್ಪಡುವದರಿಂದ ಅಲ್ಲಲ್ಲಿ ದಿಬ್ಬಗಳು ಆಗುತ್ತವೆ.

ಕೆಲವು ಸ್ಥಳಗಳಲ್ಲಿ ಹವಳದಹುಳಗಳಿಂದ ಭೂಮಿಯ ಮೇಲ್ಭಾಗವು ವಿಸ್ತಾರವಾಗುವದುಂಟು ಇವು ಸಮುದ್ರದ ನೀರಿನಲ್ಲಿರುವ ಬಂಡೆಗಳನ್ನು ಕಂಡು ಅಲ್ಲಿ ಅಸ್ತಿವಾರಹಾಕಿ ಗೆದ್ದಲುಹುತ್ತುಗಳನ್ನು ಮಾಡುವಪ್ರಕಾರ ಕಟ್ಟುತ್ತಾ ಬರುತ್ತವೆ ಕಡೆಗೆ ಸಮುದ್ರದಮೇಲೆ ಅದರಬಲ್ಲಿ ತೋರುವದು ಪಸಿಫಿಕ್ (Pacific) ಸಮುದ್ರದಲ್ಲಿ ನ್ಯೂಹೊಲ್ಲಾಂಡ್ (New Holland) ದೇಶದ ಹತ್ತಿರ ಹವಳದ ಹುಳಗಳಿಂದ ಮಾಡಲ್ಪಟ್ಟ ೧೦೦೦ ಮೈಲುಗಳ ಉದ್ದವಾಗಿರುವ ಬಂಡೆಬಲ್ಲಿ ಆಯಿತು.

ಮೊದಲನೆ ಪುಸ್ತಕ ೬೦ನೆ ಪುಟದಲ್ಲಿ ತೀರಚಿಯಿದ್ದ

An Account of Hindostan.—Continued.

ಹಿಂದುದೇಶದ ವರ್ಣನೆಯು.

೫ನೆ ಸಾದಾತ ಮತ್ತು ಲೋದಿಯೆಂಬವರ ಸಂಸ್ಥಾನದಲ್ಲಿ ಮುಸಲ್ಮಾನರ ರಾಜ್ಯವು ಕೆಟ್ಟುಹೋಗಿ ಕುದುರೆಟಪ್ಪಾಲು ಹೊರತು ಮತ್ತೇನು ವಿಶೇಷ ಸ್ಥಾಪಿಸಲಾಗಲಿಲ್ಲ. ಆ ರಾಜ್ಯದಲ್ಲಿ ಜಗಳವೂ ಗಲಿಬಿಲಿಯೂ ಹೆಚ್ಚಾಗುವಾಗ್ಯೆ ಮೊಗಲ್ ಅರಸನಾದ ಧೈರ್ಯವೂ ಮಹಾತ್ಮೆವೂ ಉಳ್ಳ ತಿಮೊರನ ಸಂತತಿಯವನಾಗಿರುವ ಬಾಬುರಸುಲತಾನ ೧೫೨೬ನೆ ವರ್ಷದಲ್ಲಿ ರಾಜ್ಯವನ್ನು ಸಂಪಾದಿಸಿಕೊಂಡು ಮುಸಲ್ಮಾನರ ಅರಸತನಕ್ಕೆ ಹೆಚ್ಚಾದಪ್ರಕಾಶವನ್ನು ಕೊಟ್ಟನು. ಅಷ್ಟರಲ್ಲಿ ೧೪೯೮ನೆ ವರ್ಷದ ಮೇತಿಂಗಳ ೨ನೆ ತಾರೀಖಿನಲ್ಲಿ ಪೊರ್ತುಗೀಸ್ ಜನರು ಮೊದಲನೆಸಾರಿ ಕಲ್ಲಿಕೋಟೆ ಪಟ್ಟಣಕ್ಕೆ ಬಂದದರಿಂದ ಹಿಂದುದೇಶದ ಪಶ್ಚಿಮವೂ ದಕ್ಷಿಣವೂ ವಿಲಾಯಿತಿಯವರಿಗೆ ವಶವಾಗಲಿಕ್ಕೆ ಆರಂಭವಾಯಿತು.

೮ನೆ ಅರಬಿಯರು ವ್ಯಾಪಾರಕ್ಕೋಸ್ಕರವಾಗಿಯೂ ವಾಸಮಾಡುವದಕ್ಕೋಸ್ಕರವಾಗಿಯೂ ಹಿಂದುದೇಶಕ್ಕೆ ಬಂದದ್ದು. ಪೂರ್ವಕಾಲವಾರಭ್ಯ ಕೆಲವು ಅರಬಿಯರ ಹಡಗಗಳು ಹಿಂದುದೇಶಕ್ಕೆ ಬರುತ್ತಿದ್ದವು. ಆದರೆ ಮುಸಲ್ಮಾನರಮತವು ಉತ್ಪತ್ತಿಯಾದಮೇಲೆ ಅವರು ವ್ಯಾಪಾರಕ್ಕೋಸ್ಕರವಲ್ಲದೆ ದೇಶವನ್ನು ಸಂಪಾದಿಸುವ ಅಪೇಕ್ಷೆಯಲ್ಲಿಯೂ ದೇಶಸ್ಥರನ್ನು ತಮ್ಮ ಮತದಲ್ಲಿ ಸೇರಿಸುವ ಅಪೇಕ್ಷೆಯಲ್ಲಿಯೂ ಬರುತ್ತಿದ್ದರು. ಲಂಕಾದ್ವೀಪದವರ ಸಂಗಡ ಅರಬಿಯರು ಪೂರ್ವದಾರಭ್ಯ ವ್ಯಾಪಾರ ಮಾಡುತ್ತಿದ್ದರು. ಯಿಸ್ಲಾಮಿನ ಆರಂಭದಲ್ಲಿ ಲಂಕೆಯವರಾದ ಕೆಲವುವರ್ತಕರು ಯೀಮತದಲ್ಲಿ ಸೇರಿದರೆಂದು ವರ್ತಮಾನವುಂಟು. ಮತ್ತು ಲಂಕಾ ಅರಸನು ಖಲೀಫರಿಗೆ ಕಾಣಿಕೆಗಳಿಂದ ತುಂಬಿಸಿದ ಒಂದು ಹಡಗವನ್ನು ಖಲಿಫ ವಾಲೀದ ಯೆಂಬ ಬಗದಾದ ಅರಸನಿಗೆ ಕಳುಹಿಸುವಾಗ್ಯೆ ಸಿಂಧುನದಿಹತ್ತಿರಯಿರುವ ಸಮುದ್ರಕಳ್ಳರು ಹೆಚ್ಚು ಕಡಿಮೆ ೭೧೦ನೆ ವರ್ಷದಲ್ಲಿ ಅದನ್ನು ಲೂಟಿಮಾಡಿದರು. ಅದಕ್ಕೋಸ್ಕರ ವಾಲೀದನು ೨ ಸಾರಿ ಸೈನ್ಯವನ್ನು ದಕ್ಷಿಣಸಿಂಧು ಸೀಮೆಗೆ ಕಳುಹಿಸಿ ತತ್ತಹವಾನ ಮುಲತಾನ ಊರುಗಳನ್ನು ತೆಗದು ಮಸೂದಿಗಳನ್ನು ಕಟ್ಟಿಸಿ ಖುರಾನವನ್ನು ಸಾರಿಹೇಳಿಸಿದನು. ಮಲಬಾರ ದೇಶದಲ್ಲಿ ಬಹು ಪೂರ್ವದಾರಭ್ಯ ಕ್ರೈಸ್ತರೂ ಯೆಹೂದಿಯರೂ ವರ್ತಕರಾಗಿ ಕುಳಿತುಕೊಂಡಿದ್ದರು. ಆದರೆ ಚೆರುಮಾನ ಪೆರುಮಾಳ ಯೆಂಬ ಸಮುದ್ರಿಯರಾಜನ ಕಾಲದಲ್ಲಿ ಕೆಲವು ಅರಬಿಯರ ಹಡಗಗಳು ಲಂಕಾದಲ್ಲಿರುವ ಶ್ರೀಪಾದಕ್ಕೆ ಜಾತ್ರೆಯವರನ್ನು ತೆಯುವಾಗ್ಯೆ ಬಿರುಗಾಳಿಯಿಂದ ಮಾರ್ಗತಪ್ಪಿ ಕೊಡಂಗಲ್ಲೂರಿನ ಅಳವಿಗೆ ಸೇರಿದವು. ಸಮುದ್ರಿಯರಾಜನು ಅವನಿಗೆ ಉಪಕಾರಮಾಡಿ ಜಾತ್ರೆಯವರಲ್ಲಿ ಆನಂದಪಟ್ಟು ಯಿಸಲಾಮಿಗೆ ಸೇರಿ ಅವರಸಂಗಡ ಮಕ್ಕಕ್ಕೆ ಹೋಗಿ ಸಾಯುವಪರಿಯಂತರ ಅಲ್ಲಿ ನಿಂತನು. ಅವನು ಮಕ್ಕದಿಂದ ೧ ಕಾಗದಬರೆಸಿ ಸಮಸ್ತ ಮಲಬಾರ್ ದೇಶದಲ್ಲಿ ಮುಸಲ್ಮಾನರಿಗೆ ಉಪಕಾರಮಾಡಿ ಮಸೂದಿಗಳನ್ನು ಕಟ್ಟಲಿಕ್ಕೆ ಅವರಿಗೆ ಅಪ್ಪಣೆಕೊಡಬೇಕೆಂದು ಬರದನು. ಅಂದಿನಿಂದ ಮುಸಲ್ಮಾನರು ಹಿಂದು ಸ್ತ್ರೀಯರಸಂಗಡ ವಿವಾಹ ಮಾಡಿದಕಾರಣ ಬಂದುಹೋಗುವ ವ್ಯಾಪಾರಸ್ಥರನ್ನು ಹೊರತು ಮಲಬಾರಿನಲ್ಲಿ ಹುಟ್ಟಿದ ಮುಸಲ್ಮಾನರಾದ ಮಾಪಿಳೆಯರು ಹೆಚ್ಚಿದರು.

ಚೆರುಮಾನನ ಕಾಗದವನ್ನು ತೆಗದುಕೊಂಡು ಬಂದವನ ಹೆಸರು ಮಲಿಕ ಅವನು ತನ್ನ ಗೋತ್ರದವರಸಂಗಡ ಮೊದಲನೆಯವನಾಗಿ ಕೊಡಂಗಲ್ಲೂರಿನಲ್ಲಿ ಕೂತುಕೊಂಡು ಮಸೂದಿಗಳನ್ನೂ ತೋಟಗಳನ್ನೂ ಮಾಡಿದನು. ಅವನೇ ದಕ್ಷಿಣಕ್ಕೆ ಸಹ ಹೋಗಿ ಕೊಲ್ಲಮಿನಲ್ಲಿ ೧ ಹೊಸ ಮುಸಲಮಾನರ ಊರು ಮಾಡಿ ಉತ್ತರದಲ್ಲಿ ಸಹಾ ಮಂಗಳೂರು ಪರಿಯಂತ್ರ ಕೆಲವುಪಟ್ಟಣಗಳಲ್ಲಿ ಮಸೂದಿಗಳನ್ನುಮಾಡಿ ಪ್ರಸಂಗಮಾಡುವದಕ್ಕೆ ಮುಲ್ಲಾರನ್ನು ಯಿಟ್ಟಿದ್ದನು. ಅಂದಿನಿಂದ ಯಿಸ್ಲಾಮು ಹಿಂದುದೇಶದಲ್ಲಿ ಪ್ರಬಲವಾಯಿತು. ನಿವಾಸಿಗಳಲ್ಲಿಯೂ ಅರಸುಗಳಲ್ಲಿಯೂ ಅನೇಕರು ಮುಸಲಮಾನರಾಗಿ ತಮ್ಮ ರಾಜ್ಯಗಳ ಅಳವೆ ಪಟ್ಟಣಗಳನ್ನು ಅರಬಿಯರಿಗೆ ಒಪ್ಪಿಸಿ ಕೊಟ್ಟರು. ಯೆಲ್ಲರಿಗಿಂತ ಮುಂಚೆ ಯೀಪ್ರಕಾರ ಮಾಡಿದವರಾದ ಗೋವೆದಿವಾಲಮತ್ತು ಜಿಲ್ ಅರಸರೂ ಗುಜರರಾಜ್ಯದಲ್ಲಿನಹ ದೊಡ್ಡ ಉದ್ಯೋಗಗಳೂ ಮುಖ್ಯವಾದ ವ್ಯಾಪಾರವೂ ಮುಸಲ್ಮಾನರದಾಗಿದ್ದವು.

ಘಟ್ಟದಮೇಲೆ ಮುಸಲ್ಮಾನರು ಆವಾಗಬರಲಿಲ್ಲ. ಮಲಬಾರ ಅತ್ತಲಾಗೆ ಅವರು ಬಹಳವಾಗಿ ಹೋಗಲಿಲ್ಲ. ಕೊಚ್ಚಿಯಲ್ಲಿ ಚೀನಾದವರು ಹಡಗಗಳಿಂದ ಮುಸಲ್ಮಾನರಿಗೆ ಯೆದುರಾಗಿಬಂದು ಅವರಸಂಗಡ ವ್ಯಾಪಾರ ಮಾಡುತ್ತಿದ್ದರು.

ಹಿಂದುದೇಶದಲ್ಲಿರುವ ಅರಬಿಯಗಳನ್ನು ಕುರಿತು ಯಿಬೆನ್‌ಬತೂತಾ ಯೆಂಬ ಮುಸಲ್ಮಾನರ ಚರಿತ್ರೆಗಾರನು ಬರದ ವರ್ತಮಾನ ಯೇನಂದರೆ ಯಿಬೆನ್ ಬತೂತಾನು ೧೩೪೦ನೆ ವರ್ಷದಲ್ಲಿ ಡಿಲ್ಲಿಯಿಂದ ಕಂಬಾಯಿ ಮತ್ತು ಕೊಂಕಣ ದೇಶಗಳನ್ನು ದಾಟಿ ಮಲಬಾರದೇಶವನ್ನು ಸಹಾ ಹಾದು ಕೊಚ್ಚಿ ಪರಿಯಂತರ ನೋಡಿ ಚೀನಿಹಡಗವನ್ನು ಯೇರಿ ಒಬ್ಬ ವಕೀಲನಸಂಗಡ ಚೀನಾದೇಶಕ್ಕೆ ಹೋದನು. ಅವನು ಬರೆದ ಕಥೆಯಿಂದ ಆಗಿನ ಮುಸಲ್ಮಾನರ ಸ್ಥಿತಿಯನ್ನು ಚನ್ನಾಗಿ ನೋಡಬಹುದು. ಯಿವನು ಸಿಂಧುಸಾಗರದಲ್ಲಿ ಆರಿ ಬಂದರಯೆಂಬ ದೊಡ್ಡ ಅಳವೆಯಲ್ಲಿ ಫಾರ್ಸಿ ಮತ್ತು ಯೆಮೀನಯೆಂಬ ದೇಶಗಳ ಹಡಗಗಳನ್ನು ನೋಡಿದನು. ಆಸ್ಥಳಕ್ಕೆ ಅಲ್ಲದೆ ಕಂಬಾಯಕ್ಕೆ ಸಹಾ ಬಹಳಮಂದಿ ಪರದೇಶಿಯರಾದ ವರ್ತಕರು ಬರುತ್ತಾರೆಂದು ಅವನು ಕೇಳಿದನು. ಅಂದಿನಿಂದ ಅವನು ಒಬ್ಬ ಹಿಂದುದೇಶದವನಾದ ಅರಸನಿಗೆ ವಶವಾದ ಗೋವೆಗೆ ಬಂದ

ನು. ಗೋವೆ ದಕ್ಷಿಣಕ್ಕೆ ಹೋಗುವಾಗ್ಯೆ ಹೆಸರುತಿಳಿಯದ ೧ ದೊಡ್ಡ ಪಟ್ಟಣಕ್ಕೆ ಮೊದಲು ಬಂದು ಆಮೇಲೆ ಕೆಲವು ದಿವಸ ಕೊಂಕಣ ದೇಶದ ತೀರದಲ್ಲಿ ಮುಂಚೆ ಹೋಗಿ ಸಂದಬರ ಪಟ್ಟಣವನು ನೋಡಿ ಹೆನಾರಿಯೆಂಬ ಯೀಗಿನ ಹೊಂನಾವಾರಕ್ಕೆ ಬಂದನು. ಅಲ್ಲಿಯಿರುವ ಮುಸಲ್ಮಾನರೂ ಅವರ ಹೆಂಗಸರೂ ಸಹಾ ಖುರಾನು ಬಾಯಿಪಾಠ ಮಾಡಿಯಿದ್ದರು. ಅವರು ತಂಮ ಮತಕ್ಕೋಸ್ಕರ ಸಮುದ್ರದ ಮೇಲೆ ಯುದ್ಧಗಳನು ಮಾಡಿ ಹಿಂದುಜನರ ಹಡಗಗಳಿಗೆ ವುಪದ್ರ ಕೊಡುತ್ತಿದ್ದರು. ಅಲ್ಲಿಂದ ದಕ್ಷಿಣಕ್ಕೆ ಯೆರಡುತಿಂಗಳುಗಳ ಕಾಲು ದಾರಿಯಾದ ಮಲಬಾರ ದೇಶವು ಯಿರುತ್ತದೆ. ಯಿದರ ಮೇಲೆ ೧೨ ಮಂದಿ ಅರಸುಗಳು ಆಳುತ್ತಾರೆಂದು ಬಹೂತಾನು ಹೇಳುತ್ತಾನೆ. ಯೀ ಅರಸರಲ್ಲಿ ದೊಡ್ಡವನಿಗೆ ೫೦ ಸಾವಿರ ಚಿಕ್ಕವನಿಗೆ ೫ ಸಾವಿರ ಶಿಪಾಯಿಯರು ೧೨ ಸೀಮೆಗಳ ಪ್ರಾಂತ್ಯಗಳಲ್ಲಿ ಬೇಲಿಗಳಿದ್ದವು ಅವುಗಳ ಬಾಗಲುಗಳ ಮೇಲೆ ಕ್ಷೇಮದ್ವಾರವೆಂದು ಬರೆದಿತ್ತು. ಯೀ ರಾಜ್ಯಗಳಲ್ಲಿ ಅಳಿಯಸಂತಾನದ ಸಂಪ್ರದಾಯವು ಆಗ ಸಹಾ ನಡೆಯುತ್ತಿತ್ತು. ಸಮಸ್ತ ಮಲಬಾರ ಸೀಮೆಯಲ್ಲಿ ಸ್ವಲ್ಪವಾದರು ಭೂಮಿ ನಿಷ್ಪ್ರಯೋಜನವಾಗಿರಲಿಲ್ಲ ಪ್ರತ್ಯೊಬ್ಬನಿಗೆ ೧ ತೋಟ ಅದರ ಮಧ್ಯದಲ್ಲಿ ಮನೆ ಸುತ್ತಲು ಅವನ ಸಮಸ್ತ ದೇಶವನು ದಾಟುವ ಮಾರ್ಗವು ಮರಗಳ ನೆರಳಿನಿಂದ ತಂಪಾಗಿರುತ್ತಿತ್ತು. ಅರ್ಧ ಅರ್ಧ ಹರದಾರಿಗೆ ಮುಸಲ್ಮಾನರಿಗಾದರೂ ಹಿಂದುಜನರಿಗಾದರೂ ಕೂಡ್ರಲಿಕ್ಕೆ ಬಂಗಲೆಗಳು. ಆ ೨ ಮತದವರಿಗೆ ಪ್ರತ್ಯೇಕ ಪ್ರತ್ಯೇಕ ಬಾವಿಗಳು. ಅವುಗಳ ಕಾಯಲಿಕ್ಕೆ ಯಿರಿಸಿದ ಪ್ರತ್ಯೊಬ್ಬ ಮನುಷ್ಯನು ಹಿಂದುಜನರಿಗೆ ನೀರು ತುಂಬಿದ ಪಾತ್ರೆಗಳಂನು ಕೊಡುತ್ತಿದ್ದನು. ಮುಸಲ್ಮಾನರಿಗೆ ನೀರು ಕೈಯಲ್ಲಿ ಹೋಯುತ್ತಿದ್ದನು. ಹ್ಯಾಗಾದರು ಆ ದೇಶಸ್ಥರು ಮುಸಲ್ಮಾನರಿಗೆ ಬಹಳ ಮರ್ಯಾದೆ ಮಾಡಿ ಯಿವರು ಪ್ರಯಾಣವಾಗಿ ಬಂದರೆ ಯಿವರಿಗೆ ಅಡಿಗೆ ಮಾಡಿ ಬಾಳೆ ಯೆಲೆಮೇಲೆ ಅಂನ ಹಾಕುತ್ತಿರುವರು. ಅವರು ತಿಂದ ಮೇಲೆ ವುಳಿಯುವದಂನು ನಾಯಿಗಳಿಗೆ ಹಾಕುತ್ತಿದ್ದರು. ಕಳ್ಳತನ ದಶ್ಯತಿಯಾದರು ಯೀ ರಾಜ್ಯದಲ್ಲಿ ಯಿರಲೇ ಯಿಲ್ಲ. ವೊಂದಾದರು ತೆಂಗಿನ ಕಾಯಿ ವೊಂದಾದರು ಅಕ್ಕಿ ನುಚ್ಚು ಕದ್ದುಕೊಂಡವನಿಗೆ ಮರಣದಶಿಕ್ಷೆ ಬರುತ್ತಿರುವದು. ಮರದಿಂದ ಬೀಳುವ ಹಂಣು ಸಹಾ ಯಜಮಾನನ ಹೊರ್ತು ಯಾರೂ ಮುಟ್ಟಲಿಕ್ಕೆ ಯಿಲ್ಲ. ಕುದುರೆ ಮೇಲೆ ಅರಸನು ಹೊರ್ತು ಯಾರು ಹತ್ತಲಿಕ್ಕೆ ಲ್ಲ. ದೊಡ್ಡವರು ಡೋಲಿಗಳಲ್ಲಿ ಹೋಗುತ್ತಾ ವ್ಯಾಪಾರಗಳಂನು ಕೂಲಿ ಆಳುಗಳು ವೈಯುತ್ತಾ ಯಿರುತ್ತಿದ್ದರು. ಯಿವರಿಗೆ ವೊಂದು ಕಬ್ಬಿಣದ ಮೊಳೆಯುಳ್ಳ ಕೋಲು ಹೊರೆಯಂನು ಹೊತ್ತುಕೊಳ್ಳುವದಕ್ಕೆ ವೊಂದು ಕವೆಕೋಲು ಯಿರುತ್ತಿತ್ತು. ಯೀ ಮಲಬಾರ ದೇಶದಲ್ಲಿ ಬಹೂತಾನು ನೋಡಿದ ಪಟ್ಟಗಳು ಯಾವವೆಂದರೆ ಲಬಿಸರದಾರ ಕಾಕಂವಾರ ಮಜರೂರ ಅದರಲ್ಲಿ ಕಪ್ಪುಮೆಣಸು ಮತ್ತು ಶುಂಠಿ ಸಹಾ ಬಹಳ ಬೆಳಿಯುತ್ತಿತ್ತು ಅಲ್ಲಿ ೪ ಸಾವಿರ ಮುಸಲ್ಮಾನರಾದ ವರ್ತಕರುಯಿದ್ದರು. ಮಂಗಲೂರಿನ ದಕ್ಷಿಣಕ್ಕೆ ಹಿಲಿ ಅಥವಾ ಡಿಲ್ಲಿಯೆಂಬ ಯೇಳುಮಲೆ ಆಮೇಲೆ ಕಲಚೆರಿಯು ಕರ್ನ ದರಕನಂ ಪಟ್ಟಿಂನ ಕಲ್ಲಿಕೋಟು ಅದರಮೇಲೆ ಕಂಜಿರಕರ ಯಿದು ಮೊದಲನೆ ಯೆಹೂದಿಯರ ವೂರು ಕಡೀಲಿ ಕೊಲಂನ ಯಿವು ಬಹೂತಾ ಪ್ರಯಾಣದಲ್ಲಿ ನೋಡಿದ ಪಟ್ಣಗಳ ಹೆಸರುಗಳು ಆಗ ಚೀನಿಯರು ಮೂರು ಅಳಿವೆಗಳಿಗೆ ಬರುತ್ತಿದ್ದರು ಅವು ಯಾವಾವೆಂದರೆ ಕೊಲಂನ ಕಲ್ಲಿಕೋಟು ಹಿಲಿ ಅವರಿಗೆ ೩ ಪ್ರಕಾರದ ಹಡಗಗಳಿದ್ದವು ಅವುಗಳಲ್ಲಿ ದೊಡ್ಡವುಗಳಿಗೆ ಜಂಕಯೆಂದು ಮಧ್ಯಮಗಳಿಗೆ ಜಾವಯೆಂದು ಸಂಣವುಗಳಿಗೆ ಕಾಕಂಯೆಂಬ ಹೆಸರುಗಳಿದ್ದವು ಯೀ ಸಮಸ್ತ ಪಟ್ಟಣಗಳಲ್ಲಿ ಕಲ್ಲಿಕೋಡು ದೊಡ್ಡದಾಗಿತ್ತು ಅದರ ಅಳಿವೆಯಲ್ಲಿ ವಾಸಕೊಡೆಗಾಮಾನು ಯಿರುವಾಗ್ಯೆ ವೊಂದೇ ತಿಂಗಳಲ್ಲಿ ೧೫೦೦ ಮುಸಲ್ಮಾನರ ಹಡಗಗಳು ಬಂದವು ಅವುಗಳಲ್ಲಿ ಕೆಲವುಗಳ ಮೇಲೆ ೨೦೦ ಜನರು ಯಿದ್ದರು.

೯ ನೆ ಹಿಂದುದೇಶದಲ್ಲಿ ನಿವಾಸಿಗಳಾದ ಯೆಹೂದಿಯರಂನೂ ಕ್ರೈಸ್ತರನ್ನೂ ಫಾರ್ಶಿಯರಂನೂ ಕುರಿತು

೧ ನೆ ಮಳಿಯಾಳದಲ್ಲಿ ನಿವಾಸಿಗಳಾದ ಯೆಹೂದಿಯರು ಯಿವರು ಬಿಳೆ ಯೆಹೂದಿಯರು ಕಪ್ಪು ಯೆಹೂದಿಯರೆಂದು ೨ ಭಾಗಗಳಾಗಿ ಯಿರುತ್ತಾರೆ. ಬಿಳೆಯೆಹೂದಿಯರಿಗೆ ಕೊಚ್ಚಿಹತ್ರ ಯಿರುವ ಮತ್ತಚೇರಿ ಮುಖ್ಯಸ್ಥಳವಾಗಿದೆ. ಕಪ್ಪಾದವರಿಗೆ ಮತ್ತಚೇರಿಯಲ್ಲಿ ೧ ಸಾಲೆವುಂಟು. ಆದರೆ ದೇಶದವಳಗೆ ಅವರಿಗೆ ಬೇರೆಬೇರೆ ಪ್ರತ್ಯೇಕ ಸ್ಥಳಗಳು ಯಿರುತ್ತಾವೆ. ಬಿಳೆಯೆಹೂದಿಯರಿಗೆ ಭಾಸ್ಕರರವಿವರ್ಮ ಕೊಟ್ಟ ಶಾಸನವುಂಟು. ಅದರ ಪ್ರಕಾರ ಅವರು ಯೇಸುಕ್ರೀಸ್ತನ ಮೇಲೆ ೪೯೦ ನೆ ವರ್ಷದಲ್ಲಿ ಬಂದಿದ್ಧಾರೆಂದು ಕಾಣುತ್ತದೆ. ಮಲಿಯಾಳಸೀಮೆಯಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ನಿವಾಸಿಗಳಾದ ಕಪ್ಪುಯೆಹೂದಿಯರು ಯೀ ಬಿಳೆಯವರಿಂದ ಬಹಳ ಮುಂಚೆ ಬಂದಿದ್ಧಾರೆಂದು ಕಾಣುತ್ತದೆ. ಅವರು ವೊಂದು ವೇಳೆ ಯೆಹೂದಿಯರು ಬಾಬಿಲೋನಿನ ಸೆರೆಯಲ್ಲಿ ಯಿರುವಾಗ್ಯೆ ಮೂಡಣದಿಕ್ಕಿಗೆ ಹೋಗಿ ಯಿಲ್ಲಿಗೂ ಮುಂಚ್ಯೆಗೂ ಚೀನಾದೇಶಕ್ಕೂ ಮೆಲ್ಲಮೆಲ್ಲಕ್ಕೆ ಬಂದುಯಿದ್ಧಾರೆ. ಅವರು ನಾವು ಬಾಬಿಲೋನ ದೇಶದಿಂದ ಬಂದ ಮನಸ್ಸೆ ಗೋತ್ರದವರಾಗಿದ್ದೇವೆಂದು ಹೇಳಿಕೊಳ್ಳುತ್ತಾರೆ. ಬಿಳೆಯೆಹೂದಿಯರಲ್ಲಿ ಶಾಸ್ತ್ರವೂ ವಿದ್ಯೆಯೂ ಬಹಳವುಂಟು. ಕಪ್ಪವರಲ್ಲಿ ಕಡಿಮೆ. ೨೦೦ ವರ್ಷಕ್ಕಿಂತ ಮುಂಚೆ ಕೊಚ್ಚಿಯಲ್ಲಿಯಿರುವ ಬಿಳೆಯೆಹೂದಿಯರು ೪೦೦೦ ಮಂದಿ ಯಾಗಿದ್ದರು. ಯೀಗ ಹೆಚ್ಚುಕಡಿಮೆ ೨೦೦೦ ಮನೆಗಳು ವುಳಿದವು.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡಸಮಾಚಾರವು.

೧೮೪೪.

೧ನೆ ಪುಸ್ತಕ. ೧೭ನೆ ಅಂಕೆ] ಬಳ್ಳಾರಿ ೧ನೆ ನವಂಬರ್ [ಟಪಾಲ ದಸ್ತೂರಿಕೂಡಿ ಕ್ರಯ ೨ದುಡ್ಡು.

History of the World.—Continued.

ಮೊದಲನೆಪುಸ್ತಕ ೬೩ನೇ ಪುಟದಲ್ಲಿ ತೀರದಿದ್ದ ಲೋಕದ ಚರಿತ್ರೆ.

FIRST PART—SECTION I.

OF THE EARTH.

ಮೊದಲನೇ ವಿಭಾಗವು.

೧ ಅಧ್ಯಾಯ.

ಭೂಮಿಯನ್ನುಕುರಿತು.

೧೨. ಈ ತಗ್ಗಿಸುವಂಥಾ ಯೆತ್ತರಮಾಡುವಂಥಾ ಕಾರಣಗಳಿಂದ ಮೂರು ಕಾರ್ಯಗಳು ವುಂಟಾಗುತ್ತವೆ. ಇವು ಯಾವವಂದರೆ.

೧). ಭೂಮಿಯಮೇಲ್ಭಾಗದಲ್ಲಿರುವ ವಸ್ತುಗಳು ಯೆಳೆಯಲ್ಪಟ್ಟು ಸಮುದ್ರದ ನೆಲಕ್ಕೆ ಸೇರಿಅಲ್ಲಿ ಕುಳಿತುಕೊಳ್ಳುತ್ತವೆ.

೨). ಸಮುದ್ರದ ನೆಲ ಅಲ್ಲಲ್ಲಿ ಯೆತ್ತಲ್ಪಟ್ಟು ಮನುಷ್ಯರು ವಾಸಮಾಡುವ ಹಾಗೆ ವೊಣಗಿದ ಭೂಮಿಯಾಗುತ್ತದೆ.

೩). ಇದರಿಂದ ಭೂಮಿಯ ಚಿಪ್ಪಿನಲ್ಲಿರುವ ಗುಡ್ಡಗಳು ಸಮವಾಗಿರದೆ ಕೆಲವು ವಾರೆಯಾಗಿಯೂ ಕೆಲವು ಗೋಡೆಯಾಗಿಯೂ ಕೆಲವು ತಲೆಕೆಳಗಾಗಿಯೂ ನಿಂತುಕೊಂಡವೆ.

೧೩. ವಿದ್ವಾಂಸರು ಭೂಮಿಯ ಚಿಪ್ಪಿನಲ್ಲಿರುವ ಗುಡ್ಡಗಳನ್ನು ೪ ವಿಭಾಗಗಳಾಗಿ ವಿಂಗಡಿಸಿದ್ದಾರೆ ಅವು ಯಾವವಂದರೆ.

೧). ಮೊದಲನೇತರದ ಗುಡ್ಡಗಳು (Primary Rocks)

ಇವು ಬಹಳ ಗಟ್ಟಿಯಾಗಿರುವದರಿಂದ ಮನುಷ್ಯರ ಕೆಲಸಕ್ಕೆ ಬಹಳ ವುಪಯೋಗವಾಗಿರುತ್ತವೆ. ಈ ಗುಡ್ಡಗಳು ಈಗ ಇಷ್ಟು ಗಟ್ಟಿಯಾಗಿದ್ದಾಗ್ಯೂ ಮೊದಲಾಗಿ ಬೆಂಕಿಯಿಂದ ಕರಗಿದ ವಸ್ತುಗಳಾಗಿದ್ದವೆಂದು ತೋರುತ್ತದೆ ಹೀಗೆ ಕರಗಿದವಸ್ತುಗಳಾಗಿದ್ದಾಗ ಬೆಂಕಿಯಬಲದಿಂದ ಯೆಸೆಯಲ್ಪಟ್ಟು ಮೇಲಕ್ಕೆ ಕಾಣಿಸಿದವು.

೨). ದ್ವಿಸ್ವಭಾವದ ಗುಡ್ಡಗಳು (Transition Rocks)

ಮೊದಲನೇತರದ ಗುಡ್ಡಗಳ ಸ್ವಭಾವವೂ ಯೆರಡನೇತರದ ಗುಡ್ಡಗಳ ಸ್ವಭಾವವೂ ಇವುಗಳಲ್ಲಿ ಬೆರಿಕೆಯಾಗಿರುವದರಿಂದ ದ್ವಿಸ್ವಭಾವದ ಗುಡ್ಡಗಳೆಂದು ಹೇಳಲ್ಪಡುತ್ತವೆ.

೩). ಯೆರಡನೇತರದ ಗುಡ್ಡಗಳು (Secondary Formation)

ಇವು ನೀರಿನಿಂದ ವುಂಟಾದವೆಂದು ತೋರುತ್ತದೆ. ನಾವು ವೊಂದು ಪಾತ್ರೆ ತೆಗದುಕೊಂಡು ಅದರಲ್ಲಿ ನೀರುಹೊಯಿದು ಮೊದಲು ಸ್ವಲ್ಪ ಇದ್ದಲಪುಡಿ ಹಾಕಿದರೆ ತಳಗೆ ಕಪ್ಪಾಗಿ ಕುಳಿತುಕೊಳ್ಳುವದು. ಅದರ ಮೇಲೆ ಸ್ವಲ್ಪ ಮರಳು ಹಾಕಿದರೆ ಕೆಂಪಾಗಿ ಕುಳಿತುಕೊಳ್ಳುವದು. ಅದರ ಮೇಲೆ ಸುಣ್ಣಹಾಕಿದರೆ ಬಿಳುಪಾಗಿ ಕುಳಿತುಕೊಳ್ಳುವದು. ಹೀಗೆ ಈ ಗುಡ್ಡಗಳು ಮೊದಲಾಗಿ ನೀರಿನಲ್ಲಿ ಕಲಸಿದವುಗಳಾಗಿದ್ದವು ಆಮೇಲೆ ಅವು ಇರುವಸ್ಥಳಗಳಲ್ಲಿ ಕುಳಿತುಕೊಂಡವು.

ಇವುಗಳಲ್ಲಿ ಕೋಲ್ (Coal) ಯೆಂಬುವ ವೊಂದು ಪ್ರಯೋಜನವಾದ ಪದಾರ್ಥವುಂಟು. ಇದು ಕಲ್ಲುಅಲ್ಲ ಮಣ್ಣುಅಲ್ಲ ಹ್ಯಾಗೆ ವುಂಟಾಯಿತೆಂದರೆ ಪೂರ್ವದಲ್ಲಿ ಅನೇಕ ಪೊದೆಗಳೂ ಗಿಡಗಳೂ ಮರಗಳೂ ನೀರಿನಿಂದ ಕೊಡುಕೊಂಡು ಹೋಗಲ್ಪಟ್ಟು ಸಮುದ್ರದ ನೆಲಕ್ಕೆ ಸೇರಿದವು. ತರುವಾಯ ಸಮುದ್ರದ ನೀರಿನ ಭಾರದಿಂದಲೂ ಭೂಮಿಯಲ್ಲಿರುವ ಕಾಂಕೆಯಿಂದಲೂ ಕಲ್ಲಿನಹಾಗಾದವು ಆದದರಿಂದ ಕೋಲ್ಯೆಂಬುವದರ ಸ್ವಭಾವದಲ್ಲಿ ಮರಕ್ಕೆ ಸಂಬಂಧವಾದದ್ದು ಮುಖ್ಯವಾಗಿರುವದರಿಂದ ಅದು ಚನ್ನಾಗಿ ವುರಿಯುವದು ಇಂಗ್ಲಾಂಡ್ ದೇಶದಲ್ಲಿಯೂ ಬೇರೆದೇಶಗಳಲ್ಲಿಯೂ ಸವುದೆಯನ್ನು ವೊಲೆಯಲ್ಲಿಹಾಕುವದಿಲ್ಲ ಕೋಲೆಂಬುವದನ್ನು ಮಾತ್ರ ಹಾಕುತ್ತಾರೆ. ಮತ್ತು ಹೊಗೆಹಡಗಗಳನ್ನು (Steam Ships) ನಡಿಸುವಂಥಾ ವರಿಗೆ ಈ ವಸ್ತು ವುಪಯೋಗವಾಗಿದೆ. ಹ್ಯಾಗಂದರೆ ಅಂಥಾ ಹಡಗಗಳನ್ನು ನಡಿಸುವದಕ್ಕೆ ದೊಡ್ಡಬೆಂಕಿ ಯಾವಾಗಲು ವುರಿಯುತ್ತಾ ಇರಬೇಕು ಇದಕ್ಕಾಗಿ ಸವುದೆ ಸೇರಿಸಬೇಕಾದರೆ ಸಮುದ್ರದಮೇಲೆ ಬಹಳದೂರ ಹೋಗಕೂಡದು ಯಾತಕ್ಕಂದರೆ ಅದು ಬೇಗ ಖರ್ಚಾಗಿ ಹೋಗುವದು. ಬಹಳ ಸವುದೆ ವುರಿಯುವದಕ್ಕಿಂತ ಸ್ವಲ್ಪ ಕೋಲ್ ಬಹಳಕಾಲ ವುರಿಯುವದು.

೪). ಮೂರನೇತರದ ಗುಡ್ಡಗಳು (Tertiary Formation)

ಇವು ಬೇರೆವಿಧವಿಧವಾದವುಗಳು ಇವುಗಳನ್ನೆಲ್ಲಾ ಇಲ್ಲಿವಿವರಿಸುವದಕ್ಕೆ ನಿಮಿತ್ತವಿಲ್ಲ.

೫). ಭೂಮಿಯಮೇಲಿರುವ ವಸ್ತುಗಳು (Superficial Formation)

ಇವುಯಾವವಂದರೆ ವೊಂಡು (Diluvium) ಸೊರಜು (Gravel) ಮರಳು (Sand) ಯೆಲ್ಲಾದರಮೇಲೆ ಮಣ್ಣು (Earth)

೧೪. ಮೊದಲನೇತರದ ಗುಡ್ಡಗಳು ಪೊರೆಯಿಲ್ಲದವುಗಳಾಗಿಯೂ ಯೆರಡನೇ ಮೂರನೇತರದ ಗುಡ್ಡಗಳು ಪೊರೆಯಿರುವ ಗುಡ್ಡಗಳಾಗಿಯೂ ಅವೆ.

೧೫. ಮೊದಲನೇ ಯೆರಡನೆ ತರದ ಗುಡ್ಡಗಳಲ್ಲಿ ರತ್ನಗಳೂ ಲೋಹಗಳೂ ಸಿಕ್ಕುತ್ತವೆ. ಲೋಹಗಳು ಗುಂಪಾಗಿ ವೊಂದೇಸ್ಥಳದಲ್ಲಿ ಸಿಕ್ಕುವದಿಲ್ಲ ನರಗಳು ಮನುಷ್ಯನಶರೀರವನ್ನು ವ್ಯಾಪಿಸಿ ಕೊಂಡಿರುವಹಾಗೆ ಅವು ಚಿಕ್ಕ ಕಾಲಿವೆಗಳಾಗಿ ಗುಡ್ಡಗಳನ್ನು ವ್ಯಾಪಿಸಿಕೊಂಡವೆ.

೧೬. ದ್ವಿಸ್ವಭಾವದ ಗುಡ್ಡಗಳಲ್ಲಿಯೂ ಯೆರಡನೇ ಮೂರನೇತರದ ಗುಡ್ಡಗಳಲ್ಲಿಯೂ ಭೂಮಿಯಮೇಲಿರುವ ವಸ್ತುಗಳಲ್ಲಿಯೂ ಪೂರ್ವದಲ್ಲಿದ್ದ ಮರಗಳಲಿ ವುಳಿದವುಗಳೂ ಆಗಲು ಜೀವಿಸಿದ್ದ ಮೃಗ ಮೀನುಗಳಲ್ಲಿ ವುಳಿದವುಗಳೂ (Fossil Remains) ಸಿಕ್ಕುತ್ತವೆ.

ಈ ವುಳಿದವುಗಳೆಲ್ಲಾ ಈಗಲು ಕಲ್ಲಾಗಿವೆ ಗುಡ್ಡಗಳಲ್ಲಿ ತಮ್ಮ ಗುರುತುಗಳನ್ನು ಬಿಟ್ಟದರಿಂದ ಅಂಥಾವಸ್ತುಗಳೂ ಜೀವಿಗಳೂ ಅಲ್ಲಿ ಇದ್ದವೆಂದು ತೋರುತ್ತದೆ. ದ್ವಿಸ್ವಭಾವದ ಗುಡ್ಡಗಳಲ್ಲಿ ತ್ಯಾವವಾದ ಭೂಮಿಯಲ್ಲಿ ಬೆಳೆಯತಕ್ಕ ಮರಗಳೂ ಬಹಳ ಮೀನುಗಳೂ ವುಂಟು.

ಯೆರಡನೇತರದ ಗುಡ್ಡಗಳಲ್ಲಿ ನೀರಿನಲ್ಲಾದರೂ ಭೂಮಿಯ ಮೇಲಾದರೂ ಬದುಕತಕ್ಕ ಜೀವಿಗಳು ಸಿಕ್ಕುತ್ತವೆ. ಇವುಗಳಲ್ಲಿ ಕೆಲವು ಬಹಳ ದೊಡ್ಡವುಗಳಾಗಿಯೂ ಮೊಸಳೆಯ ಹಾಗೆ ರೂಪವುಳ್ಳವುಗಳಾಗಿಯೂ ಅವೆ.

ಮೂರನೇತರದ ಗುಡ್ಡಗಳಲ್ಲಿ ಭೂಮಿಯಮೇಲೆಮಾತ್ರ ಬದುಕತಕ್ಕ ಮೃಗಗಳು ಸಿಕ್ಕುತ್ತವೆ ಇವುಗಳಲ್ಲಿ ಕೆಲವು ಆನೆಗಿಂತ ದೊಡ್ಡವು.

ಈಗುಡ್ಡಗಳಲ್ಲಿ ಸಿಕ್ಕುರುವ ಮೀನು ಮೃಗಗಳಲ್ಲಿ ಕೆಲವುಮಾತ್ರ ಈ ಕಾಲದಲ್ಲಿ ಬದುಕುವ ಮೀನುಮೃಗಗಳಿಗೆ ಸಮಾನವಾಗಿರುತ್ತವೆ. ಈ ಕಾಲದಲ್ಲಿ ಬದುಕುವ ಮೃಗಜಾತಿಗಳು ಭೂಮಿಯಮೇಲಿರುವ ವಸ್ತುಗಳಲ್ಲಿಮಾತ್ರ ಸಿಕ್ಕುತ್ತವೆ. ಮನುಷ್ಯರಲ್ಲಿ ವುಳಿದವುಗಳು ಯೆಲ್ಲಿಯೂ ಸಿಕ್ಕರಲಿಲ್ಲ.

೧೭. ವಿದ್ವಾಂಸರು ಇದೆಲ್ಲಾ ಆಲೋಚನೆಮಾಡಿ ಭೂಮಿಹುಟ್ಟಿ ಕೋಟ್ಯಾಂತರ ವರುಷಗಳಾದವೆಂದು ನಿಶ್ಚಯಮಾಡಿದ್ದಾರೆ. ಅವರು ನೆನಸುವದೇನಂದರೆ ಭೂಮಿಯ ವಸ್ತುಗಳು ಮೊದಲಲ್ಲಿ ಕರಗಿದವುಗಳಾಗಿದ್ದವು. ಆಮೇಲೆ ಅದರ ಹೊರಗಡೆ ಆರಿಹೋದದರಿಂದ ಮೇಲ್ಭಾಗದಲ್ಲಿ ಗುಡ್ಡಗಳಾದವು. ತರುವಾಯ ವೊಳಗಿರುವ ಬೆಂಕಿಯ ಬಲದಿಂದ ಭೂಮಿಯ ಮೇಲ್ಭಾಗವು ಹಾರಿಸಲ್ಪಟ್ಟು ಅಲ್ಲಲ್ಲಿ ಬೆಟ್ಟಗಳಾದವು. ಅಲ್ಲಲ್ಲಿ ತಗ್ಗುಗಳಾದವು. ಬಹುಕಾಲವಾದಮೇಲೆ ನೀರಿನಲ್ಲಿ ಬದುಕತಕ್ಕ ಜೀವಿಗಳು ವುಂಟುಮಾಡಲ್ಪಟ್ಟವು. ತರುವಾಯ ಇವು ನಾಶವಾಗಿ ಭೂಮಿಯ ಮೇಲೆಮಾತ್ರ ಬದುಕತಕ್ಕ ಜೀವಿಗಳು ವುಂಟುಮಾಡಲ್ಪಟ್ಟವು ಹೀಗೆ ಕ್ರಮಕ್ರಮವಾಗಿ ಭೂಮಿಯಮೇಲಿದ್ದ ವಸ್ತುಗಳಿಗೆ ವುಪಹತಿ ವುಂಟಾದ ತರುವಾಯ ಕಡೆಗೆ ಮನುಷ್ಯರು ಅಲ್ಲಿವಾಸಮಾಡುವದಕ್ಕೆ ಸಿದ್ಧಮಾಡಲ್ಪಟ್ಟಿತೆಂದು ನೆನಸುತ್ತಾರೆ.

೧೮. ಆದದರಿಂದ ಸತ್ಯವೇದದಲ್ಲಿ ೧ ಮೋಶೇ ೧ನೇ ಪರ್ವ ೧ನೇ ವಚನದಲ್ಲಿ ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ನಿರ್ಮಿಸಿದನೆಂದು ಬರೆಯಲ್ಪಟ್ಟಿರುವಾಗ ಆದಿಯು ಹೆಚ್ಚುಕಡಿಮೆ ೬೦೦೦ ವರುಷಗಳಮುಂಚೆ ಇತ್ತೆಂದು ನೆನಸಕೂಡದು ಆದಿಯಾವಾಗ ಇತ್ತೋ ಆವಾಗ ದೇವರು ಭೂಮ್ಯಾಕಾಶಗಳನ್ನು ನಿರ್ಮಿಸಿದನೆಂಬುವದು ಸರಿಯೇ ಆದರೆ ಭೂಮ್ಯಾಕಾಶಗಳು ಯಾವಾಗ ಹುಟ್ಟಿದವೋ ಇದು ನಮಗೆ ತಿಳಿಯಲಿಲ್ಲ.

ಮೊದಲನೆ ಪುಸ್ತಕ ೬೪ನೆ ಪುಟದಲ್ಲಿ ತೀರದೆಯಿದ್ದ

An Account of Hindostan.— Continued.

ಹಿಂದುದೇಶದ ವರ್ಣನೆಯು.

೨ನೆ ಮಲೆಯಾಳದಲ್ಲಿ ಯಿರುವ ಸುರಿಯಾನಿ ಅಥವಾ ನಜರಾಣಿ ಯೆಂಬ ಕ್ರೈಸ್ತರು ಯಿದ್ದಾರೆ. ಅಪೋಸ್ತೊಲನಾದ ಥೋಮಾನು ತಾನೇ ತೀರಕ್ಕೆ ಬಂದು ಅಲ್ಲಿ ವುಂಟಾದ ಕ್ರೈಸ್ತಸಭೆಗಳನು ಸ್ಥಾಪಿಸಿದನೋ ಯೇನೋ ನಿಶ್ಚಯಿಸಕೂಡದು. ಅವನು ಬಾರದಿದ್ದರೆ ಅವನಶಿಷ್ಯರಲ್ಲಿ ಯಾರಾದರು ಪೂರ್ವಕಾಲದಲ್ಲಿ ಅಲ್ಲಿಬಂದು ಕ್ರೈಸ್ತಮತದ ಆರಂಭವನು ಆ ಸೀಮೆಯಲ್ಲಿ ಮಾಡಿದರೆಂದು ಕಾಣುತ್ತದೆ. ನಾಲ್ಕನೆವರ್ಷ ಶತದ ಆರಂಭದಲ್ಲಿ ಮಲೆಯಾಳದಲ್ಲಿ ಅಪೋಸ್ತೊಲನಾದ ಥೋಮಾನು ಸ್ಥಾಪಿಸಿದ ಸಭೆಗಳು ವುಂಟೆಂದು ಮೊದಲು ಪ್ರತ್ಯಕ್ಷವಾಯಿತು ಅಂದಿನಿಂದ ಯೀಮಾತು ಯಲ್ಲರಸಂಗಡ ರೂಢಿಯಾಗಿ ಯಿತ್ತು. ಆ ಕ್ರೈಸ್ತರ ಗ್ರಾಮಗಳು ಪೂರ್ವದಲ್ಲಿ ಮದಗಾನ ಪರಿಯಂತರ ಯಿದ್ದವು. ಆದರೆ ತಮಿಳ್ ದೇಶದಲ್ಲಿ ಬ್ರಾಹ್ಮಣರು ಅವರಿಗೆ ಹಿಂಸೆ ಮಾಡಿದ ಕಾರಣ ಅವರಲ್ಲಿ ಹೆಚ್ಚಾದಮಂದಿ ತಂಮ ಆಚೆದರ್ಶಿಗಳಸಂಗಡ ಕನ್ಯಾಕುಮಾರಿಗೂ ಮಲಬಾರ ದೇಶಕ್ಕೂ ಹೋದರು. ಅಲ್ಲಿ ಅಂಗಮಲೆ ತಿರುವಣಕೋಡು ಕೊಲನ ಕೊಡಂಗಲೂರು ಯೆಂಬ ವೂರುಗಳಲ್ಲಿ ಅವರು ಮುಖ್ಯವಾಗಿ ಕುಳಿತುಕೊಂಡರು. ಅಲ್ಲಿಯಿರುವಾಗ್ಯೆ ಅನೇಕ ಯೆಹೂದಿಯರು ದೇಶಸ್ಥರುಸಹಾ ಕ್ರೈಸ್ತರಮತಕ್ಕೆ ಸೇರಿದರು. ದೇವರವಾಕ್ಯವೂ ಸಭೆಯ ಪ್ರಾರ್ಥನೆಗಳೂ ಸೂರ್ಯಾಭಾಷೆಯಲ್ಲಿ ಆರಂಭದ ಮೊದಲುಗೊಂಡು ಅವರಲ್ಲಿ ಯಿದ್ದಹಾಗೆ ಯಿಂನು ಯಿದ್ದಾವೆ. ಅವರ ದೇವಾಲಯಗಳಲ್ಲಿ ಹಳೆದು ಕೊಡಂಗಲೂರಹತ್ರವಾದ ಪಾರೂರಿನಲ್ಲಿವುಂಟು. ಆಸೂರ್ಯ ಕ್ರೈಸ್ತರ ಜಾತಿಯಂನು ಆ ದೇಶದವರು ನಾಡವರ ಜಾತಿಯಪ್ರಕಾರವೆ ಸನ್ಮಾನಿಸುತ್ತಾರೆ ೮೨೫ನೆ ವರ್ಷದಲ್ಲಿ ಆ ಕ್ರೈಸ್ತರಂನು ನೋಡಲಿಕ್ಕೆ ಸೂರ್ಯದೇಶದಿಂದ ಯಿಬ್ಬರು ಪಾದ್ರಿಯವರುಬಂದು ತಿರುವಣಕೋಡಿನಲ್ಲಿ ಯಿರುವ ಸಭೆಗಳ ಮುಖ್ಯಸ್ಥರಾದರು. ದೇಶದ ಅಧಿಪತಿಗಳಾದ ನಾಡವರೂ ಬ್ರಾಹ್ಮಣರೂ ಅವರಿಗೆ ಮಾನಕೊಟ್ಟು ದೇವಾಲಯಗಳಂನು ಕಟ್ಟಲಿಕ್ಕೆ ಅಪ್ಪಣೆ ಕೊಟ್ಟರು ವರ್ಷವರ್ಷಕ್ಕೆ ಅವರಿಗೆ ಹಣಕೊಟ್ಟು ಮಲೆಯಾಳು ಕರ್ನಾಟಕ ವಿಜಯನಗರ ದ್ರಾವಿಡವೆಂಬ

ರ ಭಾಷೆಗಳಲ್ಲಿ ಅವರ ಬಿರುದಾವಳಿಯನ್ನು ಬರೆದು ತಾಮ್ರಶಾಸನ ಮಾಡಿಕೊಟ್ಟರು. ಫೊರ್ತುಗೀಜನರು ಹಿಂದುದೇಶಕ್ಕೆ ಬರುವಾಗ್ಯೆ ಸೂರ್ಯನಿಯರು ಮೊದಲು ಸಂತೋಷದಿಂದ ಅವರಿಗೆ ವಂದನೆಮಾಡಿ ಸ್ವಲ್ಪಮೇಲೆ ಝಗಳ ವುಂಟಾದದರಿಂದ ಅವರಿಂದ ಬಹಳ ಉಪದ್ರ ಹೊಂದಿದರು. ಸಮುದ್ರ ತೀರದಲ್ಲಿರುವ ಸಭೆಗಳು ಫೊರ್ತುಗೀಯರ ವಶವಾದವು ಆವರಿ ದೇಶದ ವೊಳಗಿರುವವರು ವೊಂದುವೇಳೆ ಸ್ವಲ್ಪ ಕಾಲ ಯುದ್ಧಮಾಡಿ ವೊಂದುವೇಳೆ ಅಡವಿಯಲ್ಲಿ ಅಡಗಿಕೊಂಡು ಯೀ ಪರಿಯಂತರ ಸ್ವವಶವಾಗಿದ್ದಾರೆ.

೩ನೆ ಮುಂಬೈ ಸುರತೆ ಮೊದಲಾದ ಪಟ್ಟಣಗಳಲ್ಲಿರುವ ಫಾರ್ಸಿಯರು.

ಬೆಂಕಿ ಆರಾಧಕರಾದ ಫಾರ್ಸಿಯರ ಕಡೇ ಅರಸನಾದ ಯೆಜ್ದಿಜೆರ್ದ ೬೪೧ನೆ ವರ್ಷದಲ್ಲಿ ಸತ್ತ ಮೇಲೆ ಮುಸಲ್ಮಾನರಾದ ಅರಬಿಯರು ಅವರ ದೇಶವನ್ನು ಸಂಪಾದಿಸಿಕೊಂಡು ಅವರಲ್ಲಿ ಅನೇಕರನ್ನು ಕೊಂದುಹಾಕಿದ್ದಾಗ ಆದಿಕ್ಕಿಲ್ಲದವರಾದ ಫಾರ್ಸಿಯರಲ್ಲಿ ಕೆಲವರು ಉತ್ತರ ಪೂರ್ವ ಫಾರ್ಸಿದೇಶವಾದ ಯೆಜೀದಕ್ಕೆ ಕೆಲವರು ದಕ್ಷಿಣದಲ್ಲಿ ಸಮುದ್ರತೀರದಹತ್ತರ ಯಿರುವ ಹೊರ್ಮುಸಕ್ಕೆ ಓಡಿಹೋದರು. ಯೆಜೀದಕ್ಕೆ ಹೋದವರು ಕಪ್ಪುಸಮುದ್ರದ ತೀರವಾದ ಬಾಕುವಿನಲ್ಲಿ ಯಿರುತ್ತಾರೆ. ಹೊರ್ಮುಸಕ್ಕೆ ಹೋದವರು ಅಲ್ಲಿ ೧೫ ವರ್ಷ ಯಿದ್ದು ಗುಜರಾತದಹತ್ತರ ಯಿರುವ ದೀಉದ್ವೀಪಕ್ಕೆ ಹೋಗಿ ಅಲ್ಲಿ ೧೯ ವರ್ಷ ಕೂತುಕೊಂಡು ಅವರು ಬಹಳಮಂದಿ ಆದದರಿಂದ ಗುಜರಾತ ದೇಶಕ್ಕೆ ಮುಂದೆ ಹೋಗಿ ಸಂಜಾನೆಂಬ ಊರಿನಲ್ಲಿ ಉಳಿದು ಅಲ್ಲಿ ೫೦೦ ವರ್ಷ ಪರಿಯಂತರ ಯಿದ್ದರು. ಆಮೇಲೆ ತಂಮತಂಮ ಗೋತ್ರಗಳ ಪ್ರಕಾರ ಭೃಗುಗಜ ಕಂಬಯ ಆದಿ ಕೆಲವು ಪಟ್ಟಣಗಳಿಗೆ ಹೋಗಿ ಕಡೆಯಲ್ಲಿ ಸೂರತಿನಲ್ಲಿಯೂ ಮುಂಬೈಯಲ್ಲಿಯೂ ಮುಖ್ಯವಾಗಿ ವಾಸಮಾಡಿದರು. ಅವರ ಶಾಸ್ತ್ರವು ಸೆಂದವೆಸ್ತಾ. ಅವರ ಮೂಲ ಗುರು ಜರತುಷ್ಟ್ರ ಅವರು ತಮಗೆ ತಾವೆ ಯಿಡುವಹೆಸರು ಮಜ್ದಿಯಸ್ನಿ ಅವರ ಹಳೆಭಾಷೆಗಳು ಸೇಂದ ಮತ್ತು ಪಹ್ಲವಿ.

೪ನೆ ಹಿಂದುದೇಶದಲ್ಲಿ ವಾಸವಾಗಿದ್ದ ಚೀನಿಯರು ಮಲಯರು ಅರ್ಮೇನಿಯರು ಹಾಬಸಿಯರು.

ಯಿಂಥವರು ಬೇರೆಬೇರೆ ಸ್ಥಳಗಳಲ್ಲಿಯೂ ಸಮಯಗಳಲ್ಲಿಯೂ ಸಮುದ್ರತೀರದಹತ್ತರ ಹಿಂದುದೇಶದಲ್ಲಿ ಕೂಡಿಕೊಂಡರು ಚೀನಿಯರು ಮದ್ರಾಸಿನಲ್ಲಿಯೂ ಮುಂಬೈಯಲ್ಲಿಯೂ ಕಲಕತ್ತಾದಲ್ಲಿಯೂ ವ್ಯಾಪಾರಕ್ಕೋಸ್ಕರ ಅನೇಕರು ಯಿರುತ್ತಾರೆ. ಮಲಯರು ಚೋಳಮಂಡಲದಲ್ಲಿ ಕೆಲವು ಜಾತಿಗಳ ಸಂಗಡ ಮಿಶ್ರರಾದರೆಂದು ಕಾಣುತ್ತದೆ. ಅರ್ಮೇನಿಯರು ವ್ಯಾಪಾರಕ್ಕೋಸ್ಕರ ಮುಂಬೈಯಿಗೂ ಕಲಕತ್ತೆಗೂ ಬಂದು ಅಲ್ಲಿ ಸಭೆಯಾಗಿ ಯಿರುತ್ತಾರೆ. ಹಾಬಸಿಯರು ಮುಸಲ್ಮಾನರಸಂಗಡ ಯುದ್ಧಜನರಾಗಿ ಬಂದು ಅನೇಕಾವರ್ತಿ ದರ್ಬಾರಗಳಲ್ಲಿ ದೊಡ್ಡಚಾಕರಿಗಳನ್ನು ಹೊಂದಿದ್ದಾರೆ. ಘಟ್ಟದಮೇಲಿನ ಅರಸರು ಪೂರ್ವದಲ್ಲಿ ಭಯಂಕರವಾದ ಕ್ರೂರಮನಸ್ಸುಳ್ಳ ಹಾಬಸಿಯರನ್ನು ಬಹಳಮಂದಿ ತಂಮ ಸೈನ್ಯಗಳಲ್ಲಿಡುತ್ತಿದ್ದರು. ಅವರಲ್ಲಿ ಕೆಲವರು ಸ್ವವಶವಾದ ಸಣ್ಣರಾಜ್ಯಗಳನ್ನು ತಮಗೆ ಸಂಪಾದಿಸಿಕೊಂಡರು. ಸಮುದ್ರತೀರದಲ್ಲಿಯೂ ಮುಂಬೈ ಪಟ್ಟಣದ ಸಮೀಪದಲ್ಲಿಯೂ ಯಿರುವ ಜಂಜಿರಾ ಕೋಟೆಯು ಯಿಂದಿನ ಪರಿಯಂತರ ಅವರದಾಗಿದೆ. ಅವರ ಹೆಸರು ಶಿದ್ದಿಯರು.

೧೦ನೆ ಮೊಗಲ್ ಜನರ ರಾಜ್ಯವು.

ಬಾಬರಸುಲತಾನ ೧೨ ವರ್ಷದವನಾಗಿ ೧೪೯೪ನೆ ವರ್ಷದಲ್ಲಿ ತಂನ ತಂದೆ ಸತ್ತುಹೋದದರಿಂದ ಫರ್ಗಾನಾ ಮತ್ತು ಸಾಮರ್ಕಂದ ರಾಜ್ಯಗಳ ಸಿಂಹಾಸನದಮೇಲೆ ಯೇರಿ ೧೫೦೪ನೆ ವರ್ಷದಲ್ಲಿ ಕಾಬೂಲ್ ದೇಶವನ್ನು ಸಂಪಾದಿಸಿ ೫ ಯುದ್ಧಪ್ರಯಾಣಗಳನ್ನು ಮಾಡಿದಮೇಲೆ ೧೫೨೬ನೆ ವರ್ಷದ ಯೇಪ್ರಿಲ್ ತಿಂಗಳ ೨೦ನೆ ತಾರೀಖಿನಲ್ಲಿ ಡಿಲ್ಲಿಹತ್ತರ ಜಯವನ್ನುಹೊಂದಿ ಮೊಗಲ್ ಮಹಾರಾಜ್ಯ ಸಂಸ್ಥಾನವನ್ನು ಸ್ಥಾಪಿಸಿದನು. ಅವನು ತಂನ ಮೂಲಭಾಷೆಯಾದ ಚಗತಾಯಿ ತುರ್ಕಿಭಾಷೆಯಿಂದ ತಂನ ಜೀವದಚರಿತ್ರೆಯನ್ನು ಬರೆದು ನಾನು ನಂನ ತ್ರಾಣಕ್ಕೋಸ್ಕರವಲ್ಲ. ನಂನ ಪ್ರಯತ್ನಕ್ಕೆ ಸಹಾಯಮಾಡುವ ದೇವರಅನುಗ್ರಹದಿಂದಲೆ ಜಯವನ್ನು ಪಡಕೊಂಡಿದ್ದೇನೆಂದನುತ್ತಾನೆ. ಯೀ ಬಾಬರಸುಲತಾನನು ದಾನಗಳಿಂದಲೂ ಶಿಕ್ಷೆಗಳಿಂದಲೂ ಮುಂಚಿನ ಅರಸುಗಳಿಗೆ ತಿರುಗಿಬಿದ್ದ ಅನೇಕರನ್ನು ತಂನ ವಶಮಾಡಿದನು. ಹಿಂದು ರಾಜ್ಯದಲ್ಲಿ ಅವನಿಗೆ ಸಿಕ್ಕಿದ ಐಶ್ವರ್ಯಗಳಲ್ಲಿ ಯೇನು ಹಿಡಿಯದೆ ತಂನ ದಳಾಧಿಪತಿಗಳಿಗೂ ಮಂತ್ರಿಗಳಿಗೂ ವರ್ತಕರಿಗೂ ಪಟ್ಟಣಗಳಿಗೂ ಮಸೂದಿಗಳಿಗೂ ಯೆಲ್ಲ ಪಾಲಿಟ್ಟ ಕಾರಣ ಅವನಿಗೆ ಮರುದಿವಸಕ್ಕೆ ಯಿಡದವನೆಂಬ ಅರ್ಥವುಳ್ಳ ಕಲಂದರ ಹೆಸರು ವುಂಟಾಯಿತು. ಅವನು ೧೫೩೦ನೆ ವರ್ಷದಲ್ಲಿ ಸತ್ತುಹೋಗುವಾಗ್ಯೆ ಅವನ ಮಗನಾದ ಹುಮಾಯೂನ ಪಾದ್ಶಹ ಡಿಲ್ಲಿರಾಜ್ಯವನ್ನು ಪಡದನು. ಆದರೆ ಅವನ ತಂಮಂದಿರೂ ಅನೇಕ ಅಫಗಾನ ಅಧಿಪತಿಗಳೂ ಅವನಿಗೆ ತಿರುಗಿಬಿದ್ದದರಿಂದ ಅವನು ಕೆಲವುಸಾರಿ ಜಯಿಸಿ ೧೫೪೦ನೆ ವರ್ಷದಲ್ಲಿ ಪೂರ್ಣವಾದ ಅಪಜಯವನ್ನುಹೊಂದಿ ಓಡಿಹೋಗಿ ೧೪ ವರುಷ ಪರಿಯಂತರ ಸಿಂಧುಅರಣ್ಯದಲ್ಲಿ ಅಡಗಿಕೊಂಡು ಕಡೇಲಿ ಫಾರ್ಸಿ ಅರಸನ ಸಹಾಯದಿಂದಲೂ ತಂನ ದಳಾಧಿಪತಿಯಾದ ಬೈಯರಖಾನನ ಬುದ್ಧಿಯಿಂದಲೂ ೧೫೫೫ನೆ ವರ್ಷದಲ್ಲಿ ರಾಜ್ಯವನ್ನು ತಿರುಗಿಹೊಂದಿದನು. ೧೫೫೬ನೆ ವರ್ಷದಲ್ಲಿ ಅವನು ತಂನ ಅರಮನೆಯ ಪಾವಟಿಗೆಯಿಂದಬಿದ್ದು ಸತ್ತುಹೋದಾಗ ಅವನ ದೇಶಾಂತರದ ಸಮಯದಲ್ಲಿ ಹುಟ್ಟಿದ ಅಕಬರನು ರಾಜ್ಯವನ್ನುಹೊಂದಿ ೫೦ ವರ್ಷ ಪರಿಯಂತರ ಮಹಾಕೀರ್ತಿಯಿಂದ ಹಿಂದುದೇಶವನ್ನು ಪರಿಪಾಲಿಸಿದನು. ೧೫೫೬ನೆ ಮೊದಲುಗೊಂಡು ೧೬೦೫ನೆ ವರ್ಷ ಪರಿಯಂತರ ಆಳಿದ ಯೀ ಮಹಾರಾಜನಿಗೆ ತಂನ ಬುದ್ಧಿ ನೀತಿ ಶಾಂತಿ ಮೊದಲಾದ ಸದ್ಗುಣಗಳಿಗೋಸ್ಕರ ದೊಡ್ಡವನೆಂಬಹೆಸರು ವುಂಟಾಗಿ ಯೀವರೆಗು ಯಿರುತ್ತದೆ. ಅವನು ತಂನರಾಜ್ಯವನ್ನು ಪೂರ್ವದ ಹಿಂದುಮರ್ಯಾದೆ ಪ್ರಕಾರ ೧೫ ಸುಭೆಗಳಾಗಿ ವಿಭಾಗಿಸಿ ಸುಭೆಸುಭೆಗೆ ವೊಬ್ಬ ಸುಭೆದಾರನನ್ನೂ ವೊಬ್ಬ ಕೊತ್ವಾಲನನ್ನೂ ನಿಲ್ಲಿಸಿದನು. ಅವನು ಗುತ್ತಿಗೆಯನ್ನು ಕೂಡಿಸುವದರಲ್ಲಿ ಮುಂಚಿನಅರಸರ ಪ್ರಕಾರ ಮೋಸವೂ ಬಲಾತ್ಕಾರವೂ ಮರ್ಯಾದೆ ಮೀರಗೆ ನಡೆಯದೇ ಪೂರ್ವದ ಜಮಾಬಂದಿಮಾಡಿ ಆ ಕೆಲಸದ ನಡತೆಯನ್ನು ವೀರಬಲನೆಂಬ ಹೆಸರುಳ್ಳ ವೊಬ್ಬ ವೊಳ್ಳೆ ಬ್ರಾಹ್ಮಣನ ಕೈಯಲ್ಲಿ ಕೊಟ್ಟನು. ಅವನು ನೇಮಿಸಿದ ಸುಭೆಗಳಹೆಸರುಗಳು ಬಂಗಾಲ್ ವಿಹಾರ ಅಲಹಾಬಾದ್ ಅಯೋಧ್ಯಾ ಆಗ್ರ ಮಲಬಾರ ಖಂದೀಸ್ ಬೇರಾರ್ ಗುಜರಾತ್ ಅಜಮೀಢ ಡಿಲ್ಲಿ ಲಾಹೂರ ಮುಲತಾನ ಠಠ ಕಾಶ್ಮೀರಾ ಕಾಬೂಲ ಅಕಬರನು ಗೋವೆಯಿಂದ ಬಂದ ಕ್ರೈಸ್ತರನ್ನು ಸಹಾಮಾನದಿಂದಲೂ ಪ್ರೀತಿಯಿಂದಲೂ ಅಂಗೀಕರಿಸಿ

ಅವರಿಗೆ ಬೇಕಾದಸಹಾಯವಂನು ಮಾಡಿದನು ಅವನು ತಂನರಾಜ್ಯದಲ್ಲಿ ವಿದ್ಯೆಯಂನು ಹೆಚ್ಚಿಸಿ ಡಿಲ್ಲಿಯಲ್ಲಿಯೂ ಆಗ್ರದಲ್ಲಿಯೂ ಕಾಶಿಯಲ್ಲಿಯೂ ನಕ್ಷತ್ರ ನೋಡುವದಕ್ಕೆ ಗೋಪುರಗಳಂನು ಕಟ್ಟಿಸಿ ಹಿತೋಪದೇಶವಂನು ಆಯಾನಿದಾನಿಷವೆಂಬ ಪುಸ್ತಕಬರಸಿ ಭಾಷಾಂತರಮಾಡಿಸಿ ಯೆಲ್ಲಾದರಲ್ಲಿ ಸತ್ಯವೂ ನೀತಿಯೂ ತನಗೆ ಪ್ರಿಯ್ಯವಾಗಿ ಯಿವೆಯೆಂದು ತೋರಿಸಿದನು. ಅಕಬರನು ತಂನ ಸಮಸ್ತ ರಾಜ್ಯದಲ್ಲಿ ಟಪ್ಪಾಲು ಸ್ಥಾಪಿಸಿದನು [illegible] ಹರಕಾರಿಗೆ ಕುದರೆಗಳೂ ಮನುಷ್ಯರೂ ಸಿದ್ಧವಾಗಿರುತ್ತಿದ್ದರು. ಅಂಚೆಹರಕಾರರು ದಿವಸ ದಿವಸಕ್ಕೆ ೫೦ ಹರದಾರಿ ಹೋಡುತ್ತಿದ್ದರು. ಟಪ್ಪಾಲು ಕುದುರೆಗಳ ಲೆಕ್ಕವು ೪೦೦೦ ಕುದುರೆ ಟಪ್ಪಾಲಿನಿಂದ ಬೇಕಾದರೆ ೧೦ ದಿವಸಗಳೊಳಗೆ ೧ ಕಾಗದ ೭೦೦ ಹರದಾರಿದೂರ ಹೋಗುತ್ತಿತ್ತು. ಅಕಬರನು ೧೫೬೧ ನೇ ವರ್ಷದಲ್ಲಿ ಮಾಲವದೇಶವಂನೂ ೧೫೭೨ ನೇ ವರ್ಷದಲ್ಲಿ ಗುಜರಾತವಂನೂ ೧೫೭೫ ನೇ ವರ್ಷದಲ್ಲಿ ಪಾಟಲಿಪುತ್ರವೆಂಬ ಪಟ್ಟಣವಂನೂ ಯುದ್ಧಗಳಿಂದ ಸಂಪಾದಿಸಿಕೊಂಡನು ೧೫೭೯ ನೇವರ್ಷದಲ್ಲಿ ಅವನು ಆಫಗಾನಿಯರಿಗೆ ವಿರೋಧವಾಗಿ ಸಿಂಧುನದೀತೀರದಲ್ಲಿ ಅಟ್ಟೋಕ್ ಎಂಬ ಭದ್ರವಾದಕೋಟೆಯಂನು ಕಟ್ಟಿಸಿದನು. ಅದರಮೇಲೆ ಕಾಶ್ಮೀರದಲ್ಲಿ ಸಹಾ ಪ್ರವೇಶಿಸಿ ಯಿ ಆನಂದವಾದ ದೇಶವಂನು ವಶಮಾಡಿಕೊಂಡು ಅದಂನು ಪ್ರತ್ಯೇಕ ಸುಭೆಯಾಗಿ ಸ್ಥಾಪಿಸಿದನು.

History of the Christian Church.

ಯೇಸುಕ್ರೀಸ್ತನ ಸಭೆಯ ಚರಿತ್ರೆಯು.

Introduction.

ಮುಂಭಾಗವು.

ಯೇಸುಕ್ರೀಸ್ತನ ಸಭೆಯ ಚರಿತ್ರೆಯೂ ಕ್ರೀಸ್ತನ ಮತವು ವಿಸ್ತರಿಸುವರೀತಿಯನ್ನೂ ಯೇಸುವಿನ ಶಿಷ್ಯರಲ್ಲಿ ಸಂಭವಿಸಿರುವ ಮುಖ್ಯವಾದ ಕಾರ್ಯಗಳನ್ನೂ ತಿಳಿಸುತ್ತದೆ.

ಯೇಸುಕ್ರೀಸ್ತನ ಸಭೆಯಚರಿತ್ರೆಯನ್ನು ತಿಳಿಯುವದರಿಂದ ನಮಗೆ ಯೇನು ಪ್ರಯೋಜನಗಳುಂಟೆಂದು ಯಾರಾದರೂ ಕೇಳಿದರೆ ಲೋಕದಚರಿತ್ರೆಯನ್ನು ತಿಳಿಯುವದರಿಂದ ಯಾವ ಪ್ರಯೋಜನಗಳುಂಟೋ ಅದೇ ಪ್ರಯೋಜನಗಳುಂಟೆಂದು ಹೇಳಬಹುದು. ಆದರೆ ನಾವು ಮುಖ್ಯವಾಗಿ ಐದು ಪ್ರಯೋಜನಗಳುಂಟೆಂದು ಹೇಳುತ್ತೇವೆ.

೧. ಸತ್ಯವೇದವನ್ನು ಸ್ಥಾಪಿಸುವದು ಸತ್ಯವೇದದಲ್ಲಿ ಕ್ರೀಸ್ತನ ಸಭೆಯನ್ನು ಕುರಿತು ಅನೇಕದೀರ್ಘದರ್ಶನಗಳುಂಟು ಸಭೆಯಚರಿತ್ರೆಯಲ್ಲಿ ಆ ದೀರ್ಘದರ್ಶನಗಳು ಈಡೇರಿಸಲ್ಪಟ್ಟವೆಂದು ನೋಡುತ್ತೇವೆ. ಇದಕ್ಕೆ ಅನೇಕ ಸಾಕ್ಷಿಗಳುಂಟು ಹಳೇಒಡಂಬಡಿಕೆಯಲ್ಲಿರುವ ಸಾಕ್ಷಿಗಳನ್ನು ಬಿಟ್ಟು ಹೊಸಒಡಂಬಡಿಕೆಯಲ್ಲಿ ಕೆಲವುಹೇಳಬೇಕು. ೧) ಇನ್ನೊಂದುಸಾಮ್ಯವನ್ನು ಯೇಸು ಅವರಿಗೆ ಹೇಳಿದ್ದೇನಂದರೆ, ಮೋಕ್ಷದಾಳಿಕೆಯು ತನ್ನಹೊಲದಲ್ಲಿ ಒಳ್ಳೇಬೀಜವನ್ನು ಬಿತ್ತಿದಮನುಷ್ಯಗೆ ಸಾಮ್ಯವಾಗಿದೆ ಆದರೆ ಮನುಷ್ಯರು ನಿದ್ರೆಮಾಡುವಾಗ ಅವನಶತ್ರುವು ಬಂದು ಗೋಧಿಯಲ್ಲಿ ಹೂದರೆಯನ್ನು ಬಿತ್ತಿಹೋದನು. ಬೆಳೆ ಬೆಳೆದು ತೆನೆಗಳು ಹೊರಟಾಗ ಹೂದರೆಯು ಕಾಣಿಸಿತು ಆಗ ಲಾಯಜಮಾನನ ಸೇವಕರು ಆತನಬಳಿಗೆಹೋಗಿ ಅಯ್ಯಾ ನಿನ್ನ ಹೊಲದಲ್ಲಿ ನೀನು ಒಳ್ಳೇಬೀಜವನ್ನು ಬಿತ್ತಲಿಲ್ಲವೋ ಆದರೆ ಅದರಲ್ಲಿ ಹೂದರೆಯೆಲ್ಲಿಂದಬಂತು ಎಂದು ಕೇಳಿದರು. ಅವನು ಅವರಸಂಗಡ ಶತ್ರುವು ಇದನ್ನು ಮಾಡಿದ್ದಾನೆಂದು ಹೇಳಿದನು ನಾವುಹೋಗಿ ಅದನ್ನು ಕಿತ್ತಹಾಕ ಮನಸ್ಸಾಗಿದ್ದೀಯಾ ಎಂದು ಸೇವಕರುಅವನ್ನ ಕೇಳಿದರು ಅದಕ್ಕೆ ಅವನುಇಲ್ಲ ಯಾತಕ್ಕಂದರೆ ಹೂದರೆಯನ್ನು ಕೀಳುವಾಗ ಗೋಧಿಯನ್ನು ಅದರಸಂಗಡ ಒಂದುವೇಳೆ ಕೀಳುವಿರಿ ಆದರೆ ಬೆಳೆಕೊಯ್ಯುವಪರಿಯಂತರ ಎರಡನ್ನು ಬೆಳೆಯಬಿಡಿರಿ. ಬೆಳೆಕೊಯ್ಯುವಕಾಲದಲ್ಲಿ ನಾನು ಕೊಯ್ಯುವವರಿಗೆ ನೀವು ಮುಂಚೆ ಹೂದರೆಯನ್ನು ಕೂಡಿಸಿ ಸುಟ್ಟುಹಾಕ ಅದನ್ನು ಕಟ್ಟುಗಳಾಗಿ ಕಟ್ಟಿರಿ ಆತರುವಾಯ ಗೋಧಿಯನ್ನು ನನ್ನ ಕಣಜದಲ್ಲಿ ಸೇರಿಸಿರಿ ಯೆಂಬುವಹಾಗೆ ಹೇಳುವೆನೆಂದೆಂದನು.

ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದ್ದೇನಂದರೆ ಮೋಕ್ಷದಾಳಿಕೆಯು ಸಾಸಿವೆಕಾಳಿಗೆ ಸಮಾನವಾಗಿದೆ ಅದನ್ನು ಒಬ್ಬ ಮನುಷ್ಯನು ತೆಗದುಕೊಂಡು ತನ್ನ ಹೊಲದಲ್ಲಿಬಿತ್ತಿದನು. ಅದು ಸಕಲಬೀಜಗಳಲ್ಲಿ ಚಿಕ್ಕದಾಗಿದ್ದು ಬೆಳದಾಗ ಯೆಲ್ಲಾಪಲ್ಲೆಗಳಿಗಿಂತ ದೊಡ್ಡದಾಗಿ ಗಿಡವಾಗುತ್ತದೆ. ಆಕಾಶದ ಪಕ್ಷಿಗಳು ಬಂದು ಅದರಕೊಂಬೆಗಳಲ್ಲಿ ವಾಸವಾಗಿರುವವೆಂದು ಹೇಳಿದನು.

ಬೇರೆಸಾಮ್ಯವನ್ನು ಅವರಿಗೆ ಹೇಳಿದನು. ಯೇನಂದರೆ ಮೋಕ್ಷದಾಳಿಕೆಯು ಹುಳಿಹಿಟ್ಟಿಗೆ ಸಮಾನವಾಗಿದೆ ಅದನ್ನು ಒಬ್ಬ ಸ್ತ್ರೀ ತೆಗದುಕೊಂಡು ಮೂರುಮಾನಹಿಟ್ಟಿನಲ್ಲಿ ಅದಷ್ಟೂ ಹುಳಿಯಾಗುವಪರಿಯಂತರ ಯಿಟ್ಟಳೆಂದು ಹೇಳಿದನು. (ಮತ್ತಾಯ. ೧೩ ಸಂ ೨೪ ೩೩ ವಚನ.) ಈ ಸಾಮ್ಯಗಳಲ್ಲಿ ಸಭೆಗೆ ಬರುವಸ್ಥಿತಿಯೂ ಸಭೆಯವಿಸ್ತರಿಸುವರೀತಿಯೂ ನಮಗೆ ತೋರಿಸಲ್ಪಟ್ಟವೆ. ಸಭೆಯ ಚರಿತ್ರೆಯಲ್ಲಿ ಆ ಪ್ರಕಾರವಾಯಿತೆಂದು ನೋಡುತ್ತೇವೆ.

೨.) ಆದರೆ ಸಹೋದರರೇ ನಮ್ಮ ಕರ್ತನಾದ ಯೇಸುಕ್ರೀಸ್ತನ ಬರುವಿಕೆಯನ್ನು ಕುರಿತೂ ನಾವು ಆತನಸಮುಖದಲ್ಲಿ ಕೂಡಿರುವಿಕೆಯನ್ನು ಕುರಿತೂ ಕ್ರೀಸ್ತನ ದಿನವು ಸಮೀಪಿಸಿತೆಂದು ನುಡಿದ ಆತ್ಮದಿಂದಲಾದರೂ ನಮ್ಮ ಬದೀಲಿಂದ ಬಂದಂಥ ಪತ್ರದಿಂದಲಾದರೂ ನಿಮ್ಮ ಮನಸ್ಸಿನಲ್ಲಿ ನೀವು ಹೆದರಿ ತೊಂದರೆಗೊಳದಿರೆಂದು ನಿಮ್ಮನ್ನು ಬೇಡಿಕೊಳ್ಳುತ್ತೇವೆ. ಯಾವನಾದರು ನಿಮ್ಮನ್ನು ಯಾವವಿಧದಿಂದಲಾದರು ಮೋಸಗೊಳಿಸದಹಾಗೆ ಯಿರ್ರಿ. ಯಾತಕ್ಕಂದರೆ ಮತಭ್ರಷ್ಟತ್ವವು ಪಾಪವೆಂಬುವಮನುಷ್ಯನಾದ ಲಯಪುತ್ರನು ಮುಂಚೆ ಪ್ರಕಟವಾದರೇ ಹೊರ್ತಾಗಿ ಆದಿನವು ಬಾರದು ಅವನೇನಂದರೆ ವ್ಯತಿರಿಕ್ತನಾಗಿ ದೇವರೆಂದು ಕರೆಸಿಕೊಳ್ಳಲ್ಪಟ್ಟು ವಂದನೆಯನ್ನು ಹೊಂದಿದವಗಳೆಲ್ಲಾದಕ್ಕಿಂತ ತನ್ನನ್ನು ತಾನೇ ಹೆಚ್ಚಿಸಿಕೊಂಡು ದೇವರಮಂದಿರದೊಳಗೆ ದೇವರಹಾಗೆ ಕುಳಿತುಕೊಂಡು ನಾನು ದೇವರೆಂದು ತನ್ನನ್ನು ತಾನು ತೋರಮಾಡುವನು. (ಥೆಸ್ಸಲೋ. ೨ ಪತ್ರಿ. ೨ ಸಂ. ೧ ೪ ವ.) ಈವಚನಗಳಲ್ಲಿ ಮೂರನೇ ನಾಲ್ಕನೇವಚನಗಳು ಪಾಪವೆಂಬವನನ್ನು ಕುರಿತು ದೀರ್ಘದರ್ಶನವಾಗಿವೆ ಅದರ ಈಡೇರಿಕೆಯನ್ನು ಸಭೆಯಚರಿತ್ರೆಯಲ್ಲಿ ನೋಡುತ್ತೇವೆ.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡಸಮಾಚಾರವು.

೧೮೪೪.

೧ನೆ ಪುಸ್ತಕ. ೧೮ನೆ ಅಂಕೆ] ಬಳ್ಳಾರಿ ೧೫ನೆ ನವಂಬರ್ [ಟಪಾಲ ದಸ್ತೂರಿಕೂಡಿ ಕ್ರಯ ೨ದುಡ್ಡು.

History of the Christian Church.

Introduction—Continued.

ಅರುವತ್ತೆಂಟನೆ ಪುಟದಲ್ಲಿ ತೀರದೆ ಯಿದ್ದ ಯೇಸುಕ್ರೀಸ್ತನ ಸಭೆಯ ಚರಿತ್ರೆಯು.

೩) ಆಗಲು ಯೇಸು ಸಮೀಪಕ್ಕೆ ಬಂದು ಅವರಸಂಗಡ ಮಾತಾಡಿ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ನನಗೆ ಸಮಸ್ತ ಅಧಿಕಾರವು ಕೊಡಲ್ಪಟ್ಟದೆ. ಆದದರಿಂದ ನೀವು ಹೋಗಿ ಸಮಸ್ತ ಜನರನ್ನು ಶಿಷ್ಯರಾಗ ಮಾಡಿಕೊಂಡು ತಂದೆ ಮಗ ಪರಿಶುದ್ಧಾತ್ಮರ ಹೆಸರಿನಲ್ಲಿ ಅವರಿಗೆ ಬಾಪ್ತಿಸ್ಮ ಮಾಡಿ ನಾನು ನಿಮಗೆ ಆಜ್ಞಾಪಿಸಿದವುಗಳೆಲ್ಲಾ ಕೈಕೊಳ್ಳ ಅವರನ್ನು ಬೋಧಿಸಿರಿ ಇಗೋ ನಾನು ಜಗದಂತದಪರಿಯಂತರ ಸದಾಕಾಲದಲ್ಲಿ ನಿಮ್ಮಸಂಗಡ ಯಿದ್ದೇನೆಂದು ಹೇಳಿದನು. (ಮತ್ತ. ೨೮ ಸಂ ೧೮ ೨೦ ವ.) ಈವಚನದಲ್ಲಿ ಕರ್ತನಾದ ಯೇಸುಕ್ರೀಸ್ತನು ತನ್ನ ಸಭೆಯ ಪ್ರಯೋಜನಕ್ಕೋಸ್ಕರ ಸಕಲ ಅಧಿಕಾರವನ್ನು ಹೊಂದಿದ್ದಾನೆಂದು ನಮಗೆ ಕಾಣಿಸುತ್ತದೆ. ಸಭೆಯ ಚರಿತ್ರೆಯಲ್ಲಿ ಅದಕ್ಕೆ ಬಹಳ ಸಾಕ್ಷಿಯು ತೋರುವದು. ಸಭೆಗೋಸ್ಕರ ಈಲೋಕವು ಪರಿಪಾಲನೆ ಮಾಡಲ್ಪಟ್ಟದೆಂದು ಕಾಣಿಸುವದು.

೨. ಅನೇಕ ಪರಿಶುದ್ಧರ ಮಾದರಿಗಳು ನಮಗೆ ತೋರುವದು. ಮೊದಲನೇ ಕಾಲದವಿಭಾಗದಲ್ಲಿ ಇವುಗಳನ್ನು ಮುಖ್ಯವಾಗಿ ನೋಡತಕ್ಕೇವೆ. ಅವರ ಪರಿಶುದ್ಧ ನಡತೆಯಿಂದ ಸುವರ್ತಮಾನದ ಬಲವನ್ನು ತಿಳಿದು ಅವರಭಕ್ತಿಯನ್ನು ಆಲೋಚಿಸಿರುವದರಿಂದ ನಮ್ಮ ಭಕ್ತಿಯು ಹೆಚ್ಚಾಗಿರ ಬಹುದು. ಅವರಲ್ಲಿರುವ ಅನೇಕರು ದೇವರಸಹಾಯದಿಂದ ಧೈರ್ಯವಾಗಿಯೂ ಸಂತೋಷವಾಗಿಯೂ ಕ್ರೂರವಾದ ಮರಣವನ್ನು ಹೊಂದಿದರೆಂದು ನಾವು ನೋಡುವಾಗ ಅದರಿಂದ ಲೋಕದಭಯವನ್ನು ತೆಗದುಹಾಕುವದಕ್ಕೆ ನಮಗೆ ಬಹಳ ಸಹಾಯವಾಗಿರುವದು. ಇಂಥಾ ಒಳ್ಳೇಮಾದರಿಗಳನ್ನು ಅನುಸರಿಸುವದಕ್ಕೆ ನಮ್ಮ ಮನಸ್ಸುಗಳಲ್ಲಿ ಆಶೆಹುಟ್ಟುವದು.

೩. ಕ್ರೀಸ್ತಿಯರಲ್ಲಿರುವ ವಾಗ್ವಾದಗಳನ್ನು ಪರಿಹರಿಸುವದಕ್ಕೆ ಬಹಳಸಹಾಯವಾಗಿರುವದು ಆ ವಾಗ್ವಾದಗಳ ಮನುಷ್ಯರ ಕೆಟ್ಟತನದಿಂದ ಬಂತ್ತವೆಂದೂ ಅವುಗಳಿಂದ ಯಾರಿಗಾದರೂ ಯೇನೂಪ್ರಯೋಜನವಿಲ್ಲವೆಂದೂ ಸಕಲನಿಜವಾದ ಕ್ರೀಸ್ತಿಯರು ಚಿಕ್ಕಕಾರ್ಯಗಳನ್ನು ಕುರಿತು ಯಾವಾಗಲೂ ಬೇರೆಬೇರೆ ಅಭಿಪ್ರಾಯಗಳುಳ್ಳವರಾಗಿದ್ದಾರೆಂದೂ. ಅವರು ಒಬ್ಬರನ್ನೊಬ್ಬರು ಬಹಳವಾಗಿ ಪ್ರೀತಿಮಾಡುವಾಗ ಈಚಿಕ್ಕಕಾರ್ಯಗನ್ನು ಕುರಿತು ವಾಗ್ವಾದ ಮಾಡುವದಕ್ಕೆ ಅವರಿಗೆಮನಸ್ಸಿಲ್ಲವೆಂದೂ ನಾವುಸಭೆಯ ಚರಿತ್ರೆಯಲ್ಲಿ ನೋಡುವಾಗ ಇಂಥಾವಾಗ್ವಾದ ಮಾಡುವ ಮನಸ್ಸು ಕಡಿಮೆಯಾಗುವದು.

೪. ನಿಜವಾದಭಕ್ತಿಗೂ ಅಬದ್ಧವಾದಭಕ್ತಿಗೂ ಇರುವ ವ್ಯತ್ಯಾಸವು ನಮಗೆ ತೋರುವದು. ಸಭೆಯಲ್ಲಿ ಯಾವಾಗಲು ಕೆಲವು ನಿಜವಾದ ಕ್ರೀಸ್ತಿಯರಾಗಿದ್ದಾಗ್ಯೂ ಆದಿಯಿಂದ ಇಷ್ಟುಮಟ್ಟಿಗೂ ಅನೇಕ ಅಬದ್ಧಕ್ರೀಸ್ತಿಯರಾಗಿದ್ದಾರೆಂದು ನಾವು ನೋಡುವೆವು ಮತ್ತು ಅವರನ್ನೂ ಇವರನ್ನೂ ನೋಡಿಅವರ ಗುಣಕ್ರಿಯೆಗಳಿಗೂ ಇವರ ಗುಣಕ್ರಿಯೆಗಳಿಗೂ ಸರಿನೋಡುವಾಗ ಅವರಿಗೂ ಇವರಿಗೂ ಇರುವ ವ್ಯತ್ಯಾಸವನ್ನು ಸುಲಭವಾಗಿ ತಿಳಿಯ ಬಹುದು. ಈಪ್ರಕಾರ ನಿಜವಾದ ಭಕ್ತಿಯ ಸ್ವಭಾವವನ್ನು ತಿಳಿಯಬಹುದು.

೫. ಮೇಲೆಹೇಳಿದ ಪ್ರಯೋಜನಗಳು ಸಕಲಕ್ರೀಸ್ತಿಯರಿಗೆ ಸೇರುತ್ತವೆ. ಆದರೆ ಕ್ರೀಸ್ತನಬೋಧಕರಿಗೆ ಮುಖ್ಯವಾಗಿ ಸಭೆಯಚರಿತ್ರೆಯನ್ನು ತಿಳಿಯುವದರಿಂದ ಪ್ರಯೋಜನ ಉಂಟು. ಕೊರಿಂತದವರಿಗೆ ಅಪೋಸ್ತಲನಾದ ಪೌಲನು ಹೇಳಿದ್ದೇನಂದರೆ ನೀವು ದೇವರ ಕಟ್ಟುವಿಕೆಯಾಗಿದ್ದೀರಿ ದೇವರು ನನಗೆ ಕೊಟ್ಟಿದ್ದ ಕೃಪೆಯಪ್ರಕಾರ ನಾನು ಚಮತ್ಕಾರವುಳ್ಳಶಿಲ್ಪಕಾರನಹಾಗೆ ಅಸ್ತಿವಾರವನ್ನು ಹಾಕಿದೆನು. ಮತ್ತೊಬ್ಬನು ಅದರಮೇಲೆ ಕಟ್ಟುತ್ತಾನೆ ಆದರೆ ಒಬ್ಬೊಬ್ಬನು ಹ್ಯಾಗೆಕಟ್ಟುತ್ತಾನೋ ಯೆಚ್ಚರಿಕೆಯಾಗಿರುವನಾಗಲಿ. ಯಾತಕ್ಕಂದರೆ ಅಸ್ತಿವಾರವಾಗಿ ಹಾಕಲ್ಪಟ್ಟಿರುವ ಯೇಸುಕ್ರೀಸ್ತನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂಹಾಕಲಾರನು ಮತ್ತು ಯಾರಾದರು ಈಅಸ್ತಿವಾರದಮೇಲೆ ಭಂಗಾರವನ್ನೂ ಬೆಳ್ಳಿಯನ್ನೂ ಬೆಲೆಯಾದ ಕಲ್ಲುಗಳನ್ನೂ ಅಥವಾ ಕಟ್ಟಿಗೆಯನ್ನೂ ಹುಲ್ಲನ್ನೂ ಸೊಪ್ಪೆಯನ್ನೂ ಕಟ್ಟಿದರೆ ಅವನವನ ಕೆಲಸವು ತೋರಮಾಡಲ್ಪಡುವದು ಆದಿನವು ಅದನ್ನು ತಿಳಿಸುವದು ಯಾತಕ್ಕಂದರೆ ಅದು ಬೆಂಕಿಯಿಂದ ಪ್ರತ್ಯಕ್ಷವಾಗಮಾಡಲ್ಪಡುವದು ಮತ್ತು ಅವನವನ ಕೆಲಸವು ಯೆಂಥಾದ್ದೋ ಬೆಂಕಿಯು ಅದನ್ನು ಶೋಧಿಸುವದು. ಅದರಮೇಲೆ ಯಾರುಕಟ್ಟಿದ ಕೆಲಸವು ನಿಲ್ಲುವದೋ ಅವನು ಫಲವನ್ನು ಹೊಂದುವನು ಯಾರಕೆಲಸವು ಸುಟ್ಟುಹೋಗುವದೋ ಅವನು ನಷ್ಟಪಡುವನು ಆದರೆ ಅವನು ತಾನೇ ಬೆಂಕಿಯಿಂದ ತಪ್ಪಿಸಲ್ಪಟ್ಟವನ ಹಾಗೆಯೇ ರಕ್ಷಿಸಲ್ಪಡುವನು. (ಕೊರಿಂತ. ೧ ಪತ್ರಿ. ೩ ಸಂಧಿ ೯ ೧೫ ವ.)

ಈ ವಚನಗಳಲ್ಲಿ ಅಪೋಸ್ತಲನಾದ ಪೌಲನು ವೊಂದು ಕಟ್ಟುವಿಕೆಯ ಹಾಗೆ ಸಭೆಯನ್ನು ಕುರಿತು ಕಟ್ಟುವವರಹಾಗೆ ಬೋಧಕರನ್ನು ಕುರಿತು ಸಾಮ್ಯವಾಗಿ ಬರೆಯುತ್ತಾನೆ. ಆದಕಾರಣ ನಾವು ಸರಿಯಾಗಿ ಕಟ್ಟುವ ಹಾಗೆ ನಮಗಿಂತ ಮುಂಚೆ ಇದ್ದ ಬೋಧಕರ ಚಮತ್ಕಾರವನ್ನು ಅಥವಾ ಅವರ ತಪ್ಪುಗಳನ್ನು ನೋಡಿ ಅವರ ಕೆಲಸ ನಿಲ್ಲುತ್ತದೆಯೋ ಇಲ್ಲವೋ ನಾವು ನೋಡಬೇಕು. ಸಭೆಯ ಚರಿತ್ರೆಯನ್ನು ತಿಳಿಯುವಾಗ ಇದನ್ನೆಲ್ಲಾ ನೋಡುತ್ತೇವೆ ನಾವು ನೋಡಿ ಸರಿಯಾಗಿ ಆಲೋಚಿಸಿದರೆ ಚಮತ್ಕಾರವುಳ್ಳ ಶಿಲ್ಪಿಕಾರರಾಗಿರಬಹುದು ಆಗ ನಮ್ಮ ಕೆಲಸವು ಶೋಧನೆಯ ದಿವಸದಲ್ಲಿ ನಿಂತರೆ ನಾವು ಫಲವನ್ನು ಹೊಂದುವೆವು. ಸಭೆಯ ಚರಿತ್ರೆಯನ್ನು ತಿಳಿಯುವದರಿಂದ ಇಂಥಾ ಪ್ರಯೋಜನಗಳು ನಮಗುಂಟಾಗಿರುವದು. ಆದರೆ ನಾವು ಈ ಪ್ರಯೋಜನಂಗಳನ್ನು ಸುಮ್ಮನೆ ಹೊಂದಕೂಡದು. ನಾವು ಅವುಗಳನ್ನು ಹಿಡಿಯುವದಕ್ಕೆ ಪ್ರಯಾಸಪಟ್ಟು ದಿನದಿನಕ್ಕೆ ದೇವರ ಸಹಾಯವನ್ನು ಬೇಡಿಕೊಳ್ಳಬೇಕು.

ಯೇಸುಕ್ರೀಸ್ತನ ಸಭೆಯ ಚರಿತ್ರೆಯು ಆತನು ಯೇರೋಣ ಮೊದಲ್ಗೊಂಡು ಈ ಕಾಲದ ಮಟ್ಟಿಗೂ ನಡದ ಕಾರ್ಯಗಳನ್ನು ಗ್ರಹಿಸುತ್ತದೆ. ಅದು ೧೮೧೧ ವರುಷಗಳಾಗವೆ. ಈ ಕಾಲವೆಲ್ಲಾ ಏಳು ವಿಭಾಗವಾಗಿ ಪ್ರತ್ಯೇಕಿಸ ತಕ್ಕದ್ದಾಗ್ಯಂದರೆ.

ಮೊದಲನೇ ವಿಭಾಗವು. ಯೇಸುಕ್ರೀಸ್ತನ ಯೇರೋಣ ಮೊದಲ್ಗೊಂಡು ರೋಮಾರಾಜ್ಯವೆಲ್ಲಾದರಲ್ಲಿ ಕೊಂಸ್ತಂತೀನನೆಂಬ ಮಹಾರಾಜನಿಂದ ಕ್ರೀಸ್ತನ ಮತವು ಸ್ಥಾಪಿಸಲ್ಪಟ್ಟಿದ್ದ ಮಟ್ಟಿಗೂ ನಡದ ಕಾರ್ಯಗಳು. ಕ್ರೀ. ಶ. ೩೩ ೩೨೪. (A. D. 33—324.)

ಎರಡನೇ ವಿಭಾಗವು. ಕ್ರೀಸ್ತನ ಮತವು ಸ್ಥಾಪಿಸಲ್ಪಟ್ಟದ್ದು ಮೊದಲುಗೊಂಡು ಮೊದಲನೆ ಗ್ರೆಗೋರಿಯನೆಂಬ ಪಾಪುಮೆಂಬವನ ಮರಣದ ಮಟ್ಟಿಗೂ ನಡದ ಕಾರ್ಯಗಳು. ಕ್ರೀ. ಶ. ೩೨೪ ೬೦೪. (A. D. 324—604.)

ಮೂರನೇ ವಿಭಾಗವು. ಮೊದಲನೇ ಗ್ರೆಗೋರಿಯನ ಮರಣ ಮೊದಲುಗೊಂಡು ಏಳನೇ ಗ್ರೆಗೋರಿಯನೆಂಬ ಪಾಪುಮೆಂಬವನ ಕಾಲದ ಮಟ್ಟಿಗೂ ನಡದ ಕಾರ್ಯಗಳು. ಕ್ರೀ. ಶ. ೬೦೪ ೧೦೭೩. (A.D. 604—1073.)

ನಾಲ್ಕನೇ ವಿಭಾಗವು. ಏಳನೇ ಗ್ರೆಗೋರಿಯನ ಕಾಲವು ಮೊದಲುಗೊಂಡು ಇಗ್ಲಾಂಡ ದೇಶದಲ್ಲಿ ತಿದ್ದುಪಾಟಿನ ಆರಂಭದ ಮಟ್ಟಿಗೂ ನಡದ ಕಾರ್ಯಗಳು. ಕ್ರೀ. ಶ. ೧೦೭೩ ೧೩೬೦. (A. D. 1073—1360.)

ಐದನೇ ವಿಭಾಗವು. ಇಂಗ್ಲಾಂಡ್ ದೇಶದಲ್ಲಿ ತಿದ್ದುಪಾಟಿನ ಆರಂಭ ಮೊದಲುಗೊಂಡು ಜರ್ಮನಿಯ ದೇಶದಲ್ಲಿ ತಿದ್ದುಪಾಟಿನ ಆರಂಭದ ಮಟ್ಟಿಗೂ ನಡದ ಕಾರ್ಯಗಳು. ಕ್ರೀ. ಶ. ೧೩೬೦ ೧೫೧೭. (A. D. 1360—1517).

ಆರನೇ ವಿಭಾಗವು. ಜರ್ಮನಿಯ ದೇಶದಲ್ಲಿ ತಿದ್ದುಪಾಟಿನ ಆರಂಭ ಮೊದಲುಗೊಂಡು ಯುರೋಪಿನ ಖಂಡದಲ್ಲಿ ತಿದ್ದುಪಾಟಾದ ಸಭೆಗಳು ಸ್ಥಾಪಿಸಲ್ಪಟ್ಟಿದ್ದ ಮಟ್ಟಿಗೂ ನಡದ ಕಾರ್ಯಗಳು. ಕ್ರೀ. ಶ. ೧೫೧೭ ೧೬೦೦. (A. D. 1517—1600.)

ಏಳನೇ ವಿಭಾಗವು. ಯುರೋಪಿನಲ್ಲಿ ತಿದ್ದುಪಾಟಾದ ಸಭೆಗಳು ಸ್ಥಾಪಿಸಲ್ಪಟ್ಟದ್ದು ಮೊದಲುಗೊಂಡು ಈ ಕಾಲದ ಮಟ್ಟಿಗೂ ನಡದ ಕಾರ್ಯಗಳು. ಕ್ರೀ. ಶ. ೧೬೦೦ ೧೮೪೪. (A. D. 1600—1844.)

HISTORY OF THE CHRISTIAN CHURCH.
ಯೇಸುಕ್ರೀಸ್ತನ ಸಭೆಯ ಚರಿತ್ರೆಯು.

FIRST PART.
ಮೊದಲನೇ ವಿಭಾಗವು.

From the ascension of Christ to the establishment of Christianity throughout the Roman Empire by the Emperor Constantine.

ಯೇಸುಕ್ರೀಸ್ತನು ಯೇರೋಣ ಮೊದಲುಗೊಂಡು ರೋಮಾರಾಜ್ಯವೆಲ್ಲಾದರಲ್ಲಿ ಕೊಂಸ್ತಂತೀನನೆಂಬ ಮಹಾರಾಜನಿಂದ ಕ್ರೀಸ್ತನ ಮತವು ಸ್ಥಾಪಿಸಲ್ಪಟ್ಟಿದ್ದ ಮಟ್ಟಿಗೂ ನಡದ ಕಾರ್ಯಗಳು.

ಕ್ರೀ. ಶ. ೩೩ ೩೨೪ **A. D. 33--324.**

FIRST CHAPTER.
ಮೊದಲನೇ ಪರ್ವವು.

APOSTOLIC AGE.
ಅಪೋಸ್ತಲರ ಕಾಲವು.

SECTION. I.
೧. ಅಧ್ಯಾಯವು.

History of the Church at Jerusalem.
ಯೆರೂಸಲೇಮಿನಲ್ಲಿರುವ ಸಭೆಯ ಚರಿತ್ರೆಯು.

೧. ನಮ್ಮ ಕರ್ತನಾದ ಯೇಸುಕ್ರೀಸ್ತನು ಸತ್ತವರೊಳಗಿಂದ ಎದ್ದು ತನ್ನ ಶಿಷ್ಯರಿಗೆ ಪ್ರತ್ಯಕ್ಷನಾಗಿ ಅವರಸಂಗಡ ದೇವರ ರಾಜ್ಯವನ್ನು ಕುರಿತು ಮಾತಾಡಿದನು ವೊಂದುಸಾರಿ ಆತನು ಅವರಸಂಗಡ ಹೇಳಿದ್ದೇನಂದರೆ ಕ್ರೀಸ್ತನು ಈ ಪ್ರಕಾರವಾಗಿ ಹಿಂಸೆಯನ್ನು ಅನುಭವಿಸಲೂ ಮೂರನೇ ದಿವಸದಲ್ಲಿ ಸತ್ತವರೊಳಗಿಂದ ಏಳಲೂ ಯೆರೂಸಲೇಮಿನ ಮೊದಲುಗೊಂಡು ಸಕಲ ಜನೋಘಗಳಿಗೆ ಆತನ ಹೆಸರಿನಲ್ಲಿ ಪಶ್ಚಾತ್ತಾಪವೂ ಪಾಪಪರಿಹಾರವೂ ಸಾರಿಹೇಳಲ್ಪಡಲೂ ಬೇಕಾಗಿತ್ತೆಂದು ಈ ಪ್ರಕಾರ ಬರೆದದೆ. (ಲೂಕಾ ೨೪ ನಂ ೪೬ ೪೭ ವಚನ.) ಈ ವಚನಗಳಲ್ಲಿ ನಾವು ಕ್ರೀಸ್ತನ ಮತದ ಸ್ವಭಾವ

ವನ್ನು ತಿಳಿಯುತ್ತೇವೆ ಅದು ಯೇಸುವಿನ ಹೊರತಿನ್ನ ಪಶ್ಚಾತ್ತಾಪವೂ ಪಾಪಪರಿಹಾರವೂ ಆಗದೆ ಮತ್ತು ಅದು ಯಾವಸ್ಥಳದಲ್ಲಿ ಆರಂಭಿಸಿತ್ತೋ ನಮಗೆ ತಿಳಿಸಿತು ಯೆರೂಸಲೇಮಿನಲ್ಲಿ ಪಶ್ಚಾತ್ತಾಪವೂ ಪಾಪಪರಿಹಾರವೂ ಮೊದಲಾಗಿ ಸಾರಿಹೇಳಲ್ಪಡಬೇಕಾದದರಿಂದ ಆಪಟ್ಣದಲ್ಲಿ ಕ್ರೀಸ್ತನ ಮತವು ಆರಂಭಿಸಿತು ಆಪಟ್ಣವು ದೇವರದೇ ಅದರಲ್ಲಿ ಆತನು ತನ್ನನ್ನು ದಯವಾಗಿ ಪ್ರತ್ಯಕ್ಷವಾಗಮಾಡಿದನು ಅಲ್ಲಿ ತನ್ನ ದೇವಾಲಯವನ್ನು ಕಟ್ಟಿಸಿದನು.

ಯೆಹೂದ್ಯರು ಆದೇವಾಲಯವನ್ನು ತಮ್ಮ ದುರ್ಮಾರ್ಗತನದಿಂದ ಅಪವಿತ್ರಮಾಡಿದಾಗ ದೇವರು ಅದನ್ನು ತನ್ನ ಪ್ರಿಯವಾದ ಪಟ್ಣವನ್ನೂ ನಾಶನಮಾಡುವದಕ್ಕೂ ತನ್ನ ಆರಿಸಿತೆಗದುಕೊಂಡ ಜನರನ್ನು ಸಕಲ ದೇಶಗಳಲ್ಲಿ ಚದರಿಸುವದಕ್ಕೂ ನಿರ್ಣಯಿಸಿದನು ಆದಾಗ್ಯೂ ಈ ಪ್ರಕಾರವಾಗಿ ಅವರನ್ನು ದಂಡನೆಮಾಡುವದಕ್ಕಿಂತ ಮುಂಚೆ ತನ್ನ ಮಗನನ್ನು ಆ ದೇವಾಲಯಕ್ಕೂ ಆ ಜನರಬಳಿಗೂ ಕಳುಹಿಸಿದನು.

ಆದರೆ ಅವರು ತಮ್ಮ ದುರ್ಮಾರ್ಗತನದ ಅಳತೆಯನ್ನು ತುಂಬಿಸುವದಕ್ಕೆ ದೇವರ ಮಗನನ್ನು ತಿರಸ್ಕರಿಸಿ ಹಿಂಸಿಸಿ ಬಹಳ ಕ್ರೂರತನದಿಂದ ಶಿಲುಬೆಗೆ ಹಾಕಿದಾಗ್ಯೂ ದೇವರು ಸಂಗಡಲೇ ಅವರನ್ನು ಬಿಟ್ಟುಬಿಡಲಿಲ್ಲ ಆದರೆ ಯೇಸು ತಾನೆ ಅವರಿಗೆ ಮೊದಲಾಗಿ ಪಶ್ಚಾತ್ತಾಪವನ್ನು ಪಾಪಪರಿಹಾರವನ್ನು ಸಾರಿಹೇಳುವದಕ್ಕೆ ತನ್ನ ಶಿಷ್ಯರಿಗೆ ಅಪ್ಪಣೆಕೊಟ್ಟನು ಇದರಲ್ಲಿ ನಾವು ಕ್ರೀಸ್ತನ ಮತದ ಸ್ವಭಾವವನ್ನು ತಿಳಿಯುತ್ತೇವೆ ಅದೇನಂದರೆ ದೇವರು ಸಕಲ ಪಾಪಗಳನ್ನು ಪುಷ್ಕಳವಾಗಿ ಮನ್ನಿಸುವದಕ್ಕೂ ಬಹಳ ಕಠಿನವಾದ ಹೃದಯವುಳ್ಳ ಪಾಪಿಗಳನ್ನು ರಕ್ಷಿಸುವದಕ್ಕೂ ಮನಸ್ಸುಳ್ಳವನಾಗಿದ್ದಾನೆ ಈಮನಸ್ಸನ್ನು ಸಕಲರಿಗೆ ತೋರಿಸುವದಕ್ಕೆ ತನ್ನ ಒಬ್ಬನೇ ಪ್ರಿಯವಾದ ಮಗನನ್ನು ಕೊಟ್ಟನು.

೨. ಆದರೆ ಕ್ರೀಸ್ತನು ಲೋಕಕ್ಕೆ ಬಂದಾಗ ಅದರ ಸ್ಥಿತಿಯಂಥಾದ್ದು.

ಅದು ಬಹಳ ದೌರ್ಭಾಗ್ಯವುಳ್ಳ ಸ್ಥಿತಿಯೇ ಯೆಹೂದಿಯದೇಶದಲ್ಲಿ ಮಾತ್ರವೇ ನಿಜವಾದದೇವರ ಆರಾಧನೆ ಸಿಕ್ಕಿತು ಸಕಲ ಬೇರೆ ಬೇರೆ ಕಡಿಮೆ ದೇಶಸ್ಥರು ವಿಗ್ರಹಗಳನ್ನು ಪೂಜಿಸುವವರಾಗಿದ್ದರು ಅವರು ನಿಜವಾದ ದೇವರನ್ನು ಬಿಟ್ಟದ್ದರಿಂದ ದೇವರು ಅವರನ್ನು ತಮ್ಮ ಮನಸ್ಸು ಬಂದಹಾಗೆ ವಿಗ್ರಹಪೂಜೆ ಮಾಡುವದಕ್ಕೂ ಸಕಲವಿಧವಾದ ಪಾಪಗಳನ್ನು ಮಾಡುವದಕ್ಕೂ ಬಹಳ ಅಜ್ಞಾನದಲ್ಲಿಯೂ ಬಹಳ ಅಂಧಕಾರದಲ್ಲಿಯೂ ನಡಿಯುವದಕ್ಕೂ ಒಪ್ಪಿಸಿಬಿಟ್ಟನು ಆಗಲೇ ಯೆಹೂದಿಯರುಹೊರ್ತು ಸಕಲಜನರು ಅದೇಸ್ಥಿತಿಯಲ್ಲಿ ಇದ್ದರು ಮತ್ತು ಯೆಹೂದಿಯರಲ್ಲಿ ನಿಜವಾದ ದೇವರ ಆರಾಧನೆ ಸಿಕ್ಕಿದಾಗ್ಯೂ ಅವರು ಕಡಿಮೆಯವರೆಲ್ಲರಿಗಿಂತ ಬಹಳ ಉತ್ತಮರಲ್ಲ ಮೋಶೇನಿಂದ ಸ್ಥಾಪಿಸಲ್ಪಟ್ಟ ಆಚರಣೆಗಳೂ ನ್ಯಾಯಪ್ರಮಾಣಗಳೂ ಅವರಲ್ಲಿ ಕಾಣಲ್ಪಟ್ಟವು ಆದರೆ ಪರಿಸಯರೂ ಸದ್ದುಕಯರೂ ಅವುಗಳನ್ನು ಬಹಳವಾಗಿ ಕೆಡಿಸಿದ್ದರು ಮತ್ತು ದೇವರ ಜನರು ಅಜ್ಞಾನಿಗಳ ಕೆಟ್ಟ ಮರ್ಯಾದೆಗಳಿಂದ ತಮ್ಮನ್ನು ತಾವೆ ಅಪವಿತ್ರ ಮಾಡಿಕೊಂಡಿದ್ದರು ಅವರಲ್ಲಿ ಅನೇಕ ಬೋಧಕರಾಗಿದ್ದಾಗ್ಯೂ ಮನುಷ್ಯರಲ್ಲಿರುವದನ್ನು ತಿಳಿಯುವವನಾದ ಯೇಸು ಅವರಸ್ಥಿತಿಯನ್ನು ನೋಡಿದಾಗ ಅವರಮೇಲೆ ಕನಿಕರವಿಟ್ಟನು ಯಾತಕ್ಕಂದರೆ ಅವರು ಕುರುಬನಿಲ್ಲದ ಕುರಿಗಳಹಾಗೆ ಯಿದ್ದರು ದೇವರ ನೀತಿಯುಳ್ಳ ಆಜ್ಞೆಗಳನ್ನು ತಿಳಿದುಕೊಂಡಿದ್ದಾಗ್ಯೂ ಅವುಗಳ ಪ್ರಕಾರ ನಡಿಯದೆ ಇದ್ದರು ಮತ್ತು ಆತ್ಮದ ಸೇವೆಗೆ ಬದಲಾಗಿ ಶರೀರದ ಸೇವೆಯನ್ನು ದೇವರಿಗೆ ಅರ್ಪಿಸಿದರು ನಿಜವಾದ ಪಶ್ಚಾತ್ತಾಪವನ್ನೂ ಪುನರ್ಜನ್ಮವನ್ನೂ ಮನಸ್ಸುತಿರುಗುವಿಕೆಯನ್ನೂ ಪಾಪಪರಿಹಾರವನ್ನೂ ಕುರಿತ ಬೋಧನೆಗಳು ಅವರಿಗೆ ತಿಳಿಯಲಿಲ್ಲವು ಹಳೇಒಡಂಬಡಿಕೆಯ ಬೆಳಕೂ ಮುಂಗುರುತುಗಳಾಗಿ ನೇಮಿಸಲ್ಪಟ್ಟ ಬಲಿಗಳೂ ದೀರ್ಘದರ್ಶನಗಳ ಬರಹಗಳೂ ಅನೇಕ ಪರಿಶುದ್ಧಮನುಷ್ಯರ ಮಾದರಿಗಳೂ ಅವರಿಗೆ ಉಂಟಾಗಿದ್ದಾಗ್ಯೂ ಅವರು ಗುಂಪಿನಹಾಗೆ ಅನ್ಯಜನರಿಗಿಂತ ಬಹಳ ಉತ್ತಮರಾಗಿದ್ದರೆಂದು ಕಾಣಿಸದು ಆದರೆ ಅವರಲ್ಲಿ ಕೆಲಬರು ಯೆರೂಸಲೇಮಿನಲ್ಲಿ ವಿಮೋಚನೆಯನ್ನು ನಿಜವಾದ ವಿಶ್ವಾಸದಿಂದಲೂ ದೇವಶಕ್ತಿಯಿಂದಲೂ ನಿರೀಕ್ಷಿಸಿದರು ಜಖರೀಯನೂ ತನ್ನ ಹೆಂಡತಿಯಾದ ಎಲಿಸಬೆತಳೂ ಸಿಮಿಯೋನನೂ ಅನ್ನಳೂ ಇನ್ನೂ ಕೆಲಬರು ಇಂಥವರಾಗಿದ್ದರು ಅವರಿಗೆ ನಿಜವಾದ ಬೆಳಕುಂಟಾಯಿತು ಆದರೆ ಅವರಸುತ್ತುಮುತ್ತಲಿರುವವರೆಲ್ಲರಿಗೆ ಬಹು ಅಂಧಕಾರವಾಗಿತ್ತು.

ಅದೇ ಅಂಧಕಾರವಾದ ರಾತ್ರಿಯಲ್ಲಿ ನೀತಿಯ ಸೂರ್ಯನು ಈ ಲೋಕದ ಮೇಲೆ ಉದಯಿಸಿದನು ಆಕಾಲಕ್ಕಿಂತ ಮುಂಚೆ ಯಾವ ಕಾಲದಲ್ಲಾದರೂ ಅಜ್ಞಾನವೂ ದುರ್ಮಾರ್ಗತನವೂ ಅಷ್ಟುವಿಸ್ತಾರವಾಗಿ ಪ್ರಬಲಿಸಲಿಲ್ಲವು ಅರಸಗಳೂ ಪ್ರಜೆಗಳೂ ಯಾಜಕರೂ ಬೋಧಕರೂ ಹಿರಿಕಿರಿಯರಾದ ಜನರೆಲ್ಲರೂ ಸಹ ಬಹಳ ಶಕ್ತಿಹೀನರಾಗಿದ್ದರು ಯೋಶುವನ ಕಾಲದಲ್ಲಿಯೂ ದಾವೀದನ ಕಾಲದಲ್ಲಿಯೂ ನೆಹೆಮಾಯನ ಕಾಲದಲ್ಲಿಯೂ ಇಸ್ರಾಯೇಲ್ ಜನರ ಶಕ್ತಿಯು ಸ್ವಲ್ಪಹೆಚ್ಚಾಗಿತ್ತು ಆದರೆ ಜಗದ್ರಕ್ಷಕನು ಆಗಲು ಬರಲಿಲ್ಲವು ತನ್ನ ಸ್ವಾಧೀನ ಕಾಲಗಳನ್ನು ಸಮಯಗಳನ್ನು ಇಟ್ಟಿರುವ ದೇವರು ಬಹಳ ಅಂಧಕಾರವಾದ ಕಾಲದಲ್ಲಿ ನಾಶನವಾಗಿಹೋಗುವ ಮನುಷ್ಯರಿಗೆ ಜೀವದ ಬೆಳಕನ್ನು ತೋರಿಸುವದಕ್ಕೆ ನಿಶ್ಚಯಮಾಡಿದನು.

ಮತ್ತು ಆಕಾಲದಲ್ಲಿ ಸಕಲ ದೇಶಗಳೂ ರೋಮಾರಾಜ್ಯದ ವಶದಲ್ಲಿದ್ದವು ಆದಕಾರಣ ರೋಮಾರಾಜ್ಯದ ಸೈನ್ಯಗಳೂ ಅವರ ಅಧಿಕಾರಸ್ತರೂ ಸಕಲ ದೇಶದಲ್ಲಿ ವಾಸಮಾಡಿದದರಿಂದಲೂ ಅವರೂ ಅವರ ಸಂಗಡಲಿದ್ದ ಅನೇಕರೂ ಸಕಲದೇಶಗಳ ಮೇಲೆ ಸಾರಿಸಾರಿಗೂ ಸಂಚಾರ ಮಾಡುತ್ತಾ ಇದ್ದದರಿಂದಲೂ ಸಕಲವಿಧವಾದ ವರ್ತಮಾನವು ಬಹು ತೀವ್ರವಾಗಿ ವಿಸ್ತರಿಸಿತು ಇದಲ್ಲದೆ ಆಕಾಲದಲ್ಲಿ ಸಕಲದೇಶಗಳಲ್ಲಿ ಅನೇಕರು ತಮ್ಮ ಭಾಷೆಯನ್ನು ಹೊರ್ತು ಗ್ರೇಕಭಾಷೆಯನ್ನು ಮಾತಾಡಿದದರಿಂದ ಸಮಸ್ತ ವರ್ತಮಾನ ತಿಳಿಯುವದಕ್ಕಾದರೂ ತಿಳಿಸುವದಕ್ಕಾದರೂ ಯೇನೂ ಅಡ್ಡಂತರವಿಲ್ಲ ಮತ್ತು ಯೆಹೂದಿಯರು ತಮ್ಮ ದೇಶವನ್ನು ಬಿಟ್ಟು ಅನ್ಯದೇಶಗಳಲ್ಲಿರುವ ಪಟ್ಣಗಳಲ್ಲಿ ವಾಸಮಾಡಿ ಸುನಗೋಗಗಳನ್ನು ಕಟ್ಟಿಸಿ ಹಳೆಯ ಒಡಂಬಡಿಕೆಯಾದ ದೇವವಾಕ್ಯವನ್ನು ಗ್ರೇಕಭಾಷೆಯಲ್ಲಿ ಟೀಕಿಸಿದದರಿಂದ ಅವರ ಮುಖಾಂತ್ರವಾಗಿ ನಿಜವಾದ ದೇವರೂ ಆತನ ಆರಾಧನೆಯ ರೀತಿಯೂ ಅನ್ಯಜನರಿಗೆ ತಿಳಿಸಲ್ಪಟ್ಟವು ಅನೇಕ ಅಜ್ಞಾನಿಗಳು ತಮ್ಮಮಾರ್ಗವನ್ನು ಬಿಟ್ಟು ಯೆಹೂದಿಯರ ಮಾರ್ಗಕ್ಕೆ ಸೇರಿ ಆತ್ಮನಾದಂಥದೇವರನ್ನು ಆತ್ಮದಿಂದ ಆರಾಧಿಸಿ ದೇವವಾಕ್ಯದಲ್ಲಿ ಹೇಳಿದ ಜಗದ್ರಕ್ಷಕನನ್ನು ಕುರಿತ ವಾಗ್ದತ್ತವನ್ನು ತಿಳಿದು ಕ್ರೀಸ್ತನ ಸುವರ್ತಮಾನವನ್ನು ಕೇಳುವದಕ್ಕೂ ಅಂಗೀಕರಿಸುವದಕ್ಕೂ ಸಿದ್ಧಮಾಡಲ್ಪಟ್ಟರು ಮತ್ತು ಅಜ್ಞಾನಿಗಳು ಸಾಧಾರಣವಾಗಿ ಒಬ್ಬ ಶ್ರೇಷ್ಠನಾದ ಬೋಧಕನು ದೇವರಿಂದ ಬಂದು ಸಕಲ ಮನುಷ್ಯರಿಗೆ ಹೊಸಮಾರ್ಗವನ್ನು ತಿಳಿಸಿ ಅದರಲ್ಲಿ ಅವರನ್ನು ನಡಿಸುವನೆಂದು ನಿರೀಕ್ಷಿಸಿದರು ಆದಕಾರಣ ಅದೇ ಕಾಲವು ಕಾಲದ ಪರಿಪೂರ್ಣತೆಯಾಗಿತ್ತು ಆದಿಯಿಂದ ನಿರ್ಣಯಿಸಲ್ಪಟ್ಟ ಕಾಲವೇ.

೧೮೩೯-೪೨ ವರ್ಷಗಳಲ್ಲಿ ನಡೆದ ಸಮಸ್ತ ಹಿಂದೂದೇಶದ ರೇವನಿ ಲೆಖ್ಖ.

ಆದಾಯ.

	೧೮೩೯—೪೦	೧೮೪೦—೪೧	೧೮೪೧—೪೨
ಬಂಗಾಳ.	೬೩೨೬೦೧೧೮	೬೬೩೪೧೫೮೫	೬೯೨೫೨೫೭೯
ಆಗ್ರಾ.	೩೮೭೨೮೬೨೨	೩೭೫೬೪೯೭೯	೪೨೧೮೪೬೦೪
ಮದ್ರಾಸ್.	೩೭೭೧೬೦೦೦	೩೮೦೦೮೯೮೯	೩೮೩೩೫೦೪೫
ಮುಂಬೈ.	೧೫೪೧೬೪೮೫	೧೯೪೯೭೮೩೧	೧೮೬೭೬೧೦೦
	೧೫೫೧೨೧೨೨೫	೧೬೧೪೧೩೩೮೪	೧೬೮೪೪೮೩೨೮
ಹಿಂದುಸ್ಥಾನದಲ್ಲಿಯೂ ಚೇನಾ ದೇಶದಲ್ಲಿಯೂ ಆದ ವ್ಯಾಪಾರದ ಆದಾಯ	೭೦೯೦೯	೧೪೦೪೫	೪೧೦೦೧
	೧೫೫೧೯೨೧೩೪	೧೬೧೪೨೭೪೨೯	೧೬೮೪೮೯೩೨೯
ಯಿಲ್ಲವೆ ಇಂಗ್ಲೀಷು ಹಣದಲ್ಲಿ ಪೌಂಡ್ಸ.	೧೪೫೪೯೨೬೨	೧೫೧೩೩೮೨೨	೧೫೭೮೬೪೯೯

ವೆಚ್ಚ

	೧೮೩೯—೪೦	೧೮೪೦—೪೧	೧೮೪೧—೪೨
ಬಂಗಾಳ.	೮೨೧೬೩೯೨೫	೮೭೩೪೦೦೫೨	೯೧೩೩೭೫೧೬
ಆಗ್ರಾ.	೭೮೩೮೫೯೨	೮೦೫೨೯೦೪	೮೫೮೧೪೯೫
ಮದ್ರಾಸ್.	೩೮೨೦೧೬೫೦	೩೫೭೫೫೪೬೮	೩೫೮೦೭೯೨೧
ಮುಂಬೈ.	೨೨೨೨೧೦೩೨	೨೦೯೭೪೭೧೬	೨೧೨೮೦೭೭೫
	೧೫೦೪೨೫೧೯೯	೧೫೨೧೨೩೨೪೦	೧೫೭೦೦೭೭೦೭
ಬಂಗಾಳದೇಶದಲ್ಲಿ ಹೇರಿಸಿದ ನೂರಕ್ಕೆ ಆರರ ಸಾಲಕ್ಕೋಸ್ಕರ ಆದ ಖರ್ಚು	೧೭೦೦೦		
	೧೫೦೪೪೨೧೯೯	೧೫೨೧೨೩೨೪೦	೧೫೭೦೦೭೭೦೭
ಯಿಲ್ಲವೆ ಇಂಗ್ಲೀಷು ಹಣದಲ್ಲಿ ಪೌಂಡ್ಸ	೧೪೧೦೩೯೫೬	೧೪೨೬೧೫೫೪	೧೪೭೧೯೪೭೨
ಇಂಗ್ಲಾಂಡ್ ದೇಶದಲ್ಲಿ ಆದ ಖರ್ಚು ಪೌಂಡ್ಸ.	೨೫೭೮೯೬೬	೨೬೨೫೭೭೬	೨೮೩೪೭೮೬
	೧೬೬೮೨೯೨೨	೧೬೮೮೭೩೩೦	೧೭೫೫೪೨೫೮
ಜಾಸ್ತಿ ಖರ್ಚು.	೨೧೦೭೬೮೦	೧೭೫೩೨೪೭	೧೭೬೫೭೦೧

ಲಾಭಕ್ಕಿಂತ ಖರ್ಚು ಜಾಸ್ತಿಯಾದದ್ದು ಕಾರಣವೇನೆಂದರೆ ಯೀವರ್ಷಗಳಲ್ಲಿ ಲೋರ್ದ್ ಆಕ್ಲಂದ್ ಬಹದೂರ್ ಮತ್ತು ಯಿವರ ಹಿಂದೆ ಬಂದ ಲೊರ್ದ್ ಎಲ್ಲೆನ್ ಬೋರೊ ಬಹದೂರ್ ಯಿವರಿಬ್ಬರು ಆಫಗಾನ್ ದೇಶದಲ್ಲಿಯೂ ಸಿಂಧುದೇಶದಲ್ಲಿಯೂ ಅನ್ಯಾಯದಿಂದ ನಡಿಸಿದ ಯುದ್ಧಗಳೇ ಯೀಯುದ್ಧಗಳು ಇಲ್ಲದವರಿಂದ ಹಿಂದುಸ್ಥಾನದ ಖಜಾನೆಗೆ ಗುಣ ಆಗುವದೆಂದು ತೋರುತ್ತದೆ ಲಾಕ್ತಿನ್ ಭಾಷೆಯಲ್ಲಿ ವೊಂದು ಗಾದೆಯುಂಟು ರಾಜರಿಗೆ ಭ್ರಾಂತಿ ಪ್ರಜೆಗಳಿಗೆ ಪೆಟ್ಟು ಯೀ ಗಾದಿಗೆ ತಕ್ಕ ದೃಷ್ಟಾಂತ ಮೇಲೆಯುಂಟು.

Printed at the Bellary Mission Press.

R. SAMPSON, PRINTER,—H. MOEGLING, EDITOR.

CANARESE NEWSPAPER.

ಕಂನಡ ಸಮಾಚಾರವು.

೧೮೪೪.

೧ನೆ ಪುಸ್ತಕ. ೧೯ ನೆ ಅಂಕೆ] ಬಳ್ಳಾರಿ ೧ನೆ ಡಿಸಂಬರ್ [ಟಪಾಲ ದಸ್ತೂರಿಕೂಡಿ ಕ್ರಯ ೨ ದುಡ್ಡು

History of the Church at Jerusalem.——Continued.

ಮೊದಲನೆ ಪುಸ್ತಕ ಯೆಪ್ಪತ್ತೊಂದನೆ ಪುಟದಲ್ಲಿ ತೀರದೆಯಿದ್ದ ಯೆರೂಸಲೇಮಿನಲ್ಲಿರುವ ಸಭೆಯ ಚರಿತ್ರೆಯು.

೩. ಆಗಲೇ ದೇವರು ತನ್ನ ಪ್ರಿಯವಾದ ಮಗನನ್ನು ತನ್ನ ಸಭೆಯ ಅಸ್ತಿವಾರವನ್ನು ಹಾಕುವದಕ್ಕೆ ಕಳುಹಿಸಿದನು. ಆದಕಾರಣ ದೇವರ ಮಗನಾದ ಯೇಸುಕ್ರೀಸ್ತನ ಚರಿತ್ರೆಯನ್ನು ಸಂಕ್ಷೇಪವಾಗಿ ಹೇಳತಕ್ಕದ್ದು. ರೋಮಾರಾಜ್ಯದ ಅರಸನ ಕೈಕೆಳಗಿದ್ದ ಹೇರೋದನೆಂಬ ಅರಸು ಯೆಹೂದಿಯರನ್ನು ಆಳಿಕೊಳ್ಳುವಾಗ ಯೇಸು ಅದ್ಭುತವಾಗಿ ದೇವರ ಸರ್ವಶಕ್ತಿಯಿಂದಲೂ ಪರಿಶುದ್ಧಾತ್ಮನಿಂದಲೂ ವೊಬ್ಬ ಕನ್ನಿಕೆಯ ಗರ್ಭದಲ್ಲಿ ಹುಟ್ಟಿಸಿದನು ಆಕೆಯು ತನ್ನ ಚೊಚ್ಚಲು ಮಗನನ್ನು ಬೇತ್ಲೆಹೇಮಿನಲ್ಲಿ ಹೆತ್ತಳು. ಆ ಕಾಲದ ಮೊದಲುಗೊಂಡು ಈವರೆಗೂ ೧೮೪೪ ವರುಷಗಳುಂಟಾಯಿತು ಆ ಕಾಲಕ್ಕಿಂತ ಮುಂಚೆ ಈ ಲೋಕಕ್ಕೆ ೪೦೦೪ ವರುಷಗಳುಂಟಾಗಿತ್ತು ದೇವದೂತರು ಆತನ ಹುಟ್ಟುವಿಕೆಯನ್ನು ಕುರುಬರಿಗೆ ಅದೇ ರಾತ್ರಿಯಲ್ಲಿ ತಿಳಿಸಿದರು ಪಂಡಿತರು ಮೂಡಲದೇಶದಿಂದ ಬಂದು ಆತನಿಗೆ ಕಾಣಿಕೆಗಳನ್ನು ಅರ್ಪಿಸುವದಕ್ಕೂ ಆತನನ್ನು ಆರಾಧನೆಮಾಡುವದಕ್ಕೂ ಆತನನ್ನು ಹುಡುಕಿದರು ಹೇರೋದನ ಕ್ರೂರತ್ವವನ್ನು ತಪ್ಪಿಸುವದಕ್ಕೆ ಆತನ ತಾಯಿಯ ಗಂಡನು ಆತನ ತಾಯಿಯನ್ನು ತೆಗದುಕೊಂಡು ಮಿಸ್ರಾಯಿಂ ದೇಶಕ್ಕೆ ವೋಡಿಹೋದನು. ಹೇರೋದನು ಮರಣಹೊಂದಿದ ತರುವಾಯ ಅವರು ತಮ್ಮ ದೇಶಕ್ಕೂ ತಮ್ಮ ವೂರಾದ ನಜರೇತಕ್ಕೂ ಬಂದು ಅಲ್ಲಿ ವಾಸಮಾಡಿದರು. ಯೇಸು ಹನ್ನೆರಡು ವರುಷಗಳುಳ್ಳವನಾಗಿ ತನ್ನ ತಂದೆತಾಯಿಗಳ ಸಂಗಡ ಯೆರೂಸಲೇಮಿಗೆ ಹೋಗಿ ದೇವಾಲಯದಲ್ಲಿ ಬೋಧಕರ ಸಂಗಡ ಬಹಳ ಬುದ್ಧಿಯಿಂದ ಪ್ರಸಂಗಿಸಿದನು. ಆತನು ತಿರಿಗಿ ಮನೆಗೆ ಹೋಗಿ ಯೋಸೇಫನ ಸಂಗಡ ಮರಕೆಲಸಮಾಡಿದನು. ಮುವ್ವತ್ತು ವರುಷಗಳುಳ್ಳವನಾಗಿ ಯೋಹಾನನಿಂದ ಬಾಪ್ತಿಸ್ಮ ಹೊಂದಿದನು. ಆಗಲು ಪರಿಶುದ್ಧಾತ್ಮನಿಂದ ಅಭಿಷೇಕಿಸಲ್ಪಟ್ಟು ನಾಲ್ವತ್ತು ದಿವಸಗಳ ಪರ್ಯಂತರ ಸೈತಾನನಿಂದ ಅರಣ್ಯದಲ್ಲಿ ಶೋಧಿಸಲ್ಪಟ್ಟನು. ಆ ಮೇಲೆ ಯೆಹೂದಿಯ ದೇಶವೆಲ್ಲಾದರಲ್ಲಿ ಸಂಚಾರಮಾಡಿ ಯೆಲ್ಲರಿಗೆ ಬೋಧನೆಮಾಡಿ ಸಮಸ್ತರೋಗಿಷ್ಟರನ್ನು ಕುರುಡರನ್ನು ಕುಂಟರನ್ನು ಅದ್ಭುತವಾಗಿ ಸ್ವಸ್ಥಮಾಡಿ ಸತ್ತವರನ್ನು ಯೆಬ್ಬಿಸಿ ತನ್ನ ದೈವತ್ವವನ್ನು ಸ್ಥಾಪಿಸಿ ತಾನು ದೇವರ ಮಗನೆಂದೂ ನಿಜವಾದ ಕ್ರೀಸ್ತನೆಂದೂ ನೇಮಿಸಲ್ಪಟ್ಟ ಜಗದ್ರಕ್ಷಕನೆಂದೂ ದೃಷ್ಟಾಂತವಾಗಿ ತೋರಿಸಿದನು. ಆತನು ಹನ್ನೆರಡುಮಂದಿ ಶಿಷ್ಯರನ್ನು ಆರಿಸಿತೆಗದುಕೊಂಡು ಅವರಿಗೆ ಅಪೋಸ್ತಲರೆಂಬ ಹೆಸರನ್ನಿಟ್ಟು ಯೆಹೂದಿಯ ದೇಶದಲ್ಲಿ ಸುವರ್ತಮಾನವನ್ನು ಪ್ರಸಂಗಿಸುವದಕ್ಕೂ ಆತನ ಹೆಸರಿನಲ್ಲಿ ಅದ್ಭುತಗಳನ್ನು ಮಾಡುವದಕ್ಕೂ ಅವರನ್ನು ನೇಮಿಸಿದನು. ಆತನು ತಾನೇ ಮೂರುವರುಷದ ಪರ್ಯಂತರ ಜನರನ್ನು ಬೋಧಿಸಿದನು. ಅನೇಕರು ಆತನ ಬೋಧನೆಯನ್ನು ಕೇಳುವದಕ್ಕೆ ಆತನನ್ನು ಹಿಂಬಾಲಿಸಿದದರಿಂದಲೂ ಆತನು ಕಪಟಸ್ಥರಾದ ಪರಿಸಯರಿಗೆ ವಿರೋಧವಾಗಿ ಸಾಕ್ಷಿಕೊಟ್ಟದ್ದರಿಂದಲೂ ಪರಿಸಯರ ನೀತಿಪಾಠಕರ ಹಿರಿಯರ ಹೊಟ್ಟೇಕಿಚ್ಚೂ ಕೋಪವೂ ಪ್ರೇರೇಪಿಸಲ್ಪಟ್ಟವು. ಆದಕಾರಣ ಅವರು ಆತನನ್ನು ಕೊಂದುಹಾಕುವದಕ್ಕೆ ಬಹಳ ಕ್ರೂರಮನಸ್ಸಿನಿಂದ ಹುಡುಕಿದರು. ಆದರೆ ದೇವರಿಂದ ನೇಮಿಸಲ್ಪಟ್ಟತಕ್ಕ ಸಮಯಕ್ಕಿಂತ ಮುಂಚೆ ಅವರಿಂದಲಾಗದು. ಆತಕ್ಕ ಸಮಯವು ಬಂದಾಗ ಯೇಸು ತನ್ನನ್ನು ಅವರ ಕೈಯ್ಯಲ್ಲಿ ವೊಪ್ಪಿಸಿದನು. ಆತನು ತನ್ನ ಮರಣವನ್ನೂ ಅದರ ರೀತಿಯನ್ನೂ ತನ್ನ ಪುನರುತ್ಥಾನವನ್ನೂ ತನ್ನ ಶಿಷ್ಯರಿಗೆ ಮುಂತಿಳಿಸಿದನು. ಆದಾಗ್ಯೂ ಅವರು ಆತನ ರಾಜ್ಯದ ಆತ್ಮಸ್ವಭಾವವನ್ನು ತಿಳಿಯದೇ ಆತನು ವೊಂದು ಲೋಕದ ರಾಜ್ಯವನ್ನು ಸ್ಥಾಪಿಸಬಂದನೆಂದು ನೆನಸಿದದರಿಂದ ಆತನ ಮಾತುಗಳನ್ನು ತಿಳಿಯದೇ ವಿಶ್ವಾಸಿಸದೇ ಯಿದ್ದರು. ಕಡೆಯಲ್ಲಿ ತನ್ನ ಹನ್ನೆರಡುಮಂದಿ ಶಿಷ್ಯರಲ್ಲಿ ವೊಬ್ಬನಾದ ಯೂದಾ ಇಸ್ಕರಿಯೋತನು ಪ್ರಧಾನಯಾಜಕರಿಗೂ ಹಿರಿಯರಿಗೂ ಮುವತ್ತು ರೂಪಾಯಿಗಳಿಗೋಸ್ಕರ ಆತನನ್ನು ಮಾರಿ ವೊಪ್ಪಿಸಿಕೊಟ್ಟನು. ಅವರು ಆತನನ್ನು ಅನ್ಯಾಯವಾಗಿ ವಿಚಾರಿಸಿ ಆತನನ್ನು ಶಿಲುಬೆಗೆ ಹಾಕುವದಕ್ಕೆ ಅಪ್ಪಣೆಕೊಡುವ ಹಾಗೆ ಪಿಲಾತನನ್ನು ಬಹಳ ಕೂಗುವದರಿಂದ ಸಮ್ಮತಿಪಡಿಸಿದರು. ಯೇಸು ಬಹಳ ಹಾಸ್ಯ ಹಿಂಸೆ ಕಷ್ಟ ಪಟ್ಟು ಶಿಲುಬೆಯ ಮೇಲೆ ಪ್ರಾಣಬಿಟ್ಟನು. ಆಗಲು ಆತನ ಶಿಷ್ಯರು ಬಹಳ ಭಯದಿಂದಲೂ ಬಹಳ ದುಃಖದಿಂದಲೂ ತುಂಬಲ್ಪಟ್ಟರು. ಆದರೆ ಅವನು ಸತ್ತವರೊಳಗಿಂದ ಯೆದ್ದು ಸಾರಿಸಾರಿಗೂ ಅವರಿಗೆ ಪ್ರತ್ಯಕ್ಷವಾಗಿ ಅವರನ್ನು ಸಮಾಧಾನಮಾಡುವದಕ್ಕೂ ದೇವರ ರಾಜ್ಯವನ್ನು ಕುರಿತು ಅವರಿಗೆ ಉಪದೇಶಮಾಡುವದಕ್ಕೂ ನಾಲ್ವತ್ತು ದಿವಸಗಳು ಈ ಲೋಕದಲ್ಲಿ ನಿಂತನು. ತರುವಾಯ ಆತನ ಶಿಷ್ಯರು ಬೇಥನಿಗೆ ಸೇರುವ ವೊಂದು ಪರ್ವತದ ಸಮೀಪದಲ್ಲಿ ಆತನ ಸಂಗಡ ಇರುವಾಗಲೂ ಅವರಿಗೆ ತನ್ನ ಕಡೆ ಆಜ್ಞೆಗಳನ್ನು ಕೊಟ್ಟು ಅವರನ್ನು ಆಶೀರ್ವದಿಸುವಾಗಲೂ ಪರಲೋಕಕ್ಕೆ ಯೆತ್ತಲ್ಪಟ್ಟನು.

History of the World.——Continued.

ಮೊದಲನೆ ಪುಸ್ತಕ ೬೬ನೆ ಪುಟದಲ್ಲಿ ತೀರದೆಯಿದ್ದ ಲೋಕದ ಚರಿತ್ರೆಯು.

FIRST PART——SECTION I.

PREPARATION OF THE EARTH TO BE THE ABODE OF MAN.

ಮೊದಲನೇ ವಿಭಾಗವು.

೧ ಅಧ್ಯಾಯ.

ಭೂಮಿಯು ಮನುಷ್ಯರ ವಾಸಸ್ಥಳ ವಾಗುವದಕ್ಕೆ ಸಿದ್ಧ ಮಾಡಲ್ಪಟ್ಟದ್ದು.

೬. ಮೂರನೇದಿವಸದಲ್ಲಿ ದೇವರು

೧) ಭೂಮಿಯನ್ನೂ ಸಮುದ್ರವನ್ನೂ ಬೇರೆಬೇರೇ ಮಾಡಿದನು.

ಇದು ಹ್ಯಾಗೆ ವುಂಟಾಯಿತೋ ನಮಗೆ ಗೊತ್ತಾಗಿ ತಿಳಿಯಲಿಲ್ಲ. ಆದರೆ ದೇವರು ಭೂಮಿಯ ಮೇಲ್ಭಾಗವನ್ನು ಅಲ್ಲಲ್ಲಿ ಎತ್ತರ ಮಾಡಿದದರಿಂದಲೂ ಅಲ್ಲಲ್ಲಿ ತಗ್ಗಾಗ ಮಾಡಿದದರಿಂದಲೂ ವುಂಟಾಯಿತೆಂದು ತೋರುತ್ತದೆ. ಹೀಗಾದರೆ ಎತ್ತರವಾದಸ್ಥಳಗಳಲ್ಲಿದ್ದ ನೀರು ಹರಿದುಹೋಗಿ ಕೆಳಗಿರುವ ತಗ್ಗುಗಳಲ್ಲಿ ಸೇರುವದು.

ದೇವರು ಭೂಮಿಯನ್ನೂ ಸಮುದ್ರವನ್ನೂ ಬೇರೆಬೇರೆ ಮಾಡಿದದರಿಂದ ಮನುಷ್ಯರು ವಾಸಮಾಡುವದಕ್ಕೆ ನೆಲವುಂಟಾದದ್ದಲ್ಲದೆ ಭೂಮಿಯ ಮೇಲ್ಭಾಗಕ್ಕೆ ಬಹು ಅಂದವಾಯಿತು. ಹ್ಯಾಗಂದರೆ ನೆಲವೂ ನೀರೂ ಬೇರೆಬೇರೆ ಆಗುವದಕ್ಕೆ ಭೂಮಿಯ ಮೇಲ್ಭಾಗವು ಅಲ್ಲಲ್ಲಿ ಎತ್ತರ ಮಾಡಲ್ಪಟ್ಟದ್ದರಿಂದಲೂ ಅಲ್ಲಲ್ಲಿ ತಗ್ಗಾಗ ಮಾಡಲ್ಪಟ್ಟದ್ದರಿಂದಲೂ ಬೆಟ್ಟಗಳೂ ತಗ್ಗುಗಳೂ ವುಂಟಾದವೆಂದು ಕಾಣಿಸುತ್ತದೆ. ಇವು ವುಂಟಾಗಿರುವದರಿಂದ ಭೂಮಿಗೆ ಬಹಳ ಅಲಂಕಾರ ವುಂಟಾಯಿತು. ಅದೆಲ್ಲಾ ಸಮವಾದ ನೆಲವಾಗಿದ್ದರೆ ನಮ್ಮ ಕಣ್ಣಿಗೆ ಅಷ್ಟು ಅಂದವಾಗಿ ತೋರುವದಿಲ್ಲ.

ಮತ್ತು ಬೆಟ್ಟಗಳೂ ತಗ್ಗುಗಳೂ ವುಂಟಾದದರಿಂದ ಭೂಮಿಯಲ್ಲಿರುವ ನೀರು ಸಂಚಾರಮಾಡುವದಕ್ಕೆ ಸಹಾಯವಾಯಿತು. ಭೂಮಿಯ ಮೇಲ್ಭಾಗವು ಸಮವಾದ ನೆಲವಾಗಿದ್ದರೆ ಅದರಲ್ಲಿರುವ ನೀರು ವೊಂದೇ ಸ್ಥಳದಲ್ಲಿ ನಿಲ್ಲುವದು. ಆದರೆ ಅಲ್ಲಲ್ಲಿ ಬೆಟ್ಟ ದಿನ್ನೆಗಳೂ ಅಲ್ಲಲ್ಲಿ ತಗ್ಗು ಬೈಲುಗಳೂ ಇರುವದರಿಂದ ಅದು ಸಂಚಾರ ಮಾಡುತ್ತದೆ. ಹ್ಯಾಗಂದರೆ ಎತ್ತರವಾದಸ್ಥಳಗಳಲ್ಲಿರುವ ನೀರು ಹರಿದುಹೋಗಿ ತಗ್ಗಾದಸ್ಥಳಗಳಲ್ಲಿ ಸೇರುತ್ತದೆ. ಅಲ್ಲಿಂದ ಅಂತರಿಕ್ಷದಿಂದ ಹೀರಿಕೊಳ್ಳಲ್ಪಟ್ಟು ಆಕಾಶಕ್ಕೆ ಏರಿ ಮಳೆಯಾಗಿ ಭೂಮಿಯಮೇಲೆ ಬೀಳುವದು. ಅದರಲ್ಲಿ ವೊಂದುಭಾಗವು ಭೂಮಿಯಲ್ಲಿ ಇಮರಿಹೋಗುವದರಿಂದ ವೊಳಗೆ ಜಲಬುಗ್ಗೆಗಳು ಹುಟ್ಟುತ್ತವೆ. ಇನ್ನೊಂದುಭಾಗ ತಗ್ಗಾದಸ್ಥಳಗಳಲ್ಲಿ ನಿಲ್ಲುವದರಿಂದ ಮನುಷ್ಯರಿಗೆ ಪ್ರಯೋಜನವಾಗಿರುವ ಕೆರೆಗಳು ವುಂಟಾಗುತ್ತವೆ. ಮಿಕ್ಕಾದನೀರು ಎತ್ತರವಾದಸ್ಥಳಗಳಿಂದ ಹರಿದುಹೋಗಿ ಕೂಡಿಕೊಂಡು ನದಿಗಳಾಗಿ ಸಮುದ್ರಕ್ಕೆ ಸೇರುತ್ತದೆ. ತರುವಾಯ ಅಂತರಿಕ್ಷದಿಂದ ತಿರಿಗಿ ಹೀರಿಕೊಳ್ಳಲ್ಪಟ್ಟು ತಿರಿಗಿ ಭೂಮಿಯಮೇಲೆ ಮಳೆಯಾಗಿಬಿದ್ದು ತಿರಿಗಿ ಅದೇಮೇರಿಗೆ ಸಂಚಾರಮಾಡಿ ಸಮುದ್ರಕ್ಕೆ ಸೇರುವದು. ಹೀಗೆ ಕ್ರಮವಾಗಿ ನಡೆಯುತ್ತಾ ಬರುವದರಿಂದ ಭೂಮಿಯ ಮೇಲ್ಭಾಗಕ್ಕೆಲ್ಲಾ ಆಗಾಗ್ಯೆ ತ್ಯಾವವಾಗುತ್ತದೆ. ಅಲ್ಲಲ್ಲಿ ಮನುಷ್ಯರ ಕೆಲಸಕ್ಕೆ ನೀರು ಸಿಕ್ಕುತ್ತದೆ. ಮಿಕ್ಕಾದ ನೀರು ಸಮುದ್ರಕ್ಕೆ ಸೇರಿ ಅಲ್ಲಿ ನಿಲ್ಲುತ್ತದೆ.

ಸಮುದ್ರದನೀರು ಯಾವಾಗಲೂ ವೊಂದೇ ಪ್ರಮಾಣವಾಗಿರುತ್ತದೆ. ಅದರ ನೀರು ನಾಲ್ಕನೇ ಪಾಲಷ್ಟು ಹೆಚ್ಚಿದರೆ ಅದು ಭೂಮಿಯಮೇಲೆ ಹರಿದು ಎತ್ತರವಾದ ಬೆಟ್ಟಗಳನ್ನಲ್ಲದೆ ಭೂಮಿಯ ಮೇಲಿರುವ ಸಮಸ್ತವನ್ನು ಮುಳಿಗಿಸಿ ಬಿಡುವದು. ಅದರನೀರು ನಾಲ್ಕನೇ ಪಾಲಷ್ಟು ಕಡಿಮೆಯಾದರೆ ದೊಡ್ಡನದಿಗಳು ಚಿಕ್ಕ ಕಾಲಿವೆಗಳಾಗುವವು. ಭೂಮಿಗೆ ಸಾಕಾದ ತ್ಯಾವವಾಗುವದಿಲ್ಲ. ಗಿಡಪೈ ಮೊದಲಾದವುಗಳು ವೊಣಗಿಹೋಗುವವು. ಹೊಲಗಳು ಹಸುರಾಗಿರದೆ ಹಾಳಾಗಿ ಬೀಳುವವು. ಆದದರಿಂದ ಸಮುದ್ರದನೀರು ಬಹಳವಾಗಿದ್ದಾಗ್ಯೂ ದೇವರು ಅದನ್ನು ತಕ್ಕ ಪ್ರಮಾಣವಾಗಿಯೇ ವುಂಟುಮಾಡಿದ್ದಾನೆಂದು ಕಾಣಿಸುತ್ತದೆ. ಅದು ಹೆಚ್ಚಿದರೂ ಕಡಿಮೆಯಾದರೂ ಸರಿಯಾಗಿರುವದಿಲ್ಲ.

ಭೂಮಿಯ ಮೇಲ್ಭಾಗವು ಸಮುದ್ರಗಳಿಂದ ಬೇರೆಬೇರೆ ದೇಶಗಳಾಗಿ ವಿಂಗಡವಾದಾಗ್ಯೂ ಆ ಆ ದೇಶಗಳ ಮಧ್ಯದಲ್ಲಿ ಸಮುದ್ರದನೀರು ಇರುವದರಿಂದ ಮನುಷ್ಯರು ಹಡಗಗಳಲ್ಲಿ ಸಂಚಾರಮಾಡಿ ವೊಬ್ಬರನ್ನೊಬ್ಬರು ನೋಡುವದಕ್ಕೂ ಅವರವರ ದೇಶಗಳ ವರ್ತಮಾನವನ್ನು ತಿಳಿಯುವದಕ್ಕೂ ವೊಬ್ಬರ ಸಂಗಡಲೊಬ್ಬರು ವ್ಯಾಪಾರ ನಡಿಸುವದಕ್ಕೂ ಆಗುತ್ತದೆ.

೨) ದೇವರು ಭೂಮಿಯಮೇಲೆ ಮರ ಪಲ್ಯ ಮೊದಲಾದವುಗಳನ್ನು ಬೆಳೆಯ ಮಾಡಿದನು.

ಇದಕ್ಕೆ ಮುಂಚೆ ಆತನು ವುಂಟುಮಾಡಿದವುಗಳು ಜೀವವಿಲ್ಲದ ವಸ್ತುಗಳಾಗಿದ್ದವು. ಆದರೆ ಮರಮೊದಲಾದವುಗಳಲ್ಲಿ ಜೀವವುಂಟು. ನಮ್ಮ ಶರೀರಗಳಲ್ಲಿ ಹ್ಯಾಗೆ ರಕ್ತವಿರುತ್ತದೋ ಅವುಗಳಲ್ಲಿ ರಸವುಂಟು. ನಮ್ಮಲ್ಲಿ ನಾಡಿಗಳು ಹ್ಯಾಗೆ ವ್ಯಾಪಿಸಿಕೊಂಡವೆಯೋ, ಹಾಗೆಯೇ ಅವುಗಳಲ್ಲಿರುವ ರಸ ಸಂಚಾರ ಮಾಡುವದಕ್ಕೆ ಮರಗಳಲ್ಲಿ ಚಿಕ್ಕ ಕಾಲಿವೆಗಳುಂಟು. ಎಲುಬುಗಳಿಗೆ ಬದಲಾಗಿ ನಾರುವುಂಟು. ಮಿದುಳಿಗೆ ಬದಲಾಗಿ ಕುಡುಬು (Pith) ವುಂಟು. ಚರ್ಮಕ್ಕೆ ಬದಲಾಗಿ ತಿಗಡಿ ವುಂಟು. ನಾವು ವುಸುರು ತೆಗದುಕೊಳ್ಳುವಹಾಗೆ ಅವು ತಮ್ಮ ಎಲೆಗಳಿಂದ ವಾಯುವನ್ನೂ ಬೆಳಕನ್ನೂ ತ್ಯಾವವನ್ನೂ ಹೀರಿಕೊಳ್ಳುತ್ತವೆ. ನಾವು ನಮ್ಮ ಬಾಯಿಗಳಿಂದ ಹ್ಯಾಗೆ ವೂಟಮಾಡುತ್ತೇವೋ ಅವು ತಮ್ಮ ಬೇರುಗಳಿಂದ ಭೂಮಿಯಲ್ಲಿರುವ ಬೇಕಾದ ಪದಾರ್ಥಗಳನ್ನು ಹೀರಿಕೊಳ್ಳುತ್ತವೆ. ನಾವು ವುಣ್ಣುವ ಅನ್ನ ಜೀರ್ಣವಾಗಿ ಹ್ಯಾಗೆ ರಕ್ತಮಾಂಸವಾಗುತ್ತದೋ ಅವು ಹೀರಿಕೊಳ್ಳುವ ಪದಾರ್ಥಗಳು ರಸವಾಗಿ ಅವುಗಳನ್ನು ಬೆಳೆಯ ಮಾಡುತ್ತವೆ.

ಮರ ಪಲ್ಯ ಧಾನ್ಯ ಮೊದಲಾದವುಗಳಿಗೆ ಜೀವವಿರುವದರಿಂದ ಮನುಷ್ಯರು ತಮ್ಮ ಆಹಾರಕ್ಕೆ ಬೇಕಾದಷ್ಟು ಬೆಳಿಸುವದಕ್ಕೆ ಆಗುತ್ತದೆ.

ಅವು ಜೀವರಾಶಿಗಳ ಆಹಾರಕ್ಕೆ ಬೇಕಾಗಿರುವದಲ್ಲದೆ ಅವುಗಳಿಂದ ಭೂಮಿಯು ಶೃಂಗರಿಸಲ್ಪಟ್ಟದೆ.

ಮತ್ತು ಮುಂಚೆ ವಿವರಿಸಿದ ಪ್ರಕಾರ ಅವುಗಳಿಂದ ಅಂತರಿಕ್ಷವು ಜೀವರಾಶಿಗಳು ಬದುಕುವದಕ್ಕೆ ವುಪಯೋಗವಾಗುತ್ತದೆ. ಹ್ಯಾಗಂದರೆ ಜೀವರಾಶಿಗಳಿಗೆ ಬೇಕಾಗಿರುವ ಒಕ್ಸಿಜನ್ (Oxygen) ವಾಯುವನ್ನು ಮರ ಮೊದಲಾದವುಗಳು ಹೊರಡಿಸುತ್ತವೆ. ಇದಲ್ಲದೆ ಅವುಗಳಿಗೆ ವುಪಯೋಗವಿಲ್ಲದ ವಾಯುಗಳನ್ನು ಇವು ಹೀರಿಕೊಳ್ಳುತ್ತವೆ.

೭. ನಾಲ್ಕನೇ ದಿವಸದಲ್ಲಿ ದೇವರು ಸೂರ್ಯಚಂದ್ರ ನಕ್ಷತ್ರಗಳನ್ನು ವುಂಟುಮಾಡಿದನು.

೧) ಇವುಗಳು ಇರುವರೀತಿ ಹ್ಯಾಗಂದರೆ.

ಸೂರ್ಯನು ಗ್ರಹಗಳಮಧ್ಯದಲ್ಲಿ ಇರಿಸಲ್ಪಟ್ಟದೆ. ಅದು ಬೆಂಕಿಅಲ್ಲ ದಟ್ಟವಾದ ಮಂಡಲವಾಗಿದೆ. (Opaque body) ಅದರ ಸುತ್ತಲು ಕಾಂತಿಯುಳ್ಳ ಅಂತರಿಕ್ಷವಿರುತ್ತದೆ. ಅದು ದಟ್ಟವಾದ ಮಂಡಲವಾಗಿದೆ ಯೆಂಬುವದಕ್ಕೆ ದೃಷ್ಟಾಂತ ವೇನಂದರೆ ದೂರ್ಬಿನಿಯಿಂದ ಅದನ್ನು ದೃಷ್ಟಿಸಿ ನೋಡುವಾಗ ಅದರಲ್ಲಿ ಕಪ್ಪಾದ ಮಚ್ಚೆಗಳು ತೋರುತ್ತವೆ. ಅದರಸುತ್ತಲಿರುವ ಅಂತರಿಕ್ಷವು ಅಲ್ಲಲ್ಲಿ ಬಹಳಸೂಕ್ಷ್ಮವಾಗಿರುವ ಕಾರಣ ವೊಳಗಿರುವ ಮಂಡಲವು ಈಚೆಗೆ ತೋರುವದರಿಂದ ಆ ಮಚ್ಚೆಗಳು ವುಂಟಾಗುತ್ತವೆಂದು ಕಾಣಿಸುತ್ತದೆ.

ಸೂರ್ಯನಸುತ್ತಲು ಹನ್ನೊಂದು ಗ್ರಹಗಳು ತಿರುಗುತ್ತವೆ. ಯಾವವಂದರೆ

೧. ಬುಧ	(Mercury.)	೨. ಶುಕ್ರ	(Venus.)
೩. ಭೂಮಿ	(The Earth.)	೪. ಮಂಗಳ	(Mars.)
೫. ವೆಸ್ತಾ	(Vesta.)	೬. ಜೂನೋ	(Juno.)
೭. ಸೀರಸ್	(Ceres.)	೮. ಪಲ್ಲಸ್	(Pallas.)
೯. ಬೃಹಸ್ಪತಿ	(Jupiter.)	೧೦. ಶನಿ	(Saturn.)
೧೧. ಹರ್ಷೆಲ್	(Hershel.)	ಇವುಗಳೇ.	

ಕೆಲವು ಗ್ರಹಗಳಿಗೆ ಅನೇಕ ಚಂದ್ರಗಳುಂಟು. ಈಚಂದ್ರಗಳು ತಾವು ಸೇರಿರುವಗ್ರಹಗಳನ್ನು ಸುತ್ತಿಕೊಳ್ಳುತ್ತವೆ. ಭೂಮಿಗೆ ವೊಂದು ಚಂದ್ರವುಂಟು. ಅದು ಭೂಮಿಗಿಂತ ಚಿಕ್ಕ ಮಂಡಲವಾಗಿದೆ.

ಗ್ರಹಗಳು ಸೂರ್ಯನಸುತ್ತಲು ತಿರುಗುವದಕ್ಕೆ ಕಾರಣವೇನಂದರೆ ದೇವರು ಅವುಗಳಿಗೆ ಮುಂದಕ್ಕೋಡುವ ಬಲವನ್ನು ಕೊಟ್ಟಿದ್ದಾನೆ. ಮತ್ತು ಅವುಗಳನ್ನು ಸೆಳೆಯುವಂಥಾ ಬಲವನ್ನು ಸೂರ್ಯನಲ್ಲಿ ಇರಿಸಿದ್ದಾನೆ. ಸೂರ್ಯನಲ್ಲಿರುವ ಸೆಳಿಯುವಿಕೆಯೂ ಗ್ರಹಗಳಲ್ಲಿರುವ ವೋಡುವಿಕೆಯೂ ಕೂಡುವದರಿಂದ ಸುತ್ತುತಿರುಗುತ್ತವೆ. ಕಾವಾತಿರುಗುವ ಹುಡರೆ ಇದಕ್ಕೆ ದೃಷ್ಟಾಂತವಾಗಿದೆ ಹ್ಯಾಗಂದರೆ ಹುಡರೆಮುಂದಕ್ಕೆ ವೋಡುವಾಗ ಆಳು ಅದರಹಗ್ಗವನ್ನು ಬಿಗಿಹಿಡಿಯುವದರಿಂದ ಸುತ್ತು ತಿರುಗುತ್ತದೆ.

ಈ ಗ್ರಹಗಳಲ್ಲದೆ ಲೆಖ್ಖವಿಲ್ಲದಂಥ ನಕ್ಷತ್ರಗಳುಂಟು. ನಮ್ಮ ಕಣ್ಣಿಗೆ ತೋರುವಂಥವುಗಳನ್ನು ಯೆಣಿಸುವದಕ್ಕಾಗದು. ದೂರ್ಬಿನಿಯಿಂದ ನೋಡಿದರೆ ಇನ್ನು ಅನೇಕ ತೋರುವವು. ಮತ್ತು ಠಕ್ಕಸಾಮಾನುವುಂಟು ಮಾಡುವದಕ್ಕೆ ನಮ್ಮ ಕೈಲಾದರೆ ಇವುಗಳಿಗೆ ಆಚೆ ಇನ್ನು ಅನೇಕ ತೋರುವವೆಂಬುವದಕ್ಕೆ ಸಂದೇಹವಿಲ್ಲ. ಈನಕ್ಷತ್ರಗಳೆಲ್ಲಾ ಲೋಕಗಳಾಗಿವೆ. ಅವು ಸೂರ್ಯಗಳಾಗಿದ್ದು ಬೇರೆಬೇರೆ ಗ್ರಹಗಳಿಗೆ ಪ್ರಕಾಶವನ್ನು ಕೊಡುತ್ತವೆಂದು ಕಾಣಿಸುತ್ತದೆ.

೨) ಸೂರ್ಯ ಚಂದ್ರ ನಕ್ಷತ್ರಗಳು ವುಂಟಾಗಿರುವದರಿಂದ ನಮಗೆ ಅನೇಕಪ್ರಯೋಜನಗಳುಂಟು. ಯಾವವಂದರೆ

೧] ಬೆಳಕುವುಂಟಾಗಿದೆ.

೨] ಹಗಲು ರಾತ್ರಿ ಕ್ರಮವಾಗಿ ವುಂಟಾಗುತ್ತವೆ.

೩] ಬೇರೆಬೇರೆ ತಿಂಗಳುಗಳಲ್ಲಿ ಬೇರೆಬೇರೆಋತುಗಳು ವುಂಟಾಗುತ್ತವೆ.

೪] ಅವುಗಳ ಚಲನೆಗಳನ್ನು ನೋಡುವದರಿಂದ ಕಾಲಕ್ರಮವನ್ನು ಯೆಣಿಸುವದಕ್ಕಾಗುತ್ತದೆ.

೫] ಅವುಗಳನ್ನು ದೃಷ್ಟಿಸಿ ನೋಡುವದರಿಂದ ದೇವರು ಮಹಾಶಕ್ತಿಯುಳ್ಳವನಾಗಿಯೂ ಮಹಿಮೆಯುಳ್ಳವನಾಗಿಯೂ ಇದ್ದಾನೆಂದು ತಿಳಿಯುತ್ತೇವೆ.

೩) ದೇವರು ನಾಲ್ಕನೇ ದಿವಸದವರಿಗೂ ಸೂರ್ಯ ಚಂದ್ರ ನಕ್ಷತ್ರಗಳನ್ನು ವುಂಟುಮಾಡದೆ ಹೋದರೆ ಮೊದಲನೇದಿವಸದಲ್ಲಿ ಬೆಳಕು ವುಂಟಾದದ್ದು ಹ್ಯಾಗೆಂದು ಕೆಲವರು ಆಕ್ಷೇಪಣೆ ಮಾಡಬಹುದು.

ಇದಕ್ಕೆ ವುತ್ತರವೇನಂದರೆ ನಾವು ಮುಂಚೆವಿವರಿಸಿದ ಪ್ರಕಾರ ಬೆಳಕು ಸೂರ್ಯನಿಂದಹೊರಡುವ ವಸ್ತುವಾಗಿರದೆ ಯೆಲ್ಲೆಲ್ಲಿಯೂ ವ್ಯಾಪಿಸಿರುವಂಥ ಆಕಾಶವಾಗಿದೆಯೆಂದು ತೋರುತ್ತದೆ. ಹೀಗಿದ್ದರೆ ಸೂರ್ಯನು ನಿರ್ಮಾಣಮಾಡಲ್ಪಡುವದಕ್ಕಿಂತ ಮುಂಚೆ ಬೆಳಕು ವುಂಟಾಗಿರಬಹುದಲ್ಲವೇ.

ಕೆಲವರು ಈ ಆಕ್ಷೇಪಣೆಗೆ ವುತ್ತರವಾಗಿ ಹೇಳುವದೇನಂದರೆ ಮೊದಲನೇ ದಿವಸದಿಂದ ಬೆಳಕು ವುಂಟಾಗಿದ್ದು ಯೆಲ್ಲೆಲ್ಲಿ ವ್ಯಾಪಿಸಿಕೊಂಡಿತ್ತೆಂದೂ ನಾಲ್ಕನೇ ದಿವಸದಲ್ಲಿ ಸೂರ್ಯನಲ್ಲಿ ಕೂಡಿಸಲ್ಪಟ್ಟಿತೆಂದೂ ಹೇಳುತ್ತಾರೆ.

ಇನ್ನೂ ಕೆಲವರು ದೇವರು ಭೂಮಿಯನ್ನು ಮನುಷ್ಯರ ವಾಸಸ್ಥಳವಾಗುವಹಾಗೆ ಸಿದ್ಧಮಾಡುವದಕ್ಕಿಂತ ಮುಂಚೆ ಸೂರ್ಯ ಚಂದ್ರ ನಕ್ಷತ್ರಗಳು ಇದ್ದವೆಂದು ನೆನಸುತ್ತಾರೆ. ಆದರೆ ಭೂಮಿಗೆ ವುಪಹತಿ ವುಂಟಾಗಿದ್ದ ಕಾರಣ ಅಂತರಿಕ್ಷವು ಮೊಬ್ಬಾದದರಿಂದ ಅವು ಮೊದಲು ಭೂಮಿಗೆ ಕಾಣಿಸಲಿಲ್ಲ. ನಾಲ್ಕನೇದಿವಸದಲ್ಲಿ ದೇವರು ಅಂತರಿಕ್ಷವನ್ನು ನಿರ್ಮಲವಾಗ ಮಾಡಿದ್ದರಿಂದ ಆಗ ತೋರಿದವೆಂದು ಅನ್ನುತ್ತಾರೆ.

An Account of Hindostan. —Continued.

ಮೊದಲನೆಪುಸ್ತಕ ೬೮ನೆ ಪುಟದಲ್ಲಿ ತೀರದೆಯಿದ್ದ ಹಿಂದುದೇಶದ ವರ್ಣನೆಯು.

ಅಕಬರನ ಮುಖ್ಯವಾದ ಶತ್ರುಗಳು ಬಹುಮನೀ ಅಪ್ಘಾನಿಯರು ಆದ ದಕ್ಷಿಣ ಅರಸುಗಳು ಯಿದ್ದರು ಯೀದಕ್ಷಿಣ ಭಾಗವು ೧೩೫೧ ನೆ ವರ್ಷದ ಆರಭ್ಯ ೧೫೨೬ ನೆ ವರ್ಷ ಪರಿಯಂತರ ಕೊಂಕಣ ಮತ್ತು ತೆಲಿಂಗದೇಶದ ಆರಭ್ಯ ತೆಲಿಂಗಾದೇಶದಪರಿಯಂತರ ವೊಂದೆರಾಜ್ಯವು ಆಗಿದ್ದು ಆಮೇಲೆ ಬೇಗಾರ ಬಿಜಾಪುರ ಗೋಲಕೊಂಡ ಅಹಂಮದನಗರ ಅಹಂಮದಾಬಾದ ಬೇದರ ಯೆಂಬ ೫ ರಾಜ್ಯಗಳಲ್ಲಿ ವಿಭಾಗಿಸಲ್ಪಟ್ಟಿತು. ಯೀ ೫ ರಾಜ್ಯಗಳಲ್ಲಿ ಸ್ವಲ್ಪಮಾತ್ರ ಅಕಬರನಿಗೆ ಸಿಕ್ಕಿತು ಅದೇನಂದರೆ ತಪತೀತೀರದಲ್ಲಿರುವಆಸೇರಗಿರಿಕೋಟೆ ದೌಲತಾಬಾದಿನ ದಕ್ಷಿಣದಲ್ಲಿರುವ ಅಹಂಮದನಗರ ಮೇಲಿನ ತಪತೀ ತೀರದಲ್ಲಿರುವ ಸಮಸ್ತ ಬೇರಾರ ಮೊದಲಾದ ಸೀಮೆಗಳಂನು ಯುದ್ಧಮಾಡಿ ತನ ರಾಜ್ಯಕ್ಕೆ ಸೇರಿಸಿದಮೇಲೆ ಅಕಬರನು ಆಗ್ರಾಕ್ಕೆ ತಿರುಗಿಬಂದು ೧೬೦೨ ನೆ ವ

ರ್ಷದಲ್ಲಿ ದಕ್ಷಿಣ ಮಹಾರಾಜನು ಯೆಂದು ತನಗೆ ಹೆಸರು ಯಿಟ್ಟುಕೊಂಡನು. ಆಗ್ರಾಪಟ್ಟಣಕ್ಕೆ ಸುತ್ತಲು ಕೆಂಪಾದ ಗೋಡೆಗಳನ್ನು ಮಾಡಿಸಿ ಅದರಲ್ಲಿ ಅನೇಕ ಅರಮನೆಗಳನ್ನು ಕಟ್ಟಿಸಿ ಮುಂಚಿನ ದೇವಪ್ರಯಾಗಸ್ಥಳದಲ್ಲಿ ಅಲಹಬಾದಕೋಟೆಯನ್ನು ಕಟ್ಟಿಸಿ ಅಕಬರನು ೧೬೦೫ ನೆ ವರ್ಷದಲ್ಲಿ ಸತ್ತುಹೋದನು. ಅವನ ಮೇಲೆ ಅವನ ಮಗನಾದ ಜೆಹಾನಗೀರನು ೧೬೦೫ ನೆ ವರ್ಷದಾರಭ್ಯ ೧೬೨೭ ನೆ ವರ್ಷ ಪರಿಯಂತರ ರಾಜ್ಯವನಾಳಿದನು. ಅವನು ಆಳುವಾಗ್ಯೆ ಯಿಂಗ್ಲೀಷುಜನರು ಬಂದು ೧೬೨೦ ನೆ ವರ್ಷದಲ್ಲಿ ಸುರತಿನಲ್ಲಿ ತಮ್ಮ ಮೊದಲನೆ ವ್ಯಾಪಾರದ ಮನೆ ಕಟ್ಟಿದರು. ಅವನ ಮೇಲೆ ೧೬೨೭ ನೆ ವರ್ಷದಾರಭ್ಯ ೧೬೫೮ ನೆ ವರ್ಷ ಪರಿಯಂತರ ಅವನ ಮಗನಾದ ಶಹಜಹಾನ ಆಳಿದನು. ಯಿವನಿಬ್ಬರಕೀರ್ತಿ ವಿದ್ಯವನ್ನು ರಕ್ಷಿಸುವದರಲ್ಲಿಯೂ ಆಶ್ಚರ್ಯವಾದ ಖರ್ಚು ಮಾಡುವದರಲ್ಲಿಯೂ ಯಿತ್ತು. ಶಹಜಹಾನ ಮೇಲೆ ೧೬೫೮ ನೆ ವರ್ಷದಾರಭ್ಯ ಅವರಂಗಸೇಬ ಮೋಸದಿಂದಲೂ ವಿಷದಿಂದಲೂ ತನ್ನ ತಂದೆ ಮೊದಲಾದಯೆಲ್ಲಾ ಸಂಬಂಧಿಕರನ್ನು ನಾಶನಮಾಡಿ ಮುಂಚಿನ ತುರುಕರ ಮರ್ಯಾದೆಪ್ರಕಾರ ರಾಜ್ಯಕ್ಕೆ ನಾನಾವಿಧವಾದ ಉಪದ್ರಗಳನ್ನು ಕೊಟ್ಟನು. ಅವನು ದಕ್ಷಿಣದೇಶವನ್ನು ಸಂಪಾದಿಸಿದ ಮೇಲೆ ಅದನ್ನು ಖಾಂದೇಶ ಅವರಂಗಾಬಾದ ಬೇದರ ಹೈದರಾಬಾದ ಬಿಜಾಪುರ ಬೇರಾರ ಯೆಂಬ ೬ ಸುಭೆಗಳಾಗಿ ವಿಭಾಗಿಸಿದನು. ಆದರೆ ಯೀ ಅವರಂಗಸೇಬನ ಆರಭ್ಯ ಮೊಗಲ್ ರಾಜ್ಯವು ಕೆಟ್ಟುಹೋಯಿತು. ಅದು ಹ್ಯಾಗೆಂದರೆ ಮಹಾರಾಷ್ಟ್ರದೇಶದಲ್ಲಿ ಉಳಿದ ರಾಜಪುತ್ರರೂ ಕ್ಷತ್ರಿಯರೂ ೧೬೭೪ ನೆ ವರ್ಷದಲ್ಲಿ ಶಿವಾಜಿರಾವ ಯೆಂಬ ಅಧಿಪತಿಯನ್ನು ಹೊಂದಿ ಮಹಾರಾಟರೆಂದು ತಮಗೆ ತಾವೆ ಹೇಳಿಕೊಂಡು ೧೦೦ ವರ್ಷ ಪರಿಯಂತರ ಮರಣಾಂತಹಗೆಯಿಂದ ಮುಸಲ್ಮಾನರ ರಾಜ್ಯಗಳಿಗೆ ನಾಶನ ಮಾಡಿದರು. ಯಿವರು ಕೆಲವುಸಾರಿ ಲಕ್ಷ ಸವಾರರಿಂದ ಹಿಂಡಾದವರಾಗಿ ಸಮುದ್ರ ತೆರೆಗಳಹಾಗೆಯೂ ಬಿರುಘಾಳಿಯ ಹಾಗೆಯೂ ಯೆಲ್ಲಾ ಸೀಮೆಗಳನ್ನು ಲೂಟಿಮಾಡಿ ನಿವಾಸಿಗಳನ್ನು ಹೈದುಕೊಂಡರು. ಯೆಲ್ಲಾದರು ಮುತ್ತಿಗೆಹಾಕುವ ಮಹಾರಾಜನ ಸೈನ್ಯಕ್ಕೆ ಆಹಾರಗಳು ಬಾರದಹಾಗೆ ಮಾಡಿ ೨೦ ವರುಷ ಪರಿಯಂತರ ರಾಜ್ಯದ ಸಮಸ್ತ ಸೀಮೆಗಳಲ್ಲಿ ಬರಗಾಲವನ್ನೂ ನಾಶನವನ್ನೂ ವುಂಟುಮಾಡಿದರು. ಅವರಂಗಸೇಬನ ಅಧಿಪತಿಗಳಲ್ಲಿ ವೊಬ್ಬನು ೬ ತಿಂಗಳೊಳಗೆ ಮರಾಟರ ಸಂಗಡ ೧೯ ಯುದ್ಧಮಾಡಿ ೨ ಸಾವಿರಹರದಾರಿ ಮಾರ್ಗ ಅವರಹಿಂದೆ ಹೋಗಿ ಬಂದನು. ಅವರಂಗಸೇಬನು ಸತ್ತಮೇಲೆ ಮೊಗಲ್ ರಾಜ್ಯವು ತನ ಹಿಂದೆ ಬರುವವರಕೈಯಲ್ಲಿ ಪೂರ್ಣವಾಗಿ ಕೆಟ್ಟುಹೋಯಿತು. ೧೧ ವರ್ಷದೊಳಗೆ ೫ ಮಹಾರಾಜರು ವುಂಟಾಗಿ ತಮ್ಮ ತಮ್ಮೊಳಗೆ ಜಗಳಾಡಿ ಸತ್ತುಹೋದರು. ಅದು ಹೊರ್ತು ಅದೆ ೧೧ ನೆ ವರ್ಷದೊಳಗೆ ರಾಜ್ಯವನ್ನು ಅಪೇಕ್ಷಿಸುವ ೬ ಮಂದಿಗೆ ನಾಶನವಾಯಿತು.

೧೭೧೭ ನೆ ವರ್ಷದಲ್ಲಿ ದಕ್ಷಿಣ ರಾಜ್ಯವು ಡಿಲ್ಲಿ ಅರಸನ ಮಂತ್ರಿಯಾಗಿದ್ದ ನಿಸಾಂಅಲ್ಮುಲ್ಕ ಯೆಂಬವನ ಕೈಯಲ್ಲಿ ಬಿತ್ತು. ಯಿವನು ಹೈದರಾಬಾದಸೀಮೆ ತನ ರಾಜ್ಯವನ್ನು ಸ್ಥಾಪಿಸಿದ್ದ ಯಿವನ ಸಂತಾನದವರು ಯೀಗಿನ ಪರಿಯಂತರವು ಅದನ್ನು ಆಳುತ್ತಾರೆ. ೧೭೩೭ ನೆ ವರ್ಷದಲ್ಲಿ ಫಾರ್ಸಿ ಅರಸನಾದ ನಾದಿರಖಾನ ಮೊಗಲ್ ರಾಜ್ಯದ ಮೇಲೆ ಬಿದ್ದು ಕಂದಾಹಾರ ದೇಶವನ್ನು ತೆಗದು ಲೆಕ್ಕಯಿಲ್ಲದ ಲೂಟಿವೈದನು. ೧೭೬೫ ನೆ ವರ್ಷದಲ್ಲಿ ಶಹಅಲೂಮ ವರ್ಷ ೧ ಕ್ಕೆ ೨೬ ಲಕ್ಷ ರೂಪಾಯಿ ಕೊಡುವ ಕಟ್ಟುಮಾಡಿ ಯಿಂಗ್ಲೀಷ ಜನರಿಗೆ ಸಮಸ್ತ ಬಂಗಾಲ್ ದೇಶವನ್ನು ವೊಪ್ಪಿಸಿ ಕೊಟ್ಟನು.

Native Education.

ವಿದ್ಯಾಲಾಭವು.

ಸರ್ ಹೆನ್ರಿ ಹಾರ್ದಿಂಜೆಂಬ ಗವರ್ನರ್ ಜೆನೆರಲ್ ಬಹದ್ದೂರವರು ಹೋದ ತಿಂಗಳಲ್ಲಿ ವಿದ್ಯಾಸಾಲೆ ಮೊದಲಾದವುಗಳ ವಿಷಯವಾಗಿ ಹೊಸಹುಕುಂ ಕೊಟ್ಟಿದ್ದಾರೆ. ಯೀಹುಕುಂ ಬಂಗಾಲ ಕೋಸ್ತಿನಲ್ಲಿ ಯೀಗಿನಾರಭ್ಯ ನಡಿಯುತ್ತದೆ ಸ್ವಲ್ಪ ಕಾಲವಾದ ಮೇಲೆ ಮದ್ರಾಸ ಕೋಸ್ತಿನಲ್ಲಿಯೂ ನಡದೀತು. ಆಹುಕುಮಿನ ಸಾರವೇನಂದರೆ ಗವರ್ನಮೆಂಟ್ ಸಾಲೆಗಳಲ್ಲಿಯೂ ಬೇರೆ ಯಾವಯಾವ ಸಾಲೆಗಳಲ್ಲಿಯೂ ವಿದ್ಯಾಭ್ಯಾಸಮಾಡಿದ ಹಿಂದೂದೇಶಸ್ಥರಿಗೆ ತಾವುಮಾಡಿದ ಕಷ್ಟದ ಫಲವು ಶಿಕ್ಕುವಹಾಗೆಯೂ ಅವರವರ ಚಮತ್ಕಾರವು ರಾಜಕಾರ್ಯಕ್ಕೆ ಉಪಯೋಗವಾಗುವಹಾಗೆಯೂ ಯಿನ್ನು ಮುಂದೆ ಆ ಯಾಯ ಸಾಲೆಗಳಲ್ಲಿ ವಿದ್ಯಾಭ್ಯಾಸಮಾಡಿದವರಿಗೆ ಅವರವರ ತಾರತಮ್ಯದ ಪ್ರಕಾರ ಚಾಕ್ರಿಗಳನ್ನು ಕೊಟ್ಟು ಅಂಥವರು ಯಿಲ್ಲದ ಪಕ್ಷದಲ್ಲಿಮಾತ್ರವೆ ಮತ್ತೊಬ್ಬರಿಗೆ ಕೊಡಬಹುದು.

ಯೀಬಗ್ಯೆ ಗವರ್ನಮೆಂಟ್ ಸಾಲೆಗಳ ಸೂಪರಿಂಟೆಂಡೆಂಟವರು ಯಿನ್ನೂ ಮುಂದೆ ವರ್ಷವರ್ಷಕ್ಕೆ ಮೊದಲನೆ ಜನವರಿಯಲ್ಲಿ ತಮ್ಮ ಸಾಲೆಗಳಲ್ಲಿ ಕಲಿತು ಚಾಕ್ರಿಗಳಿಗೆ ಯೋಗ್ಯರಾಗಿದ್ದ ಜನರ ಪಟ್ಟಿಯನ್ನು ಅಂಥವರ ಪ್ರಾಯ ಗುಣ ಬುದ್ಧಿ ಸ್ಥಿತಿ ಮೊದಲಾದವುಗಳನ್ನು ವಿವರಿಸಿ ಗವರ್ನಮೆಂಟಿಗೆ ತಿಳುಪಿಸಲಿಕ್ಕೆ ಹುಕುಂ ಆಗಿದೆ ಆದೇ ಪ್ರಕಾರ ಕೌನ್ಸಿಲ್ ಆಫ್ ಯೆದ್ಯುಕೇಶನ್ ಯೆಂಬ ವಿದ್ಯಾಸಾಲೆಗಳ ಸಭೆಯು ಬೇರೆ ಯಾವಯಾವ ಸಾಲೆಗಳನ್ನು ನಡಿಸುವದರಿಂದ ಮೇಲೆ ಹೇಳಿದ ಪಟ್ಟಿಗಳನ್ನು ತರಿಸಿ ಅವುಗಳ ವಿಷಯವಾಗಿ ವಿಚಾರಣೆಮಾಡಿ ಯೀ ಸಾಲೆಗಳಿಂದ ಬಂದ ಪಟ್ಟಿಗಳನ್ನು ಗವರ್ನಮೆಂಟಿನ ಸಾಲೆಗಳ ಪಟ್ಟಿಗಳಲ್ಲಿ ಸೇರಿಸಬೇಕು.

Printed at the Bellary Mission Press.

R. Sampson, Printer,—H. Moegling, Editor.

CANARESE NEWSPAPER.

ಕಂನಡಸಮಾಚಾರವು.

೧೮೪೪.

೧ ನೆ ಪುಸ್ತಕ. ೨೦ ನೆ ಅಂಕೆ] ಬಳ್ಳಾರಿ ೧೫ ನೆ ಡಿಸಂಬರ್ [ಟಪಾಲ ದಸ್ತೂರಿ ಕೂಡಿ ಕ್ರಯ ೨ ದುಡ್ಡು.

Kolapoor.

ಕೊಲ್ಲಾಪೂರ ವರ್ತಮಾನ.

ಕೊಲ್ಲಾಪೂರಿನಲ್ಲಿ ಪೂರ್ವದ ಮರಾಟಾಸಂಸ್ಥಾನವು ಉಂಟು ಯೀಗಿನ ಅರಸನ ತಂದೆಯು ಸತ್ತಮೇಲೆ ಇವನು ಸಂಣವನಾಗಿದ್ದರಿಂದ ಕುಂಪಣಿಯವರು ಆಸಂಸ್ಥಾನವಂನು ಆಳುತ್ತಿದ್ದರು ಅವನಿಗೆ ಪ್ರಾಯಬಂದಮೇಲೆ ಆಸಂಸ್ಥಾನವಂನು ತಿರಿಗಿ ಒಪ್ಪಿಸಿಕೊಟ್ಟರು. ಯಿವನು ಹುಡುಗಬುದ್ಧಿಯಿಂದ ತಂನ ಶಿಪ್ಪಾಜನರಿಗೆ ಪೀಡಿಸಿ ಯಾವವಿಧವಾಗಿಯೋ ಅವರಿಗೆ ಕೋಪವೆಬ್ಬಿಸಿದಮೇಲೆ ಅವರು ಯೀ ಅರಸನಿಗೆ ವಿರೋಧವಾಗಿ ಒಟ್ಟುಕೂಡಿ ಸಾಮನ್ ಗಿರಿ ಮೊದಲಾದ ಕೆಲವು ಕೋಟೆಗಳಂನು ಹಿಡಿದು ಕಾಟಕಾಯಿ ಯೆಬ್ಬಿಸಿರುತ್ತಾರೆ ಅವರು ರಾಜ್ಯದ ಮಂತ್ರಿ ಮೊದಲಾದ ಕೆಲವು ಶ್ರೇಷ್ಠರಂನು ಶೆರೆಯಲ್ಲಿಹಾಕಿ ಠಾಣೆದಾರರಿಗೂ ಶೇದೆಯವರಿಗೂ ಚಂನಾಗಿ ಹೊಡೆದು ತಂಮ ದೇಶದಿಂದ ಹಾರಾಗುವ ಟಪ್ಪಾಲಂನು ಕೆಲವುದಿವಸ ಪರ್ಯಂತರ ಹಿಡಿದು ಲೂಟಿಮಾಡಿ ಅನೇಕವಿಧವಾದ ಅಕ್ರಮಗಳಂನು ನಡಿಸಿ ಕುಂಪಣಿಯವರ ಪ್ರಾಂತ್ಯಗಳಂನು ಸಹಾ ದಾಟಿ ಬೆಳಗಾವಿಗೆ ಹೋಗಬೇಕೆಂದು ಹೇಳುತ್ತಿದ್ದರು. ಯೀಸಂಸ್ಥಾನದಲ್ಲಿ ಉಂಟಾದ ಗಲಿಬಿಲಿಯಂನು ನಿಲ್ಲಿಸಲಿಕ್ಕೆ ಪೂರ್ವದಲ್ಲಿ ಮಂಗಲೂರಿನಲ್ಲಿದ್ದ ಕರ್ನಲ್ ವಾಲಿಸ್ ಸಾಹೇಬರು ಸಾವಿರ ಶಿಪಾಯರಸಂಗಡ ಬೆಳಗಾವಿಯಿಂದ ಹೊರಟು ಸಾಮನ್ ಗಿರಿಗೆ ಬಂದರು. ಅಲ್ಲಿ ಮುಟ್ಟಿದಮೇಲೆ ದೊಡ್ಡ ಕಾಟಕಾಯಿಗೆ ಅವರ ಸಂಣ ಸೈನ್ಯವು ಸಾಲದೆಂದು ತಿಳಿದುಕೊಂಡು ಕೆಲವುದಿವಸ ಸುಂಮನೆ ಕೂತುಕೊಂಡರು ಹೀಗಿರಲಿಕ್ಕಾಗಿ ನಾಲ್ಕು ದಿಕ್ಕುಗಳಿಂದ ಕುಂಪಣಿಯವರ ಸೈನ್ಯಗಳು ಕಾಲದಾರಿಯಾಗಿಯೂ ಸಮುದ್ರಮಾರ್ಗವಾಗಿಯೂ ಅನೇಕ ಹಡಗಗಳ ಮೇಲೆಯೂ ಕೂಡಿಕೊಂಡು ಹತ್ತುದಿವಸಗಳೊಳಗೆ ಹತ್ತು ಹಂನೆರಡು ಸಾವಿರ ಮಂದಿ ಶಿಪಾಯಾರೂ ಜಾಂಗ್ಲೇರೂ ಸವಾರರೂ ಅಂಥಾ ಸೈನ್ಯಕ್ಕೆ ತಕ್ಕ ಫಿರಂಗಿ ಮೊದಲಾದ ಯುದ್ಧದ ಸಾಮಾನುಗಳು ತೆಗದುಕೊಂಡು ಸುತ್ತಲಿರುವ ದೇಶದಲ್ಲಿ ಕೂಡಾ ಬಂದಿದ್ದರು ಆಗ್ಯೆ ಸಾಮನ್ ಗಿರಿ ಕೋಟೆಯ ಗೋಡೆಗಳಂನು ದೊಡ್ಡ ಫಿರಂಗಿ ಗುಂಡುಗಳಿಂದ ಒಡೆದು ಮೇಲೇರಿ ಹದಿನೈದು ನಿಮಿಷದಲ್ಲಿ ಕೋಟೆಯಂನು ವಶಮಾಡಿ ತಪ್ಪಿಹೋಗಲಿಕ್ಕಿದ್ದ ಸುಮಾರು ಯಿಂನೂರು ಮಂದಿ ಶಿಪಾಯರಂನು ಸಂಹರಿಸಿ ಉಳಿದವರಂನು ಹಿಡಿದು ಅದೇ ಸಮಯದಲ್ಲಿ ಅಡವಿಯೊಳಗಿಂದ ಕೋಟೆಯೊಳಗಿರುವವರ ಸಹಾಯಕ್ಕೆ ಬಂದವರಂನು ಜೈಸಿ ನಾನೂರು ಯೆಪ್ಪತ್ತುಮಂದಿ ಶೆರೆಯವರಂನು ಬೆಳಗಾವಿಗೆ ಒಯ್ದರು. ಯೀಸಮಸ್ತಯುದ್ಧದಲ್ಲಿ ಕುಂಪಣಿಯವರ ಶಿಪಾಯರಲ್ಲಿ ಒಬ್ಬನೇ ಸತ್ತು ಜಾಂಗಲೆಯವರಲ್ಲಿ ಮೂರುಮಂದಿಗೆ ಘಾಯವಾಗಿತು. ಯೀ ಅಪಜಯಕ್ಕೋಸ್ಕರ ಕಾಟಕಾಯಿ ನಡಿಸಿದವರಿಗೆ ಬಹಳ ಭಯವುಂಟಾಯಿತೆಂದು ಕಾಣುತ್ತದೆ. ರಾಜ್ಯದ ಕ್ರಮವಂನು ಹೊಸ್ತಾಗಿ ಸ್ಥಾಪಿಸಲಿಕ್ಕೂ ಕೊಲ್ಲಾಪೂರ್ ಅರಸನಿಗೆ ಅಧಿಕಾರವಂನೂ ಅನ್ಯಾಯಪಟ್ಟ ಪ್ರಜೆಗಳಿಗೆ ನ್ಯಾಯವಂನೂ ಉಂಟುಮಾಡಲಿಕ್ಕೂ ಮುಂಚೆ ಆಫಗಾನಿಸ್ಥಾನ್ ಸಿಂಧುದೇಶಗಳಲ್ಲಿ ತಂನ ಧೈರ್ಯಕ್ಕೋಸ್ಕರವೂ ನೀತಿಗೋಸ್ಕರವೂ ಬಹುಮಾನಹೊಂದಿದ ಕರ್ನಲ್ ಔಟ್ರಮ್ ಸಾಹೇಬರು ಕೊಲ್ಲಾಪೂರಕ್ಕೆ ಹೋಗಿರುತ್ತಾರೆ. ಅವರ ಬುದ್ಧಿಯಿಂದಲೂ ನೀತಿಯಿಂದಲೂ ಕೋಟೆಗೆ ಅಂತ್ಯವೂ ದಿಕ್ಕಿಲ್ಲದ ಆದೇಶಕ್ಕೆ ಸಮಾಧಾನವೂ ಆದೀತೆಂದು ನೆನಸಬಹುದು.

ಕೊಲ್ಲಾಪೂರದ ಅರಸನಿಗೆ ತಿರುಗಿಬಿದ್ದ ಶಿಪಾಯರು ಹೊಕ್ಕೊಂಡಿರುವ ಸಾಮನ್ ಗಿರಿಯೆಂಬ ಕೋಟೆಯು ಕುಂಪನಿಯವರಿಗೆ ಶಿಕ್ಕಿತೆಂದು ಯಿದರ ಮೊದಲಿನ ವರ್ತಮಾನ ಕಾಗದದಲ್ಲಿ ಬರೆದಿರುತ್ತೆ. ತರುವಾಯ ಆ ಕಾಟಕಾಯಿ ಯೆಬ್ಬಿಸಿದವರು ಭದ್ರಗಿರಿಯೆಂಬ ಒಂದು ದೊಡ್ಡ ಕೋಟೆಯಲ್ಲಿ ಶೇರಿ ಕರ್ನಲ ಜಾನ್ ವಾಲಿಸ್ ಯೆಂಬ ಧೊರೆಯ ಆಜ್ಞೆಯೊಳಗಿರುವ ಶಿಪಾಯರು ಸಮೀಪಿಸುವಾಗ ಆ ಕೋಟೆಯನ್ನು ಸಹಾ ಕುಂಪನಿಯವರಿಗೆ ಒಪ್ಪಿಸಿದದರಿಂದ ಕುಂಪನಿಯವರು ಯೀಚೆ ಬಾಗಲಿಂದ ಒಳಗೆ ಪ್ರವೇಶಿಸುವಾಗ ಕೆಲವುನೂರು ಮಂದಿ ಆಚೆ ಬಾಗಲಿಂದ ಹೊರಟು ತಪ್ಪಿಹೋದರು. ಹೀಗಾಗಿ ಆ ಯುದ್ಧವು ಯಿವತಿಗೂ ಪೂರ್ಣವಾಗಿ ತೀರಲಿಲ್ಲ. ಆದದರಿಂದ ಆ ಕಾಟಕಾಯಿ ವಿದ್ಯಮಾನ ಶಾಂತೆಪಡಿಸಿ ಅದನ್ನೆಲ್ಲಾ ವಿಚಾರಣೆ ಮಾಡುವ ಬಗ್ಯೆ ಕಮೀಷನರಾದ ಕರ್ನಲ್ ಓವನ್ಸ್ ಯೆಂಬ ಧೊರೆಯು ಯಿಬ್ಬರು ಸವಾರರಸಂಗಡ ಪಾಲಕಿಯಲ್ಲಿ ಬರುವಾಗ ಕಾಟಕಾಯಿಯವರಾದ ಒಂದು ಗುಂಪು ಅವರನ್ನು ಸುತ್ತುಹಾಕಿ ಹೋಮೆರನ್ನು ಒಡಿಸಿ ಬೇರೆ ಜನರಿಂದ ಪಾಲಕಿ ಹೊರಸಿ ಆಧೊರೆಯನ್ನು ಪನಲಾಯೆಂಬ ಕೋಟೆಗೆ ಒಯ್ದರು. ಆದರು ಆ ಕೋಟೆಯೊಳಗೆ ಕೊಂಡುಹೋಗಿ ಬಹುಮಾನದಿಂದ ಯಿಟ್ಟದ್ದು ಹೊರ್ತು ಮೇಲೆ ಕಷ್ಟಪಡಿಸುವದಿಲ್ಲವೆಂದು ಆಧೊರೆಯು ಬರದು ಕಳುಹಿಸಿದ ಕಾಗದದಿಂದ ತಿಳಿಯಬಂತು. ಯೀ ಕಾಟಕಾಯಿ

ಯವರು ಸರದಾರರಲ್ಲಿ ದೊಡ್ಡವನೊಬ್ಬನು ತಂಮ ಕೈಯಲ್ಲಿ ಬಿದ್ದಮೇಲೆ ತಮ್ಮ ಕಾರ್ಯಕ್ಕೆ ಗುಣವಾಗುವದೆಂದು ನೆನಸಿ ಕೊಳ್ಳುವರು. ಯೀ ಕಾರಣದಿಂದ ಆಕಮಿಷನರ್ ಥೋರಿಯಸಂಗಡ ತಮ್ಮ ಉಪದ್ರಗಳಂನೆಲ್ಲಾ ಹೇಳಿ ಮಾನಮರ್ಯಾದೆ ಮಾಡುವರೆಂಬುವದರಲ್ಲಿ ಸಂದೇಹವೇನು ಯಿಲ್ಲ. ಆದಾಗ್ಯೂ ಕುಂಪನಿ ಸರಕಾರದವರು ಆಕೊಲ್ಲಾಪುರ ಅರಸನಿಗೆ ಪಿನ್‌ಶೇನ್ ಕೊಟ್ಟು ಅವನದೇಶವನ್ನು ತೆಗದು ತಾವೆ ಆಳಿಕೊಂಡರೇ ಹೊರ್ತು ಆದೇಶದ ರಹಿತರಿಗೆ ಗುಣವಾಗುವದಿಲ್ಲ. ಯಾಕೆಂದರೆ ಕುಂಪನಿಯವರ ವೊಳಗಾದ ಅರಸುಗಳ ಪ್ರಧಾನಿಗಳು ತಮ್ಮ ಪ್ರಜೆಗಳಿಗೆ ಭಯಪಡದೆ ತಮ್ಮ ಸೀಮೆಯಲ್ಲಿ ಕಾಟಕಾಯಿ ಹುಟ್ಟಿದರೆ ಕುಂಪನಿಯವರು ಸಹಾಯಮಾಡುವರೆಂದು ಮನಸುಬಂದಹಾಗೆ ಉಪದ್ರಕೊಡುತ್ತಾರೆ.

An Account of Hindostan.——Continued.

ಮೊದಲನೆ ಪುಸ್ತಕ ೭೬ ನೆ ಪುಟದಲ್ಲಿ ತೀರದೆಯಿದ್ದ
ಹಿಂದುದೇಶದ ವರ್ಣನೆಯು.

ನಂ ೧೧ ನೆ ಪೋರ್ತುಗೀಜನರು ಹಿಂದುದೇಶಕ್ಕೆ ಬಂದದ್ದು.

೧೪೯೮ ನೇ ವರ್ಷದ ಮೇತಿಂಗಳದ ೨೦ ತಾರಿಖಿನಲ್ಲಿ ವಾಸ್ಕೋದೆಗಾಮಾ ಅಫ್ರಿಕಾಖಂಡದ ಪೂರ್ವತೀರದಲ್ಲಿರುವ ಮೆಲಿಂದಾಪಟ್ಟಣದಿಂದ ಗುಜ್ಜರರಾದ ನಾವಿಕರಸಹಾಯದಿಂದ ೨೨ ದಿವಸದೊಳಗೆ ಸಮುದ್ರವಂನುದಾಟಿ ಕಲ್ಲಿಕೋಟೆಗೆ ಮುಟ್ಟಿದನು. ಅಲ್ಲಿಯಿರುವ ಸಮುದ್ರಿಯ ಅರಸನು ತಂನ ಕೊತ್ವಾಲನಂನು ವಾಸ್ಕೋದೇಗಾಮಾನಿಗೆ ಯೆದುರಾಗಿ ಕಳುಹಿಸಿದನು. ಯಿಬ್ಬರು ಪಾಲ್ಕಿಗಳಲ್ಲಿ ಕೂತುಕೊಂಡು ಅರಮನೆಗೆ ಹೋದರು. ಉತ್ತಮವಾದ ಕೋಟದಲ್ಲಿರುವಅರಮನೆಗೆಬಂದಮೇಲೆ ಬ್ರಾಹ್ಮಣನಾದಮಂತ್ರಿ ಆಪರದೇಶಿಯವನಾದ ವಾಸ್ಕೋದೇಗಾಮಾನಂನು ಬಹಳ ಸನ್ಮಾನಿಸಿ ಅರಸನಸಂನಿಧಾನಕ್ಕೆ ಕರತಂದನು. ಅರಸನು ಸ್ವಲ್ಪ ತಲೆತಗ್ಗಿಸಿ ಕುಂದ್ರಲಿಕ್ಕೆ ಅಪ್ಪಣೆಕೊಟ್ಟನು. ತಾನು ಜರತಾರಿ ತಿವಾಸಿಪೀಠದಮೇಲೇ ಕುಳಿತುಕೊಂಡು ವಜ್ರಮುತ್ತುಗಳ ರುಮಾಲು ಭಂಗಾರದ ಹೂವಿನವಸ್ತ್ರವು ಹಾಕಿಕೊಂಡು ಭಂಗಾರದ ಖಡಿಗಳಿಂದಲೂ ರತ್ನದ ವಂಟಿಗಳಿಂದಲೂ ಅಲಂಕರಿಸಿ ಯಿದ್ದನು. ಮರ್ಯಾದೆ ನೋಡುವಬಗ್ಯೆ ವೊಬ್ಬ ಬ್ರಾಹ್ಮಣನು ಯಿದ್ದನು. ಕಚೇರಿ ಗೋಡೆಗಳ ಹತ್ತರೆ ಭಂಗಾರದಪಾತ್ರೆಗಳು ಯಿದ್ದವು. ದೊಡ್ಡವರಲ್ಲಿ ವೊಬ್ಬನು ಭಂಗಾರದ ತಬಕಿನಲ್ಲಿ ತಾಂಬೂಲ ತಿರುಗಿತಿರುಗಿ ಕೊಡುತಿದ್ದನು. ಯೀಪ್ರಕಾರ ಪೋರ್ತುಗೀಯರಿಗೆ ಸಮುದ್ರಿಯರಾಜನು ದೊಡ್ಡಮರ್ಯಾದೆ ಕೊಟ್ಟನು. ಆದರೆ ಪೂರ್ವದಾರಭ್ಯ ಪೋರ್ತುಗೀಯರಿಗೆ ಶತ್ರುಗಳಾದ ತುರ್ಕರು ಯಿಲ್ಲಿಸಹಾ ಅವರಿಗೆ ವಿರೋಧವಾಗಿ ಬಂದರು. ವಾಸ್ಕೋದೇಗಾಮಾನು ಅದಂನು ನೋಡಿ ಯುಕ್ತಿಯಿಂದಲೂ ಬಲದಿಂದಲೂ ತಪ್ಪಿಹೋಗಿ ೧೫೦೦ ನೆ ವರ್ಷದಲ್ಲಿ ೧೩ ಹಡಗಗಳಸಂಗಡ ೧೫೦೨ ನೆ ವರ್ಷದಲ್ಲಿ ೨೦ ಹಡಗಗಳ ಸಂಗಡ ತಿರುಗಿಬಂದನು. ೧೫೦೩ನೆ ವರ್ಷದಲ್ಲಿ ೯-೫ನೆ ವರ್ಷದಲ್ಲಿ ೧೩ ೬ನೆ ವರ್ಷದಲ್ಲಿ ೧೩-೭ನೆ ವರ್ಷದಲ್ಲಿ ೨೦ ಹಡಗಗಳು ಬಂದವು.

ಅದೇಪ್ರಕಾರ ೫೦ ವರ್ಷ ಪರ್ಯಂತರ ಅವರು ನಡದುಕೊಂಡು ಬಂದಾಗ್ಯೆ ಹಿಂದು ದೇಶದಲ್ಲಿರುವ ಪೋರ್ತುಗೀಯರ ಶಕ್ತಿವು ಬಹಳ ಆಯಿತು. ೧೫೦೯ ನೆ ವರ್ಷದಲ್ಲಿ ಅವರು ಗುಜ್ಜರದಲ್ಲಿರುವ ದೀವಿನಲ್ಲಿ ಕೂತುಕೊಂಡು ಕೋಟೆಮಾಡಿ ಫಾರ್ಶಿ ಅರಬಿ ದೇಶಗಳಸಂಗಡ ವ್ಯಾಪಾರ ನಡಸಲಿಕ್ಕಾರಂಭಿಸಿದರು. ೧೫೧೦ ನೆ ವರ್ಷದಲ್ಲಿ ಶೂರನಾದ ಅಲ್‌ಫೊಂಸ ಅಲ್‌ಬೂಕೆರ್ಕ ಯೆಂಬವನು ಗೋವೆಪಟ್ಟಣವಂನು ವಶಮಾಡಿಕೊಂಡು ಅದಂನು ಪೋರ್ತುಗೀಯರ ರಾಜಧಾನಿಯಾಗಿ ಸ್ಥಾಪಿಸಿದನು. ಯೀಪ್ರಕಾರ ಪೋರ್ತುಗೀಯರ ಅಧಿಕಾರವು ಹೆಚ್ಚುವಾಗ್ಯೆ ಅವರ ಸದ್ಗುಣಗಳು ಕಡಮೆಯಾದವು. ಅವರ ಸೈನ್ಯಗಳಲ್ಲಿ ನಾನಾವಿಧವಾದ ಜನಸಮೂಹವು ಶೇರಿತು. ಅವರ ಅಧಿಪತಿಗಳೂ ಉದ್ಯೋಗಸ್ಥರೂ ದ್ರವ್ಯಲೋಭದಿಂದ ಕೆಟ್ಟುಹೋದರು. ಅವರ ಪಾದ್ರಿಯರು ಯೇಸುಕ್ರಿಸ್ತನ ಶಾಂತಿಯಾದಮಾತು ಹೇಳದೆ ಮಸೂದಿಗಳಂನು ಕೆಡಿಸಿ ಬ್ರಾಹ್ಮರಿಗೆ ಉಪದ್ರ ಕೊಟ್ಟರು. ದಕ್ಷಿಣದಲ್ಲಿರುವ ಸೂರ್ಯಾನಿಯರಿಗೆ ಪಾಷಂಡಿಗಳೆಂದು ಹೇಳಿ ಬಹಳ ಮಂದಿಯಂನು ಸುಟ್ಟುಬಿಟ್ಟರು. ಯೀಪ್ರಕಾರ ಪೋರ್ತುಗೀಯರು ಮಲಬಾರ ದೇಶವಂನು ಸಂಪಾದಿಸಿ ಲಂಕಾದಲ್ಲಿಯೂ ಚೋಳಮಂಡಲದಲ್ಲಿಯೂ ಪುಕ್ಕಲದಲ್ಲಿಯೂ ಬಂಗಾಲದಲ್ಲಿಯೂ ಜಾನೆಗಾವಿನಲ್ಲಿಯೂ ಮಲಾಕಾದಲ್ಲಿಯೂ ಮೊಲುಕ್ಕ ದ್ವೀಪಗಳಲ್ಲಿಯೂ ಚೀನಾದಲ್ಲಿಯೂ ಪಶ್ಚಿಮದಿಕ್ಕಿನಲ್ಲಿರುವ ಹೊರ್ಮೂಸಿನಲ್ಲಿಯೂ ಆದೇನಿನಲ್ಲಿಯೂ ಸುಖೋತ್ತರದಲ್ಲಿಯೂ ಮೊಜಂಬಿಕ್ಕಿನಲ್ಲಿಯೂ ಮದಗಾಸ್ಕಲಿನಲ್ಲಿಯೂ ಯೀ ಸಮಸ್ತಸ್ಥಳಗಳಲ್ಲಿ ಕುಳಿತುಕೊಂಡಿದ್ದರು. ಅವರ ಅಧಿಕಾರವು ದುಷ್ಟತನದಿಂದ ಸ್ವಲ್ಪಕಾಲದಲ್ಲಿ ಕೆಟ್ಟುಹೋಯಿತು. ಕೆಟ್ಟುಹೋಗುವಾಗ್ಯೆ ಅವರಸ್ಥಳಗಳಲ್ಲಿ ಹೊಲ್ಲಂದಿನವರು ಶೇರಿದರು. ಯಿವರು ಸಮುದ್ರ ಯುದ್ಧಗಳಲ್ಲಿಯೂ ವ್ಯಾಪಾರಕೆಲಸದಲ್ಲಿಯೂ ಅತಿಬುದ್ಧಿವಂತರಾಗಿ ೧೫೯೪ ನೆ ವರ್ಷದಲ್ಲಿ ಹಿಂದುದೇಶಕ್ಕೆ ಹೋಗಲಿಕ್ಕೆ ಆರಂಭಮಾಡಿ ಪೋರ್ತುಗೀಯರಂನು ಯಾವಾ ದ್ವೀಪದಿಂದಲೂ ೧೬೩೯ ನೆ ವರ್ಷದಲ್ಲಿ ಮೊಲುಕ್ಕಿ ದ್ವೀಪಗಳಿಂದಲೂ ಹೊರಡಿಸಿ ೧೬೪೧ ನೆ ವರ್ಷದಲ್ಲಿ ಮಲಾಕವಂನೂ ಆಮೇಲೆ ಚೋಳಮಂಡಲದಲ್ಲಿಯೂ ಕೇರಳದಲ್ಲಿಯೂ ಯಿರುವ ಕೋಟೆಗಳಂನೂ ಅಳವೆಗಳಂನೂ ಸಂಪಾದಿಸಿಕೊಂಡು ಗೋವೆಸೀಮೆಯಂನೂ ದೀವುದ್ವೀಪವಂನೂ ಮಾತ್ರ ಪೋರ್ತುಗೀಯರ ಕೈಯಲ್ಲಿ ಬಿಟ್ಟರು. ೧೬೬೬ ನೆ ವರ್ಷದಾರಭ್ಯ ಅವರು ಮಹಾ ದೊಡ್ಡವರಾಗಿ ಪೂರ್ವದಲ್ಲಿರುವ ಯೆಲ್ಲಾ ದೇಶಗಳಸಂಗಡ ಅತಿಲಾಭ ಉಳ್ಳವ್ಯಾಪಾರವಂನು ನಡಸುತ್ತಿದ್ದರು. ೧೭೦೦ ನೆ ವರ್ಷದಾರಭ್ಯ ಅವರೊಳಗೆ ಹುಟ್ಟಿದ ದ್ರೋಹಗಳಿಂದಲೂ ಉಂಟಾದ ಅಪಜಯಗಳಿಂದಲೂ ಅವರು ಕೆಟ್ಟುಹೋಗಿ ೧೭೮೧ ನೆ ವರ್ಷದಲ್ಲಿ ಯಿಂಗ್ಲಿಷಜನರಸಂಗಡ ಮಾಡಿದ ಯುದ್ಧದಲ್ಲಿ ಅಪಜಯವಾಗಿದ್ದು ಲಂಕವಂನೂ ಅಫ್ರಿಕಾದೇಶದ ದಕ್ಷಿಣತುದಿಯಾದ ಕೇಪಶೀಮೆಯಂನೂ ಕಳಕೊಂಡು ಪೂರ್ವಸಮುದ್ರದಲ್ಲಿರುವ ದ್ವೀಪಗಳಂನು ಮಾತ್ರ ಉಳಿಸಿಕೊಂಡರು.

History of the World.——Continued.

ಮೊದಲನೇ ಪುಸ್ತಕ ೭೭ ನೇ ಪುಟದಲ್ಲಿ ತೀರದೆಯಿದ್ದ ಲೋಕದ ಚರಿತ್ರೆಯು.

FIRST PART.——SECTION I.

PREPARATION OF THE EARTH TO BE THE ABODE OF MAN.*

ಮೊದಲನೇ ವಿಭಾಗವು.

೧. ಅಧ್ಯಾಯವು.

ಭೂಮಿಯು ಮನುಷ್ಯರ ವಾಸಸ್ಥಳವಾಗುವದಕ್ಕೆ ಸಿದ್ಧಮಾಡಲ್ಪಟ್ಟದ್ದು. *

ಇದನ್ನು ಕುರಿತು ಸತ್ಯವೇದದಲ್ಲಿರುವ ಮೋಶೆಯ ೧ ನೇ ಪುಸ್ತಕದಿಂದ (೧. ಅ. ೧—೧೫ ವ.) ತಿಳಿಯುತ್ತೇವೆ. ಇದರಿಂದ ನಮಗೆ ತೋರುವದೇನಂದರೆ.

೧. ಮೊದಲು ಭೂಮಿಯು ಹಾಳಾಗಿಯೂ ಬೀಳಾಗಿಯೂ ಇತ್ತು.

ಅದರ ಮೇಲ್ಭಾಗವು ಇನ್ನು ನೆಟ್ಟಗೆ ಮಾಡಲ್ಪಡದೆ ಇದ್ದದರಿಂದಲೂ ಮರ ಪಲ್ಯ ಮೊದಲಾದವುಗಳು ನಿರ್ಮಾಣ ಮಾಡಲ್ಪಡದೆ ಇದ್ದದರಿಂದಲೂ ಈಗಿರುವ ಅಂದವು ಆಗಲು ಇರಲಿಲ್ಲವು. ಭೂಮಿಯು ಅರೂಪಕವಾಗಿಯೂ ಬರೇದಾಗಿಯೂ ಇತ್ತು.

೨. ಆಗಲು ದೇವರಾತ್ಮನು ಜಲಗಳ ಮೇಲೆ ಚಲಿಸುತ್ತಾ ಇದ್ದನು.

ಮೂಲ ಭಾಷೆಯಲ್ಲಿರುವ ಮಾತಿನ ಅರ್ಥವನ್ನು ನೋಡಿದರೆ ಕೋಳಿ ತನ್ನ ಮೊಟ್ಟೆಗಳನ್ನು ಕಾವಗುವಹಾಗೆ ಆತನು ನೀರಿನ ಮೇಲೆ ಚಲಿಸುತ್ತಾ ಇದ್ದನು.

ಹಿಂದೂ ಪುರಾಣಗಳಲ್ಲಿ ಲೋಕದ ಸೃಷ್ಟಿಯನ್ನು ಕುರಿತು ಅನೇಕ ಕಲ್ಪನಾಕಥೆಗಳು ಇದ್ದರೂ ಸೃಷ್ಟಿಸುವ ಕಾಲದಲ್ಲಿ ದೇವರಾತ್ಮನು ನೀರಿನ ಮೇಲೆ ಚಲಿಸಿದನೆಂಬುವ ಕಾರ್ಯವನ್ನು ಅವುಗಳಲ್ಲಿ ಬರೆದಿದ್ದಾರೆ ಮನುಸ್ಮೃತಿ ಸೃಷ್ಟಿ ಅಧ್ಯಾಯ ೧೦ ನೇ ಶ್ಲೋಕದಲ್ಲಿ ಹೇಳಿರುವದೇನಂದರೆ.

ಶ್ಲೋಕ. ಆಪೋನಾರಾ ಇತಿ ಪ್ರೋಕ್ತಾ ಆಪೋವೈ ನರಸೂನವಃ। ತಾಯದಸ್ಯಾಯನಂಪೂರ್ವಂ ತೇನನಾರಾಯಣಸ್ಮೃತಃ॥

ಟೀಕು. ಜಲಗಳು ನರವೆಂಬ ದೇವರಾತ್ಮನಿಂದ ಹುಟ್ಟಿದ ಕಾರಣ ಅವುಗಳಿಗೆ ನಾರವೆಂಬ ಹೆಸರುಂಟು. ಆ ಜಲಗಳು ಆತನಿಗೆ ಪೂರ್ವದಲ್ಲಿ ಪ್ರವರ್ತಿಸುವ ಸ್ಥಳವಾಗಿದ್ದದರಿಂದ ಆತನಿಗೆ ನಾರಾಯಣ ಅದೇನಂದರೆ ನೀರಿನಲ್ಲಿ ಪ್ರವರ್ತಿಸುವವನೆಂಬ ಹೆಸರುಂಟು.

೩. ದೇವರು ಆರು ದಿವಸಗಳಲ್ಲಿ ಸಮಸ್ತವನ್ನೂ ನಿರ್ಮಿಸಿದನು.

ಆತನಿಗೆ ಚಿತ್ತವಾದರೆ ಸಮಸ್ತವನ್ನೂ ಒಂದೇ ಕ್ಷಣದಲ್ಲಿ ನಿರ್ಮಿಸುವದಕ್ಕೆ ಆಗುವದು. ಆದರೆ ದೇವರು ಯಾವಾಗಲು ತನ್ನ ಕಾರ್ಯಗಳನ್ನೂ ಕ್ರಮವಾಗಿ ನಡಿಸುತ್ತಾನೆ. ಯಾವ ವಸ್ತುವಾದರು ಹುಟ್ಟಿದಾಗಲೇ ಸಂಪೂರ್ಣವಾದದ್ದಾಗಿರುವದಿಲ್ಲ. ಸೂರ್ಯನು ಉದಯಿಸುವ ಕ್ಷಣದಲ್ಲಿಯೇ ಮಧ್ಯಾಹ್ನವಾಗುವದಿಲ್ಲ ಅವನು ಬರ ಬರ ಮೇರುತ್ತಾ ಬರುವದರಿಂದ ಮಧ್ಯಾಹ್ನವಾಗುತ್ತದೆ. ಭೂಮಿಯಲ್ಲಿ ಬೀಜವನ್ನು ಬಿತ್ತಿದಾಗಲೇ ಮರವಾಗುವದಿಲ್ಲ ಅದು ಮೊಳೆತು ಬರಬರ ಬೆಳೆದು ಕಡೆಗೆ ಮರವಾಗಿ ಫಲವನ್ನು ಕೊಡುವದು. ಮನುಷ್ಯನು ಹುಟ್ಟಿದಾಗಲೇ ದೊಡ್ಡವನಾಗಿರುವದಿಲ್ಲ ಅವನು ಬರ ಬರ ಬೆಳೆದು ಪೂರ್ಣಬಲವೂ ಬುದ್ಧಿಯೂ ಉಳ್ಳವನಾಗುತ್ತಾನೆ. ಹೀಗೆಯೆ ದೇವರು ಮೊದಲು ಸಮಸ್ತವನ್ನು ಒಂದೇ ನಿಮಿಷದಲ್ಲಿ ಉಂಟುಮಾಡಲಿಲ್ಲ. ಭೂಮಿ ಮನುಷ್ಯರ ವಾಸಸ್ಥಳವಾಗುವದಕ್ಕೆ ಕ್ರಮಕ್ರಮವಾಗಿ ಸಿದ್ಧಮಾಡುತ್ತಾ ಬಂದನು.

೪. ಮೊದಲನೇ ದಿವಸದಲ್ಲಿ ದೇವರು.

೧) ಬೆಳಕನ್ನು ಉಂಟುಮಾಡಿದನು.

ಬೆಳಕಿನ ಸ್ವಭಾವವು ವಿದ್ವಾಂಸರಿಗೆ ಗೊತ್ತಾಗಿ ತಿಳಿಯುವದಿಲ್ಲ ಸೂರ್ಯನಿಂದ ಹೊರಡುವ ವಸ್ತುವಾಗಿದೆಯೆಂದು ಸಾಧಾರಣ ಮನುಷ್ಯರಿಗೆ ತೋರುವದು.

ಆದರೆ ಹೀಗಲ್ಲವೆಂದು ಅನೇಕ ವಿದ್ವಾಂಸರು ನೆನಸುತ್ತಾರೆ. ಅವರು ನೆನಸುವದೇನಂದರೆ ಬೆಳಕು ಎಲ್ಲೆಲ್ಲಿಯು ವ್ಯಾಪಿಸಿರುವ ಒಂದುವಿಧವಾದ ಆಕಾಶವಾಗಿದೆ ಅದು ಸುಮ್ಮನಿರುವಾಗ ಕತ್ತಲಾಗಿದೆ ಆದರೆ ಸೂರ್ಯನಿಂದಲಾದರೂ ನಕ್ಷತ್ರಗಳಿಂದಲಾದರೂ ಬೆಂಕಿ ಮೊದಲಾವುಗಳಿಂದಲಾದರೂ ಅಲ್ಲಾಡಿಸಲ್ಪಡುವಾಗ ಪ್ರಕಾಶವಾಗುತ್ತದೆ.

ಬೆಳಕು ನಮ್ಮ ಸುತ್ತಲಿರುವ ವಸ್ತುಗಳನ್ನು ನೋಡುವದಕ್ಕೆ ಅಗತ್ಯವಾಗಿರುವದಲ್ಲದೆ ಅದರಿಂದ ಇನ್ನು ಅನೇಕ ಪ್ರಯೋಜನಗಳುಂಟು.

೧] ಇದರಿಂದ ಬೇರೆ ಬೇರೆ ವಸ್ತುಗಳಿಗೆ ಬೇರೆ ಬೇರೆ ಬಣ್ಣಗಳು ಆಗುತ್ತವೆ. ಬೆಳಕಿನಲ್ಲಿ ಏಳು ವಿಧವಾದ ಬಣ್ಣಗಳುಳ್ಳ ಕಿರಣಗಳು ಕೂಡಿಸಲ್ಪಟ್ಟವೆ. ಅವು ಯಾವವಂದರೆ ರಕ್ತವರ್ಣ (Red) ಕಿತ್ತಳೆ ಹಣ್ಣಿನ ವರ್ಣ (Orange) ಹಳದಿವರ್ಣ (Yellow) ಹಸುರುವರ್ಣ (Green) ನೀಲವರ್ಣ (Blue) ನೀಲಿಬೀಜದವರ್ಣ (Indigo) ಕೆಂಪುವರ್ಣ (Violet) ಇವುಗಳೇ. ಬೆಳಕಿನಲ್ಲಿ ಈ ಏಳು ವಿಧವಾದ ಕಿರಣಗಳುಂಟೆಂದು ಕಾಮನಬಿಲ್ಲು ತೋರುವದರಿಂದ ತಿಳಿಯಬಹುದು ಹ್ಯಾಗಂದರೆ ಸೂರ್ಯನಿರುವ ದಿಕ್ಕಿಗೆ ಎದುರಾಗಿ ಮಳೆ ಬೀಳುವಾಗ ಸೂರ್ಯನ ಕಿರಣಗಳು ಹನಿಗಳಮೇಲೆ ಬೀಳುವದರಿಂದ ಆ ಕಿರಣಗಳು ಪ್ರತ್ಯೇಕವಾಗುತ್ತವೆ. ಆಗ ನಮ್ಮ ದೃಷ್ಟಿ ಮಳೆಗೂ ಸೂರ್ಯನಿಗೂ ಮಧ್ಯದಲ್ಲಿಬಂದರೆ ಆ ಹನಿಗಳಿಂದ ಪ್ರತ್ಯೇಕಿಸಲ್ಪಟ್ಟಿರುವ ಕಿರಣಗಳನ್ನು ಬೇರೆಬೇರೆ ಬಣ್ಣಗಳುಳ್ಳ ಬಿಲ್ಲಾಗಿ ನೋಡುತ್ತೇವೆ.

ಬೆಳಕಿನಿಂದ ಬೇರೆ ಬೇರೆ ವಸ್ತುಗಳಿಗೆ ಬೇರೆ ಬೇರೆ ಬಣ್ಣಗಳು ಆಗುವವು. ಹ್ಯಾಗಂದರೆ ಕೆಲವು ವಸ್ತುಗಳು ಒಂದು ಕಿರಣವನ್ನೂ ಕೆಲವು ಎರಡನ್ನೂ ಕೆಲವು ಮೂರನ್ನೂ ಕೆಲವು ನಾಲ್ಕನ್ನೂ ಕೆಲವು ಐದನ್ನೂ ಕೆಲವು ಆರನ್ನೂ ಕೆಲವು ಏಳನ್ನೂ ಹೀರಿಕೊಳ್ಳುತ್ತವೆ. ವಸ್ತು ಏಳು ವಿಧ ವರ್ಣಗಳುಳ್ಳ ಕಿರಣಗಳನ್ನು ಹೀರಿಕೊಂಡರೆ ಕಪ್ಪಾಗುತ್ತದೆ. ಅದು ಹಳದಿ ಕೆಂಪು ನೀಲವಾಗಿ

---

* This portion of the History was omitted by mistake. It should have been inserted before the part contained in No. 19. and that part should have been numbered Section II. and not Section I.

* ಇದರಲ್ಲಿ ಹೇಳಿರುವ ಕಾರ್ಯಗಳು ೧೯ ನೇ ಕಾಗದದಲ್ಲಿರುವ ಕಾರ್ಯಗಳಿಗೆ ಮುಂಚೆ ಸೇರತಕ್ಕವು ಆ ಕಾಗದದಲ್ಲಿರುವ ಅಧ್ಯಾಯಕ್ಕೆ ೧ ನೇ ಅಧ್ಯಾಯವಲ್ಲಾ ೨ ನೇ ಅಧ್ಯಾಯವೆಂದು ಬರಿಯತಕ್ಕದ್ದು

ರುವ ಕಿರಣಗಳನ್ನು ತಕ್ಕ ಪ್ರಮಾಣವಾಗಿ ಹೀರಿಕೊಂಡರೆ ಇವು ಕೂಡುವದರಿಂದ ಬಿಳುಪಾಗುತ್ತದೆ. ವಸ್ತುಗಳು ಹೀರಿಕೊಳ್ಳದ ಕಿರಣಗಳು ಹಿಂದಿರಿಗಿಸಲ್ಪಟ್ಟು ನಮ್ಮ ಕಣ್ಣಿಗೆ ಅದರದರ ಬಣ್ಣವಾಗಿ ಪ್ರಕಾಶಿಸುವವು.

೨] ಬೆಳಕು ಇಲ್ಲದಿದ್ದರೆ ಹೂವುಗಳಿಗೆ ವಾಸನೆ ಯಿರುವದಿಲ್ಲ.

೩] ಬೆಳಕು ಇಲ್ಲದಿದ್ದರೆ ಮರ ಫಲ್ಯ ಮೊದಲಾದವುಗಳಿಗೆ ಬಲಹೀನತ್ವವಿರುವದು.

೪] ಬೆಳಕು ಇಲ್ಲದಿದ್ದರೆ ಮನುಷ್ಯರ ಮುಖದಲ್ಲಿರುವ ಕಳೆ ಕುಂದಿಹೋಗುವದು.

ಬೆಳಕಿಗೂ ಕಾಂಕೆಗೂ (Heat) ಸಮ್ಮಂಧ ವುಂಟು. ಇದಕ್ಕೆ ದೃಷ್ಟಾಂತವೇನಂದರೆ ಅನೇಕವಸ್ತುಗಳಿಗೆ ಕಾಂಕೆ ಹೆಚ್ಚಾಗುವಾಗ ಬೆಳಕು ಹುಟ್ಟುವದು. ಕಬ್ಬಿಣವನ್ನು ಕುಲಿಮೆಯಲ್ಲಿಹಾಕಿ ಕಾಸಿದರೆ ಅದರಲ್ಲಿ ಕಾಂಕೆಬರಬರ ಹೆಚ್ಚಿ ಕೆಂಪಾಗುವಾಗ ಅದರಸುತ್ತಲು ಬೆಳಕು ತೋರುವದು. ಆದದರಿಂದ ದೇವರು ಬೆಳಕನ್ನೂ ಉಂಟುಮಾಡಿದನೆಂದು ಹೇಳಲ್ಪಡುವಾಗ ಆಗಲೇ ಕಾಂಕೆ ಹುಟ್ಟಿತೆಂದು ತಿಳಿಯಬೇಕು.

೨) ಹಗಲನ್ನೂ ರಾತ್ರಿಯನ್ನೂ ಪ್ರತ್ಯೇಕ ಮಾಡಿದನು.

ಬಂಡಿಚಕ್ರದಹಾಗೆ ಭೂಮಿಯು ವೊಂದುಸುತ್ತು ತಿರುಗುವದರಿಂದ ಹಗಲೂ ರಾತ್ರಿಯೂ ಆಗುತ್ತವೆ. ಭೂಮಿಹೀಗೆ ತಿರುಗುತ್ತಿರುವಾಗ ಯಾವ್ಯಾವ ಸ್ಥಳಗಳು ಸೂರ್ಯನಿಗೆ ಎದುರಾಗಿ ಬರುವವೋ ಆ ಸ್ಥಳಗಳಲ್ಲಿ ಬೆಳಕಾಗುತ್ತದೆ. ಯಾವ್ಯಾವಸ್ಥಳಗಳು ಹಿಂದಕಡೆ ನಿಲ್ಲುತ್ತವೆಯೋ ಆಸ್ಥಳಗಳಲ್ಲಿ ಕತ್ತಲಾಗುತ್ತದೆ. ಹಗಲೂ ರಾತ್ರಿಯೂ ಹೀಗೆಕ್ರಮವಾಗಿ ಉಂಟಾಗುವದರಿಂದ ಮನುಷ್ಯರಿಗೆ ಬಹಳ ಪ್ರಯೋಜನವುಂಟು. ತಮ್ಮ ತಮ್ಮ ಕೆಲಸಗಳನ್ನು ನಡಿಸ ತಕ್ಕಷ್ಟು ಕಾಲ ಬೆಳಕುಂಟು. ಮತ್ತು ನಿದ್ರೆಮಾಡತಕ್ಕಷ್ಟು ಕಾಲ ಕತ್ತಲುಂಟು.

೫. ಎರಡನೇದಿವಸದಲ್ಲಿ ದೇವರು.

೧) ಅಂತರಿಕ್ಷವನ್ನು (Atmosphere) ಉಂಟುಮಾಡಿದನು. ಅಂತರಿಕ್ಷವು ಹೆಚ್ಚುಕಡಿಮೆ ೫೦ ಮೈಲುಗಳೆತ್ತರವಾಗಿ ಭೂಮಿಯ ಮೇಲುಗಡೆಯನ್ನುಸುತ್ತಿಕೊಂಡದೆ.

ಆ ಅಂತರಿಕ್ಷವು ಮೂರು ಸೂಕ್ಷ್ಮವಾಯುಗಳಿಂದ (Gases) ಉಂಟುಮಾಡಲ್ಪಟ್ಟದೆ. ಅವುಯಾವವಂದರೆ ಒಕ್ಸಿಜನ್ (Oxygen) ನೈತ್ರೋಜನ್ (Nitrogen) ಕಾರ್ಬೋನಿಕಾಸಿಡ್ (Carbonic acid) ಎಂಬವುಗಳು.

ಇವುಗಳಲ್ಲಿ ಮನುಷ್ಯರು ಮೃಗಗಳು ಮೊದಲಾದ ಜೀವರಾಶಿಗಳು ಬದುಕುವದಕ್ಕೆ ಒಕ್ಸಿಜನ್ ಎಂಬುವದು ಅಗತ್ಯವಾಗಿದೆ. ನೈತ್ರೋಜನ್ ಕಾರ್ಬೋನಿಕಾಸಿಡ್ ಎಂಬವುಗಳು ಪ್ರಾಣಕ್ಕೆ ಉಪಯೋಗವಾದವುಗಳಲ್ಲಾ. ಆದದರಿಂದ ಸಕಲಜೀವರಾಶಿಗಳು ಉಸುರು ಬಿಡುವಾಗ ನೈತ್ರೋಜನ್ ಕಾರ್ಬೋನಿಕಾಸಿಡ್ ಎಂಬವುಗಳನ್ನು ಹೊರಡಿಸುತ್ತವೆ. ಉಸುರು ತೆಗದುಕೊಳ್ಳುವಾಗ ಒಕ್ಸಿಜನ್ ಎಂಬುವದನ್ನು ಹೀರಿಕೊಳ್ಳುತ್ತವೆ. ಇದು ಒಳಗೆ ಸೇರುವದರಿಂದ ಕೆಟ್ಟುಹೋಗಿರುವ ರಕ್ತವನ್ನು ನಿರ್ಮಲವಾಗ ಮಾಡುತ್ತದೆ.

ನೈತ್ರೋಜನ್ ಕಾರ್ಬೋನಿಕಾಸಿಡ್ ಎಂಬ ಸೂಕ್ಷ್ಮವಾಯುಗಳು ಜೀವಕ್ಕೆ ವಿರೋಧವಾದವುಗಳಾಗಿದ್ದರೆ ಸಕಲಜೀವರಾಶಿಗಳು ಯಾವಾಗಲು ಇವುಗಳನ್ನು ಹೊರಡಿಸುತ್ತಾ ಬರುವದರಿಂದ ಭೂಮಿಯ ಸಮೀಪದಲ್ಲಿರುವ ಅಂತರಿಕ್ಷ ಕೆಟ್ಟುಹೋಧೀತೆಂದು ತೋರುವದು. ಆದರೆ ಇದು ಆಗದಹಾಗೆ ಜೀವರಾಶಿಗಳಿಗೆ ಉಪಯೋಗವಿಲ್ಲದ ಸೂಕ್ಷ್ಮವಾಯುಗಳನ್ನು ಮರ ಫಲ್ಯ ಮೊದಲಾದವುಗಳು ಹೀರಿಕೊಳ್ಳುತ್ತವೆ. ಮತ್ತು ಅವು ಜೀವರಾಶಿಗಳಿಗೆ ಅಗತ್ಯವಾಗಿರುವ ಒಕ್ಸಿಜನ್ ವಾಯುವನ್ನು ಹೊರಡಿಸುತ್ತವೆ.

ಸಮುದ್ರದ ನೀರು ಮೀನುಗಳನ್ನು ಸುತ್ತಿಕೊಂಡಿರುವಹಾಗೆ ಅಂತರಿಕ್ಷವು ನಮ್ಮನ್ನು ಸುತ್ತಿಕೊಳ್ಳುತ್ತದೆ. ಅದು ಹೀಗೆ ನಮ್ಮನ್ನು ಸುತ್ತಿಕೊಂಡು ಎಲ್ಲಾಕಡೆಗಳಲ್ಲಿ ನಮ್ಮ ಶರೀರಗಳನ್ನು ಅದಮದಿದ್ದರೆ ಅವು ಉಬ್ಬಿಕೊಳ್ಳುವವು.

ಅಂತರಿಕ್ಷವು ಇಲ್ಲದಿದ್ದರೆ ಶಬ್ದವಾಗುವದಿಲ್ಲ. ನಾವು ಮಾತಾಡುವಾಗಲಾಗಲಿ ಏನಾದರು ಹೊಡಿಯುವಾಗಲಾಗಲಿ ಹತ್ತಿರವಿರುವ ವಾಯುವನ್ನು ಅಲ್ಲಾಡಿಸುತ್ತೇವೆ. ಆವಾಯು ಸಮೀಪದಲ್ಲಿರುದನ್ನು ಅಲ್ಲಾಡಿಸುವದು ಈವಾಯು ಆಚೆಯಿರುವದನ್ನು ಅಲ್ಲಾಡಿಸುವದು ಹೀಗೆ ಅಲ್ಲಾಡಿಸಲ್ಪಟ್ಟ ವಾಯು ಕಿವಿಯಲ್ಲಿ ಬಿದ್ದು ಅದರಲ್ಲಿ ಬಡಿಯುವದರಿಂದ ಶಬ್ದವಾಗುತ್ತದೆ.

೨). ಮೇಘಗಳು ಅಂತರಿಕ್ಷಕ್ಕೆ ಸಮ್ಮಂಧವುಳ್ಳವುಗಳಾಗಿವೆ.

ಅಂತರಿಕ್ಷವು ಸಮುದ್ರ ನದಿ ಕೆರೆ ಮೊದಲಾದವುಗಳಿಂದ ಯಾವಾಗಲು ಆವರಿಯನ್ನು (Vapour) ಹೀರಿಕೊಳ್ಳುತ್ತಾ ಬರುತ್ತದೆ. ಆ ಆವರಿ ಮೇಲಕ್ಕೇರಿ ಕೂಡುವದರಿಂದ ಮೇಘಗಳು ವುಂಟಾಗುತ್ತವೆ. ಇವಕ್ಕೆ ತಂಪಾದ ಘಾಳಿ ತಗಲುವಾಗ ಆ ಆವರಿ ನೀರಾಗಿ ಭಾರವಾಗುವದರಿಂದ ಹನಿಗಳಾಗಿ ಭೂಮಿಯ ಮೇಲೆ ಬೀಳುತ್ತದೆ.

ಹೀಗೆ ಅಂತರಿಕ್ಷವು ಆವರಿಯನ್ನು ಬಹಳವಾಗಿ ಹೀರಿಕೊಳ್ಳುತ್ತದೆ. ಇದಕ್ಕೆ ದೃಷ್ಟಾಂತವೇನಂದರೆ ಮೆಡಿತೆರ್ರೇನಿಯನ್ (Mediterranean) ಸಮುದ್ರದಅನೇಕದೊಡ್ಡನದಿಗಳು ತಮ್ಮ ನೀರನ್ನು ಯಾವಾಗಲು ಹೊಯ್ಯುತ್ತಾ ಬಂದಾಗ್ಯೂ ಆಸಮುದ್ರದನೀರು ಹೆಚ್ಚಾಗುವದಿಲ್ಲ ಆನದಿಗಳು ಸಮುದ್ರದಲ್ಲಿ ಎಷ್ಟು ನೀರು ಹೊಯ್ಯುತ್ತವೆಯೋ ಅಷ್ಟುನೀರು ಅಂತರಿಕ್ಷವು ಆವರಿಯಾಗಿ ಹೀರಿಕೊಳ್ಳುತ್ತದೆಂದು ಕಾಣಿಸುತ್ತದೆ.

೩) ಘಾಳಿಯು ಅಂತರಿಕ್ಷಕ್ಕೆ ಸಮ್ಮಂಧವಾದ್ದದು.

ಅಂತರಿಕ್ಷದ ವಾಯು ಕಾಂಕೆಯಿಂದ ಉಬ್ಬಿಕೊಂಡರೆ ಅದು ಬಿಟ್ಟಿರುವ ಸ್ಥಳದಲ್ಲಿ ಬೇರೆ ವಾಯು ತ್ವರಿಯಾಗಿ ಸೇರುವದು. ಇದರಿಂದ ಅಂತರಿಕ್ಷವು ಅಲ್ಲಾಡಿಸಲ್ಪಟ್ಟು ಘಾಳಿ ವುಂಟಾಗುತ್ತದೆ.

ಘಾಳಿ ಬೀಸುವದರಿಂದ ಭೂಮಿಯಿಂದ ಏರುವ ನಾತಗಳು ಚದರಿಸಲ್ಪಟ್ಟು ಅಂತರಿಕ್ಷವು ನಿರ್ಮಲವಾಗುತ್ತದೆ. ಮತ್ತು ಘಾಳಿಯಿಂದ ಮೇಘಗಳು ಬಡಿಯಲ್ಪಟ್ಟು ಅಲ್ಲಲ್ಲಿ ಬೇಕಾದಸ್ಥಳಗಳಲ್ಲಿ ಮಳೆಯನ್ನು ಸುರಿಸುತ್ತವೆ.

Printed at the Bellary Mission Press.

R. SAMPSON, PRINTER,—H. MOEGLING, EDITOR.

...ಕಂನಡ ಸಮಾಚಾರವು.

೧೮೪೪.

ಬಳ್ಳಾರಿ ೧ನೆ ಮಾರ್ಚಿ [ಟಪಾಲ ದಸ್ತೂರಿ ಕೂಡಿ. ಕ್ರಯ ೨ ದುಡ್ಡು.

...ಮಂಗಳೂರ ಸಮಾಚಾರ
...ಛಾಪಿಸಲ್ಪಟ್ಟ ಕನ್ನಡ
...ಮೈಸೂರು ತುಮಕೂರು
...ಮಂಗಳೂರ ಮೊದಲಾದ
...ಗದುಕೊಳ್ಳುತ್ತಾ ಬಂದರು
...ವಾಗ್ಯೆ ನಾವು ಮಾಡಿದ
...ಡೆಯುವದೋ ಯೇನೋ
...ದೇಶಸ್ಥರಲ್ಲಿ ಅನೇಕರಿಗೆ
...ವನ್ನು ಓದುವದರಲ್ಲಿ
...ಸಮಾಚಾರ ಕಾಗದವನ್ನು
...ನ್ನು ಕಲ್ಲಿನಲ್ಲಿ ಛಾಪಿಸಬೇ
...ಯಲ್ಲಿ ಅಚ್ಚುಪಡಿಮಾಡ

...ಯಗಳು ಶೇಖರಿಸಿ ಆಶಾ
...ಸಬಹುದಾದ ಬೇರೆ ಸ್ಥಳ
...ಡಿಸುವಂಥಾದ್ದು ಅವಶ್ಯ

...ಪವರು ಶುದ್ಧವಾದ ಮೊಳೆ
...ನ್ನು ತೆರೆದು ಹೆಚ್ಚಾಗಿ ಮಾ
...ನಸಬಹುದು ಯೇನಂದರೆ
...ಸ್ವಲ್ಪಕಡಿಮೆ ಮೊದಲಿನ
...ಹೆಚ್ಚುವರ್ತಮಾನವನ್ನು
...ಸುಗಳನ್ನು ಬರೆಯುವದ

...ಸ್ತು ಯಿಂನು ಮುಂದೆ ಒಂ
...ನಾವೇ ಟಪಾಲ ದಸ್ತುರಿ
...ಗಳನ್ನು ಟಪಾಲ ದಸ್ತೂರಿ
...ವರು ಯಾವರಿಗೆ ಮಾಡಿದ
...ಹೂರಿನಲ್ಲಿ ಯಾ ಕಾಗದಗ
...ಬಳ್ಳಾರಿ ಜಿಲ್ಲೆಮೊದಲಾದ
...ವನ್ನು ಬಳ್ಳಾರಿಯಲ್ಲಿರುವ
...ಗೂ ತಲಪಿಸಿದರೆ ಆದೀತು.
...ರಿಯುವವರಿಗೂ ಓದು

ಭೂಗೋಳದ ಸಾರವು.

ಮೊದಲನೆ ಸಂಧಿ.

ನಾವು ನಿವಾಸವಾಗಿರುವ ಭೂಮಿಯು ಸೂರ್ಯ ಚಂದ್ರ ನಕ್ಷತ್ರಾದಿಗಳ ಪ್ರಕಾರ ಒಂದು ನಕ್ಷತ್ರವಿರುವದರಿಂದ ಭೂಗೋಳದಲ್ಲಿ ಮೊದಲು ನಕ್ಷತ್ರ ವಿದ್ಯೆಯನ್ನು ಸಂಕ್ಷೇಪವಾಗಿ ವಿವರಿಸಬೇಕಾದ್ದು ಆಕಾಶವೆಂಬ ಮಿತಿಯಿಲ್ಲದ ಸ್ಥಾನದಲ್ಲಿ ಪ್ರಕಾಶಿಸುವಂಥಾ ತಾರಗಳು ನಾಲ್ಕು ತರವಾಗಿವೆ ಯಿವು ಯಾವ್ಯಾವೆಂದರೆ ಸ್ಥಾವರನಕ್ಷತ್ರಗಳೂ ಗ್ರಹಗಳೂ ಚಂದ್ರರೂ ಧೂಮಕೇತುಗಳೂ.

ಹೆಚ್ಚುಕಡಿಮೆಯಿಲ್ಲದೆ ನಿತ್ಯವಾಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಸ್ಥಿರವಾಗಿ ನಿಂತಿರುವ ತಾರಗಳಿಗೆ ಸ್ಥಾವರ ನಕ್ಷತ್ರಗಳೆಂಬ ಹೆಸರು ಯಿವುಗಳ ಒಂದೊಂದರಲ್ಲಿ ಅದರದರ ಸ್ವಕೀಯವಾದ ಬೆಳಕಿನ ಪ್ರಕಾಶವುಂಟು ಯಿವುಗಳು ಯೆಷ್ಟೋ ಯೀ ಭೂಮಿಗೆ ಯೆಷ್ಟು ದೂರವೋ ಅವುಗಳ ಸ್ವಭಾವವೂ ಕ್ರಮಗಳೂ ಯಾವ್ಯಾವವೋ ಯೆಂದು ಅಲ್ಪಜ್ಞಾನವುಳ್ಳ ಮನುಷ್ಯರಿಗೆ ತಿಳಿಯದು ದೇವರುಮಾತ್ರ ಅವುಗಳನ್ನು ಲೆಖ್ಖಿಸಿ ಹೊರಗೆ ತಂದು ತಾನೆ ಮಹಾ ಪರಾಕ್ರಮದಿಂದ ಅವುಗಳಲ್ಲಿ ಒಂದೊಂದನ್ನು ಅದರದರ ನಾಮದಿಂದ ಕರಿಯುತ್ತಾನೆ.

ಪೂರ್ವಜ್ಯೋತಿಷರು ಯೀ ಸ್ಥಿರನಕ್ಷತ್ರಗಳನ್ನು ರಾಶಿಗಳೆಂಬ ಗುಂಪುಗಳಾಗಿ ಪ್ರತ್ಯೇಕಿಸಿ ಬೇರೆಬೇರೆ ವಸ್ತುಗಳ ಉಪಮೆಯಿಂದ ಬೇರೆಬೇರೆ ಹೆಸರುಗಳಂ ನಿಟ್ಟುಯಿದ್ದಾರೆ ಹೇಗೆಯೇ ಆಕಾಶದ ಉತ್ತರ ಭಾಗದಲ್ಲಿ ೩೮ ಅದರ ದಕ್ಷಿಣ ಭಾಗದಲ್ಲಿ ೪೮ ರಾಶಿಗಳಿರುತ್ತವೆ ಆಕಾಶದ ಮಧ್ಯದಲ್ಲಿ ೧೨ ರಾಶಿಗಳ ಚಕ್ರವದೆ ಯೀ ೧೨ ರಾಶಿಗಳ ಹೆಸರು ಮೇಷ ವೃಷಭ ಮಿಥುನ ಕರ್ಕಾಟಕ ಸಿಂಹ ಕಂನ್ಯಾ ತುಲಾ ವೃಶ್ಚಿಕ ಧನುಸ್ಸು ಮಕರ ಕುಂಭ ಮೀನ ಯೆಂಬವಗಳವೆ ಯೀ ಭೂಮಿಗೆ ಬೆಳಕನ್ನು ಬಿಸಲನ್ನು ಕೊಡುವ ಸೂರ್ಯನು ಸ್ಥಿರ ನಕ್ಷತ್ರಗಳಲ್ಲಿ ಒಂದಾಗಿರುತ್ತಾನೆ ಯೀ ಸೂರ್ಯನು ಗೋಳಾಕಾರವಾಗಿದ್ದಾನೆ ಅವನ ವ್ಯಾಸ ಹೆಚ್ಚುಕಡಿಮೆ ೩೫ ಸಾವಿರ ಹರದಾರಿ ಆಗಿದೆ ಉಳಿದ ಸ್ಥಾವರ ನಕ್ಷತ್ರಗಳಲ್ಲಿ ಸೂರ್ಯನ ಪ್ರಕಾರವೆ ಸ್ವಕೀಯಪ್ರಕಾಶವೂ ಚಂಚಲವಿಲ್ಲದ ಸ್ಥಾನವೂ ಯಿರುವದರಿಂದ ಅವುಗಳಿಗು ಸೂರ್ಯಗಳೆಂಬ ಹೆಸರನ್ನಿಡಬಹುದು ಮತ್ತು ಅವುಗಳು ಸಹಾ ಬೇರೆಬೇರೆ ಲೆಖ್ಖವಿಲ್ಲದ ಗ್ರಹಗಳಿಗೆ ಪ್ರಕಾಶವನ್ನು ಕೊಟ್ಟಾವುಯೆಂದು ಕೆಲಬರು ನೆನಸುತ್ತಾರೆ.